
1)ಜಿಲ್ಲಾ ಉದ್ಯಮ ಕೇಂದ್ರ ಲೆಕ್ಕ ಶೀರ್ಷಿಕೆ 2851–00–107–0–27

ಕ್ರ.ಸಂ	ತಾಲ್ಲೂಕು	ಗುರಿ		ಸಾಧನೆ	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
1	ತುಮಕೂರು	15	1.50	13	1.30
2	ಕುಣಿಗಲ್	14	1.40	16	1.60
3	ಕೊರಟಗೆರೆ	13	1.30	10	1.00
4	ಸಿ.ಎನ್.ಹಳ್ಳಿ	15	1.50	19	1.90
5	ಗುಬ್ಬಿ	13	1.30	09	0.90
6	ಪಾವಗಡ	13	1.30	15	1.50
7	ತುರುವೇಕೆರೆ	14	1.40	13	1.30
8	ಮಧುಗಿರಿ	15	1.50	11	1.10
9	ಶಿರಾ	15	1.50	24	2.40
10	ತಿಪಟೂರು	13	1.30	10	1.00
	ಒಟ್ಟು	**140**	**14.00**	**140**	**14.00**

ಸದರಿ ಯೋಜನೆಯಡಿಯಲ್ಲಿ ವೃತ್ತಿಪರ ಕುಶಲಕರ್ಮಿಗಳಿಗೆ ವೃತ್ತಿಯನ್ನು ಮುಂದುವರೆಸಿಕೊಂಡು ಹೋಗಲು ಅನುಕೂಲವಾಗುವಂತೆ ವಿವಿದ ವೃತ್ತಿಗಳಲ್ಲಿ ನಿರತರಾದ ಗ್ರಾಮೀಣ ಕುಶಲಕರ್ಮಿಗಳಿಗೆ ವಿವಿದ ಬ್ಯಾಂಕುಗಳು ರೂ.30,000/–ಗಳ ಸಾಲ ಮಂಜೂರು ಮಾಡಿದಲ್ಲಿ ಯೋಜನಾ ವೆಚ್ಚದ ಮೇಲೆ ಶೇ. 60% ರಷ್ಟು ಗರಿಷ್ಠ ರೂ.10,000/– ಗಳ ಬಂಡವಾಳ ಹೂಡಿಕೆ ಸಹಾಯಧನವನ್ನು ಮಂಜೂರು ಮಾಡಲಾಗುವುದು. 2020–21 ನೇ ಸಾಲಿಗೆ ಜಿಲ್ಲೆಗೆ ಆರ್ಥಿಕ ರೂ.14.00 ಲಕ್ಷಗಳು ಹಾಗೂ ಭೌತಿಕ 140 ಗುರಿ ನಿಗದಿ ಪಡಿಸಿದ್ದು ದಿನಾಂಕ: 31–03–2021 ರ ಅಂತ್ಯಕ್ಕೆ ಸಾಧಿಸಲಾದ ಪ್ರಗತಿಯ ವಿವರಗಳು ಕೆಳಕಂಡಂತೆ ಇರುತ್ತವೆ.

2) <u>ವೃತ್ತಿಪರ ಕುಶಲಕರ್ಮಿಗಳಿಗೆ ಉಚಿತವಾಗಿ ಸುಧಾರಿತ ಸಲಕರಣೆಗಳ ಸರಬರಾಜು (ಲೆಕ್ಕ ಶೀರ್ಷಿಕೆ 2851–00–107–0–32)</u>

ಸದರಿ ಯೋಜನೆಯಡಿಯಲ್ಲಿ ಬಡಗಿ, ಕಮ್ಮಾರಿಕೆ, ಕ್ಷೌರಿಕ, ದೋಬಿ, ಗಾರೆಕೆಲಸ, ಕಲ್ಲುಕೆಲಸ ಕಸುಬಿನಲ್ಲಿ ನಿರತರಾದ ಗ್ರಾಮೀಣ ಕುಶಲ ಕರ್ಮಿಗಳಿಗೆ ವೃತ್ತಿ ಆಧಾರಿತ ರೂ.8,000/– ಮೊತ್ತದ ಉಪಕರಣ ನೀಡುವ ಕಾರ್ಯಕ್ರಮವಿದ್ದು 2020–21 ನೇ ಸಾಲಿಗೆ ಜಿಲ್ಲೆಗೆ ಆರ್ಥಿಕ ರೂ.16.48 ಲಕ್ಷಗಳು ಹಾಗೂ ಭೌತಿಕ 206 ಗುರಿ ನಿಗದಿಪಡಿಸಿದ್ದು ದಿನಾಂಕ: 31–03–2021 ರ ಅಂತ್ಯಕ್ಕೆ ಸಾಧಿಸಲಾದ ಪ್ರಗತಿಯ ವಿವರಗಳು ಕೆಳಕಂಡಂತೆ ಇರುತ್ತವೆ.

ಕ್ರ.ಸಂ.	ತಾಲ್ಲೂಕು	ಬಡಗಿ	ಗಾರೆಕೆಲಸ	ಕಮ್ಮಾರಿಕೆ	ದೋಬಿ	ಕ್ಷೌರಿಕ	ಕಲ್ಲುಕೆಲಸ	ಒಟ್ಟು	ಮೊತ್ತ
		ಸಂಖ್ಯೆ	ಸಂಖ್ಯೆ	ಸಂಖ್ಯೆ	ಸಂಖ್ಯೆ	ಸಂಖ್ಯೆ	ಸಂಖ್ಯೆ	ಸಂಖ್ಯೆ	
1	ತುಮಕೂರು	04	11	02	03	06	03	29	**232000**
2	ತಿಪಟೂರು	06	06	01	05	01	–	19	**152000**
3	ಗುಬ್ಬಿ	11	05	01	04	02	–	23	**184000**
4	ಚಿಕ್ಕನಾಯಕನಹಳ್ಳಿ	10	04	01	03	01	–	19	**152000**
5	ಕುಣಿಗಲ್	06	10	02	–	–	–	18	**144000**
6	ಕೊರಟಗೆರೆ	11	05	01	–	01	–	18	**144000**
7	ಪಾವಗಡ	05	05	04	05	–	–	19	**152000**
8	ಮಧುಗಿರಿ	03	04	–	04	07	–	18	**144000**
9	ಶಿರಾ	09	05	–	07	04	–	25	**200000**
10	ತುರುವೇಕೆರೆ	09	05	–	01	02	–	17	**136000**
	ಒಟ್ಟು	**74**	**60**	**12**	**32**	**24**	**03**	**205**	**1640000**

3)<u>ವಿಚಾರಗೋಷ್ಠಿಗಳು, ವಸ್ತುಪ್ರದರ್ಶನ, ಕ್ಷೇತ್ರೋತ್ಸವಗಳು (ಲೆಕ್ಕ ಶೀರ್ಷಿಕೆ 2851–00–107–0–34</u>

ಸದರಿ ಯೋಜನೆಯಡಿಯಲ್ಲಿ 2020–21 ನೇ ಸಾಲಿಗೆ ಜಿಲ್ಲೆಗೆ ಆರ್ಥಿಕ ರೂ.9,00 ಲಕ್ಷಗಳು ಹಾಗೂ ಭೌತಿಕ 03 ರ ಗುರಿ ನಿಗಧಿಪಡಿಸಿದ್ದು, ದಿನಾಂಕ: 31–3–2021 ರ ಅಂತ್ಯಕ್ಕೆ ಪ್ರಗತಿಯ ವಿವರಗಳು ಕೆಳಕಂಡಂತೆ ಇರುತ್ತವೆ.

ಕ್ರ.ಸ	ತಾಲ್ಲೂಕು	ಕಾರ್ಯಕ್ರಮ	ಭೌತಿಕ	ಆರ್ಥಿಕ
1	ಮೈಸೂರು ದಸರಾ ವಸ್ತು ಪ್ರದರ್ಶನದಲ್ಲಿ ಮಳಿಗೆಯನ್ನು ತೆರೆದು ಕೈಗಾರಿಕೋತ್ಪನ್ನಗಳನ್ನು ಸಾರ್ವಜನಿಕರ ವೀಕ್ಷಣೆಗೆ ಇಟ್ಟು ಭಾಗವಹಿಸಲಾಯಿತು.	ಕೋವಿಡ್–19 ರ ಪ್ರಯುಕ್ತ ಮೈಸೂರಿನ ದಸರಾ ವಸ್ತುಪ್ರದರ್ಶನ ಸ್ಥಬ್ದ ಚಿತ್ರ ಮತ್ತು ಶಿರಾ ತಾಲ್ಲೂಕಿನ ಪಟ್ಟನಾಯಕನಹಳ್ಳಿಯಲ್ಲಿ ವಸ್ತುಪ್ರದರ್ಶನದ ಮಳಿಗೆ ಪ್ರದರ್ಶಿಸಲಾಗಿರುವುದಿಲ್ಲ	–	–
2	ಶಿರಾ ತಾಲ್ಲೂಕಿನ ಪಿ.ಎನ್.ಹಳ್ಳಿಯಲ್ಲಿ ನಡೆದ ಕೃಷಿ &ಕೈಗಾರಿಕಾ ವಸ್ತು ಪ್ರದರ್ಶನದಲ್ಲಿ		–	–

	ಮಳಿಗೆಯನ್ನು ತೆರೆದು ಕೈಗಾರಿಕೋತ್ಪನ್ನಗಳನ್ನು ಸಾರ್ವಜನಿಕರ ವೀಕ್ಷಣೆಗೆ ಇಟ್ಟು ಭಾಗವಹಿಸಲಾಯಿತು.			
3	ತುಮಕೂರಿನ ಸಿದ್ದಗಂಗಾಮಠದಲ್ಲಿ ನಡೆದ ಕೃಷಿ & ಕೈಗಾರಿಕಾ ವಸ್ತುಪ್ರದರ್ಶನದಲ್ಲಿ ಮಳಿಗೆಯನ್ನು ತೆರೆದು ಕೈಗಾರಿಕೋತ್ಪನ್ನಗಳನ್ನು ಸಾರ್ವಜನಿಕರ ವೀಕ್ಷಣೆಗೆ ಇಟ್ಟು ಭಾಗವಹಿಸಲಾಯಿತು.	ವಸ್ತು ಪ್ರದರ್ಶನದ ವೆಚ್ಚ	01	1.00
	ಒಟ್ಟು		**01**	**1.00**

4) <u>ಕುಶಲಕರ್ಮಿಗಳಿಗೆ ಬಡ್ಡಿ ಸಹಾಯಧನ ಮಂಜೂರಾತಿ ವಿವರಗಳು.ಲೆಕ್ಕ ಶೀರ್ಷಿಕೆ 2851–00–107–0–39 (ಯೋಜನೆ)</u>;–

ಸದರಿ ಯೋಜನೆಯಲ್ಲಿ ಗ್ರಾಮೀಣ ಕುಶಲಕರ್ಮಿಗಳು ಬ್ಯಾಂಕ್‌ಗಳಿಗೆ ಸಕಾಲದಲ್ಲಿ ಅಸಲು ಮತ್ತು ಬಡ್ಡಿಯನ್ನು ಪಾವತಿಸಿದಲ್ಲಿ ಶೇ.5 ರ ಬಡ್ಡಿಸಹಾಯಧನವನ್ನು ಫಲಾನುಭವಿಗೆ ಮಂಜೂರು ಮಾಡಿ ಬ್ಯಾಂಕಿಗೆ ನೇರವಾಗಿ ಬಿಡುಗಡೆ ಮಾಡಲಾಗುವುದು. 2020–21 ನೇ ಸಾಲಿಗೆ ಆರ್ಥಿಕ ರೂ1.00 ಲಕ್ಷಗಳು ಹಾಗೂ ಭೌತಿಕ 10 ಗುರಿ ನಿಗದಿ ಪಡಿಸಿದ್ದು, ದಿನಾಂಕ: 31–03–2021 ಸಾಧಿಸಲಾದ ಪ್ರಗತಿಯ ವಿವರಗಳು ಕೆಳಕಂಡಂತಿರುತ್ತವೆ.

ಕ್ರ.ಸಂ	ತಾಲ್ಲೂಕು	ಗುರಿ		ಸಾಧನೆ	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
1	ತುಮಕೂರು	01	10000	02	10000
2	ಕುಣಿಗಲ್	01	10000	–	–
3	ಕೊರಟಗೆರೆ	01	10000	01	10000
4	ಸಿ.ಎನ್.ಹಳ್ಳಿ	01	10000	01	10000
5	ಗುಬ್ಬಿ	01	10000	02	20000
6	ಪಾವಗಡ	01	10000	01	12000
7	ತುರುವೇಕೆರೆ	01	10000	01	10000
8	ಮಧುಗಿರಿ	01	10000	01	8000
9	ಶಿರಾ	01	10000	01	10000
10	ತಿಪಟೂರು	01	10000	01	10000
	ಒಟ್ಟು	**10**	**100000**	**11**	**100000**

ಜಿಲ್ಲಾ ಪಂಚಾಯತ್: ತುಮಕೂರು **ಪಂ.ರಾ.ಇಂ.ವಿಭಾಗ : ಮಧುಗಿರಿ.**

ಸಾಮಾನ್ಯ ವರದಿ : ಮಧುಗಿರಿ ವಿಭಾಗ

01–04–87 ರಿಂದ ಹಿಂದೆ ಅಭಿವೃದ್ಧಿ ಕಾಮಗಾರಿಗಳು ಸಣ್ಣ ನೀರಾವರಿ ಇಲಾಖೆ ಮತ್ತು ಲೋಕೋಪಯೋಗಿ ಇಲಾಖೆಯು ನಿರ್ವಹಿಸುತ್ತಿದ್ದವು. ಈ ವಿಭಾಗವು ಪುನರ್ ವ್ಯವಸ್ಥೆ ಹೊಂದಿ ಜಿಲ್ಲಾ ಪರಿಷತ್ ಇಂಜಿನಿಯರಿಂಗ್ ವಿಭಾಗವಾದ ಆಡಳಿತಾತ್ಮಕ ಸಂಕ್ಷಿಪ್ತ ಹಾಗೂ ಸ್ಪಷ್ಟ ಸ್ವರೂಪ ಹೊಂದಿದೆ. ಸರ್ಕಾರಿ ಆದೇಶ ಸಂಖ್ಯೆ:ಸಿಡಬ್ಲ್ಯೂಡಿ:8 ಪಿಸಿಎ:87: ಬೆಂಗಳೂರು ದಿನಾಂಕ:31–3–87 ಮತ್ತು ಕಛೇರಿ ಪತ್ರದ ಸಂಖ್ಯೆ:ಪಿಡಬ್ಲ್ಯೂಡಿ:52:ಸಿಆರ್ಎಸ್:85:ಬೆಂಗಳೂರು ದಿನಾಂಕ:27–04–1987 ಅದರ ರೆಕಾರ್ಡ್ಗಳನ್ನು ಸಿಡಬ್ಲ್ಯೂಡಿ, ಎಂ.ಐ., ಪಿ.ಹೆಚ್.ಇ., ಹಾಗೂ ಇತರೆ ಬೇರೆ ವಿಭಾಗಗಳ ಸ್ವಾಧೀನಕ್ಕೆ ಕೊಟ್ಟು ತೆಗೆದುಕೊಳ್ಳುವುದು ಎಲ್ಲಾ ರೀತಿಯಿಂದಲೂ ದಿನಾಂಕ:01–04–87 ರಿಂದ ಜಾರಿಗೆ ಬಂದ ದಿನದಿಂದ 07–07–87ರಲ್ಲಿ ವರದಿಯನ್ನು ಮುಖ್ಯ ಕಾರ್ಯದರ್ಶಿಗಳು, ಜಿಲ್ಲಾ ಪಂಚಾಯತ್, ತುಮಕೂರು ಇವರಿಗೆ ಈ ಕಛೇರಿಗೆ ಜಿ.ಪಂ:ಎಂ.ಎಂ:233:87–88:1867: ದಿನಾಂಕ: 07–07–87ರಲ್ಲಿ ಸಲ್ಲಿಸಿರುತ್ತೆ.

ಸರ್ಕಾರಿ ಆದೇಶ ಸಂ:ಆರ್ಡಿಪಿಸಿ:187:ಎಂ.ಆರ್ಡಬ್ಲ್ಯೂ:37: ಬೆಂಗಳೂರು ದಿನಾಂಕ: 8–5–87ರ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ರಾಜ್, ಬೆಂಗಳೂರು ಇವರ ಪ್ರಕಾರ ವಿಭಾಗವು ಪುನರ್ ವ್ಯವಸ್ಥೆ ಹೊಂದಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗವು ಜಿಲ್ಲಾ ಪಂಚಾಯತ್, ತುಮಕೂರು ಸೇರಿ ನೌಕರ ವೃಂದದ ನಮೂನೆ ರಚನೆಗೊಂಡಿದೆ. ಈ ವಿಭಾಗದ ಪುನರ್ ವ್ಯವಸ್ಥೆಯ ಪ್ರಕಾರ ವೃಂದದ ಒಂದು ಭಾಗವು ಕಡಿಮೆಯಾಗಿ ಕೆಲಸದ ಭಾರವು ಹೆಚ್ಚಿಸಿರುತ್ತದೆ. ಈ ವಿಭಾಗದಲ್ಲಿ 2ನೇ ದರ್ಜೆ ಸಹಾಯಕರ ಹುದ್ದೆಯ ಸಂಖ್ಯೆಯು 6 ರಿಂದ 2ಕ್ಕೆ ಇಳಿದಿರುತ್ತದೆ. ಕೊರಟಗೆರೆ ಉಪ ವಿಭಾಗದಲ್ಲಿ ಒಂದು ಪ್ರಥಮ ದರ್ಜೆ ಸಹಾಯಕ ಹುದ್ದೆಯು ಮಂಜೂರಾಗಿರುತ್ತದೆ. ಈ ವಿಭಾಗದ ಪುನರ್ ವ್ಯವಸ್ಥಿತ ಭಾಗದಲ್ಲಿ ಉಪ ವಿಭಾಗಗಳಾದ ಶಿರಾ/ಮಧುಗಿರಿ/ಕೊರಟಗೆರೆ/ಪಾವಗಡ/ ಚಿಕ್ಕನಾಯಕನಹಳ್ಳಿ ಉಪವಿಭಾಗವು ಸೇರಿಕೊಂಡು 5 ಉಪವಿಭಾಗಗಳಾಗಿರುತ್ತವೆ. 5 ಉಪವಿಭಾಗಗಳಲ್ಲಿ ಸೇವೆಯಲ್ಲಿರುವ 85 ಹುದ್ದೆಗಳಲ್ಲಿ ನಂತರ ಸರ್ಕಾರಿ ಆದೇಶ ಸಂಖ್ಯೆ:ಗ್ರಾಅಪಂ/166/ಜಿಪ/2015(2) ದಿನಾಂಕ: 04–08–2015ರಲ್ಲಿ ಸ್ಥಳಾಂತರಿಸಿದ ಹುದ್ದೆಗಳಿಂದಾಗಿ ದಿನಾಂಕ: 04–08–2015 ರಿಂದ ಒಟ್ಟು 85 ಹುದ್ದೆಗಳಿದ್ದು, ಅಧಿಕಾರಿಗಳು ಹಾಗೂ ನೌಕರರುಗಳು ಕೆಲಸ ನಿರ್ವಹಿಸುತ್ತಿದ್ದಾರೆ. ದಿನಾಂಕ: 01–07–84 ರಿಂದೀಚೆಗೆ ಹಲವಾರು ನೌಕರರು ದಿನಗೂಲಿಗಳಾಗಿ ಕೆಲಸ ನಿರ್ವಹಿಸುತ್ತಿದ್ದು, ಇವರನ್ನು ಕರ್ನಾಟಕ ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿ ಅಧಿನಿಯಮ 2012ರಡಿ ದಿನಾಂಕ: 04–08–2014ರ ಅಧಿಸೂಚನೆಯಂತೆ ಕ್ಷೇಮಾಭಿವೃದ್ಧಿ ನೌಕರರೆಂದು ಪರಿಗಣಿಸಲಾಗಿದೆ.

: ಸಿಬ್ಬಂದಿ ವಿವರ :

ಗುಂಪು	ಮಂಜೂರಾದ ಹುದ್ದೆಯ ಸಂಖ್ಯೆ	ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳ ಸಂಖ್ಯೆ	ಖಾಲಿ ಹುದ್ದೆಗಳ ಸಂಖ್ಯೆ
ಗುಂಪು –ಎ–	06	06	00
ಗುಂಪು –ಬಿ–	07	02	03
ಗುಂಪು –ಸಿ–	56	21	35
ಗುಂಪು –ಡಿ–	16	06	08
ಒಟ್ಟು:	**85**	**35**	**50**

ಮೊದಲನೇ ದರ್ಜೆ ಸಹಾಯಕ ಹಾಗೂ 2ನೇ ದರ್ಜೆ ಸಹಾಯಕರು ಹಾಗೂ ಮಂಜೂರಾಗಿರುವ 2ನೇ ದರ್ಜೆ ಸಹಾಯಕರ ಹುದ್ದೆಯ ಸಂ: 6 ರಿಂದ 2 ಇಳಿದಿರುವ ಮತ್ತು ಮೊದಲನೇ ದರ್ಜೆ ಸಹಾಯಕ ಕೊರಟಗೆರೆ ಉಪವಿಭಾಗದಲ್ಲಿ ಮಂಜೂರಾಗಿದ್ದು ಹಾಗು ಉಗ್ರಾಣ ಪಾಲಕರ ಹುದ್ದೆ ಮತ್ತು 16 ನಿರ್ವಹಣೆ ಸಿಬ್ಬಂದಿಯ ಹುದ್ದೆಗಳು ರದ್ದು ಪಡಿಸಲಾಗಿದೆ ಸದರಿ ಇದೇ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಪ್ರಕಾರ) ಹುದ್ದೆಗಳನ್ನು ವಿಭಾಗದಲ್ಲಿ ಕರ್ನಾಟಕ ನೀತಿ ನಿಯಮಗಳ ಪ್ರಕಾರ ಆಡಳಿತಾತ್ಮಕ ದಕ್ಷತೆಯಿಂದ ಪುನರ್ ರಚಿಸಲು ಯೋಜಿಸಲಾಗಿದೆ.

ಈ ವಿಭಾಗದ ವ್ಯಾಪ್ತಿಯಲ್ಲಿ ಬರುವ ಮಧುಗಿರಿ, ಶಿರಾ, ಕೊರಟಗೆರೆ, ಪಾವಗಡ ಮತ್ತು ಚಿಕ್ಕನಾಯ್ಕನಹಳ್ಳಿಯ 5 ಉಪವಿಭಾಗಗಳನ್ನೊಳಗೊಂಡಿರುವ 167 ಗ್ರಾಮ ಪಂಚಾಯಿತಿ ಗಳ ವಿವರಗಳು ಈ ಕೆಳಕಂಡಂತಿವೆ.

1.	ಶಿರಾ ಉಪವಿಭಾಗ	::	42	ಗ್ರಾಮ ಪಂಚಾಯಿತಿಗಳು
2.	ಮಧುಗಿರಿ ಉಪವಿಭಾಗ	::	39	–"–
3.	ಕೊರಟಗೆರೆ ಉಪವಿಭಾಗ	::	24	–"–
4.	ಪಾವಗಡ ಉಪವಿಭಾಗ	::	34	–"–
5.	ಚಿಕ್ಕನಾಯಕನಹಳ್ಳಿ ಉಪವಿಭಾಗ	::	28	–"–
			167	

ಈ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸಿಬ್ಬಂದಿ ವರ್ಗದವರಿಗೂ ನಿಯಮಾವಳಿ ಅನುಸಾರವಾಗಿ ಸಂಬಂಧಪಟ್ಟ ಭತ್ಯೆಯನ್ನು ನೀಡಲಾಯಿತು ಹಾಗೂ ನಿಯಮಾವಳಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ಭತ್ಯೆಗಳನ್ನು ನೀಡಲು ಎಲ್ಲಾ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ಗಳಿಗೆ ಅವರ ವ್ಯಾಪ್ತಿಯಲ್ಲಿ ಬರುವ ಸಿಬ್ಬಂದಿ ವರ್ಗದವರಿಗೆ ನೀಡಬೇಕೆಂದು ಸೂಕ್ತ ಆದೇಶ ನೀಡಲಾಯಿತು.

ಇಲಾಖೆಯ ಉದ್ದೇಶಗಳಿಗೆ ಪೂರಕವಾಗಿ ಗ್ರಾಮಗಳಿಗೆ ಕುಡಿಯುವ ನೀರನ್ನು ಒದಗಿಸಲು ಕಾಮಗಾರಿಗಳನ್ನು ಹಾಗೂ ರಸ್ತೆ ಮತ್ತು ಸಣ್ಣ ನೀರಾವರಿಗೆ ಸಂಬಂಧಿಸಿದ ಕಾಮಗಾರಿಗಳು ಯಶಸ್ವಿಯಾಗಿ ಪೂರ್ಣಗೊಂಡಿರುತ್ತವೆ.

ಈ ಎಲ್ಲಾ ಮಾಹಿತಿಗಳ ವಿವರವಾದ ಅಂಶಗಳನ್ನು ಈ ವರದಿಯೊಂದಿಗೆ ಸಲ್ಲಿಸಲಾಗಿದೆ.

ತಾಂತ್ರಿಕ ವರದಿ :–

ಈ ಹಿಂದೆ ಪಿಡಬ್ಲ್ಯೂಡಿ ವಿಭಾಗವಾಗಿ ಕಾರ್ಯನಿರ್ವಹಿಸುತ್ತಿದ್ದ ತುಮಕೂರು ಜಿಲ್ಲೆಯಲ್ಲಿರುವ ಒಂದು ಪಿ.ಹೆಚ್.ಇ.ವಿಭಾಗ ಕಛೇರಿ ಮತ್ತು ಒಂದು ಪಿ.ಡಬ್ಲ್ಯೂ.ಡಿ ವಿಭಾಗ ಬೇರ್ಪಡಿಸಿ 01–04–87ರಿಂದ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗಗಳೆಂದು ಮಾರ್ಪಾಡು ಮಾಡಿ ಪುನರ್ ವಿಂಗಡಿಸಲಾಗಿದೆ. ಈ ವಿಭಾಗವು ತುಮಕೂರು ಜಿಲ್ಲೆಗೆ 42 ಕಿ.ಮೀಗಳ ಅಂತರದಲ್ಲಿರುವುದು ಹಾಗೂ ಐತಿಹಾಸಿಕ ಕೇಂದ್ರವಾಗಿದೆ. ಈ ಜಿಲ್ಲೆಯ ವ್ಯಾಪ್ತಿಯೊಳಗೆ ಇದರ ಕಾರ್ಯವ್ಯಾಪ್ತಿಯಲ್ಲಿ ಮಧುಗಿರಿ, ಶಿರಾ, ಕೊರಟಗೆರೆ, ಪಾವಗಡ ಮತ್ತು ಚಿಕ್ಕನಾಯ್ಕನಹಳ್ಳಿ ತಾಲ್ಲುಕುಗಳೂ ಒಳಪಟ್ಟಿದೆ. ದಿನಾಂಕ:01–04–87ರಿಂದ ಮೇಲಿನ ಪ್ರತಿ ತಾಲ್ಲೂಕಿನಲ್ಲಿ ಒಂದು ಉಪವಿಭಾಗವೆಂದು ವಿಭಜಿಸಲಾಗಿದೆ.

ಗ್ರಾಮೀಣ ಪ್ರದೇಶದ ಜನರಿಗೆ ಅಭಿವೃದ್ಧಿ ಕಾಮಗಾರಿಗಳನ್ನು ಅನುಷ್ಠಾನಕ್ಕೆ ತರುವ ಮೂಲಕ ಗ್ರಾಮೀಣ ಪ್ರದೇಶಗಳನ್ನು ಅಭಿವೃದ್ಧಿ ಮಾಡುವುದೇ ಇದರ ಮೂಲ ಉದ್ದೇಶ. ಈ ಅಭಿವೃದ್ಧಿ ಕಾರ್ಯಕ್ರಮದಡಿಯಲ್ಲಿ ಗ್ರಾಮೀಣ ಪ್ರದೇಶದ ಜನರಿಗೆ ಸ್ವಚ್ಛ ಮತ್ತು ಆರೋಗ್ಯಕರ ನೀರನ್ನು ಬೇಕಾದ ಪ್ರಮಾಣಕ್ಕೆ ಒದಗಿಸುವುದಾದರೆ ರೈತರಿಗೆ ಬೇಕಾದ ನೀರಾವರಿಯನ್ನು

(40 ಹೆಕ್ಟೇರ್‌ಗಳ ತನಕ) ಅಳವಡಿಸುವುದು, ಹಳ್ಳಿಯಿಂದ ಪಟ್ಟಣಗಳಿಗೆ ಹಾಗೂ ಮಾರುಕಟ್ಟೆ ಪ್ರದೇಶಕ್ಕೆ ಸೇರುವ ರೋಗರುಜಿನಗಳನ್ನು ನಿರ್ಮೂಲನಗೊಳಿಸಿ ಗ್ರಾಮೀಣ ಜನರಲ್ಲಿ ಆರೋಗ್ಯವಾಗಿ ಜೀವನ ನಡೆಸುವಂತೆ ಮಾಡುವುದು ಒಂದು ಉದ್ದೇಶವಾಗಿದೆ. ಇಂತಹ ನೀರಿಗೆ ಕೊಳವೆ ಬಾವಿಗಳ ನೀರನ್ನು ಉಪಯೋಗಿಸುವುದರಿಂದ ಸಾಧಿಸಬಹುದು.

ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಧುಗಿರಿ, ಜಿಲ್ಲಾ ಪಂಚಾಯತ್, ತುಮಕೂರಿನ ಆಡಳಿತಾತ್ಮಕ ವ್ಯಾಪ್ತಿಗೆ ಒಳಪಟ್ಟಿದೆ ಹಾಗೂ ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು (ಕರ್ನಾಟಕ) ಹಾಗೂ ಸೂಪರಿಂಟೆಂಡಿಂಗ್ ಇಂಜಿನಿಯರ್, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವೃತ್ತ, ಆನಂದರಾವ್ ವೃತ್ತ, ಬೆಂಗಳೂರು ಇವರುಗಳ ತಾಂತ್ರಿಕ ಸಲಹೆ ಹಾಗೂ ನಿಯಂತ್ರಣಕ್ಕೆ ಒಳಪಟ್ಟಿದೆ. ಈ ವಿಭಾಗವು 5 ತಾಲ್ಲೂಕುಗಳ ಕಾರ್ಯವ್ಯಾಪ್ತಿಯನ್ನು ಒಳಗೊಂಡಿದ್ದು, ಒಂದೊಂದು ತಾಲ್ಲೂಕಿನಲ್ಲಿ ಒಬ್ಬ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರು, ತಾಂತ್ರಿಕ ಸಿಬ್ಬಂದಿ ವರ್ಗ ಮತ್ತು ಸಿಬ್ಬಂದಿ ವರ್ಗದ ಮೂಲಕ ಅಭಿವೃದ್ಧಿ ಕಾಮಗಾರಿಗಳನ್ನು ನಿಯಂತ್ರಿಸಲಾಗುತ್ತದೆ. ಕೈಪಂಪು ಕೊಳವೆಬಾವಿ ನಿರ್ವಹಣೆಯನ್ನು ತಾಲ್ಲೂಕು ಪಂಚಾಯಿತಿ

ವತಿಯಿಂದ ಕೊಳಾಯಿ ನೀರು ಸರಬರಾಜು ಯೋಜನೆ ಮತ್ತು ಕಿರು ನೀರು ಸರಬರಾಜು ಯೋಜನೆಗಳ ನಿರ್ವಹಣೆಯನ್ನು ಸಂಬಂಧಪಟ್ಟ ಗ್ರಾಮ ಪಂಚಾಯಿತಿಯಿಂದ ನಿರ್ವಹಿಸಲಾಗುತ್ತಿತ್ತು. ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗವಾಗಿ ತುಮಕೂರು ಕಛೇರಿ ವ್ಯಾಪ್ತಿಗೆ 10 ತಾಲ್ಲೂಕುಗಳು ಒಳಪಡುತ್ತವೆ.

ತುಮಕೂರು ಜಿಲ್ಲೆಗೆ ಸಂಬಂಧಿಸಿದ ಜಿಲ್ಲಾ ಪಂಚಾಯತ್ ಆಡಳಿತ ಕಾರ್ಯವ್ಯಾಪ್ತಿಗೆ ಒಳಪಟ್ಟಿರುವ ಜಿಲ್ಲಾ ಪಂಚಾಯತ್‌ನ ಎಲ್ಲಾ ಕಾನೂನು ನಿಯಮಗಳಿಗೆ ಕಾರ್ಯನಿರ್ವಹಿಸುತ್ತಿವೆ. ಜಿಲ್ಲಾ ಪಂಚಾಯತ್ ಕಾಲಕಾಲಕ್ಕೆ ಜಾರಿಗೊಳಿಸುವ ಕಾನೂನುಗಳು ಮತ್ತು ಅವುಗಳಿಗೆ ಮಾಡಲಾಗುವ ಮುಖ್ಯ ಬದಲಾವಣೆ ಮತ್ತು ತಿದ್ದುಪಡಿಗಳಿಗೆ ಅನುಸಾರವಾಗಿ ಕಾರ್ಯನಿರ್ವಹಿಸುತ್ತಿದೆ. ಆಡಳಿತಾತ್ಮಕ ಮಂಜೂರಾತಿಯನ್ನು ರೂ. 50.00 ಲಕ್ಷ ಮೊತ್ತದ ಕಾಮಗಾರಿ ಮೀರಿ ಜಿಲ್ಲಾ ಪಂಚಾಯತ್‌ನಿಂದ ಪಡೆದ ನಂತರ ತಾಂತ್ರಿಕ ಮಂಜೂರಾತಿಯನ್ನು ಸಂಬಂಧಪಟ್ಟ ಅಧಿಕಾರಿಗಳಿಂದ ಪಡೆಯಲಾಗಿದೆ. ಜಿಲ್ಲಾ ಪಂಚಾಯತ್ ಹಾಗೂ ಸರ್ಕಾರವು ಹೊರಡಿಸಿರುವ ಆದೇಶಗಳಿಗೆ ಈ ವಿಭಾಗವು ಬದ್ಧವಾಗಿದ್ದು, ಅದರಂತೆಯೇ ತಾಂತ್ರಿಕವಾಗಿ ಮಂಜೂರಾತಿ ಪಡೆದ ಅಂದಾಜಿನಂತೆ ಕೆಲಸವನ್ನು ನಿರ್ವಹಿಸಿದ್ದು ಮುಂದೆಯೂ ಇದೇ ರೀತಿಯಲ್ಲಿ ನಿರ್ವಹಿಸಲಾಗುವುದು.

ಈ ವಿಭಾಗದ ವ್ಯಾಪ್ತಿಯಲ್ಲಿ ಬರುವ ಕಾಮಗಾರಿಗಳನ್ನು ನಿಯೋಜಿತ ಗುರಿಗಳಂತೆ ಸಾಧಿಸಲು ಕೆಳಕಂಡ ಕ್ರಮಗಳನ್ನು ಅನುಸರಿಸಲಾಗಿದೆ. ಕಾರ್ಯನಿರ್ವಾಹಕ ಇಂಜಿನಿಯರ್‌ರವರು ಪ್ರತಿ ತಿಂಗಳು ಅಭಿವೃದ್ಧಿಗೊಳಿಸುತ್ತಿರುವ ಕಾಮಗಾರಿಗಳನ್ನು ಪರಿಶೀಲಿಸಿ ಅಲ್ಲಿ ಕಂಡುಬಂದ ಕುಂಠಿತ ಸಾಧನೆ ಅಥವಾ ಕುಂದು ಕೊರತೆಗಳ ಬಗ್ಗೆ ಚರ್ಚಿಸಿ ಸೂಕ್ತ ಪರಿಹಾರಗಳನ್ನು ಸೂಚಿಸಲಾಗುತ್ತಿದೆ. ಪ್ರತಿ ತಿಂಗಳು ಕಾಮಗಾರಿಗಳ ಪ್ರಗತಿಯ ಬಗ್ಗೆ ಚರ್ಚಿಸಲು ವಿಭಾಗ ಮಟ್ಟದ ತಾಂತ್ರಿಕ ವರ್ಗದ ಅಧಿಕಾರಿಗಳ ಸಭೆಯನ್ನು ನಡೆಸಿ ಎಲ್ಲಾ ಕಾಮಗಾರಿಗಳ ಬಗ್ಗೆ ಕೂಲಂಕುಷವಾಗಿ ಚರ್ಚಿಸಿ ಏನಾದರೂ ಕುಂದು ಕೊರತೆಗಳಿದ್ದರೆ ಅವುಗಳಿಗೆ ಸೂಕ್ತ ಪರಿಹಾರವನ್ನು ಸೂಚಿಸಲಾಗುತ್ತಿದೆ. ಮಾಸಿಕ ಸಭೆಯಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಅವರ ಸಿಬ್ಬಂದಿಯು ನೀಡುವ ನಿರ್ದೇಶನ ಹಾಗೂ ಇವರುಗಳ ಕೆಲಸ ಪರಿಶೀಲಿಸಿ ಸಭೆಗಳನ್ನು ನಡೆಸಿ ಕಳುಹಿಸಿರುವ ವರದಿ ಹಾಗೂ ಆದೇಶಗಳನ್ನು ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ಗಳಿಗೆ ತಿಳಿಸಿ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಲಾಗುತ್ತದೆ.

ಈ ಉಪ ವಿಭಾಗಗಳು ಒಂದೇ ಸಮನಾದ ಅನುದಾನವನ್ನೊಂದಿರುವ ಕಾಮಗಾರಿಗಳನ್ನು ಒಳಗೊಂಡಿದೆ.

2020–21 ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆಗಳಾದ ಯೋಜನೆ ಮತ್ತು ಸಣ್ಣ ನೀರಾವರಿ (40 ಹೆಕ್ಟೇರ್‌ಗಳಿಗಿಂತ ಕಡಿಮೆ ಅಚ್ಚುಕಟ್ಟು ಹೊಂದಿರುವ ಸಣ್ಣ ನೀರಾವರಿ) ಕೆರೆಗಳ ನಿರ್ವಹಣೆ , ಪಿಕಪ್, ಅಣೆಕಟ್ಟುಗಳು ಇತರೆ ಕಾಮಗಾರಿಗಳು ರಚನೆಯನ್ನು ಹೊಂದಿ ಈ ವಿಭಾಗದಲ್ಲಿ ಕೆಲಸಗಳು ನಡೆಯುತ್ತಿವೆ. ಹಾಗೂ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗವಾಗಿ ಪುನರ್ ರಚನೆಯನ್ನು ಹೊಂದಿದ್ದರಿಂದ ಇಲ್ಲಿಯವರೆಗೆ ಈ ಮೇಲೆ ನಮೂದಿಸಿರುವ ಎಲ್ಲಾ ಯೋಜನೆಗಳು ಅನುಷ್ಟಾನದಲ್ಲಿದ್ದು ಯೋಜನೆಗಳ ವಿವರಗಳನ್ನು ನೀಡಲಾಗಿದೆ.

ಸಣ್ಣ ನೀರಾವರಿ ಯೋಜನೆಗಳು

ಅ) ಈ ವಿಭಾಗದ ವ್ಯಾಪ್ತಿಯಲ್ಲಿ ಬರುವ ಸಣ್ಣ ನೀರಾವರಿ ಕಾಮಗಾರಿಗಳಿಗೆ ಯೋಜನೇತರ ಶೀರ್ಷಿಕೆಯಡಿ 2020–21 ನೇ ಸಾಲಿನಲ್ಲಿ ಅನುದಾನವಾಗಿ ರೂ. 89.81 ಲಕ್ಷಗಳು ನಿಗಧಿಪಡಿಸಿದ್ದು, ಜಿಲ್ಲಾ ಪಂಚಾಯತ್, ತುಮಕೂರು ಕಛೇರಿಯಿಂದ 89.81 ಲಕ್ಷ ರೂ.ಗಳು ಈ ವಿಭಾಗಕ್ಕೆ ಬಿಡುಗಡೆಯಾಗಿದ್ದು, ರೂ. 89.30 ಲಕ್ಷಗಳು ಖರ್ಚಾಗಿರುತ್ತದೆ. 53 ಕಾಮಗಾರಿಗಳಲ್ಲಿ ಕೆರೆಗಳು, ಕಾಲುವೆಗಳು ಇತ್ಯಾದಿ ಕಾಮಗಾರಿಗಳ ದುರಸ್ತಿ ಕಾರ್ಯ ಅತ್ಯವಶ್ಯಕವಾಗಿದ್ದು, ನೀಡಿದ ಮೊತ್ತವನ್ನು ಸಮರ್ಪಕವಾಗಿ ಖರ್ಚು ಮಾಡಲಾಗಿದೆ. ಅಲ್ಲದೇ ವಾರ್ಷಿಕ ದುರಸ್ತಿ ಕಾರ್ಯಗಳಿಂದ ಆಯಾ ವರ್ಷದ ಮಳೆಗಾಲದಲ್ಲಿ ನೀರು ವ್ಯಯವಾಗದೇ ಸಂಗ್ರಹವಾಗಿದ್ದು, ರೈತರುಗಳಿಗೆ ವ್ಯವಸಾಯಕ್ಕೆ ಬಹು ಉಪಯೋಗಿಯಾಗಿರುತ್ತದೆ. 53 ಕಾಮಗಾರಿಗಳಲ್ಲಿ 53 ಕಾಮಗಾರಿಗಳು ಪೂರ್ಣಗೊಂಡಿದ್ದು 53 ಕಾಮಗಾರಿಗಳಿಗೆ ವೆಚ್ಚ ಭರಿಸಲಾಗಿರುತ್ತದೆ.

2. ರಸ್ತೆ ಮತ್ತು ಸೇತುವೆ ನಿರ್ಮಾಣ ಯೋಜನೆಗಳು:–

ಅ. 2020–21 ನೇ ಸಾಲಿನಲ್ಲಿ ಮುಖ್ಯ ಮಂತ್ರಿಗಳ ಗ್ರಾಮೀಣ ರಸ್ತೆ ಅಭಿವೃದ್ಧಿ : ಈ ಯೋಜನೆಯಡಿ ಮಧುಗಿರಿ ಪಂ.ರಾ.ಇಂ.ವಿಭಾಗದ ವ್ಯಾಪ್ತಿಗೆ ಒಟ್ಟು 153 ಕಾಮಗಾರಿಗಳು ರೂ. 290.10 ಲಕ್ಷಗಳಿಗೆ ಅನುಮೋದನೆಯಾಗಿದ್ದು, 259.16 ಲಕ್ಷ ರೂ.ಗಳು ಬಿಡುಗಡೆಯಾಗಿರುತ್ತದೆ.. ಕ್ರಿಯಾ ಯೋಜನೆಯಲ್ಲಿ ಅನುಮೋದಿಸಿರುವಂತೆ 152 ಕಾಮಗಾರಿಗಳು ಪೂರ್ಣಗೊಂಡಿದ್ದು, ರೂ: 259.1 ಲಕ್ಷ ರೂ.ಗಳು ಖರ್ಚಾಗಿರುತ್ತದೆ. ಉಳಿದ 01 ಕಾಮಗಾರಿ ಕೈಬಿಡಲಾಗಿರುತ್ತದೆ.

ಆ. ನಬಾರ್ಡ್ ಆರ್.ಐ.ಡಿ.ಎಫ್–24 : ಈ ಯೋಜನೆಯಡಿ ಮಧುಗಿರಿ ಪಂ.ರಾ.ಇಂ. ವಿಭಾಗದ ವ್ಯಾಪ್ತಿಗೆ ಒಟ್ಟು 3 ರಸ್ತೆ ಕಾಮಗಾರಿಗಳು ರೂ: 315.00 ಲಕ್ಷಗಳಿಗೆ ಅನುಮೋದನೆಯಾಗಿದ್ದು, ರೂ: 303.25 ಲಕ್ಷಗಳು ಬಿಡುಗಡೆಯಾಗಿದ್ದು, ರೂ: 303.25 ಲಕ್ಷಗಳು ಖರ್ಚಾಗಿರುತ್ತದೆ. ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ.

3. ಕಟ್ಟಡ ನಿರ್ಮಾಣ ಮತ್ತು ನಿರ್ವಹಣೆ ಯೋಜನೆಗಳು:–

ಆ. ನಬಾರ್ಡ್ ಆರ್.ಐ.ಡಿ.ಎಫ್–23 ಪಿ.ಯು. ಕಟ್ಟಡಗಳು : ಈ ಯೋಜನೆಯಡಿ ಮಧುಗಿರಿ ಪಂ.ರಾ.ಇಂ. ವಿಭಾಗದ ವ್ಯಾಪ್ತಿಗೆ ಒಟ್ಟು ಕಟ್ಟಡ ಕಾಮಗಾರಿ ರೂ: 55.00 ಲಕ್ಷಗಳಿಗೆ ಅನುಮೋದನೆಯಾಗಿದ್ದು, ರೂ: 33.56 ಲಕ್ಷಗಳು ಬಿಡುಗಡೆಯಾಗಿದ್ದು, ರೂ: 33.6 ಲಕ್ಷಗಳು ಖರ್ಚಾಗಿರುತ್ತದೆ. ಸದರಿ ಕಾಮಗಾರಿಯು ಭೌತಿಕ ಪೂರ್ಣವಾಗಿರುತ್ತದೆ.

ಆ. ವಿವಿಧ ಇಲಾಖಾ ಕಟ್ಟಡಗಳ ಮಾಹಿತಿಯ ಬಗ್ಗೆ :–

ಮಧುಗಿರಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗಕ್ಕೆ ಸಂಬಂಧಿಸಿದಂತೆ, ಈ ಕೆಳಕಂಡ ಕಟ್ಟಡಗಳ ಕಾಮಗಾರಿಗಳ ನಿರ್ಮಾಣ ಕಾರ್ಯಗಳು ಒಳಪಟ್ಟಿರುತ್ತವೆ.

(1) ಪ್ರಾಥಮಿಕ ಶಾಲಾ ಕಟ್ಟಡಗಳು,ಸೆಕೆಂಡರಿ ಶಾಲಾ ಕಟ್ಟಡಗಳು (ಶಿಕ್ಷಣ ಇಲಾಖೆ)

(2) ಆರೋಗ್ಯ ಇಲಾಖೆ, ಪಶುಸಂಗೋಪನೆ, ರೇಷ್ಮೆ, ತೋಟಗಾರಿಕೆ ಇಲಾಖೆ, ಕೃಷಿ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಆಯುರ್ವೇದಿಕ್ ಕಟ್ಟಡಗಳು, ಮೀನುಗಾರಿಕೆ ಇಲಾಖೆ, ಜಿಲ್ಲಾ ಹಿಂದುಳಿದ ವರ್ಗಗಳ ಹಾಗೂ ಅಲ್ಪಸಂಖ್ಯಾತರ ಇಲಾಖೆ, ವಿದ್ಯಾರ್ಥಿನಿಲಯ ಕಟ್ಟಡಗಳು, ತಾಲ್ಲೂಕು ಪಂಚಾಯತ್ ಕಟ್ಟಡಗಳು, ಅರಣ್ಯ ಇಲಾಖೆ, ವಂತಿಕೆ ಹಣದ ಕಟ್ಟಡಗಳು ಹೀಗೆ ನಾನಾ ತರಹದ ಕಟ್ಟಡಗಳು ವಿಭಾಗಕ್ಕೆ ಒಳಪಟ್ಟಿರುತ್ತವೆ.

2020–21 ನೇ ಸಾಲಿನ ಜಿಲ್ಲಾ ಪಂಚಾಯತ್ ಲಿಂಕ್ ಡಾಕ್ಯೂಮೆಂಡ್ ಯೋಜನೆಯಡಿಯಲ್ಲಿ ಈ ವಿಭಾಗ ವ್ಯಾಪ್ತಿಗೆ ವಿವಿಧ ಇಲಾಖೆಗಳ ಒಟ್ಟು 91 ಕಟ್ಟಡ ನಿರ್ವಹಣೆ ಕಾಮಗಾರಿಗಳು ರೂ. 163.11 ಲಕ್ಷಗಳಿಗೆ ಅನುಮೋದನೆಯಗಿರುತ್ತವೆ. ಸದರಿ ಕಾಮಗಾರಿಗಳ ಪೈಕಿ 91 ಕಾಮಗಾರಿಗಳು ಪೂರ್ಣಗೊಂಡಿರುತ್ತವೆ ಹಾಗು ಸದರಿ ಕಾಮಗಾರಿಗಳಿಗೆ ರೂ.161.33 ಗಳನ್ನು ವೆಚ್ಚ ಮಾಡಲಾಗಿರುತ್ತದೆ.

4. ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಮೂಲಭೂತ ಸೌಕರ್ಯ ಯೋಜನೆಗಳು:–

ಅ. 2020–21 ನೆ ಸಾಲಿನ ಜಿಲ್ಲಾ ಪಂಚಾಯತ್ ಅನಿರ್ಬಂಧಿತ ಅನುದಾನ: : ಈ ಯೋಜನೆಯಡಿ ಮಧುಗಿರಿ ಪಂ.ರಾ.ಇಂ.ವಿಭಾಗದ ವ್ಯಾಪ್ತಿಗೆ ಒಟ್ಟು 262 ಕಾಮಗಾರಿಗಳು ರೂ. 356.72 ಲಕ್ಷಗಳಿಗೆ ಅನುಮೋದನೆಯಾಗಿದ್ದು, 356.72 ಲಕ್ಷ ರೂ.ಗಳು ಬಿಡುಗಡೆಯಾಗಿರುತ್ತದೆ.. ಕ್ರಿಯಾ ಯೋಜನೆಯಲ್ಲಿ ಅನುಮೋದಿಸಿರುವಂತೆ 262 ಕಾಮಗಾರಿಗಳು ಪೂರ್ಣಗೊಂಡಿದ್ದು, ರೂ: 356.51 ಲಕ್ಷ ರೂ.ಗಳು ಖರ್ಚಾಗಿರುತ್ತದೆ.

ಅ. 2020–21 ನೆ ಸಾಲಿನ 15 ನೇ ಹಣಕಾಸು ಅನುದಾನ: : ಈ ಯೋಜನೆಯಡಿ ಮಧುಗಿರಿ ಪಂ.ರಾ.ಇಂ.ವಿಭಾಗದ ವ್ಯಾಪ್ತಿಗೆ ಒಟ್ಟು 143 ಕಾಮಗಾರಿಗಳು ರೂ. 220.20 ಲಕ್ಷಗಳಿಗೆ ಅನುಮೋದನೆಯಾಗಿದ್ದು, 176.25 ಲಕ್ಷ ರೂ.ಗಳು ಬಿಡುಗಡೆಯಾಗಿರುತ್ತದೆ.. ಕ್ರಿಯಾ ಯೋಜನೆಯಲ್ಲಿ ಅನುಮೋದಿಸಿರುವಂತೆ 142 ಕಾಮಗಾರಿಗಳು ಪೂರ್ಣಗೊಂಡಿದ್ದು, ರೂ: 176.25 ಲಕ್ಷ ರೂ.ಗಳು ಖರ್ಚಾಗಿರುತ್ತದೆ.

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ತುಮಕೂರು ಕಛೇರಿಯ 2020–21ನೇ ಸಾಲಿನ ವಾರ್ಷಿಕ ಆಡಳಿತ ವರದಿ

ಸರ್ಕಾರಿ ಆದೇಶ ಸಂಖ್ಯೆ ಗ್ರಾ.ಅ.ಪ.56 ಗ್ರಾ.ನೀ.ಸ(2) 2013 ದಿನಾಂಕ:04.03.2014 ಸರ್ಕಾರದ ಆದೇಶ ಸಂಖ್ಯೆ ಗ್ರಾ.ಅ.ಪ 210 ಜಿ.ಪ.ಅ.2014 ದಿನಾಂಕ:03.06.2014 ಹಾಗೂ ಸರ್ಕಾರದ ಆದೇಶ ಸಂಖ್ಯೆ ಗ್ರಾ.ಅ.ಪ.210, ಜಿ.ಪ.ಅ.2014 ಬೆಂಗಳೂರು ದಿನಾಂಕ:03.07.2014ರ ಆದೇಶಗಳನುಸಾರ ಈ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ತುಮಕೂರು ಕಛೇರಿಯು ದಿನಾಂಕ:22.08.2014 ರಂದು ಪ್ರಾರಂಭಗೊಂಡಿರುತ್ತದೆ. ಈ ವಿಭಾಗವು ಪುನರ್ ವ್ಯವಸ್ಥೆಯ ಪ್ರಕಾರ ಗ್ರಾಮೀಣ ಕುಡಿಯುವ ನೀರಿನ ಸಂಪೂರ್ಣ ಜವಾಬ್ದಾರಿಯನ್ನು ಹೊಂದಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ:ಗ್ರಾ.ಅ.ಪ 166 ಜಿ.ಪ.ಅ 2015(2) ಬೆಂಗಳೂರು ದಿನಾಂಕ:04.08.2015ರ ಪ್ರಕಾರ ವಿಭಾಗ ಮತ್ತು ಉಪ ವಿಭಾಗಗಳಿಗೆ 134 ಹುದ್ದೆಗಳು ಮಂಜೂರಾಗಿದ್ದು. ಅವುಗಳಲ್ಲಿ ಅಧಿಕಾರಿ ಮತ್ತು ನೌಕರುಗಳು ಕೆಲಸ ನಿರ್ವಹಿಸುತ್ತಿದ್ದಾರೆ. ಉಪ ವಿಭಾಗ ಕಛೇರಿಗಳಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕಂಪ್ಯೂಟರ್ ಆಪರೇಟರ್–11 ಮತ್ತು 'ಡಿ'ಗ್ರೂಪ್ ನೌಕರರು–14 ನೌಕರರು ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಗುಂಪು	**ಮಂಜೂರಾದ ಹುದ್ದೆಯ ಸಂಖ್ಯೆ**	**ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳ ಸಂಖ್ಯೆ**	**ಖಾಲಿ ಹುದ್ದೆಗಳ ಸಂಖ್ಯೆ**
ಗುಂಪು ಎ–	11	5	6
ಗುಂಪು ಬಿ–	27	7	20
ಗುಂಪು ಸಿ–	73	23	50
ಗುಂಪು ಡಿ–	23	3	20
ಒಟ್ಟು	**134**	**38**	**96**

ಮೇಲಿನಂತೆ ಕಾರ್ಯಪಾಲಕ ಇಂಜಿನಿಯರ್ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ತುಮಕೂರು ಇಲ್ಲಿ ಕಾರ್ಯನಿರ್ವಹಿಸುತ್ತಿದೆ. ಹಾಗೂ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ,

1. ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ ವಿಭಾಗ ತುಮಕೂರು
2. ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ ವಿಭಾಗ ಗುಬ್ಬಿ.

3. ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ ವಿಭಾಗ ತಿಪಟೂರು
4. ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ ವಿಭಾಗ ಕುಣಿಗಲ್
5. ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ ವಿಭಾಗ ತುರುವೇಕೆರೆ
6. ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ ವಿಭಾಗ ಮಧುಗಿರಿ
7. ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ ವಿಭಾಗ ಶಿರಾ
8. ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ ವಿಭಾಗ ಪಾವಗಡ
9. ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ ವಿಭಾಗ ಕೊರಟಗೆರೆ
10. ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ ವಿಭಾಗ ಚಿ.ನಾ.ಹಳ್ಳಿ.

ಈ ವಿಭಾಗ ಮತ್ತು ಉಪ ವಿಭಾಗಗಳು ಜಿಲ್ಲೆಯಲ್ಲಿನ ಸಂಪೂರ್ಣ ಕುಡಿಯುವ ನೀರಿನ ಕಾಮಗಾರಿಗಳ ನಿರ್ವಹಣೆ ಈ ವಿಭಾಗ ಮತ್ತು ಉಪ ವಿಭಾಗಗಳ ವ್ಯಾಪ್ತಿಗೆ ಬರುತ್ತವೆ.

ಜಿಲ್ಲೆಯಲ್ಲಿ ಈ ಕೆಳಗಿನಂತೆ ತಾಲ್ಲೂಕುವಾರು ಗ್ರಾಮ ಪಂಚಾಯ್ತಿಗಳು ಇದ್ದು ಕುಡಿಯುವ ನೀರಿನ ವಿತರಣೆಯನ್ನು ಗ್ರಾಮಗಳಲ್ಲಿ ಗ್ರಾಮ ಪಂಚಾಯ್ತಿಗಳು ನಿರ್ವಹಿಸುತ್ತಿವೆ.

1. ತುಮಕೂರು ತಾಲ್ಲೂಕಿನಲ್ಲಿ 41 ಗ್ರಾಮ ಪಂಚಾಯ್ತಿಗಳು.
2. ಗುಬ್ಬಿ ತಾಲ್ಲೂಕಿನಲ್ಲಿ 33 ಗ್ರಾಮ ಪಂಚಾಯ್ತಿಗಳು.
3. ಕುಣಿಗಲ್ ತಾಲ್ಲೂಕಿನಲ್ಲಿ 36 ಗ್ರಾಮ ಪಂಚಾಯ್ತಿಗಳು.
4. ತಿಪಟೂರು ತಾಲ್ಲೂಕಿನಲ್ಲಿ 26 ಗ್ರಾಮ ಪಂಚಾಯ್ತಿಗಳು.
5. ತುರುವೇಕೆರೆ ತಾಲ್ಲೂಕಿನಲ್ಲಿ 27 ಗ್ರಾಮ ಪಂಚಾಯ್ತಿಗಳು.
6. ಮಧುಗಿರಿ ತಾಲ್ಲೂಕಿನಲ್ಲಿ 39 ಗ್ರಾಮ ಪಂಚಾಯ್ತಿಗಳು.

7. ಕೊರಟಗೆರೆ ತಾಲ್ಲೂಕಿನಲ್ಲಿ 24 ಗ್ರಾಮ ಪಂಚಾಯ್ತಿಗಳು.
8. ಪಾವಗಡ ತಾಲ್ಲೂಕಿನಲ್ಲಿ 34 ಗ್ರಾಮ ಪಂಚಾಯ್ತಿಗಳು.
9. ಚಿ.ನಾ.ಹಳ್ಳಿ ತಾಲ್ಲೂಕಿನಲ್ಲಿ 28 ಗ್ರಾಮ ಪಂಚಾಯ್ತಿಗಳು.
10. ಶಿರಾ ತಾಲ್ಲೂಕಿನಲ್ಲಿ 42 ಗ್ರಾಮ ಪಂಚಾಯ್ತಿಗಳು.

ಈ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸಿಬ್ಬಂದಿ ವರ್ಗದವರಿಗೂ ನಿಯಮಾವಳಿ ಅನುಸಾರವಾಗಿ ಸಂಬಂಧಪಟ್ಟ ಭತ್ಯೆ ಹಾಗೂ ವೇತನವನ್ನು ನೀಡಲಾಗಿದೆ. ಹಾಗೂ ನಿಯಮಾವಳಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ಭತ್ಯೆಗಳನ್ನು ನೀಡಲು ಎಲ್ಲಾ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ಗಳಿಗೆ ಅವರ ವ್ಯಾಪ್ತಿಯಲ್ಲಿ ಬರುವ ಸಿಬ್ಬಂದಿ ವರ್ಗದವರಿಗೆ ನೀಡಬೇಕೆಂದು ಸರ್ಕಾರದಿಂದ ಸೂಕ್ತ ಆದೇಶ ನೀಡಲಾಗಿದೆ.

ಇಲಾಖೆಯ ಉದ್ದೇಶಗಳಿಗೆ ಪೂರಕವಾಗಿ ಗ್ರಾಮಗಳಿಗೆ ಕುಡಿಯುವ ನೀರನ್ನು ಒದಗಿಸಲು ಯೋಜನೆಗೆ ಸಂಬಂಧಿಸಿದ ಕಾಮಗಾರಿಗಳು ಯಶಸ್ವಿಯಾಗಿ ಪೂರ್ಣಗೊಂಡಿರುತ್ತವೆ.ಈ ಎಲ್ಲಾ ಮಾಹಿತಿಗಳ ವಿವರವಾದ ಅಂಶಗಳನ್ನು ಈ ವರದಿಯೊಂದಿಗೆ ಸಲ್ಲಿಸಲಾಗಿದೆ.

<u>ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗಕ್ಕೆ ಸಂಬಂಧಿಸಿದ ಸಮಗ್ರ ವರದಿ:</u>

ತುಮಕೂರು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗವೆಂದು ದಿನಾಂಕ:22.08.2014ರಂದು ಈ ಹಿಂದೆ ಇದ್ದ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ತುಮಕೂರು, ಮಧುಗಿರಿಯನ್ನು ಮರುನಾಮಕರಣ ಮಾಡಿ ಹೊಸದಾಗಿ ಸೃಜಿಸಿದ್ದು, ಈ ಜಿಲ್ಲೆಯ ವ್ಯಾಪ್ತಿಯೊಳಗೆ ಹೊಸದಾಗಿ ಸೃಜನೆಗೊಂಡಿರುವ ಸದರಿ ಇಲಾಖೆ ಕಾರ್ಯವ್ಯಾಪ್ತಿಯಲ್ಲಿ ಒಟ್ಟು ಹತ್ತು ತಾಲ್ಲೂಕುಗಳಿದ್ದು, ಕ್ರಮವಾಗಿ ತುಮಕೂರು, ಗುಬ್ಬಿ, ತಿಪಟೂರು, ಕುಣಿಗಲ್, ತುರುವೇಕೆರೆ, ಮಧುಗಿರಿ, ಶಿರಾ, ಕೊರಟಗೆರೆ, ಪಾವಗಡ ಮತ್ತು ಚಿಕ್ಕನಾಯಕನಹಳ್ಳಿ ಒಳಪಟ್ಟಿವೆ. ದಿನಾಂಕ: 22.08.2014 ರಿಂದ ಮೇಲಿನ ಪ್ರತಿ ತಾಲ್ಲೂಕನ್ನು ಒಂದು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ ವಿಭಾಗವೆಂದು ವಿಭಜಿಸಲಾಗಿದೆ ಹಾಗೂ ಕುಡಿಯುವ ನೀರಿನ ಸಂಬಂಧಪಟ್ಟ ಎಲ್ಲಾ ಕಾಮಗಾರಿಗಳನ್ನು ಈ ಉಪವಿಭಾಗಗಳು ನಿರ್ವಹಿಸುತ್ತಿವೆ.

ಗ್ರಾಮೀಣ ಪ್ರದೇಶದ ಜನರಿಗೆ ಅಭಿವೃದ್ಧಿ ಕಾಮಗಾರಿಗಳನ್ನು ಅನುಷ್ಟಾನಕ್ಕೆ ತರುವ ಗ್ರಾಮೀಣ ಜನವಸತಿಗಳಿಗೆ ಶುದ್ಧ ಕುಡಿಯುವ ನೀರನ್ನು ಒದಗಿಸುವುದೇ ಇದರ ಮೂಲ ಉದ್ದೇಶ. ಆರೋಗ್ಯಕರ ನೀರನ್ನು ಅವಶ್ಯ ಪ್ರಮಾಣಕ್ಕೆ ಶುದ್ಧ ನೀರನ್ನು ಒದಗಿಸುವುದು ಹಾಗೂ ಗ್ರಾಮೀಣ ಜನರಲ್ಲಿ ಆರೋಗ್ಯ ಜೀವನ ನಡೆಸುವಂತೆ ಮಾಡುವುದು ಈ ಇಲಾಖೆಯ ಮುಖ್ಯ ಉದ್ದೇಶವಾಗಿದೆ.

ಇತ್ತೀಚಿನ ವರ್ಷಗಳಲ್ಲಿ ಮಳೆಯ ಪ್ರಮಾಣ ವಾಡಿಕೆ ಪ್ರಮಾಣಕ್ಕಿಂತ ಕಡಿಮೆಯಾಗಿರುವುದರಿಂದ ಅಂತರ್ಜಲದಮಟ್ಟ ಕುಸಿದಿರುವ ಕಾರಣಗಳಿಂದ ಕೊಳವೆ ಬಾವಿಗಳ ಮರುಪೂರಣ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ. ಅಲ್ಲದೆ ನೀರಿನ ಗುಣಮಟ್ಟವನ್ನು ಪರೀಕ್ಷೆ ಮಾಡಲು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪ್ರಯೋಗಾಲಯವು ಇದ್ದು, ತಾಲ್ಲೂಕು ಮಟ್ಟದಲ್ಲಿ ಮಧುಗಿರಿ, ತಿಪಟೂರು ತಾಲ್ಲೂಕುಗಳಲ್ಲಿ 2 ಪ್ರಯೋಗಾಲಯ ಸೇರಿ ಒಟ್ಟು 3 ಪ್ರಯೋಗಾಲಯಗಳು ಕಾರ್ಯನಿರ್ವಹಿಸುತ್ತಿವೆ.

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಕಛೇರಿಯು, ತುಮಕೂರು ಜಿಲ್ಲಾ ಪಂಚಾಯತ್ ಹಾಗೂ ಆಯುಕ್ತರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಬೆಂಗಳೂರು ರವರ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ ಹಾಗೂ ಮುಖ್ಯ ಇಂಜಿನಿಯರ್ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಬೆಂಗಳೂರು (ಕರ್ನಾಟಕ) ಮತ್ತು ಅಧೀಕ್ಷಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವೃತ್ತ, ಬೆಂಗಳೂರು ಇವರುಗಳ ತಾಂತ್ರಿಕ ಸಲಹೆ ಹಾಗೂ ನಿಯಂತ್ರಣಕ್ಕೆ ಒಳಪಟ್ಟಿರುತ್ತದೆ. ಈ ವಿಭಾಗವು ವಿಭಾಗ ಹಂತದಲ್ಲಿ ತಾಂತ್ರಿಕ, ಆಡಳಿತ ಹಾಗೂ ಲೆಕ್ಕಶಾಖೆ ಹೊಂದಿದ್ದು, ಹತ್ತು ತಾಲ್ಲೂಕು ಕಾರ್ಯವ್ಯಾಪ್ತಿಯನ್ನು ಒಳಗೊಂಡಿದ್ದು, ಒಂದೊಂದು ತಾಲ್ಲೂಕಿನಲ್ಲಿ ಒಬ್ಬ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರವರು, ತಾಂತ್ರಿಕ ಸಿಬ್ಬಂದಿ ವರ್ಗ ಮತ್ತು ಆಡಳಿತ ಸಿಬ್ಬಂದಿ ವರ್ಗದ ಮೂಲಕ ಗ್ರಾಮೀಣ ಜನರಿಗೆ ನೀರು ಒದಗಿಸುವ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ. ತುಮಕೂರು ಜಿಲ್ಲೆಗೆ ಸಂಬಂಧಿಸಿದ ಜಿಲ್ಲಾ ಪಂಚಾಯತ್ ಆಡಳಿತ ಕಾರ್ಯವ್ಯಾಪ್ತಿಗೆ ಹತ್ತು ತಾಲ್ಲೂಕುಗಳು ಒಳಪಟ್ಟಿದ್ದು, ಜಿಲ್ಲಾ ಪಂಚಾಯತ್‌ನ ಎಲ್ಲಾ ಕಾನೂನು ನಿಯಮಗಳ ಪ್ರಕಾರ ಕಾರ್ಯನಿರ್ವಹಿಸುತ್ತಿದೆ. ಜಿಲ್ಲಾ ಪಂಚಾಯತ್ ಕಾಲಕಾಲಕ್ಕೆ ಜಾರಿಗೊಳಿಸುವ ಕಾನೂನುಗಳು, ಬದಲಾವಣೆ ಮತ್ತು ಅವುಗಳಿಗೆ ಮಾಡಲಾಗಿರುವ ಮುಖ್ಯ ಬದಲಾವಣೆ, ತಿದ್ದುಪಡಿಗಳಿಗೆ ಅನುಸಾರವಾಗಿ ಕಾರ್ಯನಿರ್ವಸುತ್ತಿದೆ. ಸರ್ಕಾರದ ಪತ್ರ ಸಂಖ್ಯೆ: PWD/423/FC-1, 2018 ಬೆಂಗಳೂರು ದಿನಾಂಕ: 24–09–2018 ರಂತೆ ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ಗಳಿಗೆ ರೂ. 10.00 ಲಕ್ಷಗಳವರೆಗಿನ ಅಂದಾಜುಪಟ್ಟಿಗಳಿಗೆ ತಾಂತ್ರಿಕ ಮಂಜೂರಾತಿ ನೀಡಲು ಕಾರ್ಯಪಾಲಕ ಇಂಜಿನಿಯರ್‌ಗಳಿಗೆ ರೂ. 50.00 ಲಕ್ಷಗಳವರೆಗೆ ಅಧೀಕ್ಷಕ ಇಂಜಿನಿಯರ್‌ರವರಿಗೆ ರೂ. 100.00 ಲಕ್ಷಗಳವರೆಗೆ ಹಾಗೂ ಮುಖ್ಯ ಇಂಜಿನಿಯರ್ ರವರು ರೂ. 500.00 ಲಕ್ಷಗಳವರೆಗೆ ಅಂದಾಜುಪಟ್ಟಿಗಳಿಗೆ ತಾಂತ್ರಿಕ ಮಂಜೂರಾತಿ ನೀಡಲು ಅಧಿಕಾರವನ್ನು ಪ್ರತ್ಯಾಯೋಜಿಸಲಾಗಿದೆ. ರೂ. 100.00 ಲಕ್ಷ ಮೊತ್ತದವರೆಗಿನ ಕಾಮಗಾರಿಗಳ ಟೆಂಡರ್ ಪರಿಶೀಲನೆ ಮತ್ತು ಅನುಮೋದನೆಯು ಕಾರ್ಯಪಾಲಕ ಇಂಜಿನಿಯರ್ ರವರ ವ್ಯಾಪ್ತಿಗೆ ಬರುತ್ತದೆ. ರೂ. 100.00 ಲಕ್ಷಗಳಿಂದ ರೂ. 250.00 ಲಕ್ಷಗಳವರೆಗಿನ ಕಾಮಗಾರಿಗಳ ಟೆಂಡರ್ ಪರಿಶೀಲನೆ ಮತ್ತು ಅನುಮೋದನೆಯು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅಧ್ಯಕ್ಷತೆಯ ಟೆಂಡರ್ (ಸಮಿತಿ) ಕಮಿಟಿಯಿಂದ ಹಾಗೂ ರೂ. 250.00 ಲಕ್ಷದಿಂದ ರೂ. 500.00

ಲಕ್ಷಗಳವರೆಗಿನ ಕಾಮಗಾರಿಗಳ ಟೆಂಡರ್ ಪರಿಶೀಲಿಸಿ ಮತ್ತು ಅನುಮೋದನೆಯು ಆಯುಕ್ತರು, ಗ್ರಾ. ಕು. ನೀ & ನೈ ಇಲಾಖೆ ಇವರಿಂದ ಆಗುತ್ತದೆ.

ಈ ವಿಭಾಗದ ವ್ಯಾಪ್ತಿಯಲ್ಲಿ ಬರುವ ಕಾಮಗಾರಿಗಳನ್ನು ನಿಯೋಜಿತ ಗುರಿಗಳಂತೆ ಸಾಧಿಸಲು ಕೆಳಕಂಡ ಕ್ರಮಗಳನ್ನು ಅನುಸರಿಸಲಾಗಿದೆ. ಕಾರ್ಯಪಾಲಕ ಇಂಜಿನಿಯರ್‌ರವರು ಪ್ರತಿ ತಿಂಗಳು ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ಪರಿಶೀಲಿಸಿ ಅಲ್ಲಿ ಕಂಡುಬಂದ ಕುಂಠಿತ ಸಾಧನೆ ಕುಂದು ಅಥವಾ ನ್ಯೂನತೆ ಕೊರತೆ ಬಗ್ಗೆ ಚರ್ಚಿಸಿ ಸೂಕ್ತ ಪರಿಹಾರಗಳನ್ನು ಸೂಚಿಸಲಾಗುತ್ತಿದೆ. ಪ್ರತಿ ತಿಂಗಳು ಕಾಮಗಾರಿಗಳ ಪ್ರಗತಿ ಬಗ್ಗೆ ಚರ್ಚಿಸಲು ವಿಭಾಗ ಮಟ್ಟದ ತಾಂತ್ರಿಕ ವರ್ಗದ ಅಧಿಕಾರಿಗಳ ಸಭೆಯನ್ನು ನಡೆಸಿ ಎಲ್ಲಾ ಕಾಮಗಾರಿಗಳ ಬಗ್ಗೆ ಕೂಲಂಕುಷವಾಗಿ ಚರ್ಚಿಸಿ ಏನಾದರೂ ಕುಂದು ಕೊರತೆಗಳು ಇದ್ದರೆ ಅವುಗಳಿಗೆ ಸೂಕ್ತ ಪರಿಹಾರಗಳನ್ನು ಸೂಚಿಸಲಾಗುತ್ತಿದೆ. ಮಾಸಿಕ ಸಭೆಯಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಅಧಿಕಾರಿಗಳು ನೀಡುವ ನಿರ್ದೇಶನದಂತೆ ಇವರು ಕೆಲಸ ಪರಿಶೀಲಿಸಿ, ಸಭೆಗಳನ್ನು ನಡೆಸಿ, ಕಳುಹಿಸಿರುವ ವರದಿ ಹಾಗೂ ಆದೇಶಗಳನ್ನು ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರಿಗೆ ಕಳುಹಿಸಿ ಸೂಕ್ತ ಕ್ರಮಕೈಗೊಳ್ಳಲು ಸೂಚಿಸಲಾಗುತ್ತಿದೆ.

ಅದರಂತೆ ಈ ವಿಭಾಗವು ಶುದ್ಧ ಕುಡಿಯುವ ನೀರಿನ ವ್ಯವಸ್ಥೆಗಾಗಿ ಈ ಕೆಳಕಂಡತೆ ಕ್ರಮ ಕೈಗೊಳ್ಳಲಾಗಿದೆ.

1. ಪ್ರಯೋಗಾಲಯಗಳ ಸ್ಥಾಪನೆ :–

ಪ್ರಸ್ತುತ ಈ ಜಿಲ್ಲೆಯ ಪ್ರತಿ ತಾಲ್ಲೂಕುಗಳಲ್ಲಿ ನೀರಿನ ಗುಣಮಟ್ಟವನ್ನು ತಿಳಿಯಲು ಮಳೆಗಾಲದ ಮುಂಚೆ ಮತ್ತು ಮಳೆಗಾಲದ ನಂತರ ಜಲ ಮೂಲಗಳಿಂದ ನೀರಿನ ಮಾದರಿಗಳನ್ನು ಸಂಗ್ರಹಿಸಿ ಈಗಾಗಲೇ ಸ್ಥಾಪಿತವಾಗಿರುವ 1 ಜಿಲ್ಲಾ ಪ್ರಯೋಗಾಲಯ ಮತ್ತು 2 ತಾಲ್ಲೂಕು ಪ್ರಯೋಗಾಲಯಗಳಲ್ಲಿ ನೀರಿನ ಗುಣಮಟ್ಟವನ್ನು ಪರೀಕ್ಷಿಸಿ ಅವಶ್ಯವಿದ್ದಲ್ಲಿ ಭೂ ವಿಜ್ಞಾನಿಗಳ ಸಹಕಾರದೊಂದಿಗೆ ಅಂತರ್ಜಲ ಶೋಧನ ಕಾರ್ಯವನ್ನು ಕೈಗೊಂಡು ಹೊಸ ಕೊಳವೆ ಬಾವಿಗಳನ್ನು ಕೊರೆಯಲು ಕ್ರಿಯಾ ಯೋಜನೆ ರೂಪಿಸಿಕೊಳ್ಳಲಾಗುತ್ತಿದೆ.

ಜಿಲ್ಲಾ ಮಟ್ಟದ ಪ್ರಯೋಗಾಲಯವು ತುಮಕೂರು ಕೇಂದ್ರ ಸ್ಥಾನದಲ್ಲಿದ್ದು ತುಮಕೂರು, ಗುಬ್ಬಿ, ಮತ್ತು ಕುಣಿಗಲ್ ತಾಲ್ಲೂಕುಗಳ ವ್ಯಾಪ್ತಿ ಹೊಂದಿರುತ್ತದೆ. ಜಿಲ್ಲಾ ಮಟ್ಟದ ಪ್ರಯೋಗಾಲಯದಲ್ಲಿ ಒಬ್ಬ ರಸಾಯನಿಕ ತಜ್ಞ, ಒಬ್ಬ ಪ್ರಯೋಗಾಲಯ ಸಹಾಯಕ ಕಮ್ ಡಾಟಾ ಎಂಟ್ರಿ ಆಪರೇಟರ್ ಮತ್ತು ಇಬ್ಬರು ನೀರಿನ ಮಾದರಿ ಸಂಗ್ರಹಗಾರರು ಇರುತ್ತಾರೆ. ತಿಪಟೂರು ಮತ್ತು ಮಧುಗಿರಿ ತಾಲ್ಲೂಕು ಮಟ್ಟದ ಪ್ರಯೋಗಾಲಯಗಳಿದ್ದು, ತಿಪಟೂರು ಪ್ರಯೋಗಾಲಯಕ್ಕೆ ತಿಪಟೂರು, ಚಿಕ್ಕನಾಯಕನಹಳ್ಳಿ, ತುರುವೇಕೆರೆ ತಾಲ್ಲೂಕುಗಳು ಹಾಗೂ ಮಧುಗಿರಿ ಪ್ರಯೋಗಾಲಯಕ್ಕೆ ಮಧುಗಿರಿ, ಪಾವಗಡ, ಸಿರಾ ಮತ್ತು ಕೊರಟಗೆರೆ ತಾಲ್ಲೂಕುಗಳು ಒಳಪಡುತ್ತದೆ. ಮಧುಗಿರಿ

ಪ್ರಯೋಗಾಲಯದಲ್ಲಿ ಒಬ್ಬ ರಸಾಯನಿಕ ತಜ್ಞ ಹಾಗೂ ಮೂರು ಜನ ನೀರಿನ ಮಾದರಿ ಸಂಗ್ರಹಗಾರರಿದ್ದು, ತಿಪಟೂರಿನ ಪ್ರಯೋಗಾಲಯದಲ್ಲಿ ಒಬ್ಬ ರಸಾಯನಿಕ ತಜ್ಞ ಹಾಗೂ ಇಬ್ಬರು ನೀರಿನ ಸಂಗ್ರಹಗಾರರು ಇರುತ್ತಾರೆ.

ಪ್ರಯೋಗಾಲಯ ಉಪಕರಣಗಳ ಕ್ಯಾಲಿಬ್ರೇಷನ್ ಹಾಗೂ ಒಂದು ವರ್ಷದ ಅವಧಿಗೆ ಉಪಕರಣಗಳ ವಾರ್ಷಿಕ ನಿರ್ವಹಣೆಗಾಗಿ ಟೆಂಡರ್ ಮೂಲಕ ಏಜೆನ್ಸಿಯನ್ನು ಗುರುತಿಸಲಾಗಿದೆ. ವರ್ಷದಲ್ಲಿ 6 ಬಾರಿ ಅವರು ಪ್ರಯೋಗಾಲಯಕ್ಕೆ ಭೇಟಿ ಕೊಡಲು ಕರಾರು ಮಾಡಿಕೊಳ್ಳಲಾಗಿದೆ. ವಿಭಾಗದಿಂದ ಜಿಲ್ಲೆಯ ಎಲ್ಲಾ 331 ಗ್ರಾಮ ಪಂಚಾಯಿತಿಗಳಿಗೆ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ನೀರಿನ ಗುಣಮಟ್ಟ ಪರೀಕ್ಷಿಸಲು Field Test Kit (FTK) ಒದಗಿಸಲು ಕ್ರಮವಹಿಸಲಾಗಿದೆ. ತುಮಕೂರು ಜಿಲ್ಲಾ ಮಟ್ಟದ ಹಾಗೂ ತಿಪಟೂರಿನ ತಾಲ್ಲೂಕು ಮಟ್ಟದ ಪ್ರಯೋಗಾಲಯಗಳು NABL ಮಾನ್ಯತೆ ಪಡೆಯಲು ಕ್ರಮವಹಿಸಿದೆ.

2020–21 ನೇ ಸಾಲಿನಲ್ಲಿ ಜಿಲ್ಲೆಯಲ್ಲಿರುವ 5315 ಜನವಸತಿಗಳಲ್ಲಿನ 12,631 ಜಲಮೂಲಗಳ ಪೈಕಿ 7176 ಜಲಮೂಲಗಳು ಕಾರ್ಯನಿರ್ವಹಿಸುತ್ತಿದ್ದು, ಅವುಗಳಲ್ಲಿ 5491 ಜಲಮೂಲಗಳನ್ನು ಪರೀಕ್ಷಿಸಲಾಗಿದೆ. ಈ ಪೈಕಿ 865 ಫ್ಲೋರೈಡ್ ಹಾಗೂ ಐರನ್ 91 ರಾಸಾಯನಿಕ ಕಲುಷಿತ ಜಲಮೂಲಗಳು ಇದ್ದು ಸದರಿ ಜನವಸತಿಗಳಲ್ಲಿ ಜನರಿಗೆ ಕಲುಷಿತ ನೀರಿನ ಬಾಧೆಯಿಂದ ಮುಕ್ತಗೊಳಿಸಲು ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಅಳವಡಿಸಲು ಕ್ರಮವಹಿಸಲಾಗಿದೆ.

ಜಿಲ್ಲೆಯ ಪಾವಗಡ ಮತ್ತು ಮಧುಗಿರಿ ತಾಲ್ಲೂಕಿನ ಹೆಚ್ಚಿನ ಗ್ರಾಮಗಳ ಜಲಮೂಲಗಳು ಫ್ಲೋರೈಡ್‌ಯುಕ್ತವಾಗಿದ್ದು, ಅಂತಹ ಗ್ರಾಮಗಳಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಅನುಷ್ಠಾನಗೊಳಿಸಿ 5 ವರ್ಷಗಳವರೆಗೆ ಅನುಷ್ಠಾನಗೊಳಿಸಿದ ಗುತ್ತಿಗೆದಾರರಿಂದಲೇ ಕಾರ್ಯಾಚರಣೆ ಮತ್ತು ನಿರ್ವಹಣೆಯನ್ನು ನಿರ್ವಹಿಸುವಂತೆ ನೋಡಿಕೊಳ್ಳಲಾಗುತ್ತಿದೆ. ಫ್ಲೋರೈಡ್‌ಯುಕ್ತ ಜಲಮೂಲಗಳಿರುವ ಕಡೆ ಕನಿಷ್ಟ 8ರಿಂದ 10 LPCD ಶುದ್ಧ ಕುಡಿಯುವ ನೀರನ್ನು ಒದಗಿಸಲು ಕ್ರಮವಹಿಸಿದೆ.

ಜಿಲ್ಲೆಯಲ್ಲಿ ಈವರೆಗೆ 1525 ಶುದ್ಧ ಕುಡಿಯುವ ನೀರಿನ ಘಟಕಗಳು ಅನುಮೋದನೆಗೊಂಡಿದ್ದು, 1508 ಶುದ್ಧ ಕುಡಿಯುವ ನೀರಿನ ಘಟಕಗಳನ್ನು ವಿವಿಧ ಏಜೆನ್ಸಿಗಳ ಮೂಲಕ ವಿವಿಧ ಶೀರ್ಷಿಕೆಯಡಿ ಅನುಷ್ಠಾನಗೊಳಿಸಿ ನಿರ್ವಹಿಸಲಾಗುತ್ತಿದೆ. ಶುದ್ಧ ಕುಡಿಯುವ ನೀರಿನ ಘಟಕಗಳು ಕೆಟ್ಟು ನಿಂತಲ್ಲಿ ಅವುಗಳ ದುರಸ್ತಿಗಾಗಿ ಕ್ರಮವಹಿಸಲಾಗುತ್ತಿದೆ. ಶುದ್ಧ ಕುಡಿಯುವ ನೀರಿನ ಘಟಕಗಳು ಕಾರ್ಯನಿರ್ವಹಿಸದೇ ಇದ್ದಾಗ ಸಾರ್ವಜನಿಕರು 9480985555 Toll Free ಸಂಖ್ಯೆಗೆ ದೂರು ದಾಖಲಿಸಲು ವ್ಯವಸ್ಥೆ ಮಾಡಲಾಗಿದ್ದು, ಪರಿಹಾರ ಎಂಬ ವೆಬ್‌ಸೈಟ್ ಕೂಡ ಇದೆ. ಇದರಲ್ಲಿ ದಾಖಲೆಯಾದ ದೂರುಗಳನ್ನು ಪರಿಹರಿಸಲು ಕ್ರಮವಹಿಸಲಾಗುತ್ತದೆ.

2. ಕೊಳವೆ ಬಾವಿಗಳು:–

2020–21ನೇ ಸಾಲಿನಲ್ಲಿ ಪ್ರಯೋಗಾಲಯ ವರದಿ ಹಾಗೂ ಭೂವಿಜ್ಞಾನಿಗಳ ವರದಿ ಹಾಗೂ ಸ್ಥಳೀಯ ಅಗತ್ಯತೆಗೆ ಅನುಗುಣವಾಗಿ ಬೇಡಿಕೆಯ ಆಧಾರದ ಮೇಲೆ ಮಾರ್ಗಸೂಚಿ ಅನ್ವಯ ಕ್ರಿಯಾ ಯೋಜನೆಯನ್ನು ತಯಾರಿಸಿ ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸಲಾಗುವುದು ಅದರಂತೆ ಸರ್ಕಾರದಿಂದ ಬಿಡುಗಡೆಯಾದ ಅನುದಾನಕ್ಕನುಗುಣವಾಗಿ ಆಧ್ಯತೆಯ ಮೇರೆಗೆ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಈ ಸಾಲಿನಲ್ಲಿ 462 ಹೊಸ ಕೊಳವೆ ಬಾವಿಗಳನ್ನು ಕೊರೆಯಲಾಗಿದ್ದು, ಇದರಲ್ಲಿ 365 ಕೊಳವೆಬಾವಿಗಳು ಸಫಲವಾಗಿದ್ದು, 97 ಕೊಳವೆ ಬಾವಿಗಳು ವಿಫಲವಾಗಿರುತ್ತವೆ.

3. ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆ:–

ಅ) ಬಹುಗ್ರಾಮ ಕುಡಿಯುವ ನೀರಿನ ಕಾಮಗಾರಿಗಳು:–

ತುಮಕೂರು ಜಿಲ್ಲೆಯಲ್ಲಿ ಒಟ್ಟು 33 ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳಿದ್ದು, ಈ ಪೈಕಿ 31 ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳು ಪೂರ್ಣಗೊಂಡಿದ್ದು, ಉಳಿದ 2 ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳು ಪ್ರಗತಿಯಲ್ಲಿರುತ್ತವೆ.

ಪ್ರಗತಿಯಲ್ಲಿರುವ ಈ ಯೋಜನೆಗೆ ಸುಸ್ಥಿರ ಜಲಮೂಲ, ಹೇಮಾವತಿ ಜಲಾಶಯದ ಕಾಲುವೆಗಳು, Rain fed ಮೂಲಕ ಹರಿಯುವ ನೀರನ್ನು ಕೆರೆಗಳಿಗೆ ತುಂಬಿಸಿ WTP ಮೂಲಕ ನೀರನ್ನು ಶುದ್ಧೀಕರಿಸಿ ಓವರ್ ಹೆಡ್ ಟ್ಯಾಂಕ್‌ಗಳ ಮುಖಾಂತರ ಸಾರ್ವಜನಿಕರಿಗೆ ಕುಡಿಯುವ ನೀರನ್ನು ಒದಗಿಸಲಾಗುತ್ತಿದೆ.

ತಿಪಟೂರು ತಾಲ್ಲೂಕಿನ ಬಿಳಿಗೆರೆ ಮತ್ತು ಇತರೆ 12 ಗ್ರಾಮಗಳಿಗೆ 70 ಎಲ್.ಪಿ.ಸಿ.ಡಿ ನೀರನ್ನು ಒದಗಿಸಲು ವಿನ್ಯಾಸ ಮಾಡಲಾಗಿದೆ. ಈ ಯೋಜನೆಯು ರೂ. 6.96 ಕೋಟಿಗಳಿಗೆ ಮಂಜೂರಾಗಿದ್ದು ಕೆಲಸವು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿದ್ದು ಮುಗಿಯುವ ಹಂತದಲ್ಲಿರುತ್ತದೆ. ಈ ಯೋಜನೆಗೆ ರೂ. 2.92 ಕೋಟಿ ವೆಚ್ಚಮಾಡಲಾಗಿದೆ.

ಪಾವಗಡ ತಾಲ್ಲೂಕಿನ ಬಹುಗ್ರಾಮ ಯೋಜನೆಗೆ ತುಂಗಾಭದ್ರಾ ಹಿನ್ನೀರಿನ ಜಲಮೂಲವನ್ನು ತರುವ ಮೂಲಕ ಕ್ರಮ ಕೈಗೊಳ್ಳಲಾಗುತ್ತಿದೆ. ತುಂಗಾಭಧ್ರಾ ಜಲಾಶಯದ ಹಿನ್ನೀರಿನ ಯೋಜನೆಯಡಿ ಈ ಜಿಲ್ಲೆಯ ಪಾವಗಡ ತಾಲ್ಲೂಕನ್ನು ಸಮಗ್ರ ಕುಡಿಯುವ ನೀರು ಸರಬರಾಜು ಯೋಜನೆ ವ್ಯಾಪ್ತಿಯಡಿ ಒಳಪಡಿಸಲಾಗಿದೆ. ತುಂಗಾಭದ್ರಾ ಹಿನ್ನೀರಿನ ಜಲಮೂಲವನ್ನು ತರುವ ಮೂಲಕ ಕ್ರಮ ಕೈಗೊಳ್ಳಲಾಗುತ್ತಿದೆ. ಒಟ್ಟು 217612 ಜನರಿಗೆ ನೀರನ್ನು ಪ್ರಸ್ತುತ ಒದಗಿಸಬಹುದಾಗಿರುತ್ತದೆ. ಈ ಯೋಜನೆಗೆ 85 ಎಲ್.ಪಿ.ಸಿ.ಡಿ ನೀರನ್ನು ಒದಗಿಸಲು ವಿನ್ಯಾಸ ಮಾಡಲಾಗಿದೆ. 370

ಜನವಸತಿಗಳಿಗೆ ಸಂಬಂಧಿಸಿದಂತೆ 239309 ಜನಸಂಖ್ಯೆಗೆ ಫ್ಲೋರೈಡ್ ಮುಕ್ತ ಕುಡಿಯುವ ನೀರು ಒದಗಿಸಲು ರೂ. 31884.94 ಲಕ್ಷಗಳ ಅಂದಾಜುಪಟ್ಟಿಗೆ ಅನುಮೋದನೆ ದೊರಕಿದ್ದು, M/s Megha Engineering and Infrastructures Limited, Hyderabad ರವರಿಗೆ ಕಾಮಗಾರಿ ವಹಿಸಲಾಗಿದೆ. ಯೋಜನೆಗೆ ಇದುವರೆವಿಗೂ ರೂ. 24085.37 ಲಕ್ಷಗಳು ವೆಚ್ಚವಾಗಿರುತ್ತದೆ. ಈ ಯೋಜನೆಯ ವ್ಯಾಪ್ತಿಯಲ್ಲಿ ವಿವಿಧ ಹಂತಗಳಲ್ಲಿ ಕಾಮಗಾರಿ ಪ್ರಗತಿಯಲ್ಲಿದ್ದು ಮುಗಿಯುವ ಹಂತದಲ್ಲಿರುತ್ತದೆ.

ಆ) ಶುದ್ಧ ಕುಡಿಯುವ ನೀರಿನ ಘಟಕಗಳು (ಆರ್.ಓ ಘಟಕಗಳು):–

ತುಮಕೂರು ಜಿಲ್ಲೆಯಲ್ಲಿ ಒಟ್ಟು ವಿವಿಧ ಇಲಾಖೆಯಿಂದ ಅಂದರೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಕೆ.ಆರ್.ಐ.ಡಿ.ಎಲ್, ಕೆ.ಎಂ.ಎಫ್ ಮತ್ತು ಎಂ.ಪಿ/ಎಂ.ಎಲ್.ಎ.ಡಿ.ಎಸ್ ವತಿಯಿಂದ ಒಟ್ಟು 1525 ಶುದ್ಧ ಕುಡಿಯುವ ನೀರಿನ ಘಟಕಗಳು ಮಂಜೂರಾಗಿದ್ದು, 1508 ಘಟಕಗಳು ಅನುಷ್ಟಾನಗೊಂಡಿದ್ದು, 7 ಘಟಕಗಳ ಕಾಮಗಾರಿ ಪ್ರಗತಿಯಲ್ಲಿದೆ. 1508 ಘಟಕಗಳಲ್ಲಿ 1404 ಘಟಕಗಳು ಸುಸ್ಥಿತಿಯಲ್ಲಿದ್ದು, 88 ಘಟಕಗಳು ದುರಸ್ಥಿಯಲ್ಲಿದ್ದು, 88 ಘಟಕಗಳು ದುರಸ್ಥಿಯಲ್ಲಿದ್ದು, ಕಾಲಕಾಲಕ್ಕೆ ಸರಿಪಡಿಸಲಾಗುತ್ತಿದೆ. 16 ಘಟಕಗಳು ಸುಮಾರು 20 ವರ್ಷಗಳ ಹಿಂದೆ ಂಅ ಶೀಟ್‌ನಿಂದ ಶೆಡನ್ನು ನಿರ್ಮಿಸಿದ್ದು, ಕಾಲಕಾಲಕ್ಕೆ ನಿರ್ವಹಣೆ ಇಲ್ಲದೆ ಸದರಿ ಘಟಕಗಳನ್ನು ದುರಸ್ಥಿಗೊಳಿಸಿ ಚಾಲನೆಗೊಳಿಸಲು ಬೇಕಾಗುವ ವೆಚ್ಚವು ಮೂಲ ನಿರ್ಮಾಣ ವೆಚ್ಚಕ್ಕಿಂತಲೂ ಅಧಿಕವಾಗುವುದರಿಂದ ಅವುಗಳನ್ನು Scrap ಎಂದು ಪರಿಗಣಿಸಲಾಗಿದೆ. 10 ಘಟಕಗಳ ಕಾಮಗಾರಿಗಳನ್ನು ನಿವೇಶನ ಅಲಭ್ಯತೆಯಿಂದ ಕೈಬಿಡಲಾಗಿದೆ. ದುರಸ್ಥಿಯಲ್ಲಿರುವ ಶುದ್ಧ ಕುಡಿಯುವ ನೀರಿನ ಘಟಕಗಳ ಉಸ್ತುವಾರಿ ಏಜೆನ್ಸಿರವರಿಗೆ ನೋಟೀಸ್‌ಗಳನ್ನು ನೀಡಿ ದುರಸ್ಥಿಗೊಳಿಸಲು ಸೂಚಿಸಿಲಾಗಿದ್ದು, ಘಟಕಗಳ ನಿರ್ವಹಣೆ ಮಾಡದ 3 ಏಜೆನ್ಸಿಗಳ ಟೆಂಡರ್ ಕರಾರನ್ನು ರದ್ದುಗೊಳಿಸಲಾಗಿದೆ. 210 ಘಟಕಗಳನ್ನು ಗ್ರಾಮ ಪಂಚಾಯಿತಿಗಳಿಗೆ ನಿರ್ವಹಣೆಗಾಗಿ ವಹಿಸಲಾಗಿದೆ ಹಾಗೂ MPLADS / KLLADS ಹಾಗೂ KRIDL ವತಿಯಿಂದ ನಿರ್ಮಾಣಗೊಂಡು ನಿರ್ವಹಣೆ ಇಲ್ಲದ 272 ಘಟಕಗಳನ್ನು ನಿರ್ವಹಣೆಗಾಗಿ ಟೆಂಡರ್ ಮುಖಾಂತರ ಮೆ॥ ಜಲಸಿರಿ ಮಿನರಲ್ ವಾಟರ್ ಸಪ್ಲೈ ರವರಿಗೆ ನೀಡಲಾಗಿದ್ದು ಸದರಿ ಘಟಕಗಳನ್ನು ಸುಸ್ಥಿತಿಯಲ್ಲಿಡಲಾಗಿದೆ.

4. ಕಾರ್ಯಪಡೆ ಯೋಜನೆ:–

2020–21ನೇ ಸಾಲಿನಲ್ಲಿ ಗ್ರಾಮೀಣ ಕುಡಿಯುವ ನೀರು ಪೂರೈಕೆ ತಾಲ್ಲೂಕು ಕಾರ್ಯಪಡೆ (Task Force 3 ಕಂತುಗಳಲ್ಲಿ) ಯೋಜನೆಯಡಿಯಲ್ಲಿ ರೂ. 380.00+205.00 ಒಟ್ಟಾರೆ ರೂ. 585 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ಅದರಲ್ಲಿ ಬರಪೀಡಿತ ತಾಲ್ಲೂಕುಗಳಿಗೆ ರೂ. 50.00+25.00+25.00 (ರೂ. 100.00) ಲಕ್ಷಗಳು ಬರಪೀಡಿತವಲ್ಲದ ಉಳಿದ ಸಮಸ್ಯಾತ್ಮಕ ತಾಲ್ಲೂಕುಗಳಿಗೆ ತಲಾ ರೂ. 10.00+10.00+5.00 (ರೂ. 25.00) ಹಾಗೂ 10.00+15.00 (ರೂ.25.00) ಲಕ್ಷಗಳ ಹಂಚಿಕೆ ಮಾಡಲಾಗಿದ್ದು ತಾಲ್ಲೂಕು ಟಾಸ್ಕ್‌ಫೋರ್ಸ್

ಸಮಿತಿ ಮತ್ತು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ವಿವೇಚನೆ ಅನುಸಾರ ಕಾಮಗಾರಿಗಳನ್ನು ಕೈಗೊಳ್ಳಲು ಕ್ರಮವಹಿಸಲಾಗಿರುತ್ತದೆ. ಕಾರ್ಯಪಡೆ –1 ರಲ್ಲಿ 212 ಕಾಮಗಾರಿಗಳು ಇದ್ದು, ಒಟ್ಟು ರೂ. 371.95 ಲಕ್ಷಗಳು ವೆಚ್ಚವಾಗಿರುತ್ತದೆ. ಕಾರ್ಯಪಡೆ–2 ರಲ್ಲಿ 94 ಕಾಮಗಾರಿಗಳು ಇದ್ದು, ಒಟ್ಟು ರೂ. 198.87 ಲಕ್ಷಗಳು ವೆಚ್ಚವಾಗಿರುತ್ತದೆ. ಕಾರ್ಯಪಡೆ–3 ರಲ್ಲಿ 25 ಕಾಮಗಾರಿಗಳು ಇದ್ದು, ಒಟ್ಟು ರೂ. 43.05 ಲಕ್ಷಗಳು ವೆಚ್ಚವಾಗಿರುತ್ತದೆ. ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ವಿವೇಚನಾ ಅನುದಾನದಲ್ಲಿ 100 ಕಾಮಗಾರಿಗಳಿದ್ದು, ಒಟ್ಟು ರೂ. 205.89 ಲಕ್ಷಗಳು ವೆಚ್ಚವಾಗಿರುತ್ತದೆ.

ಜಲಜೀವನ್ ಮಿಷನ್ ಯೋಜನೆ:

ಜಲಜೀವನ್ ಮಿಷನ್ ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, ಸದರಿ ಯೋಜನೆಯನ್ನು ಕೇಂದ್ರ ಸರ್ಕಾರವು ದಿನಾಂಕ: 21–11–2019 ರಂದು ಜಾರಿಗೊಳಿಸಲಾಗಿದ್ದು, ಕರ್ನಾಟಕ ಸರ್ಕಾರವು ಈ ಯೋಜನೆಯನ್ನು ಮಾರ್ಚ್ 2020 ರಿಂದ ಅನುಷ್ಠಾನಗೊಳಿಸಲು ಪ್ರಾರಂಭಿಸಿರುತ್ತದೆ. ಈ ಯೋಜನೆಯಿಂದ ತುಮಕೂರು ಜಿಲ್ಲೆಯಲ್ಲಿ 2020–21 ನೇ ಸಾಲಿಗೆ ಮೊದಲನೇ ಹಂತದಲ್ಲಿ Source Sustainable ಇರುವಂತಹ 21 SVS ಗ್ರಾಮಗಳಲ್ಲಿ 7 ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳಿಂದ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ 7 ಗ್ರಾಮಗಳು, ಗುಬ್ಬಿ ತಾಲ್ಲೂಕಿನ 14 ಗ್ರಾಮಗಳು, ತುಮಕೂರು ತಾಲ್ಲೂಕಿನ 43 ಜನವಸತಿಗಳು ಹಾಗೂ ತುರುವೇಕೆರೆ ತಾಲ್ಲೂಕಿನ 20 ಜನವಸತಿ ಸೇರಿ ಒಟ್ಟು 84 ಜನವಸತಿಗಳ 19655 ಮನೆಗಳಿಗೆ ಕಾರ್ಯಾತ್ಮಕ ನಳ (FHTC) ಸಂಪರ್ಕ ಕಲ್ಪಿಸಲು ರೂ. 2340.21 ಲಕ್ಷಗಳಿಗೆ ಕ್ರಿಯಾ ಯೋಜನೆಯನ್ನು ಮಾನ್ಯ ಆಯುಕ್ತರು, ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ಇಲಾಖೆ, ಬೆಂಗಳೂರು ರವರಿಂದ ಅನುಮೋದನೆ ಪಡೆಯಲಾಗಿದೆ. ಹಾಗೂ ಎಲ್ಲಾ ಗ್ರಾಮಗಳ ಕಾಮಗಾರಿಗಳು ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದು, ಅರ್ಹ ಗುತ್ತಿಗೆದಾರರಿಗೆ ಕಾರ್ಯಾರಂಭ ಮಾಡಲು ಕಾರ್ಯಾದೇಶ ನೀಡಲಾಗಿದೆ.

6. SDP ಕಾಮಗಾರಿಗಳು:–

ತುಮಕೂರು ಜಿಲ್ಲೆಯ 10 ತಾಲ್ಲೂಕುಗಳಲ್ಲಿ ನಂಜುಡಪ್ಪ ವರದಿಯನ್ನಾಧರಿಸಿ ತುಮಕೂರು ಮತ್ತು ತಿಪಟೂರು ತಾಲ್ಲೂಕುಗಳನ್ನು ಹೊರತುಪಡಿಸಿ ಉಳಿದ 8 ತಾಲ್ಲೂಕುಗಳನ್ನು SDP Blocks ಎಂದು ಗುರುತಿಸಲಾಗಿದ್ದು, 2020–21 ನೇ ಸಾಲಿಗೆ ರೂ. 3569.08 ಲಕ್ಷಗಳ ಅನುದಾನ ನಿಗಧಿಪಡಿಸಲಾಗಿರುತ್ತದೆ. ಈ ಅನುದಾನದಲ್ಲಿ 8 ತಾಲ್ಲೂಕುಗಳಲ್ಲಿ 829 ಕಾಮಗಾರಿಗಳು ಅನುಮೋದನೆಯಾಗಿದ್ದು, 809 ಕಾಮಗಾರಿಗಳು ಮಾರ್ಚ್ 2021ರ ಅಂತ್ಯಕ್ಕೆ ಪೂರ್ಣಗೊಂಡಿದ್ದು, ರೂ. 3088.12 ಲಕ್ಷಗಳ ಅನುದಾನ ವಿನಿಯೋಗವಾಗಿರುತ್ತದೆ.

ಜಿಲ್ಲಾಪಂಚಾಯತ್,ತುಮಕೂರು

ಉಪನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ,

ತುಮಕೂರು(ದ) ಜಿಲ್ಲೆ,ತುಮಕೂರು

ಜಿಲ್ಲೆಯ ಹಿನ್ನಲೆ :

ಕರ್ನಾಟಕ ರಾಜ್ಯದ ಜಿಲ್ಲೆಗಳಲ್ಲಿ ಒಂದಾಗಿರುವ ತುಮಕೂರು ಜಿಲ್ಲೆಯು ಕಲ್ಪತರು ನಾಡು ಎಂದೇ ಪ್ರಸಿದ್ದಿ ಪಡೆದಿದೆ. ಈ ಜಿಲ್ಲೆಯ ಒಟ್ಟು 10598 ಚದರು ಕಿ.ಮೀ. ಆಳತೆಯನ್ನು ಹೊಂದಿದೆ. ಈ ಜಿಲ್ಲೆಯ ರಾಜ್ಯದ ಆಗ್ನೇಯ ದಿಕ್ಕಿನಲ್ಲಿದ್ದು 12.45 ರಿಂದ 14.20 ರೇಖಾಂಶ ಮತ್ತು 77.31 ಅಕ್ಷಾಂಶದಲ್ಲಿದೆ. ತುಮಕೂರು ಜಿಲ್ಲೆಯು ಭೌಗೋಳಿಕ ಹಾಗೂ ಸಾಂಸ್ಕೃತಿಕ ವೈವಿಧ್ಯತೆಗಳನೊಳಗೊಂಡಿದ್ದು ಶಿಕ್ಷಣ ಕ್ಷೇತ್ರದಲ್ಲಿ ಗಣನೀಯ ಪ್ರಗತಿಯನ್ನು ಸಾಧಿಸಿದೆ. ಈ ಜಿಲ್ಲೆಯು ಬೆಂಗಳೂರು, ಕೋಲಾರ ಮತ್ತು ಮಂಡ್ಯ ಜಿಲ್ಲೆಗಳಿಂದ ಸುತ್ತುವರೆದಿದ್ದು ಉತ್ತರದಲ್ಲಿ ಆಂದ್ರ ಪ್ರದೇಶದ ಅನಂತಪುರ ಜಿಲ್ಲೆಯಿದೆ.

ಆಡಳಿತ :

ಶೈಕ್ಷಣಿಕ ಆಡಳಿತ ಅನುಕೂಲತೆಗಾಗಿ ತುಮಕೂರು ಜಿಲ್ಲೆಯನ್ನು ದಕ್ಷಿಣ ಮತ್ತು ಉತ್ತರ ವಲಯಗಳಾಗಿ ವಿಂಗಡಿಸಿದೆ. ತುಮಕೂರು (ದ) ವಲಯವು 06 ತಾಲ್ಲೂಕುಗಳನ್ನು ಹಾಗೂ ಉತ್ತರ ವಲಯವು 04 ತಾಲ್ಲೂಕುಗಳನ್ನು ಒಳಗೊಂಡಿದೆ. ತುಮಕೂರು ದಕ್ಷಿಣ ವಲಯದ ಕೇಂದ್ರ ಕಛೇರಿ ತುಮಕೂರಿನಲ್ಲಿದ್ದು, ತಾಲ್ಲೂಕುಗಳಲ್ಲಿಯೂ ಮೇಲ್ವಿಚಾರಣೆಗಾಗಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗಳು ಕಾರ್ಯನಿರ್ವಹಿಸುತ್ತಿವೆ. ಶೈಕ್ಷಣಿಕ ಜಿಲ್ಲೆಯ ಶೈಕ್ಷಣಿಕ ಹಾಗೂ ಆಡಳಿತಾತ್ಮಕ ಮೇಲ್ವಿಚಾರಣೆಯನ್ನು ಉಪನಿರ್ದೇಶಕರು ಹಾಗೂ ತಾಲ್ಲೂಕು ಮಟ್ಟದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ನೋಡಿಕೊಳ್ಳುತ್ತಿದ್ದಾರೆ.

ಭಾಷೆ :

ಈ ಜಿಲ್ಲೆಯ ಎಲ್ಲಾ ಶಾಲೆಗಳಲ್ಲಿ ಪ್ರಮುಖವಾಗಿ ಕನ್ನಡ ಭಾಷೆ ಶಿಕ್ಷಣದ ಮಾಧ್ಯಮವಾಗಿದೆ. ಆದಾಗ್ಯೂ ಇತರೆ ಭಾಷೆಗಳಾದ ಉರ್ದು, ಅರೇಬಿಕ್ ಭಾಷಾ ಶಾಲೆಗಳು ಕೂಡ ಈ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿವೆ.

ಜನಸಂಖ್ಯೆ:

2011 ರ ಜನಗಣತಿಯಂತೆ ತುಮಕೂರು (ದ) ಜಿಲ್ಲೆಯ ಒಟ್ಟು ಜನಸಂಖ್ಯೆ 1610147 ಆಗಿದ್ದು ಮಹಿಳೆಯರ ಸಂಖ್ಯೆ 793059 ಪರಿಶಿಷ್ಟ ಜಾತಿ ಜನಸಂಖ್ಯೆ 245496 ಪರಿಶಿಷ್ಟ ಪಂಗಡದ ಜನಸಂಖ್ಯೆ 78487 ಆಗಿರುತ್ತದೆ.

ಸಾಕ್ಷರತೆ :

2011 ರ ಜನಗಣತಿ ಆಧಾರದಂತೆ ಈ ಜಿಲ್ಲೆಯ ಪುರುಷರ ಸಾಕ್ಷರತೆ ಶೇ 79.30 ಮಹಿಳೆಯರ ಸಾಕ್ಷರತೆ ಶೇ 60.07 ಒಟ್ಟು ಸಾಕ್ಷರತೆ ಪ್ರಮಾಣ ಶೇ 70.06 ಆಗಿದೆ.

ಶೈಕ್ಷಣಿಕ ಸಂಸ್ಥೆಗಳ ವಿವರ :

ಈ ಜಲ್ಲೆಯಲ್ಲಿನ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಶೈಕ್ಷಣಿಕ ಸಂಸ್ಥೆಗಳ ವಿವರ ಈ ಕೆಳಕಂಡಂತಿದೆ.

ಕ್ರ ಸಂ	ವಿವರ	ಸರ್ಕಾರಿ	ಅನುದಾನಿತ	ಅನುದಾನರಹಿತ
1	ಕಿರಿಯ ಪ್ರಾಥಮಿಕ ಶಾಲೆ	1261	2	37
2	ಹಿರಿಯ ಪ್ರಾಥಮಿಕ ಶಾಲೆ	746	50	245
3	ಪ್ರೌಢಶಾಲೆ	132	201	136
ಒಟ್ಟು		**2139**	**253**	**418**

2020–21ನೇ ಸಾಲಿನ ಶೈಕ್ಷಣಿಕ ಜಿಲ್ಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರ ವಿವರ ಇಂತಿದೆ.

ಕ್ರ.ಸಂ.	ಶಾಲೆಯ ವಿವರ	ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರ ಸಂಖ್ಯೆ
1	ಸರ್ಕಾರಿ ಪ್ರಾಥಮಿಕ ಶಾಲೆ	5196
2	ಸರ್ಕಾರಿ ಪ್ರೌಢಶಾಲೆ	1144
3	ಅನುದಾನಿತ ಪ್ರಾಥಮಿಕ ಶಾಲೆ	255
4	ಅನುದಾನಿತ ಪ್ರೌಢಶಾಲೆ	1224
5	ಅನುದಾನ ರಹಿತ ಪ್ರಾಥಮಿಕ ಶಾಲೆ	3211
6	ಅನುದಾನ ರಹಿತ ಪ್ರೌಢಶಾಲೆ	1898

2020–21ನೇ ಸಾಲಿನಲ್ಲಿ ವಿವಿಧ ತರಗತಿಗಳಲ್ಲಿ ದಾಖಲಾದ ವಿದ್ಯಾರ್ಥಿಗಳ ವಿವರ

ತರಗತಿ	ಒಟ್ಟು (ಎಲ್ಲಾ ಜಾತಿ ಸೇರಿ)			ಪರಿಶಿಷ್ಟ ಜಾತಿ			ಪರಿಶಿಷ್ಟ ಪಂಗಡ		
	ಬಾಲಕ	ಬಾಲಕಿ	ಒಟ್ಟು	ಬಾಲಕ	ಬಾಲಕಿ	ಒಟ್ಟು	ಬಾಲಕ	ಬಾಲಕಿ	ಒಟ್ಟು
1 ರಿಂದ 7	82013	75875	157888	13690	13072	26762	4668	4377	9045
8 ರಿಂದ 10	39977	34144	74121	7032	6163	13195	2435	1887	4322

2020–21ನೇ ಸಾಲಿನಲ್ಲಿ ಉಚಿತ ಸಮವಸ್ತ್ರ ಹಾಗೂ ಪಠ್ಯ ಪುಸ್ತಕಗಳ ವಿತರಣೆ ವಿವರ

ಉಚಿತ ಸಮವಸ್ತ್ರ ಮತ್ತು ಪಠ್ಯ ಪುಸ್ತಕ ವಿತರಣೆಯ ಫಲಾನುಭವಿ ಮಕ್ಕಳ ವಿವರ ಈ ಕೆಳಗೆ ನೀಡಲಾಗಿದೆ. ಉಚಿತ ಸಮವಸ್ತ್ರವನ್ನು 1–10ನೇ ತರಗತಿಯ ಸರ್ಕಾರಿ ಶಾಲಾ ಮಕ್ಕಳಿಗೆ ಹಾಗೂ ಸರ್ಕಾರಿ ಮತ್ತು ಅನುದಾನಿತ ಶಾಲೆಯಲ್ಲಿನ 1 ರಿಂದ 10 ನೇ ತರಗತಿಯ ಎಲ್ಲಾ ಮಕ್ಕಳಿಗೆ ಉಚಿತ ಪಠ್ಯ ಪುಸ್ತಕಗಳನ್ನು ವಿತರಣೆ ಮಾಡಲಾಗಿದೆ.

ಕ್ರ.ಸಂ	ವಿವರ	ಬಾಲಕ	ಬಾಲಕಿ	ಒಟ್ಟು
1	ಉಚಿತ ಸಮವಸ್ತ್ರ	49034	49908	98942
2	ಉಚಿತ ಪಠ್ಯ ಪುಸ್ತಕ	71890	65517	137407

2020–21ನೇ ಸಾಲಿನಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳ ವಿವರ :

ಕ್ರ.ಸಂ	ತಾಲ್ಲೂಕು	ಗುರುತಿಸಿದ ಮಕ್ಕಳ ಸಂಖ್ಯೆ	ಮುಖ್ಯವಾಹಿನಿಗೆ ಬಂದ ಮಕ್ಕಳ ಸಂಖ್ಯೆ	ಉಳಿಕೆ ಮಕ್ಕಳ ಸಂಖ್ಯೆ
1	ಚಿ.ನಾ.ಹಳ್ಳಿ	7	6	1
2	ಗುಬ್ಬಿ	9	9	0
3	ಕುಣಿಗಲ್	2	2	0
4	ತಿಪಟೂರು	0	0	0
5	ತುಮಕೂರು	23	11	12
6	ತುರುವೇಕೆರೆ	7	7	0
	ಒಟ್ಟು	48	35	13

2020–21ನೇ ಸಾಲಿನ ಎಸ್.ಎಸ್.ಎಲ್.ಸಿ. ಫಲಿತಾಂಶ –ಪರೀಕ್ಷೆಗೆ ಕುಳಿತಿರುವ ವಿದ್ಯಾರ್ಥಿಗಳ ವಿವರ ಫಲಿತಾಂಶ ನಿರೀಕ್ಷಿಸಲಾಗಿದೆ.

ಕ್ರ.ಸಂ	ತಾಲ್ಲೂಕು	ಪರೀಕ್ಷೆಗೆ ಕುಳಿತವರು		
		ಬಾಲಕರು	ಬಾಲಕಿಯರು	ಒಟ್ಟು
1	**ಚಿ.ನಾ ಹಳ್ಳಿ**	1271	1262	2533
2	**ಗುಬ್ಬಿ**	1721	1574	3295
3	**ಕುಣಿಗಲ್**	1598	1259	2857
4	**ತಿಪಟೂರು**	1525	1344	2869
5	**ತುಮಕೂರು**	5978	4115	10093
6	**ತುರುವೇಕೆರೆ**	1106	931	2037
	ಒಟ್ಟು	**13199**	**10485**	**23684**

2020–21ನೇ ಸಾಲಿನಲ್ಲಿ ಶೈಕ್ಷಣಿಕ ಅಭಿವೃದ್ಧಿಗಾಗಿ ಪ್ರೋತ್ಸಾಹದಾಯಕ ಚಟುವಟಿಕೆಗಳಿಗೆ ಅನುದಾನ ಬಿಡುಗಡೆಯಾಗಿದ್ದು ಖರ್ಚಿನ ವಿವರ :

ಕ್ರ.ಸಂ	ಕಾರ್ಯಕ್ರಮ	ಬಿಡುಗಡೆಯಾದ ಅನುದಾನ (ರೂ ಲಕ್ಷಗಳಲ್ಲಿ)	ಖರ್ಚಾದ ಅನುದಾನ (ರೂ ಲಕ್ಷಗಳಲ್ಲಿ)
1	ಸರ್ಕಾರಿ ಪ್ರೌಢಶಾಲೆಯಲ್ಲಿನ ಮಕ್ಕಳಿಗೆ ಶುಲ್ಕ ಮರುಪಾವತಿ (ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಎಲ್ಲಾ ಮಕ್ಕಳು ಹಾಗೂ ಎಲ್ಲಾ ಸಾಮಾನ್ಯ ಹೆಣ್ಣು ಮಕ್ಕಳಿಗೂ)	**61.62**	**53.27**
2	ಪ್ರತಿಭಾ ಕಾರಂಜಿ	**0.00**	**0.00**
3	ಸಾಧನ ಸಾಮಗ್ರಿ ಖರೀದಿಗಾಗಿ ಪೀಠೋಪಕರಣ	**21.00**	**21.00**
4	ಸೇರ್ಪಡೆ ಮತ್ತು ಮಾರ್ಪಾಡು	**0.00**	**0.00**

2020–21ನೇ ಸಾಲಿನಲ್ಲಿ ವೇತನಕ್ಕಾಗಿ ಖರ್ಚಾದ ಅನುದಾನದ ವಿವರ :

ಕ್ರ.ಸಂ	ವಿವರ	ಯೋಜನೆ (ರೂ ಲಕ್ಷಗಳಲ್ಲಿ)	ಯೋಜನೇತರ (ರೂ ಲಕ್ಷಗಳಲ್ಲಿ)
1	ಸರ್ಕಾರಿ ಪ್ರಾಥಮಿಕ ಶಾಲೆಗಳು	**0**	**32448.88**
2	ಅನುದಾನಿತ ಪ್ರಾಥಮಿಕ ಶಾಲೆಗಳು	**0**	**1617.99**
3	ಸರ್ಕಾರಿ ಪ್ರೌಢಶಾಲೆಗಳು	**0**	**9476.19**
4	ಅನುದಾನಿತ ಪ್ರೌಢಶಾಲೆಗಳು	**0**	**10690.42**
5	ಅನುದಾನಿತ ಪೂರ್ವ ಪ್ರಾಥಮಿಕ ಶಾಲೆ	**0**	**6.46**
6	ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ	**0**	**591.18**
7	ಉಪ ನಿರ್ದೇಶಕರ ಕಛೇರಿ	**0**	**211.26**

ಉಚಿತ ಹಾಗೂ ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ಕಾಯಿದೆ 2009: RTE ಅನುದಾನ ರಹಿತ ಶಾಲೆಗಳಲ್ಲಿ 1–8ನೇ ತರಗತಿಯವರೆಗೆ ಅವಕಾಶ ವಂಚಿತ ಮತ್ತು ದುರ್ಬಲ ವರ್ಗದ ಮಕ್ಕಳಿಗೆ ಶೇ 25ರಷ್ಟು ಸೀಟುಗಳನ್ನು ನೀಡಿ ಉಚಿತ ಶಿಕ್ಷಣ ನೀಡಲಾಗುತ್ತಿದೆ

ಸಮಗ್ರ ಶಿಕ್ಷಣ ಕರ್ನಾಟಕ:

TUMKUR(S) DIST : RTE FEE REIMBURSEMENT									
Sl.No.	Block Name	Students Count		Sanctioned Amount		First Installment Amount		Second Installment Amount	
		Pre Primary	Primary	Pre Primary	Primary	Pre Primary	Primary	Pre Primary	Primary
1	C N HALLI	128	720	951228	9242706	475613	4621351	475613	4613507
2	GUBBI	181	983	1435238	13507381	717619	6753690	717619	6700812
3	KUNIGAL	186	888	1444126	10778692	722062	5389344	722062	5298666
4	TIPTUR	223	1189	1667105	13820933	833552	6910464	833552	6831586
5	TUMKUR	817	4940	6445660	65043380	3222829	32521681	3192385	32274495
6	TURUVEKERE	141	672	1060850	7442194	530425	3721095	530425	3572177
	TOTAL	**1676**	**9392**	**13004207**	**119835286**	**6502100**	**59917625**	**6471656**	**59291243**

ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮ 2001–02 ರಿಂದ ಜಾರಿಗೆ ಬಂದಿದೆ. ತುಮಕೂರು ಕಂದಾಯ ಜಿಲ್ಲೆಯನ್ನು ಎರಡು ಶೈಕ್ಷಣಿಕ ಜಿಲ್ಲೆಯಾಗಿ ವಿಂಗಡಿಸಿದ್ದು, ಒಂದು ತುಮಕೂರು (ದ) ಜಿಲ್ಲೆ 6 ತಾಲ್ಲೂಕುಗಳನ್ನು ಒಳಗೊಂಡಿರುತ್ತದೆ. ಮತ್ತು ತುಮಕೂರು (ಉ) ಜಿಲ್ಲೆ ಮಧುಗಿರಿಯಾಗಿ ವಿಂಗಡಿಸಿದ್ದು 4 ತಾಲ್ಲೂಕುಗಳನ್ನು ಒಳಗೊಂಡಿರುತ್ತದೆ.

ಪ್ರಾರಂಭದಲ್ಲಿ ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮವನ್ನು ತುಮಕೂರು ಜಿಲ್ಲಾ ಕೇಂದ್ರದಲ್ಲಿ ಉಸ್ತುವಾರಿ ಮಾಡಲಾಗುತ್ತಿತ್ತು.

2007–08 ರಲ್ಲಿ ಪೂರ್ಣ ವಿಂಗಡನೆಯಾಗಿ ಆಯಾಯಾ ಉಪನಿರ್ದೇಶಕರ ಉಸ್ತುವಾರಿಯಲ್ಲಿ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಲಾಗುತ್ತಿದೆ.

1) 2020–21ನೇ ಸಾಲಿನಲ್ಲಿ ರೂ 2785.324 ಲಕ್ಷ ಬಿಡುಗಡೆಯಾಗಿದ್ದು, ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿದ್ದು, ಆರ್ಥಿಕ ವರ್ಷಾಂತ್ಯಕ್ಕೆ ರೂ 2671.257 ಲಕ್ಷ ವೆಚ್ಚವಾಗಿರುತ್ತದೆ.

2) ತಾಲ್ಲೂಕು ವ್ಯಾಪ್ತಿಗಳಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಉಸ್ತುವಾರಿಯಲ್ಲಿ ಕ್ಷೇತ್ರ ಸಂಪನ್ಮೂಲ ಕೇಂದ್ರಗಳ ಮೂಲಕ ಕಾರ್ಯಕ್ರಮ ಅನುಷ್ಠಾನ ಮಾಡಲಾಗುತ್ತಿದೆ.

3) ಯೋಜನೆಯಡಿ ವಿಶೇಷ ದಾಖಲಾತಿ ಮತ್ತು ಸಾಮಾನ್ಯ ದಾಖಲಾತಿ ಮೂಲಕ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲೆಗೆ ಸೇರ್ಪಡೆ ಮಾಡಿ, ಮಕ್ಕಳ ಪ್ರಾಥಮಿಕ ಶಿಕ್ಷಣಕ್ಕೆ ಪೂರಕವಾಗಿರುತ್ತದೆ. ಸಮುದಾಯ ದತ್ತ ಶಾಲಾ ಕಾರ್ಯಕ್ರಮ, 2ನೇ ಜೊತೆ ಸಮವಸ್ತ್ರ, ಶಾಲಾನುದಾನ,

ನಿರ್ವಹಣಾನುದಾನ, ರಾಷ್ಟ್ರೀಯ ಆವಿಷ್ಕೃತ ಚಟುವಟಿಕೆಗಳು ಮತ್ತು ಶೈಕ್ಷಣಿಕ ತರಬೇತಿ ಕಾರ್ಯಕ್ರಮಗಳನ್ನು ಈ ಸಾಲಿನಲ್ಲಿರುವಂತೆ ಮುಂದುವರೆಯುತ್ತಿದೆ.

4) ಈ ಯೋಜನೆಯಡಿ ಶಾಲೆಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆ ಹಾಗೂ ಶಾಲೆಗಳು ಆಕರ್ಷಕವಾಗಿರುವಂತೆ ಮಾಡಲು ಅನುದಾನ ನೀಡಲಾಗುತ್ತಿದೆ.

ಕೆಕೆಜಿಬಿವಿ ವಸತಿ ನಿಲಯ: ಚಿ.ನಾ.ಹಳ್ಳಿ, ಗುಬ್ಬಿ, ಕುಣಿಗಲ್, ತುರುವೇಕೆರೆ ತಾ॥ ತಲಾ 1 ರಂತೆ 6–10ನೇ ತರಗತಿ ಹೆಣ್ಣು ಮಕ್ಕಳಿಗೆ ಈ ಕೆಳಕಂಡಂತೆ ಉಚಿತ ವಸತಿ ಊಟ ಸೌಲಭ್ಯ ಕಲ್ಪಿಸಲಾಗಿದೆ.

ಕ್ರ.ಸಂ	ತಾಲ್ಲೂಕಿನ ಹೆಸರು	ಶಾಲೆಯ ಹೆಸರು	ಮಕ್ಕಳ ಸಂಖ್ಯೆ
1	ಚಿ.ನಾ.ಹಳ್ಳಿ	ಕರ್ನಾಟಕ ಕಸ್ತೂರಿಬಾ ಗಾಂಧಿ ವಸತಿ ನಿಲಯ. (ಗುರುಭವನ) ಚಿ.ನಾ.ಹಳ್ಳಿ	90
2	ಗುಬ್ಬಿ	ಕೆಕೆಜಿಬಿವಿ ಅಮ್ಮನಘಟ್ಟ ಗುಬ್ಬಿ ತಾಲ್ಲೂಕು	51
3	ಕುಣಿಗಲ್	ದೊಡ್ಡಮಧುರೆ,ಯಡಿಯೂರು ಹೋಬಳಿ, ಕುಣಿಗಲ್ ತಾಲ್ಲೂಕು	27
4	ತುರುವೇಕೆರೆ	ದಬ್ಬೇಘಟ್ಟ ತುರುವೇಕೆರೆ ತಾಲ್ಲೂಕು	100

ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ :

ತುಮಕೂರು ಜಿಲ್ಲೆಯ 10 ತಾಲ್ಲೂಕುಗಳಲ್ಲಿ ಮಾಧ್ಯಮಿಕ ಶಾಲಾ ಶೈಕ್ಷಣಿಕ ಪ್ರಗತಿಗಾಗಿ 2008–09 ರಿಂದ ಜಿಲ್ಲೆಯಲ್ಲಿ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಕಾರ್ಯಕ್ರಮ ಜಾರಿಯಲ್ಲಿದೆ. ಈ ಯೋಜನೆಯಡಿ ತುಮಕೂರು (ದ) ಜಿಲ್ಲೆಗೆ 2020–21ನೇ ಸಾಲಿಗೆ 381.115 ಲಕ್ಷ ಹಣ ನಿಗದಿತ ಉದ್ದೇಶಗಳಿಗಾಗಿ ನಿಯಮಾನುಸಾರ ಜಿಲ್ಲಾ ಕಛೇರಿ/ಶಾಲೆಗಳು/ಮಕ್ಕಳಿಗೆ ಬಿಡುಗಡೆಯಾಗಿದ್ದು ಆರ್ಥಿಕ ವರ್ಷಾಂತ್ಯಕ್ಕೆ 373.021 ಲಕ್ಷ ರೂ ವೆಚ್ಚವಾಗಿರುತ್ತದೆ. ರಾ.ಮಾ.ಶಿ.ಅ ಯೋಜನಾ ಕಛೇರಿ ತುಮಕೂರುನಲ್ಲಿದ್ದು ತುಮಕೂರು (ದ) ಜಿಲ್ಲೆಯ ಉಪನಿರ್ದೇಶಕರೇ ಇದರ ಉಸ್ತುವಾರಿ ನೋಡಿಕೊಳ್ಳತ್ತಿದ್ದಾರೆ. ಉಸ್ತುವಾರಿಗಾಗಿ ತಾಲ್ಲೂಕು ಹಂತದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗಳಿವೆ.

ಜಿಲ್ಲಾ ಪಂಚಾಯತ್ ತುಮಕೂರು
ಸಾರ್ವಜನಿಕ ಶಿಕ್ಷಣ ಇಲಾಖೆ ತುಮಕೂರು (ಉ) ಮಧುಗಿರಿ ಶೈಕ್ಷಣಿಕ ಜಿಲ್ಲೆ

ಜಿಲ್ಲೆಯ ಹಿನ್ನೆಲೆ:

ವಿಸ್ತಾರವಾದ ತುಮಕೂರು ಜಿಲ್ಲೆಯನ್ನು, ಶೈಕ್ಷಣಿಕ ಅಭಿವೃದ್ಧಿ ಮತ್ತು ದಕ್ಷ ಆಡಳಿತದ ದೃಷ್ಟಿಯಿಂದ ತುಮಕೂರು ದಕ್ಷಿಣ ಮತ್ತು ತುಮಕೂರು ಉತ್ತರ ಎಂದು ವಿಭಜಿಸಿ, ತುಮಕೂರು ಉತ್ತರ ಜಿಲ್ಲೆ ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕರ ಕಛೇರಿಯನ್ನು ಮಾರ್ಚ್ 2001 ರಿಂದ ಮಧುಗಿರಿಯಲ್ಲಿ ವಿದ್ಯುಕ್ತವಾಗಿ ಪ್ರಾರಂಭಿಸಲಾಯಿತು. ತುಮಕೂರು ಉತ್ತರ ಜಿಲ್ಲೆಯ ಕೊರಟಗೆರೆ, ಮಧುಗಿರಿ, ಪಾವಗಡ ಮತ್ತು ಸಿರಾ ತಾಲ್ಲೋಕುಗಳು ಹಿಂದುಳಿದ ಬರಪೀಡಿತ ಪ್ರದೇಶಗಳಿಂದ ಕೂಡಿರುತ್ತದೆ. ಈ ಜಿಲ್ಲೆಯ ಭೌಗೋಳಿಕ ವಿಸ್ತೀರ್ಣ 4692 ಚ.ಕೀ.ಮೀ ಆಗಿದ್ದು. ಒಟ್ಟು 1557 ಜನವಸತಿ ಇರುವ ಗ್ರಾಮಗಳನ್ನು ಒಳಗೊಂಡಿದೆ. ಮಧುಗಿರಿಯಲ್ಲಿರುವ ಏಕ ಶಿಲಾ ಬೆಟ್ಟ ಏಷ್ಯಾ ಖಂಡದಲ್ಲಿಯೇ ಪ್ರಖ್ಯಾತವಾದುದಾಗಿದೆ.

ಆಡಳಿತ:

ತುಮಕೂರು ಉತ್ತರ ಜಿಲ್ಲೆ, ಸಾರ್ವಜನಿಕ ಶಿಕ್ಷಣ ಇಲಾಖೆ, ಉಪನಿರ್ದೇಶಕರ ಕಛೇರಿ ಅಸ್ಥಿತ್ವಕ್ಕೆ ಬಂದ ನಂತರ ಆಡಳಿತಾತ್ಮಕವಾಗಿ ಮತ್ತು ಶೈಕ್ಷಣಿಕವಾಗಿ ಸುಧಾರಣೆಯ ಪಥದಲ್ಲಿದ್ದು ಕೇಂದ್ರ ಕಛೇರಿಯು ಮಧುಗಿರಿಯಲ್ಲಿದೆ. ತಾಲ್ಲೂಕುಗಳಲ್ಲಿಯ ಮೇಲ್ವಿಚಾರಣೆಗಾಗಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗಳು ಆಯಾ ತಾಲ್ಲೂಕು ಕೇಂದ್ರ ಸ್ಥಾನಗಳಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಈ ಜಿಲ್ಲಾ ಮಟ್ಟದಲ್ಲಿ ಶೈಕ್ಷಣಿಕ ಹಾಗೂ ಆಡಳಿತಾತ್ಮಕ ಮೇಲ್ವಿಚಾರಣೆಯನ್ನು ಉಪನಿರ್ದೇಶಕರು ಹಾಗೂ ತಾಲ್ಲೂಕು ಮಟ್ಟದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ನೋಡಿಕೊಳ್ಳುತ್ತಿದ್ದಾರೆ.

ಭಾಷೆ:

ಈ ಜಿಲ್ಲೆಯಲ್ಲಿ ಪ್ರಾಥಮಿಕ ಶಿಕ್ಷಣ ಕನ್ನಡ ಮಾಧ್ಯಮದಲ್ಲಿಯೇ ಇದ್ದು, ಉರ್ದು ಮತ್ತು ತೆಲುಗು ಭಾಷೆಯನ್ನು ಮಾತನಾಡುವ ಪ್ರದೇಶಗಳನ್ನು ಕೂಡ ಒಳಗೊಂಡಿರುವುದರಿಂದ ಉರ್ದು ಮಾಧ್ಯಮದ ಶಾಲೆಗಳನ್ನು ಕೂಡ ನಡೆಸಲಾಗುತ್ತಿದೆ.

ಜನಸಂಖ್ಯೆ:

2011 ರ ಜನಗಣತಿಯಂತೆ ಈ ಶೈಕ್ಷಣಿಕ ಜಿಲ್ಲೆಯ ಒಟ್ಟು ಜನಸಂಖ್ಯೆ 994409 ಆಗಿದ್ದು ಪುರುಷರ ಸಂಖ್ಯೆ 501677 ಮಹಿಳೆಯರ ಸಂಖ್ಯೆ 492732 ಪರಿಶಿಷ್ಟ ಜಾತಿ ಸಂಖ್ಯೆ 240465 ಪರಿಶಿಷ್ಟ ಪಂಗಡ 122517 ಆಗಿರುತ್ತದೆ.

ಸಾಕ್ಷರತೆ:

2011 ರ ಜನಗಣತಿ ಆಧಾರದಂತೆ ಈ ಜಿಲ್ಲೆಯ ಪುರುಷರ ಸಾಕ್ಷರತೆ ಶೇ 79.04 ಮಹಿಳೆಯರು ಶೇ 60.94 ಒಟ್ಟು ಸಾಕ್ಷರತೆ ಪ್ರಮಾಣ ಶೇ 70.05 ಆಗಿದೆ.

2020–21ಸಾಲಿನಲ್ಲಿ ಆರ್.ಟಿ.ಇ ಅಡಿಯಲ್ಲಿ ಶಾಲಾ ಮಕ್ಕಳಿಗೆ ಸೀಟು ಹಂಚಿಕೆ

ಕ್ರ.ಸಂ.	ತಾಲ್ಲೂಕು	ಶೇಕಡ–25ರ ಒಟ್ಟು ಆರ್.ಟಿ.ಇ ಸೀಟುಗಳು	ಮೊದಲನೇ ಹಂತದ ಸೀಟು ಹಂಚಿಕೆ	ಮೊದಲನೇ ಹಂತದ ಶಾಲಾ ದಾಖಲಾತಿ	ಎರಡನೇ ಹಂತದ ಸೀಟು ಹಂಚಿಕೆ	ಎರಡನೇ ಹಂತದ ಸೀಟು ದಾಖಲಾತಿ	ಮೂರನೇ ಹಂತದ ಸೀಟು ಹಂಚಿಕೆ	ಮೂರನೇ ಹಂತದ ಸೀಟು ದಾಖಲಾತಿ	ನಾಲ್ಕನೇ ಹಂತದ ಸೀಟು ಹಂಚಿಕೆ	ನಾಲ್ಕನೇ ಹಂತದ ಸೀಟು ದಾಖಲಾತಿ	ಒಟ್ಟು ದಾಖಲಾತಿ	ಉಳಿಕೆ
1	ಕೊರಟಗೆರೆ	16	2	0	0	0	0	0	0	0	0	16
2	ಮಧುಗಿರಿ	10	1	0	0	0	0	0	0	0	0	10
3	ಪಾವಗಡ	20	2	1	0	0	0	0	0	0	1	19
4	ಸಿರಾ	06	4	0	1	0	0	0	0	0	0	06
	ಒಟ್ಟು	52	9	1	1	0	0	0	0	0	1	51

2020–21ನೇ ಸಾಲಿನ ಉಚಿತ ಸಮವಸ್ತ್ರ ವಿತರಣೆ

(ಎಲ್ಲಾ ಸರ್ಕಾರಿ ಶಾಲಾ ಮಕ್ಕಳಿಗೆ)

ಕ್ರ.ಸಂ.	ತಾಲ್ಲೂಕು	ಮಕ್ಕಳ ಸಂಖ್ಯೆ			ಉಚಿತ ಸಮವಸ್ತ್ರ ವಿತರಣೆ		
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
1	ಕೊರಟಗೆರೆ	6554	6901	13455	6554	6901	13455
2	ಮಧುಗಿರಿ	9730	11030	20400	9370	11030	20400
3	ಪಾವಗಡ	7341	7302	14643	7341	7302	14643
4	ಸಿರಾ	12430	13038	25468	12430	13038	25468
	ಒಟ್ಟು	35695	38271	73966	35695	38038	73966
ಷರಾ: ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ 1 ರಿಂದ 10ನೇ ತರಗತಿಯ ಎಲ್ಲಾ ಮಕ್ಕಳಿಗೆ ಉಚಿತ ಸಮವಸ್ತ್ರ ವಿತರಿಸಲಾಗಿದೆ.							

2020–21ನೇ ಸಾಲಿನ ಉಚಿತ ಬೈಸಿಕಲ್ ವಿತರಣೆ
(ಸರ್ಕಾರಿ ಮತ್ತು ಅನುದಾನಿತ ಶಾಲಾ ಮಕ್ಕಳಿಗೆ)

ಕ್ರ.ಸಂ.	ತಾಲ್ಲೂಕು	ಮಕ್ಕಳ ಸಂಖ್ಯೆ			ಉಚಿತ ಬೈಸಿಕಲ್ ವಿತರಣೆ		
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
1	ಕೊರಟಗೆರೆ	563	639	1202	0	0	0
2	ಮಧುಗಿರಿ	501	261	762	0	0	0
3	ಪಾವಗಡ	378	458	836	0	0	0
4	ಸಿರಾ	921	647	1568	0	0	0
	ಒಟ್ಟು	2363	2005	4368	0	0	0

ಷರಾ: ಸರ್ಕಾರಿ ಮತ್ತು ಅನುದಾನಿತ ಪ್ರೌಢಶಾಲೆಗಳಲ್ಲಿ 8ನೇ ತರಗತಿ ವ್ಯಾಸಂಗ ಮಾಡುತ್ತಿರುವ ಮಕ್ಕಳಿಗೆ ಉಚಿತ ಬೈಸಿಕಲ್ ಕೋವಿಡ್–19 ಸಾಂಕ್ರಾಮಿಕ ಪ್ರಯುಕ್ತ ಈ ಶೈಕ್ಷಣಿಕ ವರ್ಷದಲ್ಲಿ 3 ತಿಂಗಳು ಮಾತ್ರ ಭೌತಿಕ ತರಗತಿಗಳು ನಡೆದಿರುತ್ತವೆ. ಸರ್ಕಾರದ ಹಂತದಲ್ಲಿ ಬೈಸಿಕಲ್ ನೀಡುವ ಕುರಿತು ತೀರ್ಮಾನವಾಗದ ಕಾರಣ ಬೈಸಿಕಲ್ ಬೇಡಿಕೆ ಸಲ್ಲಿಸಿರುವುದಿಲ್ಲ ಹಾಗೂ ಸರಬರಾಜಾಗಿರುವುದಿಲ್ಲ.

2020–21ನೇ ಸಾಲಿನ ಉಚಿತ ಮಧ್ಯಾಹ್ನದ ಬಿಸಿಯೂಟ ವಿತರಣೆ
(ಸರ್ಕಾರಿ ಮತ್ತು ಅನುದಾನಿತ ಶಾಲಾ ಮಕ್ಕಳಿಗೆ)

ಕ್ರ.ಸಂ.	ತಾಲ್ಲೂಕು	ಮಕ್ಕಳ ಸಂಖ್ಯೆ			ಉಚಿತ ಬಿಸಿಯೂಟ ವಿತರಣೆ		
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
1	ಕೊರಟಗೆರೆ	8138	7947	16085	8138	7947	16085
2	ಮಧುಗಿರಿ	16108	7572	23680	16108	7572	23680
3	ಪಾವಗಡ	9520	10307	19827	9520	10307	19827
4	ಸಿರಾ	14541	14780	29321	14541	14780	29321
	ಒಟ್ಟು	48307	40606	88913	48307	40606	88913

ಷರಾ: ಸರ್ಕಾರಿ ಮತ್ತು ಅನುದಾನಿತ ಪ್ರೌಢಶಾಲೆಗಳಲ್ಲಿ 1–10ನೇ ತರಗತಿ ವ್ಯಾಸಂಗ ಮಾಡುತ್ತಿರುವ ಎಲ್ಲಾ ಮಕ್ಕಳಿಗೆ ಆಹಾರ ಧಾನ್ಯ ವಿತರಿಸಲಾಗಿದೆ.

2020–21ನೇ ಸಾಲಿನ ಉಚಿತ ಶೂ & ಸಾಕ್ಸ್ ವಿತರಣೆ (ಸರ್ಕಾರಿ ಶಾಲಾ ಮಕ್ಕಳಿಗೆ)

ಕ್ರ.ಸಂ.	ತಾಲ್ಲೂಕು	ಮಕ್ಕಳ ಸಂಖ್ಯೆ			ಉಚಿತ ಶೂ & ಸಾಕ್ಸ್ ವಿತರಣೆ		
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
1	ಕೊರಟಗೆರೆ	6554	6901	13455	0	0	0
2	ಮಧುಗಿರಿ	9370	11030	20400	0	0	0
3	ಪಾವಗಡ	7341	7302	14643	0	0	0
4	ಸಿರಾ	12430	13038	25468	0	0	0
	ಒಟ್ಟು	35695	38271	73966	0	0	0

ಷರಾ: ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ 1 ರಿಂದ 10ನೇ ತರಗತಿಯ ಎಲ್ಲಾ ಮಕ್ಕಳಿಗೆ 2020–21 ನೇ ಸಾಲಿನಲ್ಲಿ ಕೋವಿಡ್–19 ಪ್ರಯುಕ್ತ ಸರ್ಕಾರದ ಹಂತದಲ್ಲಿ ಅನುದಾನ ಬಿಡುಗಡೆಯಾಗದೆ ಇರುವುದರಿಂದ ಶೂ ಮತ್ತು ಸಾಕ್ಸ್ ವಿತರಣೆಯಾಗಿರುವುದಿಲ್ಲ

2020–21ನೇ ಸಾಲಿನ ಉಚಿತ ಪಠ್ಯಪುಸ್ತಕ ವಿತರಣೆ
(ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಶಾಲಾ ಮಕ್ಕಳಿಗೆ)

ಕ್ರ.ಸಂ.	ತಾಲ್ಲೂಕು	ಮಕ್ಕಳ ಸಂಖ್ಯೆ			ಉಚಿತ ಪಠ್ಯ ಪುಸ್ತಕ ವಿತರಣೆ		
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
1	ಕೊರಟಗೆರೆ	8138	7947	16085	8138	7947	16085
2	ಮಧುಗಿರಿ	16108	7572	23680	16108	7572	23680
3	ಪಾವಗಡ	9520	10307	19827	9520	10307	19827
4	ಸಿರಾ	14541	14780	29321	14541	14780	29321
	ಒಟ್ಟು	48307	40606	88913	48307	40606	88913
ಷರಾ: ಸರ್ಕಾರಿ ಹಾಗೂ ಅನುದಾನಿತ ಶಾಲೆಗಳ 1 ರಿಂದ 10ನೇ ತರಗತಿಯವರೆಗಿನ ಎಲ್ಲಾ ಮಕ್ಕಳಿಗೆ ಹಾಗೂ ಆರ್.ಟಿ.ಇ. ಅಡಿಯಲ್ಲಿ ದಾಖಲಾಗಿರುವ ಮಕ್ಕಳಿಗೆ ಉಚಿತ ಪಠ್ಯಪುಸ್ತಕ ವಿತರಿಸಲಾಗಿದೆ.							

2020–21ನೇ ಸಾಲಿನಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳ ವಿವರ

ಕ್ರ.ಸಂ	ತಾಲ್ಲೂಕು	ಗುರುತಿಸಿದ ಮಕ್ಕಳ ಸಂಖ್ಯೆ	ಮುಖ್ಯವಾಹಿನಿಗೆ ಬಂದ ಮಕ್ಕಳ ಸಂಖ್ಯೆ	ಉಳಿಕೆ ಮಕ್ಕಳ ಸಂಖ್ಯೆ
1	ಕೊರಟಗೆರೆ	8	7	1
2	ಮಧುಗಿರಿ	5	1	4
3	ಪಾವಗಡ	13	11	2
4	ಸಿರಾ	5	4	1
	ಒಟ್ಟು	31	23	8

2020–21ನೇ ಸಾಲಿನ ಎಸ್.ಎಸ್.ಎಲ್.ಸಿ. ಫಲಿತಾಂಶ

ಕ್ರ.ಸಂ	ತಾಲ್ಲೂಕು	ಪರೀಕ್ಷೆಗೆ ಕುಳಿತವರು			ಪಾಸಾದವರು			ಶೇಕಡಾವಾರು		
		ಬಾಲಕರು	ಬಾಲಕಿಯರು	ಒಟ್ಟು	ಬಾಲಕರು	ಬಾಲಕಿಯರು	ಒಟ್ಟು	ಬಾಲಕರು	ಬಾಲಕಿಯರು	ಒಟ್ಟು
1	ಕೊರಟಗೆರೆ	1076	1064	2140	946	995	1951	87.92	93.52	90.72
2	ಮಧುಗಿರಿ	1617	1597	3214	1511	1543	3054	93.44	96.62	95.02
3	ಪಾವಗಡ	1514	1312	2826	1439	1260	2699	95.05	96.04	95.51
4	ಸಿರಾ	1919	1941	3860	1421	1509	2930	74.05	77.74	75.91
	ಒಟ್ಟು	6126	5914	12040	5317	5307	10624	86.75	89.74	88.24

ತುಮಕೂರು (ಉ) ಮಧುಗಿರಿ ಶೈಕ್ಷಣಿಕ ಜಿಲ್ಲೆ ಸಂಸ್ಥೆವಾರು ಶಾಲೆಗಳ ಮಾಹಿತಿ
(ಸರ್ಕಾರಿ, ಅನುದಾನ, ಅನುದಾನ ರಹಿತ)

ಕ್ರ.ಸಂ	ತಾಲ್ಲುಕಿನ ಹೆಸರು	ಸರ್ಕಾರಿ			ಸಮಾಜ ಕಲ್ಯಾಣ ಇಲಾಖೆ			ಅನುದಾನಿತ		
		ಕಿಪ್ರಾಶಾಲೆ	ಹಿಪ್ರಾಶಾಲೆ	ಪ್ರೌಢ	ಕಿಪ್ರಾಶಾಲೆ	ಹಿಪ್ರಾಶಾಲೆ	ಪ್ರೌಢ	ಕಿಪ್ರಾಶಾಲೆ	ಹಿಪ್ರಾಶಾಲೆ	ಪ್ರೌಢ
1	ಕೊರಟಗೆರೆ	166	92	19	0	1	1	0	3	15
2	ಮಧುಗಿರಿ	201	148	27	0	6	6	0	1	27
3	ಪಾವಗಡ	112	119	21	0	3	3	0	3	33
4	ಸಿರಾ	245	174	28	0	6	6	0	3	31
	ಒಟ್ಟು	724	533	95	0	16	16	0	10	106

ಕ್ರ.ಸಂ	ತಾಲ್ಲೂಕಿನ ಹೆಸರು	ಅನುದಾನ ರಹಿತ			ಬುಡಕಟ್ಟು ಕಲ್ಯಾಣ ಇಲಾಖೆ			ಒಟ್ಟು			
		ಕಿಪ್ರಾಶಾಲೆ	ಹಿಪ್ರಾಶಾಲೆ	ಪ್ರೌಢ	ಕಿಪ್ರಾಶಾಲೆ	ಹಿಪ್ರಾಶಾಲೆ	ಪ್ರೌಢ	ಕಿಪ್ರಾಶಾಲೆ	ಹಿಪ್ರಾಶಾಲೆ	ಪ್ರೌಢ	ಒಟ್ಟು
1	ಕೊರಟಗೆರೆ	4	18	8	1	5	5	171	119	48	338
2	ಮಧುಗಿರಿ	7	29	11	0	3	3	208	187	74	469
3	ಪಾವಗಡ	9	27	18	1	6	6	122	158	81	361
4	ಸಿರಾ	10	32	21	0	2	2	255	217	88	560
	ಒಟ್ಟು	30	106	58	2	16	16	756	681	291	1728

ಸರ್ವ ಶಿಕ್ಷಣ ಅಭಿಯಾನ

ಕ್ರ.ಸಂ	2020–21ನೇ ಸಾಲಿಗೆ ಬಿಡುಗಡೆಯಾದ ಅನುದಾನದ ವಿವರ	2020–21ನೇ ಸಾಲಿಗೆ ಬಿಡುಗಡೆಯಾದ ಅನುದಾನದ ಮೊತ್ತ. (೦)	2020–21ನೇ ಸಾಲಿಗೆ ಬಿಡುಗಡೆಯಾದ ಅನುದಾನದ ವೆಚ್ಚ (೫)
1	ಸಾರಿಗೆ/ ಬೆಂಗಾವಲು ಭತ್ಯೆ	0	0
2	ಆರ್.ಟಿ.ಇ.	353.42	183.78
3	ಶಾಲೆಯಿಂದ ಹೊರಗುಳಿದ ಮಕ್ಕಳ ಕಾರ್ಯಕ್ರಮ	0	0
4	2ನೇ ಜೊತೆ ಸಮವಸ್ತ್ರ	0	0
5	ಎಸ್.ಎಸ್.ಎ. ಶಿಕ್ಷಕರ ವೇತನ	1657.60	1657.60
6	ಬಿ.ಆರ್.ಸಿ. ವೇತನ, ಸಾದಿಲ್ವಾರು, ಇತರೆ	186.21	186.21
7	ಸಿ.ಆರ್.ಪಿ. ವೇತನ, ಸಾದಿಲ್ವಾರು, ಇತರೆ	519.37	519.37
8	ಶಾಲಾನುದಾನ	60.73	60.73
9	ಶಾಲಾ ನಿರ್ವಹಣಾ ಅನುದಾನ	0	0
10	ಸಮನ್ವಯ ಶಿಕ್ಷಣ ಚಟುವಟಿಕೆ (ಐ.ಇ.ಡಿ.)	23.35	20.77
11	ಜಿಲ್ಲಾ ಆಡಳಿತಾತ್ಮಕ ವೆಚ್ಚ & ಹೊರಗುತ್ತಿಗೆ ನೌಕರರ ವೇತನ, ವಾಹನ ಬಾಡಿಗೆ, ಸಾದಿಲ್ವಾರು, ಇತರೆ	23.69	22.90
12	ಆರ್.ಟಿ.ಇ. ದೂರವಾಣಿ ವೆಚ್ಚ	0	0
13	ರಾಷ್ಟ್ರೀಯ ಆವಿಷ್ಕಾರ ಅಭಿಯಾನ	0	0
14	ಇಕೋಕ್ಲಬ್	15.35	15.35
	ಒಟ್ಟು	2839.72	2482.93

ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ

2020–21ನೇ ಸಾಲಿನ ಅನುಷ್ಠಾನಿತ ವಿವಿಧ ಕಾರ್ಯಕ್ರಮಗಳ ಪ್ರಗತಿ ವರದಿ

ಕ್ರ.ಸಂ.	ಕಾರ್ಯಕ್ರಮಗಳು	ಅನುದಾನ ಬಿಡುಗಡೆ	ಪ್ರಗತಿ (ಬಳಕೆ)
1	ಶಾಲಾನುದಾನ	7.66	7.66
2	ಕರಾಟೆ ಅನುದಾನ	0	0
3	ಎನ್.ಎಸ್.ಕ್ಯೂ.ಎಫ್	2.99	2.80
4	ಐ.ಇ.ಡಿ.ಎಸ್.ಎಸ್	0	0
5	ಶಿಕ್ಷಕರ ತರಬೇತಿ	0	0
6	ಇಕೋಕಬ್ಲ್	9.65	9.65
7	ವಿಜ್ಞಾನ ಪ್ರಯೋಗಾಲಯ ಉಪಕರಣ	0	0
0	ಎಂ.ಎಂ.ಇ.ಆರ್. ವೇತನ	0	0
9	ದಸರಾ ವಿಶೇಷ ಕಾರ್ಯಕ್ರಮ	0	0
10	ಪ್ರವಾಸ (ವಿಜ್ಞಾನ, ಗಣಿತ)	0	0
11	ಕೆ.ಜಿ.ಬಿ.ವಿ ವಸತಿ ನಿಲಯ	10.75	6.97
	ಒಟ್ಟು	31.05	27.08

ನಮೂನೆ 8ಎ

ವರ್ಷ/ ವರದಿ ಮಾಡುವ ವರ್ಷ	ತಾಲ್ಲೂಕು	ಜಿಲ್ಲಾ ಪಂಚಾಯಿತಿ (ಸರ್ಕಾರಿ) ಶಾಲೆಗಳ ಸಂಖ್ಯೆ		ಇತರೆ ಶಾಲೆ (ಖಾಸಗಿ ಶಾಲೆ) ಗಳ ಸಂಖ್ಯೆ		ಜಿಲ್ಲಾ ಪಂಚಾಯಿತಿ ಶಾಲೆಗಳಲ್ಲಿನ ಮಕ್ಕಳು						ಇತರೆ ಶಾಲೆ (ಖಾಸಗಿ ಶಾಲೆಗಳ) ಸಂಖ್ಯೆ					
						ಪ್ರಾಥಮಿಕ			ಪ್ರೌಢ			ಪ್ರಾಥಮಿಕ			ಪ್ರೌಢ		
		ಪ್ರಾಥ.	ಪ್ರೌಢ	ಪ್ರಾಥ.	ಪ್ರೌಢ	ಬಾಲಕರು	ಬಾಲಕಿಯರು	ಒಟ್ಟು	ಬಾಲಕರು	ಬಾಲಕಿಯರು	ಒಟ್ಟು	ಬಾಲಕರು	ಬಾಲಕಿಯರು	ಒಟ್ಟು	ಬಾಲಕರು	ಬಾಲಕಿಯರು	ಒಟ್ಟು
2020–21	ಕೊರಟಗೆರೆ	258	19	25	23	5171	5179	10350	1602	1809	3411	2283	1850	4133	1466	1017	2483
	ಮಧುಗಿರಿ	349	27	37	38	8077	8103	16180	1875	1582	3457	4203	3422	7625	2672	2484	5156
	ಪಾವಗಡ	231	21	39	51	6784	7572	14356	993	918	1911	5316	3556	8872	2788	2362	5150
	ಸಿರಾ	419	28	45	52	10450	10593	21043	2669	2782	5451	6869	5136	1200	3345	2698	6043
	ಒಟ್ಟು	1257	95	146	164	30483	31453	61933	7139	7091	14230	18673	13963	3263	10271	8561	18832

ನಮೂನೆ 8ಬಿ

ವರ್ಷ 2020–21	ಶಾಲೆಗಳ ಸಂಖ್ಯೆ		ಜಿಲ್ಲಾ ಪಂಚಾಯತ್ ಶಾಲೆಗಳಲ್ಲಿನ ವಿದ್ಯಾರ್ಥಿಗಳ ಸಂಖ್ಯೆ		ಇತರೆ ಶಾಲೆಗಳಲ್ಲಿನ ವಿದ್ಯಾರ್ಥಿಗಳ ಸಂಖ್ಯೆ (ಖಾಸಗಿ)		ಎಲ್ಲಾ ಶಾಲೆಗಳಲ್ಲಿನ ವಿದ್ಯಾರ್ಥಿಗಳ ಸಂಖ್ಯೆ		ಷರಾ
	ಸರ್ಕಾರಿ	ಇತರೆ ಖಾಸಗಿ/ ಅನುದಾನಿತ/ ಅನುದಾನ ರಹಿತ	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	
ಹಿರಿಯ ಪ್ರಾಥಮಿಕ (1–5)	724	30	7887	7858	1148	889	9035	8747	
ಹಿರಿಯ ಮಾಧ್ಯಮಿಕ (1–7/8)	533	116	22595	23594	17523	13075	40118	36669	
ಕಿರಿಯ+ಹಿರಿಯ ಮಾಧ್ಯಮಿಕ ಒಟ್ಟು	1257	146	30482	31452	18671	13964	49153	45416	
ಪ್ರೌಢ (8–10)	95	164	7139	7091	10271	8561	17410	15652	
ಒಟ್ಟು	1352	310	37621	38543	28942	22525	66563	61068	

ಜಿಲ್ಲಾ ಪಂಚಾಯತ್, ತುಮಕೂರು

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ತುಮಕೂರು

2020–21ನೇ ಸಾಲಿನ ಇಲಾಖಾ ವಾರ್ಷಿಕ ಆಡಳಿತ ವರದಿ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ 2020–21ನೇ ಸಾಲಿನಲ್ಲಿ ಅನುಷ್ಟಾನಗೊಳಿಸಿರುವ ಕಾರ್ಯಕ್ರಮಗಳು:–

ವೈದ್ಯಕೀಯ ಮತ್ತು ಜನಾರೋಗ್ಯ

1)2210–00–101–0–62 ಯೋಜನೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳ ಬಲವರ್ಧನೆ (ಪ್ರಸೂತಿ ಗೃಹಗಳು)

ಉದ್ದೇಶ: ಗ್ರಾಮೀಣ ಪ್ರದೇಶದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಹೊಸದಾಗಿ ಪ್ರಸುತಿ ಗೃಹಗಳನ್ನು ಸ್ಥಾಪಿಸುವುದು ಗ್ರಾಮೀಣ ಮಹಿಳೆಯರಿಗೆ ಪ್ರಸೂತಿಯ ಬಗ್ಗೆ ತಿಳುವಳಿಕೆ ನೀಡಿ ಗರ್ಭಿಣಿಯರ ಹಾಗೂ ನವಜಾತ ಶಿಶುಗಳ ರಕ್ಷಣೆಗಾಗಿ ಸೂಕ್ತ ಚಿಕಿತ್ಸೆ ನೀಡಲಾಗುವ ಸಿಬ್ಬಂದಿ ವರ್ಗದವರಿಗೆ ವೇತನ ಭತ್ಯೆಗಳಿಗಾಗಿ.

ವ್ಯವಸ್ಥೆ: ಈ ಕಾರ್ಯಕ್ರಮಕ್ಕಾಗಿ **ರೂ, 36.73** ಲಕ್ಷಗಳನ್ನು ಗಳನ್ನು ನಿಗದಿಪಡಿಸಲಾಗಿದೆ.

ಸಾಧನೆ: 2020–21ನೇ ಸಾಲಿನಲ್ಲಿ ಈ ಕಾರ್ಯಕ್ರಮದಡಿ ವೈದ್ಯಾಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರ ವೇತನ ಮತ್ತು ಭತ್ಯೆಗಳು ಹಾಗೂ ಸಾದಿಲ್ವಾರು ವೆಚ್ಚಗಳಿಗಾಗಿ **ರೂ.32.60** ಲಕ್ಷಗಳ ವೆಚ್ಚ ಮಾಡಲಾಗಿದೆ.

2)2210–00–104–0–61 ನೂತನ ಉಪಕೇಂದ್ರಗಳ ಸ್ಥಾಪನೆ:

ಉದ್ದೇಶ: ಗ್ರಾಮೀಣ ಪ್ರದೇಶಗಳಲ್ಲಿರುವ ಮಹಿಳೆಯರ ಆರೋಗ್ಯ ಸಂರಕ್ಷಣೆ ಮಾಡಲು ಹಾಗೂ ಆರೋಗ್ಯ ಕಾರ್ಯಕ್ರಮಗಳ ಬಗ್ಗೆ ತಿಳುವಳಿಕೆ ಮೂಡಿಸಲು ಕಿರಿಯು ಆರೋಗ್ಯ ಸಹಾಯಕರು (ಮಹಿಳಾ ಮತ್ತು ಪುರುಷ) ಹುದ್ದೆಗಳು ಸರ್ಕಾರದಿಂದ ಮಂಜೂರಾಗಿರುತ್ತವೆ.

ವ್ಯವಸ್ಥೆ: ಈ ಕಾರ್ಯಕ್ರಮಕ್ಕಾಗಿ ರೂ, 2.45 ಲಕ್ಷಗಳನ್ನು ನಿಗದಿಪಡಿಸಲಾಗಿದೆ.

ಸಾಧನೆ: 2020–21 ನೇ ಸಾಲಿನಲ್ಲಿ ಈ ಕಾರ್ಯಕ್ರಮದಡಿ ಹುದ್ದೆಗಳು ಖಾಲಿ ಇರುವುದರಿಂದ ಅನುದಾನ ಖರ್ಚಾಗಿರುವುದಿಲ್ಲ.

3)ರಾಷ್ಟ್ರೀಯ ಅಂಧತ್ವ ನಿವಾರಣಾ ಕಾರ್ಯಕ್ರಮ:

ಉದ್ದೇಶ: ಜಿಲ್ಲೆಯಲ್ಲಿ ಕಣ್ಣಿನ ದೃಷ್ಠಿದೋಷ ಇರುವ ಜನರನ್ನು ಗುರುತಿಸಿ ಚಿಕಿತ್ಸೆಯನ್ನು ಮಾಡಲು ಅನುಕೂಲವಾಗುವಂತೆ ಈ ಕಾರ್ಯಕ್ರಮವನ್ನು ರೂಪಿಸಲಾಗಿದೆ.

ಸಾಧನೆ: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಆಶ್ರಯದಡಿಯಲ್ಲಿ ಜಿಲ್ಲೆಯಾಧ್ಯಂತ ಉಚಿತ ನೇತ್ರ ಶಸ್ತ್ರಚಿಕಿತ್ಸೆಯನ್ನು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಪ್ರಾ.ಆ.ಕೇಂದ್ರ ಹಾಗೂ ಇನ್ನಿತರ ತಾಲ್ಲೂಕು ಕೇಂದ್ರಗಳಲ್ಲಿ ಶಿಬಿರಗಳನ್ನು ನಡೆಸಲಾಗುತ್ತಿದೆ. ತಾಲ್ಲೂಕು ಮತ್ತು ಜಿಲ್ಲಾ ಆಸ್ಪತ್ರೆಗಳಲ್ಲಿ ಸರ್ಕಾರಿ ನೇತ್ರ ತಜ್ಞರ ಮೂಲಕ ನೇತ್ರ ಶಸ್ತ್ರ ಚಿಕಿತ್ಸೆ ನಡೆಸಲಾಗುತ್ತಿದೆ. 2020–21ನೇ ಸಾಲಿನಲ್ಲಿ ಅಂಧತ್ವ ನಿವಾರಣಾ ಕಾರ್ಯಕ್ರಮದಡಿಯಲ್ಲಿ ಜಿಲ್ಲೆಯಲ್ಲಿ ಒಟ್ಟು 10892 ಜನರಿಗೆ ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆ ನಡೆಸಿ ವಾರ್ಷಿಕ ಪ್ರಗತಿ ಸಾಧಿಸಲಾಗಿದೆ.

ವಯೋವೃದ್ದರಿಗೆ –16000 ಹಾಗೂ ಶಾಲಾ ಮಕ್ಕಳಿಗೆ–3952 ಕನ್ನಡಕಗಳನ್ನು ತಪಾಸಣೆ ಮಾಡಿ ವಿತರಿಸಿದೆ.

4. ರಾಷ್ಟ್ರೀಯ ಕ್ಷಯ ರೋಗ ನಿವಾರಣಾ ಕಾರ್ಯಕ್ರಮ

ಉದ್ದೇಶ:– ಜಿಲ್ಲೆಯಲ್ಲಿ ಆಯಾ ಆರೋಗ್ಯ ಕೇಂದ್ರದ ಮಟ್ಟದಲ್ಲಿ **ಸಂಭಾವ್ಯ** (Presumptive) ಕ್ಷಯ ರೋಗಿಗಳನ್ನು ಗುರುತಿಸಿ ಗೊತ್ತು ಪಡಿಸಿದ ಸೂಕ್ಷ್ಮದರ್ಶಕ ಕೇಂದ್ರಗಳಲ್ಲಿ ಕಫ ಪರೀಕ್ಷೆ ಮಾಡಿಸುವುದು ಮತ್ತು ಬಹು ಔಷಧಿ ನಿರೋಧಕ ಕ್ಷಯ ರೋಗವನ್ನು ಅತ್ಯಾಧುನಿಕ ಯಂತ್ರ (Gene Xpert)ದಿಂದ ಪತ್ತೆ ಹಚ್ಚಲಾಗುವುದು ಹಾಗೂ ಕ್ಷಯ ರೋಗ ಕಂಡು ಬಂದಲ್ಲಿ ಚಿಕಿತ್ಸೆಯನ್ನು ನೀಡಿ ರೋಗವನ್ನು ಗುಣಪಡಿಸಲು ಈ ಕಾರ್ಯಕ್ರಮವನ್ನು ರೂಪಿಸಿದೆ.

ಸಾಧನೆ:– 2020–21ನೇ ಸಾಲಿನಲ್ಲಿ ಒಟ್ಟು 13343 ಕಫ ಪರೀಕ್ಷೆಯನ್ನು ಮಾಡಲಾಗಿದ್ದು ಇವುಗಳಲ್ಲಿ 687 ಹೊಸ ಕ್ಷಯರೋಗಿಗಳನ್ನು ಗುರುತಿಸಿ ಅವರುಗಳಿಗೆ ಸೂಕ್ತ ವೈದ್ಯಕೀಯ ಚಿಕಿತ್ಸೆ ಯನ್ನು ನೀಡಿರುವುದರ ಪರಿಣಾಮ ಜಿಲ್ಲೆಯಲ್ಲಿ ಸರಾಸರಿ 60% ಶೇಕಡವಾರು ಕ್ಷಯ ರೋಗಿಗಳನ್ನು ಗುಣಪಡಿಸಿ ಯಶಸ್ಸನ್ನು ಸಾಧಿಸಲಾಗಿದೆ.

5. ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣ ಕಾರ್ಯಕ್ರಮ (NVBDCP)

ಉದ್ದೇಶ: ಮಲೇರಿಯಾ, ಚಿಕನ್‌ಗುನ್ಯಾ ಮತ್ತು ಡೆಂಗ್ಯೂ ರೋಗವನ್ನು ಪ್ರಾರಂಬಿಕ ಹಂತದಲ್ಲಿ ಗುರುತಿಸಿ ಸೂಕ್ತ ಚಿಕಿತ್ಸೆಯನ್ನು ನೀಡಿ ರೋಗವನ್ನು ಗುಣಪಡಿಸಲು ಕ್ರಮಕೈಗೊಳ್ಳಲು ಈ ಕಾರ್ಯಕ್ರಮವನ್ನು ರೂಪಿಸಲಾಗಿದೆ.

ವ್ಯವಸ್ಥೆ: ಮಲೇರಿಯಾ, ಚಿಕನ್‌ಗುನ್ಯಾ ಮತ್ತು ಡೆಂಗ್ಯೂ ರೋಗವನ್ನು ಬರದಂತೆ ತಡೆಯಲು ಪರಿಸರ ನೈರ್ಮಲ್ಯ ಶುಚ್ಚಿತ್ವದ ಕಡೆಗೆ ಹೆಚ್ಚಿನ ಆದ್ಯತೆ ನೀಡಿ ಡಿ.ಡಿ.ಟಿ ಮತ್ತು ಮೆಲಾಥಿಯಾನ್‌ಗಳನ್ನು ಸಿಂಪಡಿಸಿ ರೋಗ ಹರಡದಂತೆ

ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ನಿರಂತರವಾಗಿ ಲಾರ್ವಾ ಸಮೀಕ್ಷೆ ಕಾರ್ಯ ಕೈಗೊಂಡು ಲಾರ್ವಾ ನಿರ್ಮೂಲನಾ ಕಾರ್ಯ ಕೈಗೊಳ್ಳಲಾಗಿದೆ ಹಾಗೂ ಸಾರ್ವಜನಿಕರಿಗೆ ಆರೋಗ್ಯ ಶಿಕ್ಷಣ ಮೂಲಕ ರೋಗ ನಿಯಂತ್ರಣದ ಬಗ್ಗೆ ಮಾಹಿತಿ ಒದಗಿಸಲಾಗಿದೆ.

ಸಾಧನೆ:– 2020–21ನೇ ಸಾಲಿನಲ್ಲಿ ಮಲೇರಿಯಾ ರೋಗವು ಬರದಂತೆ ತಡೆಯಲು ವ್ಯವಸ್ಥೆಯನ್ನು ಮಾಡಿದ್ದು ಹಾಗೂ ಪ್ರಾರಂಬಿಕ ಹಂತದಲ್ಲಿ ಈ ರೋಗವನ್ನು ಗುರುತಿಸಿ ಸೂಕ್ತ ಚಿಕಿತ್ಸೆಯನ್ನು ನೀಡಲಾಗುತ್ತದೆ. ಈ ಕಾರ್ಯಕ್ರಮ ದಡಿಯಲ್ಲಿ 481659 ಜನರ ರಕ್ತಲೇಪನಾ ಸಂಗ್ರಹಣೆಯನ್ನು ಮಾಡಲಾಗಿದ್ದು ಆರೋಗ್ಯ ಪ್ರಯೋಗ ಶಾಲೆಗಳಲ್ಲಿ ರಕ್ತ ಲೇಪನಗಳನ್ನು ಪರಿಕ್ಷೀಸಿ ಇದರಲ್ಲಿ 06 ಮಂದಿ ಮಲೇರಿಯಾ ಜ್ವರ ಪೀಡಿತರಿಗೆ ತೀವ್ರ ಚಿಕಿತ್ಸೆಯನ್ನು ನೀಡಲಾಗಿದೆ. ಡೆಂಗ್ಯೂ ಜ್ವರ ಪೀಡಿತ 30 ಮಂದಿಗೆ ಹಾಗೂ ಚಿಕನ್‌ಗುನ್ಯಾ ಪೀಡಿತ 78 ಮಂದಿಗೆ ಅಗತ್ಯ ಚಿಕಿತ್ಸೆಯನ್ನು ನೀಡಲಾಗಿದೆ.

6. ರಾಷ್ಟ್ರೀಯ ಏಡ್ಸ್ ನಿಯಂತ್ರಣ ಕಾರ್ಯಕ್ರಮ

ಈ ಕಾರ್ಯಕ್ರಮದಲ್ಲಿ ಹರಡುತ್ತಿರುವ ಹೆಚ್.ಐ.ವಿ ಸೋಂಕಿನ ಬಗ್ಗೆ ಜನ ಸಮುದಾಯದಲ್ಲಿ ಅರಿವು ಮೂಡಿಸಲಾಗುತ್ತಿರುತ್ತದೆ. ಹದಿಹರೆಯದವರಿಗೆಆರೋಗ್ಯ ಶಿಕ್ಷಣ ನೀಡುವ ಮೂಲಕ ಏಡ್ಸ್ ನಿಯಂತ್ರಣಕ್ಕಾಗಿ ಹಾಗೂ ಎಲ್ಲಾಗರ್ಭಿಣಿ ಸ್ತ್ರೀಯರಿಗೆ ಹೆಚ್.ಐ.ವಿ ಸೋಂಕಿನ ಬಗ್ಗೆ ಪ್ರಾರಂಭಿಕ ಹಂತದಲ್ಲಿ ಪ್ರಾಥಮಿಕಆರೋಗ್ಯ ಕೇಂದ್ರಗಳಲ್ಲಿ ಪರೀಕ್ಷೆಗೆ ಒಳಪಡಿಸಲಾಗುತ್ತಿದ್ದು, ಹೆಚ್.ಐ.ವಿ ಸೋಂಕಿತ ತಂದೆ–ತಾಯಿಯರಿಂದ ಮಕ್ಕಳಿಗೆ ಹರಡುವ ಹೆಚ್.ಐ.ವಿ ಸೋಂಕನ್ನುತಡೆಹಿಡಿಯುವುದು. ಪದವಿ ಕಾಲೇಜುಗಳಲ್ಲಿ ರೆಡ್‌ರಿಬ್ಬನ್ ಕ್ಲಬ್‌ಗಳನ್ನು ಸ್ಥಾಪಿಸಿ, ಅದರ ಮೂಲಕ ಗ್ರಾಮೀಣ ಭಾಗದಲ್ಲಿ ಅರಿವು ಮೂಡಿಸಲಾಗುತ್ತಿದೆ. ಕಲಾತಂಡಗಳಿಂದ ಹೆಚ್.ಐ.ವಿ / ಏಡ್ಸ್ ಬಗ್ಗೆ ಜನಸಾಮಾನ್ಯರಿಗೆ ಆರೋಗ್ಯ ಶಿಕ್ಷಣ ನೀಡಲಾಗುತ್ತಿದೆ. ಡ್ಯಾಪ್ಕೋ ಮೊಬೈಲ್ ಐ.ಸಿ.ಟಿ.ಸಿ ಮುಖಾಂತರ ಹೆಚ್.ಐ.ವಿ/ಏಡ್ಸ್ ಬಗ್ಗೆ ಅರಿವು ಮತ್ತುಉಚಿತ ಹೆಚ್.ಐ.ವಿ ಪರೀಕ್ಷೆ ಸೌಲಭ್ಯ ನೀಡಲಾಗುತ್ತಿದೆ. ಹೆಚ್.ಐ.ವಿ ಸೋಂಕಿತರಿಗೆ ಎ.ಆರ್.ಟಿ ಕೇಂದ್ರಗಳಲ್ಲಿ ಉಚಿತವಾಗಿಚಿಕಿತ್ಸೆ ನೀಡಲಾಗುತ್ತಿದೆ.

ಸಾಧನೆ– 2020–21ನೇ ಸಾಲಿನಲ್ಲಿ 76292 ಸಾಮಾನ್ಯ ಜನರಿಗೆ ಹೆಚ್.ಐ.ವಿ ಪರೀಕ್ಷೆ ಮಾಡಲಾಗಿದ್ದು ಇವರಲ್ಲಿ 399 ಜನರಿಗೆ ಹೆಚ್.ಐ.ವಿ ಸೋಂಕು ಕಂಡುಬಂದಿದೆ. ಹಾಗೆ 51338 ಗರ್ಭಿಣಿಯರಿಗೆ ಹೆಚ್.ಐ.ವಿ ಪರೀಕ್ಷೆ ಮಾಡಲಾಗಿದ್ದು. ಅದರಲ್ಲಿ 23 ಗರ್ಭಿಣಿಯರಿಗೆ ಹೆಚ್.ಐ.ವಿ ಸೋಂಕು ಕಂಡುಬಂದಿದೆ. ಒಟ್ಟು=422 ಹೆಚ್.ಐ.ವಿ. ಸೊಂಕಿತರು ಕಂಡು ಬಂದಿದ್ದು ಇವರಲ್ಲಿ 406 ಸೋಂಕಿತರು ಎ.ಆರ್.ಟಿ. ಚಿಕಿತ್ಸೆಗೆ ತಲುಪಿದ್ದಾರೆ. ವರ್ಷದಿಂದ ವರ್ಷಕ್ಕೆ ಜಿಲ್ಲೆಯಲ್ಲಿ ಹೆಚ್.ಐ.ವಿ ಸೋಂಕಿನ ಪ್ರಮಾಣಕ್ಕೆ ಕಡಿಮೆಯಾಗುತ್ತಿದ್ದು, ಪರೀಕ್ಷೆಗೆ ಒಳಪಡುತ್ತಿರುವವರ ಸಂಖ್ಯೆ ಹೆಚ್ಚಾಗುತ್ತಿದೆ. (ಶೇ90%–ಪರೀಕ್ಷೆ, ಶೇ90%– ಎ ಆರ್ ಟಿ ರೆಫರ್,ಶೆ%90 ವೈರಲ್ ಲೋಡ್)

7. ಪೌಷ್ಠಿಕ ಆಹಾರ ಕಾರ್ಯಕ್ರಮ :–

ಉದ್ದೇಶ: ಜಿಲ್ಲಾ ಮಟ್ಟದಲ್ಲಿ ಪೌಷ್ಠಿಕಾಂಶ ವಿಭಾಗವು ಕಾರ್ಯ ನಿರ್ವಹಿಸುತ್ತಿದ್ದು ಗ್ರಾಮೀಣ ಪ್ರದೇಶದ ಜನರಿಗೆ ಸುಲಭವಾಗಿ ಹಾಗೂ ಸ್ಥಳೀಯವಾಗಿ ದೊರೆಯುವ ಕಾಳು, ಬೇಳೆ, ಸೊಪ್ಪು, ತರಕಾರಿಗಳನ್ನು ಬೆಳೆಸಿ ಕಡಿಮೆ ಖರ್ಚಿನಲ್ಲಿ ಪೌಷ್ಠಿಕ ಆಹಾರವನ್ನು ತಯಾರಿಸುವ ಬಗ್ಗೆ ಜವಸಾಮಾನ್ಯರಿಗೆ ತಿಳುವಳಿಕೆ ನೀಡಲು ಈ ಕಾರ್ಯಕ್ರಮವನ್ನು ರೂಪಿಸಲಾಗಿದೆ.

ವ್ಯವಸ್ಥೆ: ಗ್ರಾಮೀಣ ಪ್ರದೇಶದ ಜನರಿಗೆ ಪ್ರಾರಂಭಿಕ ಹಂತದಲ್ಲಿ ರೋಗ ನಿವಾರಣೆ ಮಾಡಲು ಪೌಷ್ಠಿಕ ಆಹಾರದ ಉಪಯೋಗದ ಅರಿವು ಮೂಡಿಸಲು ಕ್ರಮ ತೆಗೆದುಕೊಳ್ಳಲಾಗಿದೆ.

ಸಾಧನೆ: ಗ್ರಾಮೀಣ ಪ್ರದೇಶದ ಜನರು ಪೌಷ್ಠಿಕಾಂಶಗಳ ಕೊರತೆ ಉಂಟಾಗಿ ರೋಗದಿಂದ ನರಳುತ್ತಿರುವುದನ್ನು ತಪ್ಪಿಸಲು ಮುಂಜಾಗ್ರತಾ ಕ್ರಮವಾಗಿ ಸುಲಭವಾಗಿ ಹಾಗೂ ಸ್ಥಳೀಯವಾಗಿ ದೊರೆಯುವ ಕಾಳು, ಬೇಳೆ, ಸೊಪ್ಪು,ತರಕಾರಿಗಳನ್ನು ಬಳಸಿ ಪೌಷ್ಟಿಕಆಹಾರ ತಯಾರಿಸಿ ರೋಗವು ಬಾರದಂತೆ ಆರೋಗ್ಯ ಸಂರಕ್ಷಣೆಯ ಬಗ್ಗೆ ಅರಿವು ಮೂಡಿಸಲಾಗಿದೆ.

8. ಸಾಂಕ್ರಾಮಿಕ ರೋಗಗಳ ನಿವಾರಣಾ ಕಾರ್ಯಕ್ರಮ

ಉದ್ದೇಶ : ಸಾಂಕ್ರಾಮಿಕ ರೋಗಗಳ ತಲೆದೋರಿದಾಗ ಜನ ಸಮುದಾಯಕ್ಕೆ ತುರ್ತಾಗಿ ವೈದ್ಯಕೀಯ ಚಿಕಿತ್ಸೆಯನ್ನು ನೀಡಿ ಸಾವು–ನೋವುಗಳು ಸಂಭವಿಸದಂತೆ ತಡೆಗಟ್ಟಿ ಆರೋಗ್ಯ ಸಂರಕ್ಷಣೆಯನ್ನು ಮಾಡಲು ಸದರಿ ಕಾರ್ಯಕ್ರಮವನ್ನು ರೂಪಿಸಲಾಗಿದೆ. ಉಲ್ಬಣ ಪ್ರಕರಣಗಳನ್ನು ತಡೆಗಟ್ಟುವುದು, ಉಲ್ಬಣ ಪ್ರಕರಣ ಸಂಭವಿಸಿದಾಗ ಸೂಕ್ತ ಕ್ರಮ ತೆಗೆದುಕೊಳ್ಳುವುದು.

ವ್ಯವಸ್ಥೆ : ಜಿಲ್ಲೆಯಲ್ಲಿ ಸಾಮಾನ್ಯವಾಗಿ ಋತುಮಾನಗಳಿಗೆ ಅನುಸಾರವಾಗಿ ತಲೆದೋರುವ ಸಾಂಕ್ರಾಮಿಕ ರೋಗಗಳ ಬಗ್ಗೆ ಜನ ಸಾಮಾನ್ಯರಿಗೆ ತಿಳುವಳಿಕೆ, ಹತೋಟಿ ಕ್ರಮ, ಶುಶ್ರೂಷೆ ಮುಂತಾದವುಗಳ ವ್ಯವಸ್ಥೆ ಮಾಡಲಾಗಿದೆ. ಐ.ಡಿ.ಎಸ್.ಪಿ ಕಾರ್ಯಕ್ರಮದಡಿಯಲ್ಲಿನ ಪ್ರತಿ ವಾರ ಎಸ್.ಪಿ.ಎಲ್ ಹಾಗೂ ಡಬ್ಲ್ಯೂ ವರದಿಗಳನ್ನು ಉಪಕೇಂದ್ರಗಳಿಂದ, ಪ್ರಾ.ಆ. ಕೇಂದ್ರಗಳಿಂದ, ಸಮುದಾಯ ಆರೋಗ್ಯ ಕೇಂದ್ರ ಹಾಗೂ ಸಾರ್ವಜನಿಕ ಆಸ್ಪತ್ರೆಗಳಿಂದ ಮತ್ತು ಖಾಸಗಿ ಆಸ್ಪತ್ರೆಗಳಿಂದ ವರದಿಗಳನ್ನು ತರೆಸಿಕೊಂಡು ಪ್ರತಿ ವಾರ ವರದಿಗಳನ್ನು IDSP -Web portal ನಲ್ಲಿ ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದಲ್ಲಿ ವರದಿ ಮಾಡಿ, ರಾಜ್ಯ ಮಟ್ಟಕ್ಕೆ ಕ್ರೂಢೀಕೃತ ವರದಿಯನ್ನು ಕಳುಹಿಸಲಾಗುವುದು ಹಾಗೂ ಪ್ರತಿವಾರ ವರದಿಯಾದ ಪ್ರಕರಣಗಳ ಬಗ್ಗೆ ವಿಶ್ಲೇಷಣೆ ಮಾಡಿ, ಉಲ್ಬಣ ಪ್ರಕರಣಗಳು ವರದಿ ಯಾಗುವ ಮುನ್ನ ಂಟಿಚಿಟಥಿ ಚಿಟಜಡಿಣಗಳನ್ನು ಸಿದ್ದಗೊಳಿಸಿ ಸಂಬಂಧಪಟ್ಟ ಉಪಕೇಂದ್ರ, ಪ್ರಾ.ಆ.ಕೇಂದ್ರ ಹಾಗೂ

ಸಾರ್ವಜನಿಕ ಆ.ಕೇಂದ್ರಕ್ಕೆ ಕಳುಹಿಸಲಾಗುತ್ತಿದೆ. ಉಲ್ಬಣ ಪ್ರಕರಣಗಳು ಸಂಭವಿಸುವ ಮುನ್ನ ಮುಂಜಾಗೃತ ಕ್ರಮಕೈಗೊಳ್ಳಲಾಗುತ್ತಿದೆ.

ಹೊಸದಾಗಿ 2020–21ನೇ ಸಾಲಿನಲ್ಲಿ Integrated Health Information Platform ಜಾರಿಗೆ ಬಂದಿದ್ದು ಇದರಲ್ಲಿ ಸದರಿ ಇರುವ ಎಸ್ ಪಿ ಎಲ್ ವರದಿಯನ್ನು ಪ್ರತಿ ನಿತ್ಯ ಪೋರ್ಟಲ್‌ನಲ್ಲಿ ರಿಯಲ್ ಟೈಮ್ ಡಾಟಾ ವರದಿ ಮಾಡಲಾಗುತ್ತದೆ.

ಸಾಧನೆ : ಪರಿಸರದಲ್ಲಿ ಅಶುಚ್ಚಿತ್ವದಿಂದಾಗಿ ಅಶುದ್ಧ ನೀರಿನ ಕುಡಿಯುವಿಕೆಯಿಂದಾಗಿ ಅಶುದ್ಧ ಆಹಾರ ಸೇವನೆಯಿಂದಾಗಿ ಜನ ಸಾಮಾನ್ಯರು ಈ ಸಾಂಕ್ರಾಮಿಕ ರೋಗಗಳಿಗೆ ತುತ್ತಾಗುತ್ತಾರೆ. ಇಂತಹ ತುರ್ತು ಸಂದರ್ಭಗಳಲ್ಲಿ ವೈದ್ಯಾಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಹೆಚ್ಚಿನ ಕಾಳಜಿವಹಿಸಿ ಹತೋಟಿ ಕ್ರಮವನ್ನು ತೆಗೆದುಕೊಂಡು ಸೂಕ್ತ ಶುಶ್ರೂಷೆಗಳ ಮೂಲಕ ಜನಸಾಮಾನ್ಯರ ಪ್ರಾಣಗಳನ್ನು ಉಳಿಸಲು ಅಗತ್ಯವಾದ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲು ವ್ಯವಸ್ಥೆ ಮಾಡಲಾಗಿದೆ. ಸಂಭಾವ್ಯ ಉಲ್ಬಣ ಪ್ರಕರಣಗಳನ್ನು ಗುರ್ತಿಸುವುದು, ತಡೆಗಟ್ಟುವುದು, ನಿರ್ವಹಣಾ ಕಾರ್ಯಕ್ರಮ ವರದಿ ಮಾಡುವುದು.

ಜಿಲ್ಲಾ ಸರ್ವೆಲೆನ್ಸ್ ಅಧಿಕಾರಿಗಳು ಹಾಗೂ ಸಿಬ್ಬಂದಿರವರು ಪ್ರತಿ ಮಾಹೆಯಲ್ಲಿ ಎಲ್ಲಾ ತಾಲ್ಲೂಕು ಮಟ್ಟದಲ್ಲಿ ಪ್ರತ್ಯೇಕ ಸಭೆಯನ್ನು ಮಾಡಿ, ಸಾಂಕ್ರಾಮಿಕ ರೋಗಗಳ ಹಾಗೂ ಅಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟುವ ಬಗ್ಗೆ ಹಾಗೂ ಉಲ್ಬಣ ಪ್ರಕರಣಗಳು ವರದಿಯಾದಗ ತೆಗೆದುಕೊಳ್ಳಬೇಕಾದ ಕ್ರಮದ ಬಗ್ಗೆ ತಿಳಿಸಲಾಗುತ್ತಿದೆ ಹಾಗೂ ಉಲ್ಬಣ ಪ್ರಕರಣಗಳು ವರದಿಯಾದ ಸಮಯದಲ್ಲಿ ಜಿಲ್ಲಾ ಮಟ್ಟದ ಆರ್.ಆರ್‌ಟಿ ತಂಡವು ಸ್ಥಳಕ್ಕೆ ಭೇಟಿ ಮಾಡಿ, ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಜಿಲ್ಲೆಯಲ್ಲಿನ ಎಲ್ಲಾ ಪ್ರಾ.ಆ.ಕೇಂದ್ರ, ಸಾರ್ವಜನಿಕ ಆಸ್ಪತ್ರೆಗಳಲ್ಲಿ ಹಾಗೂ ಜಿಲ್ಲಾ ಆರೋಗ್ಯ (ಸರ್ವೆಲೆನ್ಸ್) ಪ್ರಯೋಗ ಶಾಲೆಯಲ್ಲಿ ಕುಡಿಯುವ ನೀರಿನ ಮಾದರಿಗಳನ್ನು ಪರೀಕ್ಷೆ ಒಳಪಡಿಸ ಲಾಗುತ್ತಿದೆ ಹಾಗೂ ಉಲ್ಬಣಕ್ಕೆ ಸಂಬಂಧಿಸಿದಂತೆ ಪ್ರಯೋಗಾಲಕ್ಕೆ ಸಂಬಂಧಿಸಿದ ಮಾದರಿಗಳನ್ನು ಸಂಗ್ರಹಿಸಿ ಪರೀಕ್ಷೆ ಮಾಡಲಾಗುತ್ತಿದೆ.

ಜಿಲ್ಲಾ ಆಸ್ಪತ್ರೆಯಲ್ಲಿ, ಎಲ್ಲಾ ಸಾರ್ವಜನಿಕ ಆಸ್ಪತ್ರೆ ಹಾಗೂ ಎಲ್ಲಾ ಸಮುದಾಯ/ ಪ್ರಾ.ಆ. ಕೇಂದ್ರಗಳಲ್ಲಿ H1N1 ಪ್ರಕರಣಗಳಿಗೆ ಸಂಬಂಧಿಸಿದಂತೆ Oseltamivir capsules ಮಾತ್ರೆಗಳನ್ನು ದಾಸ್ತಾನು ಮಾಡಿ, ಶಂಕಿತ ಪ್ರಕರಣಗಳಿಗೆ ಚಿಕಿತ್ಸೆ ಒದಗಿಸಿ ಮಾತ್ರೆಗಳನ್ನು ನೀಡಲಾಗುತ್ತಿದೆ.

9. ಅಸಾಂಕ್ರಾಮಿಕ ರೋಗಗಳ ನಿವಾರಣಾ ಕಾರ್ಯಕ್ರಮ :–

ಉದ್ದೇಶ: ಮಧುಮೇಹ, ರಕ್ತದೊತ್ತಡ, ಹೃದಯ ಸಂಬಂಧಿ ಖಾಯಿಲೆ, ಕ್ಯಾನ್ಸರ್, ಪಾರ್ಶ್ವವಾಯುಗಳಂತಹ ರೋಗಗಳಿಗೆ ನಿಯಮಿತ ಪರೀಕ್ಷೆ ನಡೆಸಿ, ಪತ್ತೆ ಹಚ್ಚುವುದು ಹಾಗೂ ಚಿಕಿತ್ಸೆಯ ವ್ಯವಸ್ಥೆ ಮಾಡುವುದು.

ವ್ಯವಸ್ಥೆ: ಮಧುಮೇಹ ಹಾಗೂ ರಕ್ತದೊತ್ತಡ ಪತ್ತೆಗಾಗಿ 30 ವರ್ಷ ಮೇಲ್ಪಟ್ಟ ಎಲ್ಲಾ ಜನರನ್ನು ಪರೀಕ್ಷಿಸಿ, ಪತ್ತೆ ಹಚ್ಚಿ ಚಿಕಿತ್ಸೆಗೊಳಪಡಿಸುವುದು.

ಸಾಧನೆ: ಜಿಲ್ಲೆಯ ಎಲ್ಲಾ ಉಪಕೇಂದ್ರಗಳಿಗೆ ಗ್ಲೂಕೋಮೀಟರ್ ಹಾಗೂ ಗ್ಲೂಕೋಸ್ ಸ್ಟ್ರಿಪ್‌ಗಳನ್ನು ಸರಬರಾಜು ಮಾಡಿ, ಪರೀಕ್ಷೆ ಮಾಡುವ / ಚಿಕಿತ್ಸೆ ನೀಡುವ ವ್ಯವಸ್ಥೆ ಮಾಡಲಾಗಿದೆ. ಕ್ಯಾನ್ಸರ್ ಸ್ಕ್ರೀನಿಂಗ್ ವ್ಯವಸ್ಥೆ ಮಾಡಲಾಗಿದೆ. ಜಿಲ್ಲಾ ಆಸ್ಪತ್ರೆಯಲ್ಲಿ ಕಾರ್ಡಿಯಾಕ್ ಕೇರ್ ಯೂನಿಟ್ ನಲ್ಲಿ ವೆಂಟಿಲೇಟರ್ ವ್ಯವಸ್ಥೆ ಇದ್ದು, ಅವಶ್ಯಕತೆ ಇರುವ ರೋಗಿಗಳಿಗೆ ಇದನ್ನು ಉಪಯೋಗಿಸಲಾಗುತ್ತಿದೆ.

10. ವಯೋವೃದ್ಧರ ಆರೋಗ್ಯ ಕಾರ್ಯಕ್ರಮ

20ನೇ ಶತಮಾನದಲ್ಲಿ ನಾಗರೀಕರ ಜೀವಿತ ವಯೋಮಿತಿ ಹೆಚ್ಚಾಗುತ್ತಿದ್ದು, 60ಕ್ಕೂ ಮೇಲ್ಪಟ್ಟು ವಯಸ್ಸಿನ ನಾಗರೀಕರ ಸಂಖ್ಯೆ ಹೆಚ್ಚಾಗುತ್ತಿದೆ. 2001 ರಲ್ಲಿ 7.7% ರಷ್ಟಿದ್ದ ವಯಸ್ಕ ನಾಗರೀಕರ ಸಂಖ್ಯೆ 2011ರ ವೇಳೆಗೆ 8.14% ರಷ್ಟಾಗಿರುತ್ತದೆ ಹಾಗೂ 2016ರ ವೇಳೆಗೆ 8.94% ಆಗಬಹುದೆಂದು ಅಂದಾಜಿಸಲಾಗಿದೆ. ಭಾರತದಲ್ಲಿ ಸುಮಾರು 76 ಮಿಲಿಯನ್ ಜನರು 60 ವರ್ಷಕ್ಕೂ ಮೇಲಿನ ವಯಸ್ಸಿನವರಾಗಿದ್ದು, 2051 ರ ವೇಳೆಗೆ 300 ಮಿಲಿಯನ್ ಆಗುವ ಬಗ್ಗೆ ಅಂದಾಜು ಮಾಡಲಾಗಿದೆ.

ಹಿರಿಯ ನಾಗರೀಕರಲ್ಲಿ ಕಂಡುಬರುವ ಅಸಾಂಕ್ರಾಮಿಕ ರೋಗಗಳು, ಇದರಿಂದಾಗಿ ಬರುವ ದೈಹಿಕ ಅಸಾಮರ್ಥ್ಯತೆಗಳಿಂದಾಗಿ ಈ ಜನಾಂಗಕ್ಕೆ ಆರೋಗ್ಯ ಆರೈಕೆ ಹಾಗೂ ವಿಶೇಷ ಆರೋಗ್ಯ ಸೌಕರ್ಯಗಳ ಅಗತ್ಯವಿರುತ್ತದೆ. ಆದ್ದರಿಂದ ವಿಶ್ವ ಆರೋಗ್ಯ ಸಂಸ್ಥೆಯ ಆದೇಶದಂತೆ ಪ್ರಪಂಚದ ಎಲ್ಲಾ ದೇಶಗಳಲ್ಲಿ ಅಕ್ಟೋಬರ್, 01, 2011 ರಂದು ಅಂತರಾಷ್ಟ್ರೀಯ ಹಿರಿಯ ನಾಗರೀಕರ ದಿನಾಚರಣೆಯನ್ನು ಆಚರಿಸಲಾಗುತ್ತಿದೆ.

ಹಿರಿಯ ನಾಗರೀಕರಲ್ಲಿ ಕಂಡುಬರುವ ಮುಖ್ಯವಾದ ಕಾಯಿಲೆಗಳೆಂದರೆ:

- ವಯಸ್ಕರ ಕಾಯಿಲೆಗಳು ಉದಾ: ನೇತ್ರ ಸಂಬಂಧಿ ಕಾಯಿಲೆಗಳು, ದೈಹಿಕ ಅಸಾಮರ್ಥ್ಯತೆ ಇತ್ಯಾದಿ
- ಜೀವನಶೈಲಿ ಆಧಾರಿತ ಹಾಗೂ ಪುನರುಜ್ಜೀವನವಾಗದ (degenerative) ಕಾಯಿಲೆಗಳು ಉದಾ: ಮೂಳೆಸವೆತ, ಅರ್ಬುದ ರೋಗಗಳು

- ದೃಢೀಕೃತ ದೀರ್ಘಕಾಲದ (chronic) ಕಾಯಿಲೆಗಳು; ಉದಾ: ಮಧುಮೇಹ, ಶ್ವಾಸಕೋಶ ಸಂಬಂಧಿ ಕಾಯಿಲೆಗಳು, ಹೃದಯ ಸಂಬಂಧಿ ಕಾಯಿಲೆಗಳು ಇತ್ಯಾದಿ
- ಬುದ್ಧಿಮಾಂದ್ಯತೆ, ಆಲ್ಜೀಮರ್ ಡಿಸೀಸ್, ಪಾರ್ಕಿನ್ಸೋನಿಸಮ್‌ನಂತಹ ಕಾಯಿಲೆಗಳು
- ಭಾರತ ಸರ್ಕಾರವು ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಷಿನ್‌ನಡಿಯಲ್ಲಿ ರಾಷ್ಟ್ರೀಯ ಹಿರಿಯ ನಾಗರೀಕರ ಆರೋಗ್ಯ ಆರೈಕೆ ಕಾರ್ಯಕ್ರಮವನ್ನು (NPHCE) ಪ್ರಾರಂಭಿಸಿದೆ. ಈ ಕಾರ್ಯಕ್ರಮದ ಮುಖ್ಯ ಉದ್ದೇಶಗಳೆಂದರೆ:
- ಎಲ್ಲಾ ಜಿಲ್ಲಾ ಆಸ್ಪತ್ರೆಗಳಲ್ಲಿ ಹಿರಿಯ ನಾಗರೀಕರಿಗೆ ಮಾರ್ಗಸೂಚಿನ್ವಯ ಮಹಿಳೆಯರಿಗೆ –5 ಹಾಗೂ ಪುರುಷರಿಗೆ–5 ಪ್ರತ್ಯೇಕ ವಾರ್ಡ್‌ಗಳನ್ನು ತೆರೆದು ಮೇಲೆ ಹೇಳಲಾಗಿರುವ ಕಾಯಿಲೆಗಳಿಗೆ ಚಿಕಿತ್ಸೆ ನೀಡುವ ವ್ಯವಸ್ಥೆಯನ್ನು ಮಾಡುವುದು.
- ತಾಲ್ಲೂಕು ಆಸ್ಪತ್ರೆಗಳು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಮಹಿಳೆಯರಿಗೆ –5 ಹಾಗೂ ಪುರುಷರಿಗೆ–5 ಪ್ರತ್ಯೇಕ ವಾರ್ಡ್‌ಗಳನ್ನು ತೆರೆದು ಹಿರಿಯ ನಾಗರೀಕರ ಚಿಕಿತ್ಸೆಗೆ ವ್ಯವಸ್ಥೆ ಮಾಡುವುದು.
- ಉಪಕೇಂದ್ರಗಳಲ್ಲಿ ಮನೆಮನೆಗೆ ಭೇಟಿ ನೀಡಿ ಮನೆಯಲ್ಲೇ ಕೊಡಬಹುದಾದ ಚಿಕಿತ್ಸೆ ಕೊಡಿಸುವ ವ್ಯವಸ್ಥೆಯನ್ನೂ ಮಾಡುವುದು.
- ರಾಷ್ಟ್ರೀಯ ಹಿರಿಯ ನಾಗರೀಕರ ಆರೋಗ್ಯಕ್ಕೆ ಸಂಬಂಧಿಸಿದಂತೆ ಸಮುದಾಯ ಆರೋಗ್ಯ ಕೇಂದ್ರ, ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಪುನರ್‌ಸ್ಥಾಪನಾ ನೌಕರರು (rehabilitation workers), ವೈದ್ಯರು ಹಾಗೂ ಇತರ ಆರೋಗ್ಯ ಸಿಬ್ಬಂದಿಗಳನ್ನು ನೇಮಿಸಲಾಗಿದೆ ಹಾಗೂ ಫಿಸಿಯೋಥೆರಪಿ ವಿಭಾಗಗಳು ಕಾರ್ಯನಿರ್ವಹಿಸುತ್ತಿದೆ.
- ವೈದ್ಯಕೀಯ ಕಾಲೇಜುಗಳಲ್ಲಿ ಹಿರಿಯ ನಾಗರೀಕರ ಆರೋಗ್ಯದ ಬಗ್ಗೆ ವಿಶೇಷ ಪದವಿಗಳನ್ನು ಪ್ರಾರಂಭಿಸುವುದು ಹಾಗೂ ಸಂಶೋಧನೆಗಳನ್ನು ಕೈಗೊಳ್ಳುವುದು.
- ತನ್ಮೂಲಕ ಹಿರಿಯ ನಾಗರೀಕರ ಆರೋಗ್ಯ ಸಮಸ್ಯೆಗಳನ್ನು ಶೀಘ್ರವಾಗಿ ಪತ್ತೆ ಹಚ್ಚಿ ಸೂಕ್ತ ಚಿಕಿತ್ಸೆಯ ವ್ಯವಸ್ಥೆ ಮಾಡುವುದು.
- ಹಿರಿಯ ನಾಗರೀಕರಿಗೆ ಸದಾ ಕಾಲ ಉತ್ತಮ ಆರೋಗ್ಯ ಆರೈಕೆ ಹಾಗೂ ಪೂರ್ಣ ಪ್ರಮಾಣದ ಆರೋಗ್ಯ ಸೇವೆ ನೀಡುವುದು.

ಇಲ್ಲಿ ಹಿರಿಯ ನಾಗರೀಕರ ವಿಶೇಷ ಆರೋಗ್ಯ ತಪಾಸಣೆಯನ್ನು ಹಮ್ಮಿಕೊಳ್ಳಲಾಗಿದೆ ಹಾಗೂ 60 ವರ್ಷ ಮೇಲ್ಪಟ್ಟ ನಾಗರೀಕರು ಇದರ ಉಪಯೋಗವನ್ನು ಪಡೆದುಕೊಳ್ಳುವಂತೆ ಕೋರಲಾಗಿದೆ.

11.ಕೋವಿಡ್–19 ಕಾರ್ಯಕ್ರಮ

1) ತುಮಕೂರು ಜಿಲ್ಲೆಯಲ್ಲಿ ಕೋವಿಡ್–19 ಸಾಂಕ್ರಾಮಿಕ ರೋಗವು ಉಲ್ಬಣವಾಗಿದ್ದು, ಮಾರ್ಚಿ–2021 ರ ಅಂತ್ಯಕ್ಕೆ ಒಟ್ಟು 780651 ಪರೀಕ್ಷೆಗಳನ್ನು ಮಾಡಲಾಗಿದ್ದು. ಅದರಲ್ಲಿ 26980 ಪ್ರಕರಣ ವರದಿಯಾಗಿದ್ದು, ಆಕ್ಟೀವ್ ಕೇಸ್‌ಗಳು–1057, ಬಿಡುಗಡೆಯಾದ ರೋಗಿಗಳ ಸಂ:25923, ಒಟ್ಟು ಸಾವುಗಳು–399

2) ಕೋವಿಡ್–19 ಕ್ಕೆ ಸಂಬಂಧಿಸಿದಂತೆ ಜಿಲ್ಲೆಯಾದ್ಯಂತ ಸಾರ್ವಜನಿಕರಿಗೆ ಅರಿವು ಮೂಡಿಸುವ ಸಲುವಾಗಿ ಐ.ಇ.ಸಿ. ಕಾರ್ಯಕ್ರಮವನ್ನು ಹಾಗೂ ಎಲ್ಲಾ ವೈದ್ಯಾಧಿಕಾರಿಗಳಿಗೆ,ಖಾಸಗಿ ವೈದ್ಯರಿಗೆ, ರೋಗ್ಯ ಕಾರ್ಯಕರ್ತರಿಗೆ ತರಬೇತಿಯನ್ನು ನೀಡಲಾಗಿರುತ್ತದೆ.

3) ಜಿಲ್ಲಾ ಆಸ್ಪತ್ರೆಯಲ್ಲಿ ಹಾಗೂ ಸಾರ್ವಜನಿಕ ಆಸ್ಪತ್ರೆ ತಿಪಟೂರಿನಲ್ಲಿ ಆರ್ ಟಿ ಪಿ ಸಿ ಆರ್ ಲ್ಯಾಬ್ ಸ್ಥಾಪಿಸಲಾಗಿದ್ದು, ಪ್ರತಿ ನಿತ್ಯ ಅಂದಾಜು 2000 ಪರೀಕ್ಷೆಗಳನ್ನು ಮಾಡಲಾಗುತ್ತಿದೆ. ಹಾಗೂ 24 ಗಂಟೆಗಳಲ್ಲಿ ವರದಿಯನ್ನು ನೀಡಲಾಗುತ್ತಿದೆ.

4) ಜಿಲ್ಲಾ ಆಸ್ಪತ್ರೆಯಲ್ಲಿ 400 ಹಾಸಿಗೆಯ ಹಾಗೂ ತಾಲ್ಲೂಕು ಮಟ್ಟದ ಆಸ್ಪತ್ರೆಗಳಲ್ಲಿ 50 ಹಾಸಿಗೆಯ ಸಾಮರ್ಥ್ಯದ ಆಕ್ಸಿಜನ್ ಬೆಡ್‌ಗಳನ್ನು ಸಜ್ಜುಗೊಳಿಸಿದೆ.

5) ಜಿಲ್ಲಾ ಆಸ್ಪತ್ರೆಗೆ 30 ಹಾಗೂ ತಾಲ್ಲೂಕು ಆಸ್ಪತ್ರೆಗಳಲ್ಲಿ ತಲಾ 06 ವೆಂಟಿಲೇಟರ್‌ಗಳು ಕಾರ್ಯನಿರ್ವಹಿಸುತ್ತಿವೆ.

6) **ತುಮಕೂರು ಜಿಲ್ಲೆಯಲ್ಲಿ ಮಾರ್ಚಿ–2021ರ ಅಂತ್ಯಕ್ಕೆ ಕೋವಿಡ್ ಲಸಿಕೆ ಒಟ್ಟು.2,22,000 ಸ್ವೀಕೃತಗೊಂಡಿದ್ದು, ಅದರಲ್ಲಿ 2,06,350 ಫಲಾನುಭವಿಗಳಿಗೆ ಲಸಿಕೆಯನ್ನು ನೀಡಲಾಗಿರುತ್ತದೆ.**

12.ತಂಬಾಕು ನಿಯಂತ್ರಣ ಕಾರ್ಯಕ್ರಮ:

ಈ ಕಾರ್ಯಕ್ರಮದಡಿಯಲ್ಲಿ ತುಮಕೂರು ಜಿಲ್ಲೆಯನ್ನು ತಂಬಾಕು ಮುಕ್ತ ಜಿಲ್ಲೆಯನ್ನಾಗಿ ಪರಿವರ್ತಿಸುವ ಯೋಜನೆ ಜಾರಿಯಲ್ಲಿದೆ. ಮತ್ತು ಎಲ್ಲಾ ಇಲಾಖೆಗಳಿಗೆ ತರಬೇತಿ ನೀಡಲಾಗಿದೆ ಹಾಗೂ ಬಿತ್ತಿಪತ್ರ ಮೂಲಕ ಸಾರ್ವಜನಿಕರಲ್ಲಿ ದುಶ್ಪರಿಣಾಮಗಳ ಬಗ್ಗೆ ಅರಿವು ಮೂಡಿಸಲಾಗುತ್ತದೆ.

13.ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮ

ಉದ್ದೇಶ: ಹುಟ್ಟಿನಿಂದ 19 ವರ್ಷದೊಳಗಿನ ಮಕ್ಕಳ ಆರೋಗ್ಯದ ಬಗ್ಗೆ ಹೆಚ್ಚಿನ ಗಮನಹರಿಸಿ ಎಲ್ಲಾ ಮಕ್ಕಳ ಆರೋಗ್ಯ ಸಂರಕ್ಷಣೆಯನ್ನು ಮಾಡಲು ಈ ಕಾರ್ಯಕ್ರಮವನ್ನು ರೂಪಿಸಲಾಗಿದೆ.

ವ್ಯವಸ್ಥೆ: ಎಲ್ಲಾ 19 ವರ್ಷದೊಳಗಿನ ಮಕ್ಕಳ ಸಮೀಕ್ಷೆ ನಡೆಸಿ ಅವರುಗಳಿಗೆ ಆರೋಗ್ಯದ ಬಗ್ಗೆ ತಿಳುವಳಿಕೆ ಆಗಿಂದಾಗ್ಗೆ ಶಾಲೆಗಳಿಗೆ ಭೇಟಿ ನೀಡಿ ಶಾಲಾ ಮಕ್ಕಳ ಆರೋಗ್ಯ ಸುಧಾರಣೆಯನ್ನು ಮಾಡಲು ವೈವಸ್ಥೆ ಮಾಡಲಾಗಿದೆ. ಪ್ರತಿ ತಾಲ್ಲೂಕಿಗೆ ಎರಡು ವೈದ್ಯರು, ಎರಡು ಶುಶ್ರೂಷಕಿ ಮತ್ತು 2 ನೇತ್ರ ಸಹಾಯಕರಂತೆ 10 ತಾಲ್ಲೂಕುಗಳಲ್ಲಿ ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಂಡು ಸೂಕ್ತ ವಾಹನ ವ್ಯವಸ್ಥೆ ಮಾಡಲಾಗಿದೆ.

ಸಾಧನೆ: ಜಿಲ್ಲೆಯಲ್ಲಿರುವ ಎಲ್ಲಾ ಅಂಗನವಾಡಿ/ಶಾಲೆಗಳಲ್ಲಿ ಕಲಿಯುತ್ತಿರುವ ಮಕ್ಕಳ ಸಮೀಕ್ಷೆ ನಡೆಸಿದ್ದು ಪೌಷ್ಟಿಕಾಂಶದಿಂದ ಕೂಡಿದ ಆಹಾರದ ಬಗ್ಗೆ ಶಾಲಾ ಮಕ್ಕಳಿಗೆ ಹಾಗೂ ಪೋಷಕರುಗಳಿಗೆ ಸೂಕ್ತ ತಿಳುವಳಿಕೆಯನ್ನು ನೀಡಿ ರೋಗಗಳು ಬಾರದಂತೆ ತಡೆಗಟ್ಟಲು ಕ್ರಮ ತೆಗೆದುಕೊಳ್ಳಲಾಗಿದೆ. ರೋಗದಿಂದ ನರಳುತ್ತಿರುವ ಮಕ್ಕಳಿಗೆ ಸೂಕ್ತ ವೈದ್ಯಕೀಯ ಚಿಕಿತ್ಸೆಯನ್ನು ಒದಗಿಸಿ ಶಾಲಾ ಮಕ್ಕಳು ಆರೋಗ್ಯವಂತರಾಗಲು ಅಗತ್ಯವಾದ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. 2020–21ನೇ ಸಾಲಿಗೆ ಒಟ್ಟು 333683 ಮಕ್ಕಳು ವೈದ್ಯಕೀಯ ತಪಾಸಣೆಗೊಳಗಾಗಿರುತ್ತಾರೆ.

14.ವೈದ್ಯಾಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರ ಮಾಸಿಕ ಸಭೆ:

ಉದ್ದೇಶ:– ಪ್ರತಿ ತಿಂಗಳು ಪ್ರಾ. ಆ. ಕೇಂದ್ರಗಳ ಮಟ್ಟದಲ್ಲಿ ಕಾರ್ಯಕರ್ತರುಗಳ ಮಾಸಿಕ ಸಭೆಯನ್ನು ಜಿಲ್ಲಾ ಮಟ್ಟದಲ್ಲಿ ಮೇಲ್ವಿಚಾರಕರು ಹಾಗೂ ಆರೋಗ್ಯಧಿಕಾರಿಗಳ ಮಾಸಿಕ ಸಭೆಯನ್ನು ಕರೆದು ಆ ಸಂದರ್ಭದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಾರ್ಯಕ್ರಮಗಳ ಬಗ್ಗೆ ಪ್ರಗತಿಯನ್ನು ಸಾಧಿಸಲು ಚರ್ಚಿಸಿ ಮಾರ್ಗದರ್ಶನವನ್ನು ನೀಡಲಾಗುವುದು.

ಸಾಧನೆ:– ಈ ಮಾಸಿಕ ಸಭೆಗಳಲ್ಲಿ ಆರೋಗ್ಯಧಿಕಾರಿಗಳು, ಮೇಲ್ವಚಾರಕರು ಹಾಗೂ ಸಿಬ್ಬಂದಿ ವರ್ಗದವರು ಹಾಗೂ ಕ್ಷೇತ್ರ ಕಾರ್ಯಕರ್ತರು ಈ ಕಾರ್ಯಕ್ರಮಗಳ ಪ್ರಗತಿಯ ಪರಿಶೀಲನೆಯನ್ನು ನಡೆಸಿ, ಸುಧೀರ್ಘವಾಗಿ ಚರ್ಚಿಸಿ ಈ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಇರುವ ಕುಂದು ಕೊರತೆಗಳನ್ನು ಪರಿಹರಿಸಿ ಸಾರ್ವಜನಿಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಾರ್ಯಕ್ರಮಗಳ ಪ್ರಗತಿಯನ್ನು ಯಶಸ್ವಿಯಾಗಿ ಸಾಧಿಸಲು ಕ್ರಮ ತೆಗೆದುಕೊಳ್ಳಲಾಗಿದೆ.

ಕುಟುಂಬ ಕಲ್ಯಾಣ ಕಾರ್ಯಕ್ರಮಗಳು

15.ರಾಜ್ಯ ಆರೋಗ್ಯ ಸಾರಿಗೆ ಸಂಸ್ಥೆ:

ಉದ್ದೇಶ: ಜಿಲ್ಲೆಯಲ್ಲಿ ವಿವಿಧ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿರುವ ವಾಹನಗಳು ಹಾಗೂ ಅಂಬುಲೆನ್ಸ್ ವಾಹನಗಳು ಮತ್ತು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿ ಕಾರಿಗಳ ಕಛೇರಿಯಲ್ಲಿರುವ ವಾಹನಗಳ

ಇಂಧನ ವೆಚ್ಚ ಮತ್ತು ವಾಹನಗಳು ಸುಸ್ಥಿತಿಯಲ್ಲಿರುವಂತೆ ನೋಡಿಕೊಂಡು ರಾಷ್ಟ್ರೀಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಾರ್ಯಕ್ರಮಗಳ ಪ್ರಗತಿಯಲ್ಲಿ ಹೆಚ್ಚಿನ ಗುರಿಯನ್ನು ಸಾಧಿಸಲು ಈ ಕಾರ್ಯಕ್ರಮವನ್ನು ರೂಪಿಸಲಾಗಿದೆ.

ವ್ಯವಸ್ಥೆ: ಈ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ರೂ.398.81ಲಕ್ಷಗಳನ್ನು ನಿಗಧಿಪಡಿಸಲಾಗಿದೆ.

ಸಾಧನೆ: 2020–21ನೇ ಸಾಲಿನಲ್ಲಿ ಈ ಕಾಯಕ್ರಮದ ಯಶಸ್ಸಿಗಾಗಿ ಶ್ರಮಿಸುತ್ತಿರುವ ಸೇವಾ ಅಭಿಯಂತರರು ಸಿಬ್ಬಂದಿ ವರ್ಗದವರ ವೇತನ ಮತ್ತು ಭತ್ಯೆಗಳು ಮತ್ತೆ ವಾಹನಗಳ ಇಂಧನ ವೆಚ್ಚ ಮತ್ತು ವಾಹನಗಳ ದುರಸ್ಥಿ ವೆಚ್ಚಕ್ಕಾಗಿ ರೂ 288.12ಲಕ್ಷ ರೂಗಳನ್ನು ವೆಚ್ಚ ಮಾಡಲಾಗಿದೆ.

16.ಕುಟುಂಬ ಕಲ್ಯಾಣ ಔಷಧಿ ಪೂರೈಕೆ ಮತ್ತು ಪಲ್ಸ್ ಪೋಲಿಯೋ ಕಾರ್ಯಕ್ರಮ

ಉದ್ದೇಶ: ಜಿಲ್ಲೆಯಾದ್ಯಂತ ನಡೆಯುತ್ತಿರುವ ಕುಟುಂಬ ಕಲ್ಯಾಣ ಶಸ್ತ್ರ ಚಿಕ್ಕಿತ್ಸೆಗಳಿಗೆ ಅವಶ್ಯಕವಾಗಿರುವ ಔಷಧಿಗಳನ್ನು ಪೂರೈಸಲು ಮತ್ತು 05 ವರ್ಷದೊಳಗಿನ ಮಕ್ಕಳಿಗೆ ಲಸಿಕೆಗಳನ್ನು ನೀಡಲು ಪಲ್ಸ್ ಪೊಲಿಯೊ ಕಾರ್ಯಕ್ರಮವನ್ನು ರೂಪಿಸಲಾಗಿದೆ.

ವ್ಯವಸ್ಥೆ:– ಈ ಕಾಯಕ್ರಮದ ಅನುಷ್ಠಾನಕ್ಕಾಗಿ ರೂ 3.00 ಲಕ್ಷ ಗಳನ್ನು ನಿಗಧಿಪಡಿಸಲಾಗಿದೆ.

ಸಾಧನೆ: – 2020–21ನೇ ಸಾಲಿನಲ್ಲಿ ಈ ಕಾರ್ಯಕ್ರಮಕ್ಕಾಗಿ ರೂ 2.61ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

17. ಗ್ರಾಮಾಂತರ ಕುಟುಂಬ ಕಲ್ಯಾಣ ಉಪ ಕೇಂದ್ರಗಳು:

ಉದ್ದೇಶ: ಜಿಲ್ಲೆ ಗ್ರಾಮಾಂತರ ಪ್ರದೇಶಗಳಲ್ಲಿ ಕುಟುಂಬ ಕಲ್ಯಾಣ ಕಾರ್ಯಕ್ರಮಗಳ ಅಭಿವೃದ್ದಿಗಾಗಿ ಶ್ರಮಿಸುತ್ತಿರುವ ಸಿಬ್ಬಂದಿ ವರ್ಗದವರ ವೇತನ ಮತ್ತು ಭತ್ಯೆಗಳನ್ನು ಪ್ಪತಿ ಮಾಡಲು ಈ ಕಾರ್ಯಕ್ರಮವನ್ನು ರೂಪಿಸಲಾಗಿದೆ.

ವ್ಯವಸ್ಥೆ: ಈ ಕಾರ್ಯಕ್ರಮಕ್ಕಾಗಿ ರೂ 4006.53ಲಕ್ಷ ರೂಗಳನ್ನು ನಿಗಧಿಪಡಿಸಲಾಗಿದೆ.

ಸಾಧನೆ: 2020–21ನೇ ಸಾಲಿನಲ್ಲಿ ಈ ಕಾರ್ಯಕ್ರಮಕ್ಕಾಗಿ ರೂ.2384.38ಲಕ್ಷಗಳನ್ನು ವೆಚ್ಚಮಾಡಲಾಗಿದೆ.

18. ಸಾರ್ವತ್ರಿಕ ನಿರೋಧಕ ಚುಚ್ಚುಮದ್ದು ಕಾಯಕ್ರಮ:

ಉದ್ದೇಶ: ಜೆಲ್ಲೆಯಾದ್ಯಂತ ತಾಯಿ ಮತ್ತು ಮಕ್ಕಳ ಆರೋಗ್ಯ ಕಾಪಾಡುವುದಕ್ಕಾಗಿ ವಿಶೇಷ ಗಮನ ನೀಡಲಾಗುತ್ತಿದ್ದು, ಅದರ ಇಲಾಖಾ ಕಾರ್ಯಕರ್ತರು ಮೇಲ್ವಿಚಾರಕರು ಆರೋಗ್ಯ ಅಧಿಕಾರಿಗಳ ಮೂಲಕ ಗರ್ಭಿಣಿಯರ ದಾಖಲಾತಿ ಸೇವಾ ಸಲಹೆಗಳು, ಹೆರಿಗೆ ಸೌಲಭ್ಯ, ರಕ್ಷಿತ ಚುಚ್ಚುಮದ್ದು ಹಾಗೂ ಇದರ ಜನರಿಗೆ ತಿಳುವಳಿಕೆ ನೀಡುವುದು.

ಸಾಧನೆ: 2020–21ನೇ ಸಾಲಿನ ಲಸಿಕಾ ಕಾಯಕ್ರಮಡಿಯಲ್ಲಿ ಈ ಕೆಳಕಂಡಂತೆ ಸಾಧಿಸಲಾಗಿದೆ. ಪೆಂಟಾವಲೆಂಟ್ ಲಸಿಕೆಯನ್ನು 35061 ಮಕ್ಕಳಿಗೆ ನೀಡಲು ಗುರಿಯನ್ನು ಹೊಂದಿದ್ದು ಇದರಲ್ಲಿ 41847 ಮಂದಿಗೆ ಈ ಲಸಿಕೆಯನ್ನು ನೀಡಲಾಗಿದೆ. ಶೇ. 119% ಪ್ರಗತಿಯನ್ನು ಸಾಧಿಸಲಾಗಿದೆ. ಪೋಲಿಯೋ ನಿವಾರಣಾ ಲಸಿಕೆಯನ್ನು 35062 ಮಕ್ಕಳಿಗೆ ನೀಡಲು ಗುರಿಯನ್ನು ಹೊಂದಿದ್ದು 41847 ಮಂದಿಗೆ ಈ ಲಸಿಕೆಯನ್ನು ನೀಡಲಾಗಿದೆ. ಶೇ. 119% ಪ್ರಗತಿಯನ್ನು ಸಾಧಿಸಲಾಗಿದೆ. ಬಿ.ಸಿ.ಜಿ ಚುಚ್ಚುಮದ್ದನ್ನು 35061 ಮಂದಿಗೆ ನೀಡಲು ಗುರಿಯನ್ನು ಹೊಂದಿದ್ದು 33990 ಮಂದಿಗೆ ಈ ಚುಚ್ಚುಮದ್ದನ್ನು ನೀಡಲಾಗಿದೆ. ಶೇ.97% ಪ್ರಗತಿಯನ್ನು ಸಾಧಿಸಲಾಗಿದೆ. 39915 ಗರ್ಭಿಣಿ ಸ್ತ್ರೀಯರ ಆರೋಗ್ಯ ತಪಾಸಣೆಯ ಗುರಿಯನ್ನು ಹೊಂದಿದ್ದು ಇದರಲ್ಲಿ 37313 ಗರ್ಭಿಣಿ ಸ್ತ್ರೀಯರನ್ನು ಪರೀಕ್ಷಿಸಿ ಆರೋಗ್ಯ ತಪಾಸಣೆ ನಡೆಸಲಾಗಿದ್ದು ಶೇ. 93% ಪ್ರಗತಿಯನ್ನು ಸಾಧಿಸಲಾಗಿದೆ.

19. ಪರಿಹಾರ, ಐ.ಯು.ಡಿ. ವ್ಯಾಸೆಕ್ಟಮಿ ಮತ್ತು ಟುಬೆಕ್ಟಮಿ:

ಉದ್ದೇಶ: ಜಿಲ್ಲೆಯಲ್ಲಿ ಕುಟುಂಬ ಕಲ್ಯಾಣ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಹಲವಾರು ಯೋಜಿತ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ಅವುಗಳಲ್ಲಿ ಪ್ರಮುಖವಾದ ವುಗಳೆಂದರೆ.

1. ಟುಬೆಕ್ಟಮಿ ಶಸ್ತ್ರಚಿಕಿತ್ಸೆ
2. ಐ.ಯು.ಡಿ. ಅಳವಡಿಕೆ
3. ವ್ಯಾಸೆಕ್ಟಮಿ ಶಸ್ತ್ರ ಚಿಕಿತ್ಸೆ
4. ನಿರೋದ್
5. ನುಂಗುವ ಗುಳಿಗೆಗಳು

20. ಸಂತಾನಹರಣ ಶಸ್ತ್ರಚಿಕಿತ್ಸೆ:

2020–21ನೇ ಸಾಲಿನಲ್ಲಿ ಟ್ಯಬೆಕ್ಟಮಿ ಮತ್ತು ಲೆಪ್ರೋಸ್ಕೋಪಿಕ್ ಶಸ್ತ್ರ ಚಿಕಿತ್ಸಾ ಕಾರ್ಯಕ್ರಮದಡಿ 12075 ಮಹಿಳೆಯರಿಗೆ ಈ ಶಸ್ತ್ರ ಚಿಕಿತ್ಸೆ (ಸಂತಾನ ಹರಣ ಶಸ್ತ್ರ ಚಿಕಿತ್ಸೆ) ನಡೆಸಲು ಗುರಿಯನ್ನು ಹೊಂದಿದ್ದು ಇದರಲ್ಲಿ 6996 ಮಹಿಳೆಯರು ಈ ಶಸ್ತ್ರಚಿಕಿತ್ಸೆಯನ್ನು ಮಾಡಿಸಿ ಕೊಂಡಿರುತ್ತಾರೆ. ಶೇ 57.94% ಪ್ರಗತಿಯನ್ನು ಈ ಕಾರ್ಯಕ್ರಮದಡಿ ಸಾಧಿಸಲಾಗಿದೆ. ಪುರುಷ ಸಂತಾನಹರಣ ಶಸ್ತ್ರಚಿಕಿತ್ಸೆಯಲ್ಲಿ 442 ಪುರುಷರಿಗೆ ಸಂತಾನಹರಣ ಶಸ್ತ್ರಚಿಕಿತ್ಸೆ ಗುರಿ ಹೊಂದಿದ್ದು ಈವರೆಗೆ 13 ಪುರುಷರಿಗೆ ಸಂತಾನಹರಣ ಶಸ್ತ್ರಚಿಕಿತ್ಸೆ ಮಾಡಿಸಿದ್ದು ಶೇ. 2.94% ರಷ್ಟು ಪ್ರಗತಿಯನ್ನು ಸಾಧಿಸಲಾಗಿದೆ.

21. ಐ.ಯು.ಡಿ. ಕಾರ್ಯಕ್ರಮ:

ಈ ಕಾರ್ಯಕ್ರಮದಡಿಯಲ್ಲಿ 8982 ಗುರಿ ಹೊಂದಿದ್ದು ಈವರೆಗೆ 2966 ಅಳವಡಿಸಿದ್ದು ಶೇ 33% ರಷ್ಟು ಪ್ರಗತಿ ಸಾಧಿಸಲಾಗಿದೆ. ನುಂಗುವ ಗುಳಿಗೆಯಲ್ಲಿ 151112 ಗುರಿ ಹೊಂದಿದ್ದು ಈವರೆಗೆ 113054 ಗುರಿ ಸಾಧಿಸಿದ್ದು ಶೇ75%

ರಷ್ಟು ಪ್ರಗತಿ ಸಾಧಿಸಲಾಗಿದೆ. ನಿರೋಧ್‌ನಲ್ಲಿ 1275480 ಗುರಿ ಹೊಂದಿದ್ದು, ಈವರೆಗೆ 953702 ಪ್ರಗತಿ ಸಾಧಿಸಿದ್ದು ಶೇ 75% ರಷ್ಟು ಪ್ರಗತಿ ಸಾಧಿಸಲಾಗಿದೆ.

ಉದ್ದೇಶ: ಆರೋಗ್ಯ ಕುಟುಂಬ ಕಲ್ಯಾಣ ಕಾರ್ಯಕ್ರಮದಡಿ ಎಲ್ಲಾ ಕಾರ್ಯಕ್ರಮಗಳು ಜನ ಸಮುದಾಯದಲ್ಲಿ ತಲುಪಿ ಸಮಸ್ತ ಜನರ ಆರೋಗ್ಯ ಕುಟುಂಬ ಕಲ್ಯಾಣ ಪ್ರಗತಿಯಲ್ಲಿ ಸಾಧಿಸಲು ಈ ಯೋಜನೆಯನ್ನು ರೂಪಿಸಲಾಗಿದೆ.

ಸಾಧನೆ: 2020–21ನೇ ಸಾಲಿನ ಈ ಕಾರ್ಯಕ್ರಮಗಳ ಬಗ್ಗೆ ಜನಸಮುದಾಯಕ್ಕೆ ಅರಿವು ಮೂಡಿಸಲು ಕೆಲವು ಯೋಜನೆಗಳನ್ನು ರೂಪಿಸಲಾಗಿದೆ. ಈ ಯೋಜನೆ ಕಾರ್ಯಕ್ರಮಗಳ ತಯಾರಿಕೆ ಜಿಲ್ಲಾ ಮಟ್ಟದಲ್ಲಿ ಹಾಗೂ ಗ್ರಾಮೀಣ ಮಟ್ಟದಲ್ಲಿ ತರಬೇತಿ ಶಿಬಿರ ಚರ್ಚಾ ಸ್ಪರ್ಧೆ, ಜನಪದ ಕಾರ್ಯಕ್ರಮ, ವಸ್ತ್ರಪ್ರದರ್ಶನಗಳನ್ನು ಏರ್ಪಡಿಸಲಾಗುತ್ತಿದೆ, ಇವುಗಳಲ್ಲದೆ ಗುಂಪು ಸಭೆಗಳನ್ನು ವೈಯಕ್ತಿಕ ಭೇಟಿ ಸಭೆಗಳ ಮೂಲಕ ಆರೋಗ್ಯ ಇಲಾಖೆಯ ಕಾರ್ಯಕ್ರಮಗಳ ಬಗ್ಗೆ ಶಿಕ್ಷಣ ನೀಡಲಾಗುತ್ತಿದೆ.

22. ರಾಷ್ಟ್ರೀಯ ಕುಷ್ಠರೋಗ ನಿರ್ಮೂಲನಾ ಕಾರ್ಯಕ್ರಮ:

ಉದ್ದೇಶ: ಜಿಲ್ಲೆಯಾದ್ಯಂತ ಪತ್ತೆಯಾಗುವ ಶಂಕಿತ ಕುಷ್ಠರೋಗಿಗಳಿಗೆ ಸೂಕ್ತ ಚಿಕಿತ್ಸೆಯನ್ನು ಹಾಗೂ ಔಷಧಿಯನ್ನು ದೊರೆಯುವಂತೆ ಮಾಡಲಾಗಿದೆ

ಸಾಧನೆ: 2020–21ನೇ ಸಾಲಿನಲ್ಲಿ 72(ಪಿ.ಬಿ.–30 ಎಂ.ಬಿ–36, 6ಹೊಸ ಪ್ರಕರಣಗಳು,) 58–ಎಂ.ಬಿ, 17–ಪಿ ಬಿ (75) ಕುಷ್ಠರೋಗಿಗಳನ್ನು ಚಿಕಿತ್ಸೆಯಿಂದ ಮುಕ್ತಿಗೊಳಿಸಲಾಗಿದೆ. ಎಲ್ಲಾ ರೋಗಿಗಳಿಗೆ ಉಚಿತ ಪೂರಕ ಔಷಧಿಗಳು, ಲೆಪ್ರ ರಿಯಾಕ್ಷನ್ ಚಿಕಿತ್ಸೆಗಳು, ಅಲ್ಸರ್ ಕಿಟ್– 90, 346–ಎಂ.ಸಿ.ಆರ್ ಪಾದರಕ್ಷೆಗಳು, 15 ಆರ್ ಸಿ ಎಸ್ ಚಿಕಿತ್ಸೆಗೆ ಒಳಪಡಿಸಿ ಸಹಾಯಧನವನ್ನು ವಿತರಿಸಲಾಗಿದೆ. 45 ವೈದ್ಯಾಧಿಕಾರಿಗಳಿಗೆ, 45 ಅರೆವೈದ್ಯಕೀಯ ಸಿಬ್ಬಂಧಿಗಳಿಗೆ, 665 ಆಶಾಗಳಿಗೆ ತರಬೇತಿಯನ್ನು ನೀಡಲಾಗಿದೆ ಪಾವಗಡ ತಾಲ್ಲೂಕಿನಲ್ಲಿ ಎನ್ ಜಿ ಒ ಆಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಜಪಾನಂದ ಸ್ವಾಮಿ ಇವರ ಸಂಯುಕ್ತ ಆಶ್ರಯದಲ್ಲಿ ಅಂಗವಿಕಲ ಹೊಂದಿದ ಕುಷ್ಟರೋಗಗಳಿಗೆ ಆರ್.ಸಿ.ಎಸ್ ಚಿಕಿತ್ಸೆ ಮಾಡಿಸಲಾಗುವುದು

23. ಮಾನಸಿಕ ಆರೋಗ್ಯ ಕಾರ್ಯಕ್ರಮ :

ಉದ್ದೇಶ: ಜಿಲ್ಲೆಯಾದ್ಯಂತ ಮಾನಸಿಕ ಆರೋಗ್ಯ ಕಾರ್ಯಕ್ರಮದಡಿಯಲ್ಲಿ ಮಾನಸಿಕ ರೋಗಿಗಳಿಗೆ ತಪಾಸಣೆ, ಚಿಕಿತ್ಸೆ, ಔಷಧಿ, ದೊರೆಯುವಂತೆ ಮಾಡಲಾಗಿದೆ.

ಸಾಧನೆ: 2020–21ನೇ ಸಾಲಿನಲ್ಲಿ ಜಿಲ್ಲೆಯಲ್ಲಿರುವ ಎಲ್ಲಾ ಆಸ್ಪತ್ರೆಗಳಿಗೆ ಮಾನಸಿಕ ಆರೋಗ್ಯದ ಔಷಧಿಗಳನ್ನು ಸರಬರಾಜು ಮಾಡಲಾಗುತ್ತಿದೆ. ಮನೋಚೈತನ್ಯ ಕಾರ್ಯಕ್ರಮದಡಿಯಲ್ಲಿ ಎಲ್ಲಾ 10 ತಾಲ್ಲೂಕುಗಳಿಗೆ ತಿಂಗಳ ಪ್ರತಿ ವಾರಕೊಮ್ಮೆ ಮಾನಸಿಕ ರೋಗ ತಜ್ಞರನ್ನು ಮತ್ತು ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮದ ಮಾನಸಿಕ ರೋಗ ತಜ್ಞರನ್ನು ಮತ್ತು ತಂಡವನ್ನು ತಪಾಸಣಾ ಶಿಬಿರಗಳನ್ನು ನೆಡೆಸಲು ನಿಯೋಜಿಸಲಾಗಿದೆ. ಹಾಗೂ ವೈದ್ಯಾಧಿಕಾರಿಗಳಿಗೆ ಹಾಗೂ ಆರೋಗ್ಯ ಸಹಾಯಕರಿಗೆ ತರಬೇತಿಯನ್ನು ನೀಡಲಾಗಿದೆ.

1000 ಆಶಾ ಕಾರ್ಯಕರ್ತೆಯರಿಗೆ ಹಾಗೂ 96 ವೈದ್ಯಾಧಿಕಾರಿಗಳಿಗೆ ಮತ್ತು 460 ಪ್ಯಾರಾ ಮೆಡಿಕಲ್ ವರ್ಕರ್‌ಗಳಿಗೆ 350 ಪ್ರೌಢಶಾಲೆ ಶಿಕ್ಷಕರಿಗೆ 80 ಜನಪ್ರತಿನಿಧಿಗಳಿಗೆ, 245 ಮಂದಿ ಪೋಲಿಸ್ ಸಿಬ್ಬಂದಿವರ್ಗವರಿಗೆ. 50 ಜನ ಕೌನ್ಸಿಲರ್‌ಗಳಿಗೆ ಮಾನಸಿಕ ಆರೋಗ್ಯದ ಬಗ್ಗೆ ತರಬೇತಿ ನೀಡಲಾಗಿದೆ. ಮನೋಚೈತನ್ಯದಡಿಯಲ್ಲಿ 26172 ರೋಗಿಗಳಿಗೆ ಚಿಕಿತ್ಸೆ ನೀಡಲಾಗಿದೆ.

ಮಾನಸಧಾರ ಡೇ ಕೇರ್ ಸೆಂಟರ್ ಕಾರ್ಯಕ್ರಮದಡಿಯಲ್ಲಿ ಮಾನಸಿಕ ರೋಗಿಗಳಿಗೆ ಡೇ ಕೇರ್ ಸೆಂಟರ್ ಸೌಲಭ್ಯವನ್ನು ಸರ್ಕಾರೇತರ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಂಡು ತೆರೆಯಲಾಗಿದೆ.

24. ಜನನಿ ಸುರಕ್ಷಾ ಯೋಜನೆ:

ಉದ್ದೇಶ: ತಾಯಿ ಮತ್ತು ಶಿಶು ಮರಣ ಪ್ರಮಾಣವನ್ನು ಕಡಿಮೆಗೊಳಿಸುವುದು. ಎಲ್ಲಾ ಗರ್ಭಿಣಿಯರಿಗೆ ಗುಣಾತ್ಮಕ ವೈದ್ಯಕೀಯ ಸೇವೆಯನ್ನು ನೀಡುವುದು. ಹಿಂದುಳಿದ, ಗುಡ್ಡಗಾಡು ಪ್ರದೇಶದ ಮತ್ತು ಕಠಿಣ ಪ್ರದೇಶಗಳಲ್ಲಿರುವ ಗರ್ಭಿಣಿ ಮಹಿಳೆಯರಿಗೆ ಆದ್ಯತೆ ನೀಡುವುದು. ಕ್ಲಿಷ್ಟಕರ ಹೆರಿಗೆಯ ಸಂದರ್ಭದಲ್ಲಿ ತುರ್ತು ಸಿಜೇರಿಯನ್ ಶಸ್ತ್ರಚಿಕಿತ್ಸೆಗೆ ಅವಕಾಶ.

ವ್ಯವಸ್ಥೆ : ಬಡತನ ರೇಖೆಗಿಂತ ಕೆಳಗಿರುವ, ಬಡತನ ರೇಖೆಗಿಂತ ಮೇಲ್ಪಟ್ಟ ಪ.ಜಾತಿ/ಪ.ಪಂ ವರ್ಗಕ್ಕೆ ಸೇರಿದ ಮೊದಲನೇ ಅಥವಾ ಎರಡನೇ ಜೀವಂತ ಹೆರಿಗೆಯಾಗಿರಬೇಕು ಅಂತಹ ಮಹಿಳಾ ಫಲಾನುಭವಿಗಳನ್ನು ಅರ್ಹತೆ ಆಧಾರದ ಮೇಲೆ ಆಯ್ಕೆ ಮಾಡಲಾಗುವುದು. ಗರ್ಭಿಣಿ ಎಂಬ ಶಂಕೆ ಬಂದ ಕೂಡಲೇ ತಾಯಿ ಕಾರ್ಡ್ ನೀಡಿ, ಜೆ.ಎಸ್.ವೈ. ಮತ್ತು ಮಡಿಲು ವಿತರಣೆಗೆ ಅರ್ಹರನ್ನಾಗಿಸಲಾಗುವುದು. ಸರ್ಕಾರಿ ಆಸ್ಪತ್ರೆಯಲ್ಲಿ ಉಚಿತ ಹೆರಿಗೆ ಸೇವೆ ಮತ್ತು ಜೆ.ಎಸ್.ವೈ. ನೋಂದಾಯಿತ ಸ್ಥಳೀಯ ಸಂಸ್ಥೆ/ ಸಾರ್ವಜನಿಕ ಉದ್ದಿಮೆಗಳ ಆಸ್ಪತ್ರೆಗಳಲ್ಲಿ ಹೆರಿಗೆಯಾದ ಫಲಾನುಭವಿಗಳಿಗೆ ಆಸ್ಪತ್ರೆಯಿಂದ ಬಿಡುಗಡೆಯಾಗುವ ಮೊದಲೇ ಜೆ.ಎಸ್.ವೈ. ಹಣ ವಿತರಿಸುವುದು.

ಸಾಧನೆ: ತುಮಕೂರು ಜಿಲ್ಲೆಯಲ್ಲಿ ಒಟ್ಟು 22291 ಅರ್ಹ ಫಲಾನುಭವಿಗಳಿಗೆ ಒಟ್ಟು ರೂ.1,37,07,000/– ಹಣವನ್ನು ಜನನಿ ಸುರಕ್ಷಾ ಯೋಜನೆಗೆ ವಿತರಿಸಲಾಗಿರುತ್ತದೆ.

25. ಇ–ಆಸ್ಪತ್ರೆಗಳು–

ಉದ್ದೇಶ:–ಸಾರ್ವಜನಿಕ ಆಸ್ಪತ್ರೆಗಳನ್ನು ಡಿಜಿಟಲೀಕರಣಗೊಳಿಸಲು (ಪೇಪರ್‌ಲೆಸ್ ಆಸ್ಪತ್ರೆ) 2017ರಂದು ಜಿಲ್ಲಾ ಆಸ್ಪತ್ರೆ, ಮತ್ತು ಸಾರ್ವಜನಿಕ ಆಸ್ಪತ್ರೆ ಶಿರಾ ಇಲ್ಲಿ ಪ್ರಾರಂಭಿಸಲಾಗಿದ್ದು, ನಂತರ ಇನ್ನುಳಿದ ಎಂಟು ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಗಳಲ್ಲಿ 2020ರಲ್ಲಿ ಪ್ರಾರಂಭಿಸಲಾಯಿತು.

ಸಾಧನೆ:

1) **ಪೇಸ್–1,** ಅಡಿಯಲ್ಲಿ ಶಿರಾ ಸಾರ್ವಜನಿಕ ಆಸ್ಪತ್ರೆ ಹಾಗೂ ತುಮಕೂರು ಜಿಲ್ಲಾ ಆಸ್ಪತ್ರೆಯಲ್ಲಿನ ವಿವಿಧ ಚಿಕಿತ್ಸಾ ವಿಭಾಗಗಳಲ್ಲಿ ಇ–ಆಸ್ಪತ್ರೆ ಡಿಜಿಟಲೀಕರಣಗೊಳಿಸಿದೆ.

2) **ಪೇಸ್–2,** ಅಡಿಯಲ್ಲಿ ಉಳಿಕೆ ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಗಳಲ್ಲಿನ ವಿವಿಧ ಚಿಕಿತ್ಸಾ ವಿಭಾಗಗಳಲ್ಲಿ ಇ–ಆಸ್ಪತ್ರೆ ಡಿಜಿಟಲೀಕರಣಗೊಳಿಸಿದೆ.

26. **ಎಬಿ–ಆರ್ಕೆ ಕಾರ್ಯಕ್ರಮ—**

ಉದ್ದೇಶ:– ಭಾರತ ದೇಶದ ಪ್ರತಿಯೊಬ್ಬ ಪ್ರಜೆಯು ಈ ಯೋಜನೆಯಲ್ಲಿ ಉಚಿತ ಚಿಕಿತ್ಸೆ ಪಡೆಬಹುದಾಗಿರುತ್ತದೆ

ಸಾಧನೆ:–

1) ತುಮಕೂರು ಜಿಲ್ಲೆಯಲ್ಲಿ ಎಬಿ–ಆರ್ಕೆ ಯೋಜನೆಯ ಅಡಿಯಲ್ಲಿ 2020–21ನೇ ಸಾಲಿನಲ್ಲಿ 32867 ಫಲಾನುಭವಿಗಳಿಗೆ ಉಚಿತ ಚಿಕಿತ್ಸೆ ಒದಗಿಸಲಾಗಿದೆ. ಅದರ ವೆಚ್ಚ– ರೂ.4826.64 ಲಕ್ಷಗಳು.

2)2020–21ರಲ್ಲಿ ಜಿಲ್ಲೆಯ ಸರ್ಕಾರಿ,ಖಾಸಗಿ ಆಸ್ಪತ್ರೆಗಳಲ್ಲಿ 3014 ಕೋವಿಡ್–19, ಫಲಾನುಭವಿಗಳಿಗೆ ಚಿಕಿತ್ಸೆ ಒದಗಿಸಲಾಗಿರುತ್ತದೆ. ಅದರ ವೆಚ್ಚದ ಮೊತ್ತ –ರೂ.13.50.44.800/–

27. **ಮಾಹಿತಿ ಶಿಕ್ಷಣ ಸಂಪರ್ಕ (ಸಮೂಹ ಶಿಕ್ಷಣ ಮಾಧ್ಯಮ)**

ಉದ್ದೇಶ: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಾರ್ಯಕ್ರಮಗಳನ್ನು ವಿವಿಧ ಮಾಧ್ಯಮಗಳಾದ ಮುಖಾ ಮುಖಿ ಸಂವಹನ, ಮುದ್ರಣ ಮಾಧ್ಯಮ ಹಾಗು ಎಲೆಕ್ಟ್ರಾನಿಕ್ ಮಾಧ್ಯಮಗಳ

ಮುಖಾಂತರ ಸಮುದಾಯಕ್ಕೆ ಅರಿವು ಮೂಡಿಸುವುದು.

2020–21ನೇ ಸಾಲಿನ ಮಾಹಿತಿ ಶಿಕ್ಷಣ ಸಂಪರ್ಕ ಕಾರ್ಯಕ್ರಮಗಳ ಕ್ರಿಯಾ ಯೋಜನೆಯಂತೆ ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಲಾಗಿದೆ.

1) ಗ್ರಾಮ ಪಂಚಾಯ್ತಿ ಸದಸ್ಯರಿಗೆ ಆರೋಗ್ಯ ಕಾರ್ಯಕ್ರಮಗಳ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮ.
2) ಸ್ತ್ರೀ ಶಕ್ತಿ ಗುಂಪಿನ ಸದಸ್ಯರಿಗೆ ಆರೋಗ್ಯ ಕಾರ್ಯಕ್ರಮಗಳ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮ.
3) ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಆರೋಗ್ಯ ಯೋಜನೆಗಳ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮ.
4) ಆರೋಗ್ಯವಂತ ಶಿಶು ಪ್ರದರ್ಶನ ಕಾರ್ಯಕ್ರಮ.
5) ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಅಸಾಂಕ್ರಾಮಿಕ ರೋಗಗಳ ಬಗ್ಗೆ ಪ್ರಬಂಧ ಸ್ಪರ್ಧೆ.
6) ಪದವಿ ಕಾಲೇಜು ವಿದ್ಯಾರ್ಥಿಗಳಿಗೆ ಹದಿಹರೆಯದವರ ಆರೋಗ್ಯ ಸಮಸ್ಯೆಗಳ ಬಗ್ಗೆ ಭಾಷಣ ಸ್ಪರ್ಧೆ.
7) ಹಿಂದುಳಿದ ಹಳ್ಳಿಗಳಲ್ಲಿ ಹಾಗು ಆರೋಗ್ಯ ಕಾರ್ಯಕ್ರಮದಲ್ಲಿ ಪ್ರಗತಿ ಕಡಿಮೆಯಿರುವ ಗ್ರಾಮಗಳಲ್ಲಿ ಜಾನಪದ, ಬೀದಿನಾಟಕ ಕಾರ್ಯಕ್ರಮದ ಮೂಲದ ಅರಿವು ಮೂಡಿಸುವುದು.
8) ಕಾಂಗರೂ ಮದರ್ ಕೇರ್ ಹಾಗು ಸುರಕ್ಷಿತ ಗರ್ಭಪಾತದ ಬಗ್ಗೆ ಸಾರ್ವಜನಿಕವಾಗಿ ವೀಕ್ಷಿಸುವ ಸ್ಥಳಗಳಲ್ಲಿ ಬಹುವರ್ಣದ ಗೋಡೆ ಬರಹ.
9) ಸ್ಥಳೀಯ ಪತ್ರಿಕೆಗಳಲ್ಲಿನ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯ ಆರೋಗ್ಯ ಕಾರ್ಯಕ್ರಮಗಳ ಜಾಹೀರಾತು ನೀಡಲಾಯಿತು.
10) ವರ್ಷವಿಡೀ ನಡೆಯುವ ಆರೋಗ್ಯ ದಿನ, ಸಪ್ತಾಹ ಹಾಗು ಪಾಕ್ಷಿಕ ಕಾರ್ಯಕ್ರಮಗಳ ಅನುಷ್ಠಾನ.
11) ಶ್ರೀ ಸಿದ್ದಗಂಗಾ ಮಠದಲ್ಲಿ ನಡೆಯುವ ಜಾತ್ರೆ ಹಾಗು ಪಟ್ಟನಾಯಕನಹಳ್ಳಿಯಲ್ಲಿ ನಡೆಯುವ ಗುರುಗುಂಡ ಬ್ರಹ್ಮೇಶ್ವರ ಸ್ವಾಮಿ ಜಾತ್ರೆಯಲ್ಲಿ ಬೃಹತ್ ವಸ್ತು ಪ್ರದರ್ಶನ ಏರ್ಪಡಿಸಿ 15 ದಿನಗಳ ಕಾಲ ಸಾರ್ವಜನಿಕರಿಗೆ ಆರೋಗ್ಯ ಕಾರ್ಯಕ್ರಮಗಳ ಬಗ್ಗೆ ಆರೋಗ್ಯ ಶಿಕ್ಷಣ ನೀಡಲಾಯಿತು. ಹಾಗು ಗುರುಗುಂಡ ಬ್ರಹ್ಮೇಶ್ವರ ಸ್ವಾಮಿ ಜಾತ್ರೆಯಲ್ಲಿ ಗರ್ಭಿಣಿಯರ ಸೀಮಂತ ಕಾರ್ಯಕ್ರಮ ನಡೆಸಲಾಯಿತು.
12) ಲೋಕಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬೃಹತ್ ಆರೋಗ್ಯಮೇಳ ವಸ್ತುಪ್ರದರ್ಶನ ಆರೋಗ್ಯ ತಪಾಸಣಾ ಶಿಬಿರ ನಡೆಸಲಾಯಿತು.
13) ಕೋವಿಡ್–19ರ ಮುಂಜಾಗ್ರತಾ ಕ್ರಮವಾಗಿ ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯತಿ, ಎಲ್ಲಾ ಆರೋಗ್ಯ ಕೇಂದ್ರಗಳಲ್ಲಿ ಸಾರ್ವಜನಿಕರಿಗೆ ಅರಿವು ಮುಡಿಸುವ ಸಲುವಾಗಿ ಕರಪತ್ರಗಳನ್ನು ಹಂಚಲಾಗಿದ್ದು , ಪೋಸ್ಟರ್‌ಗಳನ್ನು ಅಂಟಿಸಲಾಗಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಕಟ್ಟಡಗಳು

1. ಜಿಲ್ಲಾ ಆರೋಗ್ಯ ಕಛೇರಿಯ ಕಟ್ಟಡಗಳ ನಿರ್ವಹಣೆ :

2020–21ನೇ ಸಾಲಿನಲ್ಲಿ ಲೆಕ್ಕಶಿರ್ಷಿಕೆ: 4210–02–102–1–39 ರ ಅಡಿಯಲ್ಲಿ ರೂ 36.00ಲಕ್ಷಗಳನ್ನು ಲಿಂಕ್ ಡಾಕ್ಯೂಮೆಂಟ್ ನಿಗಧಿ ಪಡಿಸಲಾಗಿದೆ. ಈ ಸಂಬಂಧ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ ಸಂಕೀರ್ಣ ಕಟ್ಟಡದಲ್ಲಿ ಕಟ್ಟಡ ಅಭಿವೃದ್ದಿ ಮುಂದುವರೆದ ಕಾಮಗಾರಿ ಅನುಮೋದನೆ ಆಗಿದ್ದು, ನಿರ್ಮಿತಿ ಕೇಂದ್ರ, ತುಮಕೂರು ಇವರಿಗೆ ಕಾಮಗಾರಿ ವಹಿಸಲಾಗಿರುತ್ತದೆ.

2. ಆರೋಗ್ಯ ಇಲಾಖೆಯ ಕಟ್ಟಡಗಳ ನಿರ್ವಹಣೆ :

2020–21ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ: 2210–01–102–0–36ರ ಅಡಿಯಲ್ಲಿ ರೂ.122.00ಲಕ್ಷಗಳನ್ನು ಲಿಂಕ್ ಡಾಕ್ಯೂಮೆಂಟ್‌ನಲ್ಲಿ ನಿಗಧಿಪಡಿಸಲಾಗಿದೆ ಈ ಸಂಬಂಧ 10 ತಾಲ್ಲೂಕಿಗೆ ಒಟ್ಟು 43 ದುರಸ್ತಿ ಕಾಮಗಾರಿ ಗಳನ್ನು 2020–21ನೇ ಸಾಲಿನಲ್ಲಿ ನಿರ್ವಹಿಸಲಾಗಿದೆ.

ಆರೋಗ್ಯ ಇಲಾಖೆಯ ಸಿಬ್ಬಂದಿ ವಿವರ

ಗುಂಪು	ಮಂಜೂರಾದ ಹುದ್ದೆಗಳ ಸಂಖ್ಯೆ	ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳ ಸಂಖ್ಯೆ	ಖಾಲಿ ಹುದ್ದೆಗಳ ಸಂಖ್ಯೆ
ಗುಂಪು–ಎ	323	272	51
ಗುಂಪು–ಬಿ	16	15	1
ಗುಂಪು–ಸಿ	2020	1296	724
ಗುಂಪು–ಡಿ	714	217	497
ಒಟ್ಟು	**3073**	**1800**	**1273**

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ತುಮಕೂರು

2020–21ನೇ ಸಾಲಿನ ಜಿಲ್ಲಾ ಆಯುಷ್ ಇಲಾಖೆಯ ಆಡಳಿತ ವರದಿ

ಪೀಠಿಕೆ:–

ಆಯುಷ್ ಇಲಾಖೆಯು ಸಾರ್ವಜನಿಕರಿಗೆ ವೈದ್ಯಕೀಯ ಶಿಕ್ಷಣ ಮತ್ತು ಆರೋಗ್ಯ ಸೇವೆಯನ್ನು ಒದಗಿಸುತ್ತಿದೆ. ಜಿಲ್ಲಾ ಮಟ್ಟದ ಆಯುಷ್ ಇಲಾಖೆಯು ಜಿಲ್ಲಾ ಆಯುಷ್ ಅಧಿಕಾರಿಗಳ ನೇತೃತ್ವ ಹಾಗೂ ಪರಿವೀಕ್ಷಣೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಇವರು ಜಿಲ್ಲಾ ಮಟ್ಟದ ಇಲಾಖಾ ಮುಖ್ಯಸ್ಥರಾಗಿರುತ್ತಾರೆ. ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಆಯುಷ್ ಆಸ್ಪತ್ರೆ ಹಾಗೂ ಚಿಕಿತ್ಸಾಲಯಗಳ ಆಡಳಿತಾತ್ಮಕ ನಿಯಂತ್ರಣ ಹೊಂದಿರುತ್ತಾರೆ.

ತುಮಕೂರು ಜಿಲ್ಲೆಯಲ್ಲಿ ಆಯುಷ್ ಪದ್ಧತಿಗಳ ನಿರ್ವಹಣೆ, ಅಭಿವೃದ್ಧಿ ಹಾಗೂ ಆಡಳಿತಾತ್ಮಕ ಮೇಲ್ವಿಚಾರಣೆಗಳ ಉದ್ದೇಶಕ್ಕಾಗಿ 2005–06 ರಿಂದ ಪ್ರತ್ಯೇಕ ಜಿಲ್ಲಾ ಮಟ್ಟದ ಆಯುಷ್ ಕಛೇರಿಯನ್ನು ಸರ್ಕಾರವು ಪ್ರಾರಂಭಿಸಿದ್ದು, ಅದು 2006–07ರಿಂದ ಕಾರ್ಯಾರಂಭಗೊಂಡಿದೆ.

ಆಯುಷ್ ಇಲಾಖೆಯ ಗುರಿ ಮತ್ತು ಉದ್ದೇಶಗಳು:–

1. ಜನಸಾಮಾನ್ಯರಲ್ಲಿ ಆಯುಷ್ ಪದ್ದತಿಯಲ್ಲಿನ ವಿಶೇಷ ಚಿಕಿತ್ಸೆಗಳ ಬಗ್ಗೆ ಅರಿವು ಮೂಡಿಸುವುದು.
2. ರೋಗಗಳು ಬಾರದಂತೆ ಆರೋಗ್ಯ ಕಾಪಾಡಿಕೊಳ್ಳುವ ಬಗ್ಗೆ (Preventive, Curative and Promotive Health Care) ಆಯುಷ್ ಆರೋಗ್ಯ ಶಿಕ್ಷಣ ನೀಡುವುದು.
3. ಆಯುಷ್ ವೈದ್ಯರಿಗೆ Updates latest Knowledge ಕೊಡುವುದು.
4. ದೀರ್ಘಕಾಲದ ಕಾಯಿಲೆಗಳಿಗೆ ಪಂಚಕರ್ಮ ಚಿಕಿತ್ಸೆ ಪ್ರಾರಂಭಿಸುವುದು.
5. ಹಿರಿಯ ನಾಗರಿಕರಿಗೆ ಪ್ರತ್ಯೇಕ ಚಿಕಿತ್ಸಾ ವ್ಯವಸ್ಥೆ ಕಲ್ಪಿಸುವುದು.
6. ಆಯುಷ್ ಪದ್ದತಿಗಳಿಂದ ರೋಗಿಗಳಲ್ಲಿ ರೋಗನಿರೋಧಕ ಶಕ್ತಿ ಹೆಚ್ಚಿಸುವ ಗುರಿ ಹೊಂದಿದೆ.
7. ಋತುವಿಗೆ ಅನುಗುಣವಾಗಿ ರೋಗಿಗಳಿಗೆ ಚಿಕಿತ್ಸೆ ಕಲ್ಪಿಸುವುದು.
8. ಆಯುಷ್ ಆರೋಗ್ಯ ಶಿಬಿರ, ಮನೆಮದ್ದು ಕಾರ್ಯಕ್ರಮ, ಆಯುಷ್ ಸೇವಾ ಗ್ರಾಮ, ಔಷಧ ಸಸ್ಯವನಗಳ ಅಭಿವೃದ್ಧಿ, ಕಾರ್ಯಾಗಾರಗಳಂತಹ ಜನಪ್ರಿಯ ಕಾರ್ಯಕ್ರಮಗಳನ್ನು ಆಯೋಜಿಸಿ ಜನ ಸಾಮಾನ್ಯರಲ್ಲಿ ಆಯುಷ್ ಪದ್ದತಿಗಳ ಬಗ್ಗೆ ಅರಿವು ಮೂಡಿಸುವುದು.

9. ರಸಾಯನ ಮತ್ತು ವಾಜಿಕರಣ ಚಿಕಿತ್ಸಾ ಪದ್ದತಿಯನ್ನು ಬಳಸಿಕೊಂಡು ರೋಗಿಗಳನ್ನು ಶಾರೀರಿಕವಾಗಿ, ಮಾನಸಿಕವಾಗಿ ಹಾಗೂ ಬೌದ್ಧಿಕವಾಗಿ ಸದೃಢಗೊಳಿಸುವುದು.

10. ಆಯುಷ್ ಸೇವೆಯನ್ನು ಉತ್ತಮಗೊಳಿಸಲು ಬೇಕಾದ ಆಡಳಿತಾತ್ಮಕ, ವ್ಯವಸ್ಥಾಪಕ ಮತ್ತು ತಾಂತ್ರಿಕ ವಿಷಯಗಳ ಬಗ್ಗೆ ಕಾರ್ಯಕ್ರಮ ಹಮ್ಮಿಕೊಳ್ಳುವುದು.

ವಿವಿಧ ವೃಂದಗಳಲ್ಲಿರುವ ಜಿಲ್ಲಾ ಮಟ್ಟದ ಆಯುಷ್ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿಗಳ ಅಂಕಿಅಂಶ ಈ ಕೆಳಗಿನಂತಿದೆ:–

ವೃಂದ	ಮಂಜೂರಾದ ಹುದ್ದೆಗಳ ಸಂಖ್ಯೆ	ಭರ್ತಿಯಾದ ಹುದ್ದೆಗಳ ಸಂಖ್ಯೆ	ಖಾಲಿ ಇರುವ ಹುದ್ದೆಗಳ ಸಂಖ್ಯೆ
ಸಮೂಹ–ಎ	36	23	13
ಸಮೂಹ–ಬಿ	01	01	0
ಸಮೂಹ–ಸಿ	28	07	21
ಸಮೂಹ–ಡಿ	43	06	37
ಒಟ್ಟು	**108**	**37**	**71**

ಆರೋಗ್ಯ ವಲಯ:–

ಜಿಲ್ಲಾ ಪಂಚಾಯತ್‌ಗಳ ಅಡಿ ಕಾರ್ಯನಿರ್ವಹಿಸುತ್ತಿರುವ ಆಯುಷ್ ಆಸ್ಪತ್ರೆಗಳು ಮತ್ತು ಚಿಕಿತ್ಸಾಲಯಗಳ ದೈನಂದಿನ ಆಡಳಿತ ನಿರ್ವಹಣೆಯು ಸಂಬಂಧಪಟ್ಟ ವೈದ್ಯಾಧಿಕಾರಿಗಳ ಜವಾಬ್ದಾರಿಯಾಗಿರುತ್ತದೆ. ಈ ಆಸ್ಪತ್ರೆಗಳು ಮತ್ತು ಚಿಕಿತ್ಸಾಲಯಗಳು ಆಯುಷ್ ವೈದ್ಯಕೀಯ ಸೇವೆ ಒದಗಿಸುವ ಪ್ರಮುಖ ಕೇಂದ್ರಗಳಾಗಿರುತ್ತವೆ.

ದಿನಾಂಕ: 31–03–2021 ರಲ್ಲಿದ್ದಂತೆ ತುಮಕೂರು ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಆಯುಷ್ ಆಸ್ಪತ್ರೆಗಳು, ಹಾಸಿಗೆಗಳ ಸಂಖ್ಯೆ ಮತ್ತು ಚಿಕಿತ್ಸಾಲಯಗಳ ಅಂಕಿಅಂಶಗಳು ಈ ಕೆಳಕಂಡಂತಿದೆ.

ಕ್ರ.ಸಂ	ಪದ್ಧತಿಗಳು	ಸರ್ಕಾರಿ ಆಸ್ಪತ್ರೆಗಳು		ಚಿಕಿತ್ಸಾಲಯಗಳ ಸಂಖ್ಯೆ
		ಆಸ್ಪತ್ರೆಗಳ ಸಂಖ್ಯೆ	ಹಾಸಿಗೆಗಳ ಸಂಖ್ಯೆ	
01	ಆಯುರ್ವೇದ	05	47	25
02	ಯುನಾನಿ	01	10	01
03	ಹೋಮಿಯೋಪತಿ	–	–	01
04	ಪ್ರಕೃತಿ ಚಿಕಿತ್ಸೆ	–	–	01
ಒಟ್ಟು		**06**	**57**	**28**

ತುಮಕೂರಿನ ಆಯುಷ್ ಇಲಾಖೆಯ ಚಿಕಿತ್ಸಾಲಯಗಳ ತಾಲ್ಲೂಕುವಾರು ಅಂಕಿಅಂಶಗಳ ವಿವರ : 31–03–2021

ರಲ್ಲಿದ್ದಂತೆ						
ಕ್ರ ಸಂ.	ಜಿಲ್ಲೆ	ಚಿಕಿತ್ಸಾಲಯಗಳು				ಒಟ್ಟು
		ಆಯುರ್ವೇದ	ಯುನಾನಿ	ಹೋಮಿಯೋಪತಿ	ಪ್ರಕೃತಿ ಚಿಕಿತ್ಸೆ ಮತ್ತು ಯೋಗ	
1	ತುಮಕೂರು	03	–	–	–	03
2	ಗುಬ್ಬಿ	04	–	–	–	04
3	ಶಿರಾ	03	01	–	–	04
4	ಕೊರಟಗೆರೆ	01	–	–	01	02
5	ತುರುವೇಕೆರೆ	02	–	–	–	02
6	ಕುಣಿಗಲ್	01	–	–	–	01
7	ತಿಪಟೂರು	05	–	–	–	05
8	ಚಿಕ್ಕನಾಯಕನಹಳ್ಳಿ	01	–	–	–	01
9	ಮಧುಗಿರಿ	03	–	01	–	04
10	ಪಾವಗಡ	02	–	–	–	02
ಒಟ್ಟು		**25**	**01**	**01**	**01**	**28**

ತುಮಕೂರಿನ ಆಯುಷ್ ಇಲಾಖೆಯ ಆಸ್ಪತ್ರೆಗಳ ತಾಲ್ಲೂಕುವಾರು ಅಂಕಿಅಂಶಗಳ ವಿವರ : 31–03–2021 ರಲ್ಲಿದ್ದಂತೆ						
ಕ್ರ ಸಂ	ಜಿಲ್ಲೆ	ಆಸ್ಪತ್ರೆಗಳು				ಒಟ್ಟು
		ಆಯುರ್ವೇದ	ಯುನಾನಿ	ಹೋಮಿಯೋಪತಿ	ಪ್ರಕೃತಿ ಚಿಕಿತ್ಸೆ ಮತ್ತು ಯೋಗ	
1	ತುಮಕೂರು	01	01	–	–	02
2	ಗುಬ್ಬಿ	01	–	–	–	01
3	ಶಿರಾ	–	–	–	–	–
4	ಕೊರಟಗೆರೆ	–	–	–	–	–
5	ತುರುವೇಕೆರೆ	–	–	–	–	–
6	ಕುಣಿಗಲ್	–	–	–	–	–
7	ತಿಪಟೂರು	01	–	–	–	01
8	ಚಿಕ್ಕನಾಯಕನಹಳ್ಳಿ	01	–	–	–	01
9	ಮಧುಗಿರಿ	01	–	–	–	01
10	ಪಾವಗಡ	–	–	–	–	–
ಒಟ್ಟು		**05**	**01**	–	–	**06**

2020–21 ನೇ ಸಾಲಿನ ಆಯುಷ್ ಇಲಾಖೆಯ ಜಿಲ್ಲಾ ಮಟ್ಟದ ಸಾಧನೆಗಳು:–

1. 2020–21ನೇ ಸಾಲಿನಲ್ಲಿ ಜಿಲ್ಲೆಯಾದ್ಯಂತ ಸುಮಾರು **3,36,847** ರೋಗಿಗಳು ಆಯುಷ್ ವೈದ್ಯಪದ್ಧತಿಯಲ್ಲಿ ಚಿಕಿತ್ಸೆ ಪಡೆದಿರುತ್ತಾರೆ.

2. 2020–21ನೇ ಸಾಲಿನಲ್ಲಿ ಜಿಲ್ಲೆಯಾದ್ಯಂತ ಸಮಾಜ ಕಲ್ಯಾಣ ಇಲಾಖೆಯ ಸಹಯೋಗದೊಂದಿಗೆ ಪರಿಶಿಷ್ಟ ಜಾತಿ ಮತ್ತು ಪಂಗಡದ ವಿದ್ಯಾರ್ಥಿನಿಲಯಗಳ ಮೇಲ್ವಿಚಾರಕರಿಗೆ ಮಕ್ಕಳ ಆರೋಗ್ಯದ ಹಿತದೃಷ್ಟಿಯಿಂದ ಆಹಾರ ಪದ್ದತಿಯಲ್ಲಿ ಪೂರಕ ಪೌಷ್ಟಿಕ ಆಹಾರಗಳ ಅಳವಡಿಕೆಯ ಬಗ್ಗೆ ಆನ್‌ಲೈನ್ ತರಬೇತಿ ಕಾರ್ಯಕ್ರಮಗಳನ್ನು ನಡೆಸಲಾಗಿದೆ.

3. ರಾಷ್ಟ್ರೀಯ ಆಯುಷ್ ಅಭಿಯಾನ ಯೋಜನೆಯಡಿ ಜಿಲ್ಲೆಯ ಆಯುರ್ವೇದ ಕ್ಷೇಮ ಕೇಂದ್ರಗಳ ಆಯ್ದ 04 ಗ್ರಾಮಗಳಲ್ಲಿ **"ಆಯುಷ್ ಸೇವಾ ಗ್ರಾಮ"** ಎಂಬ ವಿಶೇಷ ಕಾರ್ಯಕ್ರಮದಡಿ ಜನಸಾಮಾನ್ಯರ ಆರೋಗ್ಯ ರಕ್ಷಣೆ, ಜೀವನ ಶೈಲಿ, ನೈರ್ಮಲ್ಯ, ಆರೋಗ್ಯ ಶಿಕ್ಷಣ, ಗಿಡಮೂಲಿಕೆಗಳ ಅಭಿವೃದ್ಧಿಯ ಬಗ್ಗೆ ವಿವಿಧ ತಾಲ್ಲೂಕುಗಳ ಗ್ರಾಮಾಂತರ ಪ್ರದೇಶಗಳಲ್ಲಿ ಜನಸಾಮಾನ್ಯರಿಗೆ ಅರಿವು ಮೂಡಿಸಲಾಗಿದೆ.

4. ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರಿಗೆ ಆಯುಷ್ ಪೌಷ್ಟಿಕ ಆಹಾರ ಹಾಗೂ ಸಾಂಕ್ರಾಮಿಕವಲ್ಲದ ರೋಗಗಳ ಬಗ್ಗೆ ಅರಿವು ಮೂಡಿಸುವ ತರಬೇತಿ ನೀಡಲಾಗಿದೆ.

5. ಆಯುರ್ವೇದ ಕ್ಷೇಮ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ವೈದ್ಯಾಧಿಕಾರಿಗಳು Prakruthi Parikshan, Population enumeration ಮತ್ತು CBAC Survey ಯನ್ನು ಪ್ರಾರಂಭಿಸಿ, ಆಯುರ್ವೇದ ಕ್ಷೇಮ ಕೇಂದ್ರಗಳ (HWCs) ವ್ಯಾಪ್ತಿಯ ಆಶಾ ಕಾರ್ಯಕರ್ತೆ/ಸ್ವಯಂ ಸೇವಕರಿಗೆ ತರಬೇತಿ ನೀಡಲಾಗಿದೆ.

6. ಜಿಲ್ಲೆಯಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಆಯುಷ್ ಆಸ್ಪತ್ರೆಗಳು, ಚಿಕಿತ್ಸಾಲಯಗಳನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಮೂಲಭೂತ ಸೌಕರ್ಯಗಳೊಂದಿಗೆ ಬಲಪಡಿಸಿ, ಶಿಕ್ಷಣ, ಮಾಹಿತಿ, ಪ್ರಚಾರ & ಸಂವಹನದ ಮೂಲಕ ಆಯುಷ್ ಪದ್ಧತಿಗಳ ಜಾಗೃತಿ ಮೂಡಿಸಿ, ಸಾರ್ವಜನಿಕರಿಗೆ ಉತ್ತಮ ಆರೋಗ್ಯ ಸೇವೆ ಒದಗಿಸಲಾಗಿದೆ.

7. ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಮತ್ತು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಹಯೋಗದೊಂದಿಗೆ ಕೋವಿಡ್–19 ಮಹಾಮಾರಿ ಸಾಂಕ್ರಾಮಿಕ ರೋಗವನ್ನು ತಡೆಗಟ್ಟುವ ಸಲುವಾಗಿ, ರೋಗ ನಿರೋಧಕ ಶಕ್ತಿ ಹೆಚ್ಚಿಸುವ ಯೋಜನೆಯನ್ನು ರೂಪಿಸಲಾಯಿತು. ಈ ಯೋಜನೆಗಳನ್ನು ಮನೆಮದ್ದು, ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಆಯುಷ್ ವೈದ್ಯಾಧಿಕಾರಿಗಳನ್ನು ಟಾಸ್ಕ್ ಫೋರ್ಸ್‌ನಲ್ಲಿ ಸಭೆಗಳನ್ನು ನಡೆಸಲು ತಿಳಿಸಲಾಯಿತು. ಜನರಲ್ಲಿ ಧನಾತ್ಮಕ ಆರೋಗ್ಯ ಕಾಪಾಡಿಕೊಳ್ಳಲು ಔಷಧಿ, ಆಹಾರ ಯೋಗ, ವ್ಯಾಯಾಮಗಳ ಬಗ್ಗೆ ತಿಳುವಳಿಕೆ ಮೂಡಿಸುವುದು.

8. ಜಿಲ್ಲೆಯಾದ್ಯಂತ ಕಾರ್ಯನಿರ್ವಹಿಸುತ್ತಿರುವ ಆಯುಷ್ ಇಲಾಖೆಯ ವೈದ್ಯಾಧಿಕಾರಿಗಳನ್ನು ಜಿಲ್ಲಾಡಳಿತದಿಂದ ತೆರೆಯಲಾದ ಫೀವರ್ ಕ್ಲಿನಿಕ್ ನಲ್ಲಿ ಕಾರ್ಯನಿರ್ವಹಿಸಿ, ಕೋವಿಡ್–19 ಮಹಾಮಾರಿ ನಿಯಂತ್ರಿಸಲು ಸಹಕರಿಸಲಾಯಿತು.

9. ಸಾರ್ವಜನಿಕರಿಗೆ ನಿರ್ದೇಶನಾಲಯದಿಂದ ಪೂರೈಸಲಾದ ಆಯುಷ್ ಕಿಟ್‌ಗಳನ್ನು ಪೂರೈಸಿ, ಸಾರ್ವಜನಿಕರ ಆರೋಗ್ಯ ಕಾಪಾಡಲು ಕ್ರಮವಹಿಸಲಾಯಿತು.

<u>ತಾಲ್ಲೂಕುವಾರು ಆಯುಷ್ ಚಿಕಿತ್ಸಾಲಯ ಮತ್ತು ಆಸ್ಪತ್ರೆಗಳ ಸಂಕ್ಷಿಪ್ತ ವಿವರ:–</u>

<table>
<tr><td>ಆಸ್ಪತ್ರೆಗಳು 05 ಸಂಖ್ಯೆ</td><td colspan="2">1. 25 ಹಾಸಿಗೆಗಳ 1 ಜಿಲ್ಲಾ ಆಸ್ಪತ್ರೆ (15 ಆಯುರ್ವೇದ + 10 ಯುನಾನಿ), ತುಮಕೂರು ಜಿಲ್ಲೆ.
2. 10 ಹಾಸಿಗೆಗಳ 1 ತಿಪಟೂರು ಆಸ್ಪತ್ರೆ
3. 6 ಹಾಸಿಗೆಗಳ 2 ಆಸ್ಪತ್ರೆಗಳು (1. ಚಿಕ್ಕನಾಯಕನಹಳ್ಳಿ 2. ಮಂಚಲದೊರೆ, ಗುಬ್ಬಿ ತಾ.)
4. 10 ಹಾಸಿಗೆಗಳ 1 ಮಧುಗಿರಿ ಆಸ್ಪತ್ರೆ</td></tr>
<tr><td rowspan="2">ಚಿಕಿತ್ಸಾಲಯಗಳು 28 ಸಂಖ್ಯೆ

25 ಆಯುರ್ವೇದ ಚಿಕಿತ್ಸಾಲಯ
1 ಯುನಾನಿ ಚಿಕಿತ್ಸಾಲಯ
1 ಹೋಮಿಯೋಪತಿ ಚಿಕಿತ್ಸಾಲಯ
1 ಪ್ರಕೃತಿ ಚಿಕಿತ್ಸಾಲಯ</td><td>ತುಮಕೂರು ತಾ.</td><td>ಗುಬ್ಬಿ ತಾ.</td></tr>
<tr><td>1. ಸ.ಆಯುರ್ವೇದ ಚಿಕಿತ್ಸಾಲಯ, ಹಿರೇಹಳ್ಳಿ
2. ಸ.ಆಯುರ್ವೇದ ಚಿಕಿತ್ಸಾಲಯ, ಹೊನಸಿಗೆರೆ
3. ಸ.ಆಯುರ್ವೇದ ಚಿಕಿತ್ಸಾಲಯ, ಸೀತಕಲ್ಲು</td><td>1. ಸ.ಆಯುರ್ವೇದ ಚಿಕಿತ್ಸಾಲಯ, ಬಿ.ಕೋಡಿಹಳ್ಳಿ
2. ಸ.ಆಯುರ್ವೇದ ಚಿಕಿತ್ಸಾಲಯ, ಹರದಗೆರೆ
3. ಸ.ಆಯುರ್ವೇದ ಚಿಕಿತ್ಸಾಲಯ, ಬೆಟ್ಟದಹಳ್ಳಿ
4. ಸ.ಆಯುರ್ವೇದ ಚಿಕಿತ್ಸಾಲಯ, ದೊಡ್ಡಗುಣಿ</td></tr>
<tr><td rowspan="6"></td><td>ತುರುವೇಕೆರೆ ತಾ.</td><td>ಚಿಕ್ಕನಾಯಕನಹಳ್ಳಿ ತಾ.</td></tr>
<tr><td>1. ಸ.ಆಯುರ್ವೇದ ಚಿಕಿತ್ಸಾಲಯ, ದಬ್ಬೇಘಟ್ಟ
2. ಸ.ಆಯುರ್ವೇದ ಚಿಕಿತ್ಸಾಲಯ, ಅರೇಮಲ್ಲೇನಹಳ್ಳಿ</td><td>1. ಸ.ಆಯುರ್ವೇದ ಚಿಕಿತ್ಸಾಲಯ, ಹೆಚ್.ಮೇಲನಹಳ್ಳಿ</td></tr>
<tr><td>ಶಿರಾ ತಾ.</td><td>ಮಧುಗಿರಿ ತಾ.</td></tr>
<tr><td>1. ಸ.ಯುನಾನಿ ಚಿಕಿತ್ಸಾಲಯ, ಶಿರಾ
2. ಸ.ಆಯುರ್ವೇದ ಚಿಕಿತ್ಸಾಲಯ, ಶಿರಾ
3. ಸ.ಆಯುರ್ವೇದ ಚಿಕಿತ್ಸಾಲಯ, ಮಾಯಸಂದ್ರ
4. ಸ.ಆಯುರ್ವೇದ ಚಿಕಿತ್ಸಾಲಯ, ಶಿಡ್ಲೇಕೋಣ</td><td>1. ಸ.ಆಯುರ್ವೇದ ಚಿಕಿತ್ಸಾಲಯ, ಗರಣಿ
2. ಸ.ಆಯುರ್ವೇದ ಚಿಕಿತ್ಸಾಲಯ, ಸಜ್ಜೇಹೊಸಹಳ್ಳಿ
3. ಸ.ಆಯುರ್ವೇದ ಚಿಕಿತ್ಸಾಲಯ, ಚಿಕ್ಕದಾಳವಟ್ಟ
4. ಸ.ಹೋಮಿಯೋಪತಿ ಚಿಕಿತ್ಸಾಲಯ, ಕೊಂಡವಾಡಿ</td></tr>
<tr><td>ಪಾವಗಡ ತಾ.</td><td>ಕೊರಟಗೆರೆ ತಾ.</td></tr>
<tr><td>1. ಸ.ಆಯುರ್ವೇದ ಚಿಕಿತ್ಸಾಲಯ,</td><td>1. ಸ.ಆಯುರ್ವೇದ ಚಿಕಿತ್ಸಾಲಯ,</td></tr>
</table>

	ಸಿ.ಕೆ.ಪುರ 2. ಸ.ಆಯುರ್ವೇದ ಚಿಕಿತ್ಸಾಲಯ, ದೊಮ್ಮತಮರಿ	ದುಡ್ಡನಹಳ್ಳಿ 2. ಸ.ಪ್ರಕೃತಿ ಚಿಕಿತ್ಸಾಲಯ, ಸಿದ್ದರಬೆಟ್ಟ
	ಕುಣಿಗಲ್ ತಾ.	**ತಿಪಟೂರು ತಾ.**
	1. ಸ.ಆಯುರ್ವೇದ ಚಿಕಿತ್ಸಾಲಯ, ದೊಡ್ಡಮಧುರೆ	1. ಸ.ಆಯುರ್ವೇದ ಚಿಕಿತ್ಸಾಲಯ, ಕೊನೆಹಳ್ಳಿ 2. ಸ.ಆಯುರ್ವೇದ ಚಿಕಿತ್ಸಾಲಯ, ಗಂಗನಘಟ್ಟ 3. ಸ.ಆಯುರ್ವೇದ ಚಿಕಿತ್ಸಾಲಯ, ಬುರುಡೇಘಟ್ಟ 4. ಸ.ಆಯುರ್ವೇದ ಚಿಕಿತ್ಸಾಲಯ, ಕಂಪಾರಹಳ್ಳಿ 5. ಸ.ಆಯುರ್ವೇದ ಚಿಕಿತ್ಸಾಲಯ, ರಾಮಚಂದ್ರಪುರ

ಮಂಜೂರಾಗಿರುವ ಮತ್ತು ಕರ್ತವ್ಯ ನಿರ್ವಹಿಸುತ್ತಿರುವ ವೈದ್ಯರು ಮತ್ತು ಸಿಬ್ಬಂದಿಗಳ ಅಂಕಿಅಂಶಗಳ ಸಂಕ್ಷಿಪ್ತ ವಿವರ:–

ಕ್ರ.ಸಂ	ಆಸ್ಪತ್ರೆ/ಚಿಕಿತ್ಸಾಲಯಗಳ ಹೆಸರು	ತಾಲ್ಲೂಕು/ ಜಿಲ್ಲೆ	ಹುದ್ದೆಗಳ ವಿವರ				ಹಾಸಿಗೆಗಳ ಸಾಮರ್ಥ್ಯ
			ಹುದ್ದೆಗಳ ಪದನಾಮ	ಮಂಜೂರಾತಿ	ಭರ್ತಿ	ಖಾಲಿ	
1.	ಜಿಲ್ಲಾ ಆಯುವೇದ ಮತ್ತು ಯುನಾನಿ ಸಂಯುಕ್ತ ಆಸ್ಪತ್ರೆ, ತುಮಕೂರು	ತುಮಕೂರು	ಹಿರಿಯ ವೈದ್ಯಾಧಿಕಾರಿಗಳು(ಆಯು)	02	02	00	ಆಯುರ್ವೇದ–15 ಯುನಾನಿ–10
			ವೈದ್ಯಾಧಿಕಾರಿಗಳು (ಯುನಾನಿ)	01	01	00	
			ಶುಶ್ರೂಷಕಾಧಿಕಾರಿಗಳು	03	02	01	
			ಫಾರ್ಮಸಿ ಆಫೀಸರ್	02	02	00	
			ಮಸಾಜಿಸ್ಟ್	01	00	01	
			ಕುಕ್	01	01	0	
			ಗ್ರೂಪ್ ಡಿ	02	01	01	
2.	ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಹಿರೇಹಳ್ಳಿ	ತುಮಕೂರು	ವೈದ್ಯಾಧಿಕಾರಿಗಳು	01	01	0	––
			ಎ.ಎನ್.ಎಂ	01	0	01	
			ಗ್ರೂಪ್ ಡಿ	01	0	01	
3.	ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ,	ತುಮಕೂರು	ವೈದ್ಯಾಧಿಕಾರಿಗಳು	01	01	00	––
			ಗ್ರೂಪ್ ಡಿ	01	00	01	

	ಸೀತಕಲ್ಲು						
4.	ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಹೊನಸಿಗೆರೆ	ತುಮಕೂರು	ವೈದ್ಯಾಧಿಕಾರಿಗಳು	01	01	00	––
			ಗ್ರೂಪ್ ಡಿ	01	00	01	
5.	ಸರ್ಕಾರಿ ಆಯುರ್ವೇದ ಆಸ್ಪತ್ರೆ, ಚಿಕ್ಕನಾಯಕನಹಳ್ಳಿ	ಚಿಕ್ಕನಾಯಕನಹಳ್ಳಿ	ವೈದ್ಯಾಧಿಕಾರಿಗಳು	01	00	01	6 ಹಾಸಿಗೆಗಳು
			ಶುಶ್ರೂಷಕಾಧಿಕಾರಿಗಳು	01	00	01	
			ಫಾರ್ಮಸಿ ಆಫೀಸರ್	01	00	01	
			ಎ.ಎನ್.ಎಂ	01	00	01	
			ಗ್ರೂಪ್ ಡಿ	02	00	02	
6.	ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಹೆಚ್.ಮೇಲನಹಳ್ಳಿ	ಚಿಕ್ಕನಾಯಕನಹಳ್ಳಿ	ವೈದ್ಯಾಧಿಕಾರಿಗಳು	01	01	00	––
			ಗ್ರೂಪ್ ಡಿ	01	00	01	
7.	ಸರ್ಕಾರಿ ಆಯುರ್ವೇದ ಆಸ್ಪತ್ರೆ, ಮಂಚಲದೊರೆ	ಗುಬ್ಬಿ ತಾ	ವೈದ್ಯಾಧಿಕಾರಿಗಳು	01	01	00	6 ಹಾಸಿಗೆಗಳು
			ಶುಶ್ರೂಷಕಾಧಿಕಾರಿಗಳು	01	00	01	
			ಫಾರ್ಮಸಿ ಆಫೀಸರ್	01	00	01	
			ಎ.ಎನ್.ಎಂ	01	00	01	
			ಗ್ರೂಪ್ ಡಿ	04	00	04	
8.	ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ದೊಡ್ಡಗುಣಿ	ಗುಬ್ಬಿ ತಾ.	ವೈದ್ಯಾಧಿಕಾರಿಗಳು	01	00	01	––
			ಎ.ಎನ್.ಎಂ	01	00	01	
			ಗ್ರೂಪ್ ಡಿ	01	01	00	
9.	ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಬಿ.ಕೋಡಿಹಳ್ಳಿ	ಗುಬ್ಬಿ ತಾ.	ವೈದ್ಯಾಧಿಕಾರಿಗಳು	01	01	00	––
			ಗ್ರೂಪ್ ಡಿ	01	00	01	
10.	ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಬೆಟ್ಟದಹಳ್ಳಿ	ಗುಬ್ಬಿ ತಾ.	ವೈದ್ಯಾಧಿಕಾರಿಗಳು	01	01	00	––
			ಗ್ರೂಪ್ ಡಿ	01	00	01	
11.	ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಹರದಗೆರೆ	ಗುಬ್ಬಿ ತಾ.	ವೈದ್ಯಾಧಿಕಾರಿಗಳು	01	01	00	––
			ಗ್ರೂಪ್ ಡಿ	01	00	01	

12.	ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ದುಡ್ಡನಹಳ್ಳಿ	ಕೊರಟಗೆರೆ ತಾ.	ವೈದ್ಯಾಧಿಕಾರಿಗಳು	01	01	00	––
			ಗ್ರೂಪ್ ಡಿ	01	00	01	
13.	ಸರ್ಕಾರಿ ಪ್ರಕೃತಿ ಚಿಕಿತ್ಸಾಲಯ, ಸಿದ್ಧರಬೆಟ್ಟ	ಕೊರಟಗೆರೆ ತಾ.	ವೈದ್ಯಾಧಿಕಾರಿಗಳು	01	01	00	––
			ಗ್ರೂಪ್ ಡಿ	01	00	01	
14.	ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ದೊಡ್ಡಮಧುರೆ	ಕುಣಿಗಲ್ ತಾ.	ವೈದ್ಯಾಧಿಕಾರಿಗಳು	01	01	00	––
			ಎ.ಎನ್.ಎಂ	01	00	01	
			ಗ್ರೂಪ್ ಡಿ	01	00	01	
15.	ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ದಬ್ಬೇಘಟ್ಟ	ತುರುವೇಕೆರೆ ತಾ.	ವೈದ್ಯಾಧಿಕಾರಿಗಳು	01	01	00	––
			ಗ್ರೂಪ್ ಡಿ	01	01	00	
16.	ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಅರೆಮಲ್ಲೇನಹಳ್ಳಿ	ತುರುವೇಕೆರೆ ತಾ.	ವೈದ್ಯಾಧಿಕಾರಿಗಳು	01	00	01	––
			ಗ್ರೂಪ್ ಡಿ	01	00	01	
17.	ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಚಿಕ್ಕದಳವಟ್ಟ	ಮಧುಗಿರಿ ತಾ.	ವೈದ್ಯಾಧಿಕಾರಿಗಳು	01	00	01	––
			ಗ್ರೂಪ್ ಡಿ	01	00	01	
18.	ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಸಜ್ಜೆಹೊಸಹಳ್ಳಿ	ಮಧುಗಿರಿ ತಾ.	ವೈದ್ಯಾಧಿಕಾರಿಗಳು	01	00	01	––
			ಗ್ರೂಪ್ ಡಿ	01	00	01	
19.	ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಗರಣಿ	ಮಧುಗಿರಿ ತಾ.	ವೈದ್ಯಾಧಿಕಾರಿಗಳು	01	01	00	––
			ಗ್ರೂಪ್ ಡಿ	01	00	01	
20.	ಸರ್ಕಾರಿ ಹೋಮಿಯೋಪತಿ ಚಿಕಿತ್ಸಾಲಯ, ಕೊಂಡವಾಡಿ	ಮಧುಗಿರಿ ತಾ.	ವೈದ್ಯಾಧಿಕಾರಿಗಳು	01	00	01	––
			ಫಾರ್ಮಸಿ ಆಫೀಸರ್	01	00	01	
			ಎ.ಎನ್.ಎಂ	01	00	01	

			ಗ್ರೂಪ್ ಡಿ	01	00	01	
21.	ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ದೊಮ್ಮತಮರಿ	ಪಾವಗಡ ತಾ.	ವೈದ್ಯಾಧಿಕಾರಿಗಳು	01	00	01	––
			ಗ್ರೂಪ್ ಡಿ	01	00	01	
22.	ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಚೆನ್ನಕೇಶವಪುರ	ಪಾವಗಡ ತಾ.	ವೈದ್ಯಾಧಿಕಾರಿಗಳು	01	00	01	––
			ಗ್ರೂಪ್ ಡಿ	01	00	01	
23.	ಸರ್ಕಾರಿ ಆಯುರ್ವೇದ ಆಸ್ಪತ್ರೆ, ತಿಪಟೂರು	ತಿಪಟೂರು	ವೈದ್ಯಾಧಿಕಾರಿಗಳು	02	00	02	10 ಹಾಸಿಗೆಗಳು
			ಶುಶ್ರೂಷಕಾಧಿಕಾರಿಗಳು	02	00	02	
			ಫಾರ್ಮಸಿ ಆಫೀಸರ್	01	00	01	
			ಗ್ರೂಪ್ ಡಿ	02	00	02	
			ಕುಕ್	01	01	00	
24.	ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಕೊನೆಹಳ್ಳಿ	ತಿಪಟೂರು ತಾ.	ವೈದ್ಯಾಧಿಕಾರಿಗಳು	01	01	00	––
			ಗ್ರೂಪ್ ಡಿ	01	00	01	
25.	ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಬುರುಡೇಘಟ್ಟ	ತಿಪಟೂರು ತಾ.	ವೈದ್ಯಾಧಿಕಾರಿಗಳು	01	00	01	––
			ಗ್ರೂಪ್ ಡಿ	01	000	01	
26.	ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಗಂಗನಘಟ್ಟ	ತಿಪಟೂರು ತಾ.	ವೈದ್ಯಾಧಿಕಾರಿಗಳು	01	00	01	––
			ಗ್ರೂಪ್ ಡಿ	01	00	01	
27.	ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ರಾಮಚಂದ್ರಾಪುರ	ತಿಪಟೂರು ತಾ.	ವೈದ್ಯಾಧಿಕಾರಿಗಳು	01	01	00	––
			ಗ್ರೂಪ್ ಡಿ	01	01	00	
28.	ಸರ್ಕಾರಿ	ತಿಪಟೂರು	ವೈದ್ಯಾಧಿಕಾರಿಗಳು	01	01	00	––

	ಆಯುರ್ವೇದ ಚಿಕಿತ್ಸಾಲಯ, ಕಂಪಾರಹಳ್ಳಿ	ತಾ.	ಗ್ರೂಪ್ ಡಿ	01	00	01	
29.	ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಶಿಡ್ಲೇಕೋಣ	ಶಿರಾ ತಾ.	ವೈದ್ಯಾಧಿಕಾರಿಗಳು	01	01	00	––
			ಗ್ರೂಪ್ ಡಿ	01	00	01	
30.	ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಮಾಯಸಂದ್ರ	ಶಿರಾ ತಾ.	ವೈದ್ಯಾಧಿಕಾರಿಗಳು	01	01	00	––
			ಎ.ಎನ್.ಎಂ	01	00	01	
			ಗ್ರೂಪ್ ಡಿ	01	00	01	
31.	ಸರ್ಕಾರಿ ಯುನಾನಿ ಚಿಕಿತ್ಸಾಲಯ, ಶಿರಾ	ಶಿರಾ ತಾ.	ವೈದ್ಯಾಧಿಕಾರಿಗಳು	02	02	00	––
			ಫಾರ್ಮಸಿ ಆಫೀಸರ್	01	00	01	
			ಎ.ಎನ್.ಎಂ	01	00	01	
			ಗ್ರೂಪ್ ಡಿ	01	00	01	

ಐ.ಇ.ಸಿ ಕಾರ್ಯಕ್ರಮಗಳ ಅಡಿಯಲ್ಲಿ ಆಯುಷ್ ಜಾಗೃತಿ ಕಾರ್ಯಕ್ರಮಗಳು:

2020–21ನೇ ಸಾಲಿನ ಆರ್ಥಿಕ ವರ್ಷದಲ್ಲಿ ತುಮಕೂರು ಜಿಲ್ಲಾ ವ್ಯಾಪ್ತಿಯಲ್ಲಿ 04 ಆಯುಷ್ ಸೇವಾ ಗ್ರಾಮ ಕಾರ್ಯಕ್ರಮ, 02 ವಿದ್ಯಾರ್ಥಿನಿಲಯಗಳ ಮೇಲ್ವಿಚಾರಕರಿಗೆ ಆನ್‌ಲೈನ್ ತರಬೇತಿ ಕಾರ್ಯಕ್ರಮ, 06 ಆಯುಷ್ ಔಷಧಯುಕ್ತ ಸಸ್ಯವನಗಳ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿದೆ.

2020–21 ನೇ ಸಾಲಿನ ಆರ್ಥಿಕ ವರ್ಷದ ಭೌತಿಕ ಪ್ರಗತಿ ಕೆಳಕಂಡಂತಿದೆ.

2020–21ನೇ ಸಾಲಿನ ಆಯುಷ್ ಆಸ್ಪತ್ರೆ ಮತ್ತು ಚಿಕಿತ್ಸಾಲಯಗಳಲ್ಲಿ ಒಟ್ಟು **3,36,847** ರೋಗಿಗಳು ಚಿಕಿತ್ಸೆ ಪಡೆದಿದ್ದು ಪದ್ಧತಿವಾರು ವಿವರಗಳು ಕೆಳಗಿನಂತಿವೆ.

ಕ್ರ ಸಂ	ಪದ್ಧತಿ	2020–21ನೇ ಆರ್ಥಿಕ ಸಾಲು (ಮಾರ್ಚ್ ಅಂತ್ಯದ ವರೆಗೆ)	
		ಚಿಕಿತ್ಸಾಲಯಗಳಲ್ಲಿ ಚಿಕಿತ್ಸೆ ಪಡೆದ ರೋಗಿಗಳ ಸಂಖ್ಯೆ.	ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದ ರೋಗಿಗಳ ಸಂಖ್ಯೆ
1	ಆಯುರ್ವೇದ	2,19,395	83,960
2	ಯುನಾನಿ	7,519	21,616

3	ಹೋಮಿಯೊಪತಿ	3,170	–
4	ಪ್ರಕೃತಿ ಚಿಕಿತ್ಸೆ	1,187	–
ಒಟ್ಟು		**2,31,271**	**1,05,576**

2020–21ನೇ ಸಾಲಿನಲ್ಲಿ ಒದಗಿಸಲಾದ ಆಯವ್ಯಯ ಮಾರ್ಚ್–2021ರ ಅಂತ್ಯಕ್ಕೆ ಆದ ವೆಚ್ಚದ ವಿವರ:–

(ರೂ.ಲಕ್ಷಗಳಲ್ಲಿ)

ಕ್ರ. ಸಂ	ಲೆಕ್ಕಶೀರ್ಷಿಕೆ	ಆಯವ್ಯಯ	ವೆಚ್ಚ	ಶೇಕಡಾ
1	**2210–00–101–0–29** ಆಯುಷ್ ಚಿಕಿತ್ಸಾಲಯಗಳು ಮತ್ತು ಆಸ್ಪತ್ರೆಗಳನ್ನು ತರೆಯುವುದು ಮತ್ತು ನಿರ್ವಹಣೆ	407.71	372.42	91.34%
2	**2210–00–101–0–35** ಆಯುಷ್ ಜಿಲ್ಲಾಸ್ಪತ್ರೆಗಳು ಮತ್ತು ಹೊಮಿಯೋಪತಿ ಜಿಲ್ಲಾ ಖಾಸಗಿ ಆಸ್ಪತೆಗಳಿಗೆ ಸಹಾಯಾನುದಾನ	107.66	107.33	99.69%
3	**2210–00–101–0–37** ಆಯುಷ್ ಇಲಾಖೆಯ ಔಷಧಿ ಮತ್ತು ರಾಸಾಯನಿಕಗಳು	30.00	29.93	99.77%
4	**2210–00–101–0–41** ಯುನಾನಿ ಚಿಕಿತ್ಸಾಲಯಗಳ ಪ್ರಾರಂಭ ಮತ್ತು ನಿರ್ವಹಣೆ	2.50	2.50	100%
5	**2210–00–105–0–36** ಕಟ್ಟಡಗಳು	30.00	30.00	100%

ಜಿಲ್ಲಾ ಪಂಚಾಯತ್, ತುಮಕೂರು

(ತೋಟಗಾರಿಕೆ ಇಲಾಖೆ)

2020–21 ನೇ ಸಾಲಿನ ವಾರ್ಷಿಕ ಆಡಳಿತ ವರದಿ

ಪ್ರಸ್ತಾವನೆ ;–

ತುಮಕೂರು ಜಿಲ್ಲೆಯು ಕರ್ನಾಟಕ ರಾಜ್ಯದ ದಕ್ಷಿಣದಲ್ಲಿದ್ದು, 12.45^0 ಯಿಂದ 14.22^0 ಉತ್ತರದ ಅಕ್ಷಾಂಶ ಒಳಗೆ 76.20^0 ಯಿಂದ 77.31^0 ಪೂರ್ವ ರೇಖಾಂಶಗಳ ನಡುವೆ ವಿಸ್ತರಿಸಲ್ಪಟ್ಟಿದೆ.

ಸ್ವಾಭಾವಿಕ ;–

ಈ ಜಿಲ್ಲೆಯಲ್ಲಿ 10 ತಾಲ್ಲೂಕುಗಳಿದ್ದು, 50 ಹೋಬಳಿಗಳು 331 ಗ್ರಾಮ ಪಂಚಾಯತಿಗಳು ಮತ್ತು 2715 ಗ್ರಾಮಗಳು ಇರುತ್ತವೆ. ಜಿಲ್ಲೆಯ ಪೂರ್ವಕ್ಕೆ ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳು, ಪಶ್ಚಿಮಕ್ಕೆ ಹಾಸನ, ಚಿಕ್ಕಮಗಳೂರು ಜಿಲ್ಲೆಗಳು,ಉತ್ತರಕ್ಕೆ ಚಿತ್ರದುರ್ಗ ಹಾಗೂ ಆಂಧ್ರ ಪ್ರದೇಶದ ಗಡಿ ಮತ್ತು ದಕ್ಷಿಣಕ್ಕೆ ಮಂಡ್ಯ ಜಿಲ್ಲೆಗಳಿಂದ ಸುತ್ತುವರಿಯಲ್ಪಟ್ಟಿದೆ.

ಭೌಗೋಳಿಕ ಲಕ್ಷಣಗಳು ;–

ಜಿಲ್ಲೆಯ ದಕ್ಷಿಣ ಭಾಗದಲ್ಲಿ ಉತ್ತರ ದಕ್ಷಿಣವಾಗಿ ಬೆಟ್ಟದ ಸಾಲು ಹಬ್ಬಿರುತ್ತದೆ. ಕುಣಿಗಲ್ ತಾಲ್ಲೂಕಿನ ಹುತ್ರಿದುರ್ಗ ಮತ್ತು ಹುಲಿಯೂರುದುರ್ಗ ಬೆಟ್ಟಗಳು ಮುಖ್ಯವಾದವುಗಳು. ಇವುಗಳಿಗೆ ಸಮಾನಾಂತರವಾಗಿ ಉತ್ತರ ಭಾಗದಲ್ಲಿ ಮತ್ತೊಂದು ಗುಡ್ಡದ ಸಾಲು ಹಬ್ಬಿದ್ದು, ಇವುಗಳಲ್ಲಿ ಪಾವಗಡ ತಾಲ್ಲೂಕಿನ ಕಾಮನದುರ್ಗ, ನಿಡಗಲ್ ದುರ್ಗಗಳು, ಮಧುಗಿರಿ ತಾಲ್ಲೂಕಿನ ಬೆಟ್ಟಗಳು ಮತ್ತು ಮಿಡಿಗೇಶಿದುರ್ಗ, ಕೊರಟಗೆರೆ ತಾಲ್ಲೂಕಿನ ಚನ್ನರಾಯನದುರ್ಗ, ತುಮಕೂರು ತಾಲ್ಲೂಕಿನ ದೇವರಾಯನ ದುರ್ಗ ಮುಖ್ಯವಾದವುಗಳು. ಜಿಲ್ಲೆಯ ಭೂ ಪ್ರದೇಶವು ಸಮುದ್ರ ಮಟ್ಟದಿಂದ 806 ಮೀಟರ್‌ಗಳಷ್ಟು ಎತ್ತರದಲ್ಲಿದೆ.

ಜಿಲ್ಲೆಯಲ್ಲಿ ಜೀವ ನದಿಗಳು ಇರುವುದಿಲ್ಲ. ಸಣ್ಣ ನದಿಗಳು ಮಳೆಗಾಲದಲ್ಲಿ ಮಾತ್ರ ತುಂಬಿ ಕೆರೆಗಳಿಗೆ ನೀರನ್ನು ಒದಗಿಸುತ್ತವೆ. ಜಯಮಂಗಲಿ ನದಿ ದೇವರಾಯನದುರ್ಗದಲ್ಲಿ ಹುಟ್ಟಿ ಕೊರಟಗೆರೆ ,ಮಧುಗಿರಿ ತಾಲ್ಲೂಕುಗಳಲ್ಲಿ ಹರಿಯುತ್ತದೆ. ಇದೇ ಸ್ಥಳದಲ್ಲಿ ಹುಟ್ಟುವ ಗರುಡಾಚಲ ಎಂಬ ಮತ್ತೊಂದು ನದಿ ಜಿಲ್ಲೆಯ ಕೆಲವು ಭಾಗಗಳಲ್ಲಿ ಹರಿದು ಜಯಮಂಗಲಿ ನದಿ ಸೇರುತ್ತದೆ. ಜಯಮಂಗಲಿ ನದಿಯು ಮುಂದುವರೆದು ಆಂಧ್ರ ಪ್ರದೇಶದ ಅನಂತಪುರ ಜಿಲ್ಲೆಯಲ್ಲಿ ಪಿನಾಕಿನಿಯನ್ನು ಕೂಡುತ್ತದೆ.

ಕೊರಟಗೆರೆ ತಾಲ್ಲೂಕಿನ ಸಿದ್ದರಬೆಟ್ಟದಲ್ಲಿ ಸುವರ್ಣಮುಖಿ ನದಿಹುಟ್ಟಿ, ಅದೇ ತಾಲ್ಲೂಕಿನಲ್ಲಿ ಹರಿಯುತ್ತದೆ. ಶಿಂಷಾ ನದಿ ದೇವರಾಯನ ದುರ್ಗದಲ್ಲಿ ಹುಟ್ಟಿ, ಗುಬ್ಬಿ, ಕುಣಿಗಲ್, ತಾಲ್ಲೂಕಿನಲ್ಲಿ ಹರಿದು ಕೊನೆಗೆ ಕಾವೇರಿ ನದಿಯನ್ನು ಸೇರುತ್ತದೆ. ಈ ನದಿಗೆ ಮಾರ್ಕೊನಹಳ್ಳಿ ಜಲಾಶಯ ನಿರ್ಮಿಸಿದ್ದು, 4500 ಹೆಕ್ಟೇರು ಅಚ್ಚುಕಟ್ಟಿನಿಂದ ಕೂಡಿದೆ. ಮಳೆಗಾಲದಲ್ಲಿ ಜಲಾಶಯ ತುಂಬಿದಾಗ ನೋಡಲು ಆಕರ್ಷಣೀಯವಾಗಿರುತ್ತದೆ. ಉತ್ತರ ಪಿನಾಕಿನಿ ಮತ್ತು ಕುಮುದ್ವತಿ ನದಿಗಳು ಪಾವಗಡ ಮತ್ತು ಮಧುಗಿರಿ ತಾಲ್ಲೂಕುಗಳಲ್ಲಿ ಹರಿದು ಕೆರೆ ಕಟ್ಟೆಗಳಿಗೆ ನೀರನ್ನು ಒದಗಿಸುತ್ತದೆ.

ಮಣ್ಣಿನ ವಿವರಣೆ ;–

ಜಿಲ್ಲೆಯ ಭೌಗೋಳಿಕ ವಿಸ್ತೀರ್ಣವು ಸುಮಾರು 10,596 ಚದರ ಕಿ.ಮೀಗಳಷ್ಟಿದ್ದು, ರಾಜ್ಯದ ಒಟ್ಟು ವಿಸ್ತಿರ್ಣದಲ್ಲಿ ಶೇಕಡಾ 5.589 ರಷ್ಟಿದೆ. ರಾಜ್ಯದ ಜಿಲ್ಲೆಗಳ ವಿಸ್ತೀರ್ಣಕ್ಕೆ ಹೋಲಿಸಿದಾಗ ತುಮಕೂರು ಜಿಲ್ಲೆಯು 3 ನೇ ಸ್ಥಾನ ಪಡೆದಿರುತ್ತದೆ. ಜಿಲ್ಲೆಯ ಬಹುತೇಕ ಪ್ರದೇಶ ಕೆಂಪು ಮತ್ತು ಮರಳು ಮಿಶ್ರಿತ ಕೆಂಪು ಮಣ್ಣಿನಿಂದ ಕೂಡಿರುತ್ತದೆ.

ಜಿಲ್ಲೆಯ ಮುಖ್ಯ ತೋಟಗಾರಿಕೆ ಬೆಳೆಗಳು ;–

ಜಿಲ್ಲೆಯಲ್ಲಿ ರೈತರು ಹೆಚ್ಚಿನ ಆಸಕ್ತಿ ವಹಿಸಿ ತೋಟದ ಬೆಳೆಗಳು, ಹಣ್ಣುಗಳು, ತರಕಾರಿ, ಹೂವುಗಳು, ಸಾಂಬಾರು ಬೆಳೆಗಳು ಮತ್ತು ಔಷದಿ ಸಸ್ಯಗಳ ತೋಟಗಾರಿಕೆ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಅವುಗಳಲ್ಲಿ ಪ್ರಮುಖವಾಗಿ ತೆಂಗು, ಅಡಿಕೆ, ಬಾಳೆ, ಮಾವು, ಸಪೋಟ, ದಾಳಿಂಬೆ, ಹುಣಸೆ, ಎಲೆಬಳ್ಳಿ, ಮೆಣಸಿನಕಾಯಿ, ಟೊಮೆಟೋ, ಬದನೆ, ಹುರಳಿಕಾಯಿ ಮತ್ತು ಪುಷ್ಪ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಜಿಲ್ಲೆಯ ಸಾಗುವಳಿ ವಿಸ್ತೀರ್ಣ 763919 ಹೆಕ್ಟೇರ್ ಇದ್ದು, ಇದರಲ್ಲಿ 2,99,101 ಹೆಕ್ಟೇರ್ ವಿಸ್ತೀರ್ಣದಲ್ಲಿ ತೋಟಗಾರಿಕೆ ಬೆಳೆ ಇರುತ್ತದೆ.

ಕೃಷಿ ಹವಾಮಾನ ಗುಣಗಳು ;–

ತುಮಕೂರು ಜಿಲ್ಲೆಯ ಉಷ್ಣಾಂಶ 18 ಸೆಂಟಿಗ್ರೇಡ್‌ನಿಂದ 38 ಸೆಂಟಿಗ್ರೇಡ್ ಇದ್ದು, ಒಣ ಹವೆಯಿಂದ ಕೂಡಿರುತ್ತದೆ. ಜಿಲ್ಲೆಯಲ್ಲಿ ನೈರುತ್ಯ ಮಾರುತದಿಂದ ಜೂನ್ ತಿಂಗಳಲ್ಲಿ ಮಳೆ ಪ್ರಾರಂಭವಾಗಿ ಸೆಪ್ಟಂಬರ್ ತಿಂಗಳವರೆಗೂ ಬೀಳುತ್ತದೆ. ಈಶಾನ್ಯ ಮಾರುತದಿಂದ ಅಕ್ಟೋಬರ್ ತಿಂಗಳಲ್ಲಿ ಮಳೆ ಪ್ರಾರಂಭವಾಗಿ ನವೆಂಬರ್ ತಿಂಗಳ ಕೊನೆಯವರೆಗೆ ಬೀಳುತ್ತದೆ. ಡಿಸೆಂಬರ್ ತಿಂಗಳಲ್ಲಿ ಚಳಿಗಾಲ ಪ್ರಾರಂಭವಾಗಿ ಪೆಬ್ರವರಿ ತಿಂಗಳ ಕೊನೆಯವರೆಗೆ ಇರುತ್ತದೆ. ಬೇಸಿಗೆ ಮಾರ್ಚ್‌ನಿಂದ ಮೇ ತಿಂಗಳ ಕೊನೆಯವರೆಗೆ ಇರುತ್ತದೆ. ಜಿಲ್ಲೆಯ ವಾಡಿಕೆ ಮಳೆ 669 ಮಿ.ಮೀ ಇದ್ದು, 2020 ರ ವರ್ಷದಲ್ಲಿ (ಜನವರಿ 2020 ರಿಂದ ಡಿಸೆಂಬರ್ 2020 ರವರೆಗೆ) ವಾಸ್ತವಿಕ

ಸರಾಸರಿ 828 ಮೀ.ಮೀ (೧ ಕಜಡಿ ಏಖಓಆಒಅ) ಬಿದ್ದಿರುತ್ತದೆ. ಜಿಲ್ಲೆಯಲ್ಲಿ ಒಟ್ಟಾರೆ ಹವಾಮಾನ ತೋಟಗಾರಿಕೆ ಬೆಳೆಗಳಿಗೆ ಉತ್ತೇಜನಕಾರಿಯಾಗಿದೆ.

ಹವಾಮಾನಕ್ಕನುಗುಣವಾಗಿ ಜಿಲ್ಲೆಯನ್ನು ಮೂರು ವಲಯಗಳನ್ನಾಗಿ ವಿಂಗಡಿಸಲಾಗಿದೆ.

1. ಮಧ್ಯ ಒಣ ಪ್ರದೇಶ : ಪಾವಗಡ, ಶಿರಾ,ಮಧುಗಿರಿ,ಕೊರಟಗೆರೆ, ಚಿಕ್ಕನಾಯಕನಹಳ್ಳಿ, ತಿಪಟೂರು.
2. ದಕ್ಷಿಣ ಒಣ ಪ್ರದೇಶ : ಕುಣಿಗಲ್ ಮತ್ತು ತುರುವೇಕೆರೆ ತಾಲ್ಲೂಕುಗಳು.
3. ಪೂರ್ವ ಒಣ ಪ್ರದೇಶ : ತುಮಕೂರು ಮತ್ತು ಗುಬ್ಬಿ ತಾಲ್ಲೂಕುಗಳು.

<u>ತೋಟಗಾರಿಕೆ ಇಲಾಖೆಯ ಮೂಲ ಉದ್ದೇಶ</u> ;–

ತೋಟಗಾರಿಕೆ ಬೆಳೆಗಾರರ ಮೂಲಕ ತೋಟಗಾರಿಕೆ ಬೆಳೆಗಳನ್ನು ಅಭಿವೃದ್ದಿಗೊಳಿಸುವ ಒಂದು ಕಾರ್ಯ ನೀತಿಯನ್ನು ಹೊಂದಿದೆ. ಯೋಗ್ಯ ಗುಣಮಟ್ಟದ ಬೀಜಗಳನ್ನು ಮತ್ತು ಕಸಿ ಸಸಿಗಳನ್ನು ಸರಬರಾಜು ಮಾಡುವುದು, ಬೇಸಾಯದ ಕ್ರಮಗಳಲ್ಲಿ ಮತ್ತು ಸಸ್ಯ ಸಂರಕ್ಷಣಾ ಕ್ರಮಗಳಲ್ಲಿ ತಾಂತ್ರಿಕ ತಿಳುವಳಿಕೆ ಹಾಗೂ ಸಲಹೆ ನೀಡುವುದು. **"ರೈತರಿಗೆ"** ತೋಟಗಾರಿಕೆ ತರಬೇತಿ ನೀಡುವುದು. ದುರ್ಬಲ ವರ್ಗದ ಮತ್ತು ಆರ್ಥಿಕವಾಗಿ ಹಿಂದುಳಿದ ರೈತರುಗಳಿಗೆ ಹಾಗೂ ಬುಡಕಟ್ಟಿನ ಜನಾಂಗಕ್ಕೆ ಅವರ ಆರ್ಥಿಕ ಸ್ಥಿತಿಗತಿಗಳನ್ನು ಸುಧಾರಿಸಿಕೊಳ್ಳಲು ತೋಟಗಾರಿಕೆ ಬೆಳೆಗಳನ್ನು ಬೆಳೆಯುವುದಕ್ಕೆ ಸಹಾಯ ಮಾಡುವುದು. ಹೊಸದಾಗಿ ಕೃಷಿ ವಿಶ್ವ ವಿದ್ಯಾಲಯ ಹಾಗೂ ಸಂಶೋಧನಾ ಕೇಂದ್ರಗಳಿಂದ ಬಿಡುಗಡೆಯಾದ ತಳಿಗಳನ್ನು ರೈತರಿಗೆ ಶಿಫಾರಸ್ಸು ಮಾಡುವುದು. ಫಲ ಪುಷ್ಪ ಪ್ರದರ್ಶನ, ಸಿದ್ದಗಂಗಾ ಮತ್ತು ಪಟ್ಟನಾಯಕನಹಳ್ಳಿಗಳಲ್ಲಿ ಕೈಗಾರಿಕಾ ಮತ್ತು ವಸ್ತು ಪ್ರದರ್ಶನ ಏರ್ಪಡಿಸಿ ಪ್ರದರ್ಶಿಕೆಗಳ ಮೂಲಕ ತೋಟಗಾರಿಕೆ ತಾಂತ್ರಿಕತೆಯನ್ನು ಪ್ರಚಾರ ಮಾಡುವುದು. ಇಲಾಖಾ ಮಾರ್ಗದರ್ಶನದಂತೆ ವಿವಿಧ ಯೋಜನೆಗಳಡಿ ರೈತರಿಗೆ ಸಹಾಯಧನ ನೀಡುವುದು ಇವು ತೋಟಗಾರಿಕೆ ಇಲಾಖೆಯ ಮೂಲ ಉದ್ದೇಶವಾಗಿವೆ.

<u>ತಾಂತ್ರಿಕ ವರ್ಗ</u> ;–

ತುಮಕೂರು ಜಿಲ್ಲಾ ಕೇಂದ್ರ ಸ್ಥಾನದಲ್ಲಿ ತೋಟಗಾರಿಕೆ ಉಪ ನಿರ್ದೇಶಕರು (ಜಿಲ್ಲಾ ಪಂಚಾಯತ್) ರವರ ಕಾರ್ಯಾಲಯವಿದ್ದು, ತೋಟಗಾರಿಕೆ ಉಪ ನಿರ್ದೇಶಕರು ಜಿಲ್ಲೆಯಲ್ಲಿನ ತೋಟಗಾರಿಕೆ ಅಭಿವೃದ್ದಿಗೆ ಸಂಬಂಧಿಸಿದ ಎಲ್ಲಾ ಅಭಿವೃದ್ದಿ ಕಾರ್ಯಕ್ರಮಗಳ ಉಸ್ತುವಾರಿ ಅಧಿಕಾರಿಯಾಗಿರುತ್ತಾರೆ. ಇವರ ಸಹಾಯಕರಾಗಿ ಒಬ್ಬರು ಕೇಂದ್ರ ಸ್ಥಾನ ಸಹಾಯಕರು (ಸಹಾಯಕ ತೋಟಗಾರಿಕೆ ನಿರ್ದೇಶಕರು), ಒಬ್ಬರು ರಾಷ್ಟ್ರೀಯ ತೋಟಗಾರಿಕೆ ಮಿಷನ್ ಮತ್ತು ಮಾರುಕಟ್ಟೆ ಸಹಾಯಕ ತೋಟಗಾರಿಕೆ ನಿರ್ದೇಶಕರು, ಒಬ್ಬರು ಸಹಾಯಕ ತೋಟಗಾರಿಕೆ ನಿರ್ದೇಶಕರು ಮತ್ತು 04

ತಾಂತ್ರಿಕ ಸಹಾಯಕರುಗಳು (ಸಹಾಯಕ ತೋಟಗಾರಿಕೆ ಅಧಿಕಾರಿಗಳು), ಒಬ್ಬರು ಸಹಾಯಕ ಸಾಂಖ್ಯಿಕ ಅಧಿಕಾರಿ ಹಾಗೂ ಆಡಳಿತ ಸಿಬ್ಬಂಧಿಯವರು ಕಾರ್ಯನಿರ್ವಹಿಸುತ್ತಿದ್ದಾರೆ.

ತಾಲ್ಲೂಕು ಮಟ್ಟಗಳಲ್ಲಿ ಪ್ರತಿ ತಾಲ್ಲೂಕಿನಲ್ಲೂ ತೋಟಗಾರಿಕೆ ಕಛೇರಿ (ಜಿಲ್ಲಾ ಪಂಚಾಯತ್) ಇದ್ದು, ಕಛೇರಿ ಮುಖ್ಯಸ್ಥರಾಗಿ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ಇವರ ಸಹಾಯಕ್ಕಾಗಿ ಪ್ರತಿ ಕಛೇರಿಯಲ್ಲಿ ಒಬ್ಬ ಸಹಾಯಕ ತೋಟಗಾರಿಕೆ ನಿರ್ದೇಶಕರು ಮತ್ತು ತೋಟಗಾರಿಕೆ ಸಹಾಯಕರು ಇರುತ್ತಾರೆ. ಹಾಗೂ ಹೋಬಳಿ ಮಟ್ಟದ ರೈತ ಸಂಪರ್ಕ ಕೇಂದ್ರಗಳಲ್ಲಿ ಒಬ್ಬರು ಸಹಾಯಕ ತೋಟಗಾರಿಕೆ ಅಧಿಕಾರಿಗಳಿದ್ದಾರೆ. ಇವರುಗಳು ರೈತರುಗಳಿಗೆ ತೋಟಗಾರಿಕೆ ಬೆಳೆಗಳ ಬಗ್ಗೆ ತಿಳುವಳಿಕೆ, ತಾಂತ್ರಿಕ ಸಲಹೆ ಹಾಗೂ ಮಾರ್ಗದರ್ಶನ ನೀಡುವುದಲ್ಲದೆ ಇಲಾಖೆಯು ರೂಪಿಸಿದ ಕಾರ್ಯಕ್ರಮಗಳನ್ನು ಅನುಷ್ಟಾನಗೊಳಿಸುತ್ತಾರೆ.

2021 ರ ಮಾರ್ಚ್ ಮಾಹೆಯ ಅಂತ್ಯದವರೆಗಿನ ಜಿಪಂ ವ್ಯಾಪ್ತಿಯ ತೋಟಗಾರಿಕೆ ಕಛೇರಿಗಳಲ್ಲಿನ ಹುದ್ದೆಗಳ ವಿವರ

ಕ್ರ.ಸಂ	ಹುದ್ದೆಗಳು	ಮಂಜೂರಾದ ಹುದ್ದೆಗಳು	ಕರ್ತವ್ಯ ನಿರ್ವಹಿಸುತ್ತಿರುವ ಹುದ್ದೆಗಳು	ಖಾಲಿ ಇರುವ ಹುದ್ದೆಗಳ ಸಂಖ್ಯೆ
1	ತೋಟಗಾರಿಕೆ ಉಪ ನಿರ್ದೇಶಕರು	1	1	0
2	ಕೇಂದ್ರ ಕಛೇರಿ ಸಹಾಯಕರು	1	1	0
3	ಸಹಾಯಕ ತೊಟಗಾರಿಕೆ ನಿರ್ದೇಶಕರು (ಎನ್.ಹೆಚ್.ಎಂ)	1	1	0
3	ಸಹಾಯಕ ತೊಟಗಾರಿಕೆ ನಿರ್ದೇಶಕರು	11	7	3
4	ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು	10	11	0
5	ಸಹಾಯಕ ತೋಟಗಾರಿಕೆ ಅಧಿಕಾರಿ	58	27	31
6	ಸಹಾಯಕ ಸಾಂಖ್ಯಿಕ ಅಧಿಕಾರಿ	1	1	0
7	ಕಛೇರಿ ಅದೀಕ್ಷಕರು	7	6	1
8	ಪ್ರಥಮ ದರ್ಜೆ ಸಹಾಯಕರು	8	5	3
9	ದ್ವಿತೀಯ ದರ್ಜೆ ಸಹಾಯಕರು	11	10	1
10	ಬೆರಳಚ್ಚುಗಾರರು	1	0	1
11	ವಾಹನ ಚಾಲಕರು	1	0	1
12	ತೋಟಗಾರಿಕೆ ಸಹಾಯಕರು	28	22	6
13	ತೋಟಗಾರರು	27	8	19
14	ಅಟೆಂಡರ್	1	0	1
15	ಕಛೇರಿ ಸೇವಕರು	1	–	1
ಒಟ್ಟು		**168**	**100**	**68**

ಹಣಕಾಸು ;–

2020–21 ನೇ ಸಾಲಿನಲ್ಲಿ ಆಡಳಿತಕ್ಕಾಗಿ ಅಧಿಕಾರಿಗಳ/ ಸಿಬ್ಬಂಧಿಗಳ ವೇತನ, ಪ್ರವಾಸ ಭತ್ಯೆ ಕಛೇರಿ ವೆಚ್ಚ, ನೀರು ಮತ್ತು ವಿದ್ಯುಚ್ಛಕ್ತಿ ವೆಚ್ಚ, ಮಜೂರಿ, ದೂರವಾಣಿ ವೆಚ್ಚ, ವಾಹನ ದುರಸ್ತಿ ಮತ್ತು ಸರ್ವಿಸ್ ಹಾಗೂ ಇಂಧನ ವೆಚ್ಚವನ್ನು ಲೆಕ್ಕ ಶೀರ್ಷಿಕೆ **2435–00–101–0–26 ಯಡಿ ರೂ. 6,90,63,946–00** ವೆಚ್ಚ ಭರಿಸಲಾಗಿದೆ.

ತೋಟಗಾರಿಕೆ ಕ್ಷೇತ್ರದ ಆದಾಯ ;–

ಜಿಲ್ಲಾ ಪಂಚಾಯತ್ ತೋಟಗಾರಿಕೆ ಕ್ಷೇತ್ರಗಳು ಮತ್ತು ರಾಜ್ಯ ವಲಯ ತೋಟಗಾರಿಕೆ ಕ್ಷೇತ್ರಗಳಿಂದ 2020–21 ನೇ ಸಾಲಿನಲ್ಲಿ ಒಟ್ಟು ರೂ. **1,45,31,896–00** ಆದಾಯ ಬಂದಿರುತ್ತದೆ.

ಅನುಬಂಧ –1

ಕ್ರ.ಸಂ	ತಾಲ್ಲೂಕುಗಳು	ತೋಟಗಾರಿಕೆ ಕ್ಷೇತ್ರದ ಹೆಸರು	ಒಟ್ಟು ಆದಾಯ (ರೂ.ಗಳಲ್ಲಿ)
1	ತುಮಕೂರು	ಜಿಲ್ಲಾ ನರ್ಸರಿ	220665–00
2		ನಿಡುವಳಲು ತೋಟಗಾರಿಕೆ ಕ್ಷೇತ್ರ	2090550–00
3	ಕುಣಿಗಲ್	ರಂಗಸ್ವಾಮಿಗುಡ್ಡ ಮತ್ತು ಬಿಳಿದೇವಾಲಯ ತೋಟಗಾರಿಕೆ ಕ್ಷೇತ್ರ	1473500–00
4		ಬಿಳಿದೇವಾಲಯ ತೋಟಗಾರಿಕೆ ಕ್ಷೇತ್ರ	420720–00
5.		ಮಾಕೋನಹಳಿ ತೋಟಗಾರಿಕೆ ಕ್ಷೇತ್ರ	565180–00
6		ಮಂಗಳ ತೋಟಗಾರಿಕೆ ಕ್ಷೇತ್ರ	294794–00
7	ಪಾವಗಡ	ರಾಜವಂತಿ ತೋಟಗಾರಿಕೆ ಕ್ಷೇತ್ರ	172821–00
8	ಮಧುಗಿರಿ	ಇಂದಿರಾ ತೋಟಗಾರಿಕೆ ಕ್ಷೇತ್ರ	1766002–00
9	ಚಿಕ್ಕನಾಯಕನಹಳ್ಳಿ	ಜೆ.ಸಿ.ಪುರ ತೋಟಗಾರಿಕೆ ಕ್ಷೇತ್ರ	648308–00
10		ಶ್ರೀ ಧರ್ಮವೀರ ತೋಟಗಾರಿಕೆ ಕ್ಷೇತ್ರ	681942–00
11	ಗುಬ್ಬಿ	ಹೆರೂರು ತೋಟಗಾರಿಕೆ ಕ್ಷೇತ್ರ	605874–00
12		ಕೆ.ಮತ್ತಿಘಟ್ಟ ತೋಟಗಾರಿಕೆ ಕ್ಷೇತ್ರ	37500–00
13	ಶಿರಾ	ಶಿರಾ ನರ್ಸರಿ ತೋಟಗಾರಿಕೆ ಕ್ಷೇತ್ರ	7650–00

14		ಮುದಿಗೆರೆ ತೋಟಗಾರಿಕೆ ಕ್ಷೇತ್ರ	384180–00
15	ಕೊರಟಗೆರೆ	ಡಾ॥ಎಂ.ಹೆಚ್.ಮರಿಗೌಡ ತೋಟಗಾರಿಕೆ ಕ್ಷೇತ್ರ	3088880–00
16	ತುರುವೇಕೆರೆ	ಮಾದಿಹಳ್ಳಿ ತೋಟಗಾರಿಕೆ ಕ್ಷೇತ್ರ	1297650–00
17	ತಿಪಟೂರು	ಗೊರಗೊಂಡನಹಳ್ಳಿ ತೋಟಗಾರಿಕೆ ಕ್ಷೇತ್ರ	775680–00
ಒಟ್ಟು			**1,45,31,896–00**

2020–21 ನೇ ಸಾಲಿನ ಕಾರ್ಯಕ್ರಮಗಳು

ಜಿಲ್ಲೆಯ ರೈತ ಸಮೂಹದ ಅನುಕೂಲಕ್ಕಾಗಿ ತೋಟಗಾರಿಕೆ ಇಲಾಖೆಯಿಂದ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್, ರಾಜ್ಯ ವಲಯ ಹಾಗೂ ಕೇಂದ್ರ ಪುರಸ್ಕೃತ ಯೋಜನೆಗಳನ್ನು ಅನುಷ್ಟಾನಗೊಳಿಸಲಾಗುತ್ತಿದೆ. 2020–21 ನೇ ಸಾಲಿನಲ್ಲಿ ಅನುಷ್ಠಾನಗೊಂಡ ಯೋಜನೆಗಳ ಪ್ರಗತಿಯ ವಿವರ ಈ ಕೆಳಗಿನಂತಿರುತ್ತದೆ.

2020–21 ಸಾಲಿನ ಜಿಲ್ಲಾ ಪಂಚಾಯತ್ ಯೋಜನೆಗಳ ಪ್ರಗತಿ ವರದಿ

ಹನಿ ನೀರಾವರಿ ಯೋಜನೆ (ಡಿ–02) : –

ಈ ಯೋಜನೆಯಡಿ ತೋಟಗಾರಿಕೆ ಬೆಳೆಗಳಲ್ಲಿ ಹನಿ ನೀರಾವರಿ ಅಳವಡಿಕೆಗಾಗಿ ರೈತರಿಗೆ ಸಹಾಯಧನ ನೀಡಲಾಗುವುದು. ಈ ಯೋಜನೆಯಲ್ಲಿ ತೆಂಗು, ಬಾಳೆ, ಮಾವು, ಸಪೋಟ, ದಾಳಿಂಬೆ, ನುಗ್ಗೆ, ಪಪ್ಪಾಯಿ,ದ್ರಾಕ್ಷಿ, ಮತ್ತು ಇತರೆ ತೋಟಗಾರಿಕೆ ಬೆಳೆ ಬೆಳೆಯುವ ರೈತರಿಗೆ ಹನಿ ನೀರಾವರಿ ಅಳವಡಿಕೆಗೆ ಸಹಾಯಧನ ನೀಡಿ ರೈತರನ್ನು ಉತ್ತೇಜಿಸಲಾಗಿದೆ. ಈ ಯೋಜನೆಯಡಿಯಲ್ಲಿ ಜಿಲ್ಲಾ ಪಂಚಾಯತ್‌ನಿಂದ ರೂ. 60.00 ಲಕ್ಷಗಳು ಬಿಡುಗಡೆ ಆಗಿದ್ದು, 59.97 ಲಕ್ಷ ರೂ. ಗಳನ್ನು ವೆಚ್ಚ ಭರಿಸಿ ಪೂರ್ಣ ಪ್ರಗತಿ ಸಾಧಿಸಲಾಗಿದೆ.

ತೋಟಗಾರಿಕೆ ಕಟ್ಟಡಗಳು (ಡಿ–03) ;–

ತೋಟಗಾರಿಕೆ ಉಪನಿರ್ದೇಶಕರ ಕಛೇರಿ (ಜಿ.ಪಂ) ತುಮಕೂರಿನಲ್ಲಿ ವಿ.ಸಿ ಹಾಲ್ ನಿರ್ಮಾಣ, ಶೌಚಾಲಯ ದುರಸ್ಥಿ ಹಾಗೂ ಪೇಂಟಿಂಗ್‌ಗೆ ರೂ 21.05 ಲಕ್ಷ ವೆಚ್ಚ ಭರಿಸಲಾಗಿದೆ. ಹಿ.ಸ.ತೋ.ನಿ ತಿಪಟೂರು ಕಛೇರಿಯಲ್ಲಿ 2 ಶೌಚಾಲಯ ನಿರ್ಮಾಣಕ್ಕೆ ರೂ 2.5 ಲಕ್ಷ ವೆಚ್ಚ ಭರಿಸಲಾಗಿದೆ. ಹಿ.ಸ.ತೋ.ನಿ ಕುಣಿಗಲ್ ಕಛೇರಿ ಆವರಣದಲ್ಲಿ ಗೌಡನ್ ನಿರ್ಮಾಣಕ್ಕೆ ರೂ 6.72 ಲಕ್ಷ ವೆಚ್ಚ ಭರಿಸಲಾಗಿದೆ ಹಾಗೂ ಹಿ.ಸ.ತೋ.ನಿ ಗುಬ್ಬಿ ಕಛೇರಿಯ

ಸುತ್ತ ಕಾಂಪೌಂಡ್ ಗೋಡೆ ನಿರ್ಮಾಣಕ್ಕೆ ರೂ 4.00 ಲಕ್ಷ ವೆಚ್ಚ ಭರಿಸಲಾಗಿದೆ. ಒಟ್ಟು ಈ ಯೋಜನೆಯಡಿಯಲ್ಲಿ ರೂ. 34.27 ಲಕ್ಷಗಳಷ್ಟು ಪ್ರಗತಿ ಸಾಧಿಸಲಾಗಿರುತ್ತದೆ.

<u>ತೋಟಗಾರಿಕೆ ಕ್ಷೇತ್ರಗಳ ನಿರ್ವಹಣೆ (ಡಿ–04)</u> :–

ಈ ಯೋಜನೆಯಡಿ ತುಮಕೂರು ಜಿಲ್ಲೆಯ ಜಿಲ್ಲಾ ವಲಯ ವ್ಯಾಪ್ತಿಗೆ ಸೇರಿದ ನಾಲ್ಕು ತೋಟಗಾರಿಕೆ ಕ್ಷೇತ್ರಗಳಲ್ಲಿ ಉಳುಮೆ, ಗಿಡಗಳಿಗೆ ಪಾತಿ ಹಾಗೂ ನಿರ್ವಹಣೆಗಾಗಿ ರೂ.4.99 ಲಕ್ಷಗಳ ಅನುದಾನ ಭರಿಸಿ ಪ್ರಗತಿ ಸಾಧಿಸಲಾಗಿರುತ್ತದೆ.

<u>ತೆಂಗು ಬೀಜ ಸಂಗ್ರಹಣೆ ಮತ್ತು ನರ್ಸರಿ ನಿರ್ವಹಣೆ (ಡಿ–05)</u> :–

A) <u>ತೆಂಗು ಬೀಜ ಸಂಗ್ರಹಣೆ ಮತ್ತು ನರ್ಸರಿ ನಿರ್ವಹಣೆ</u> ;– ಈ ಯೋಜನೆಯಡಿ 8033 ಉತ್ತಮ ಗುಣಮಟ್ಟದ ಬೀಜದ ತೆಂಗಿನ ಕಾಯಿ ಸಂಗ್ರಹಣೆ ಮಾಡಿ ಇಲಾಖಾ ನರ್ಸರಿಗಳಲ್ಲಿ ಬೆಳೆಸಿ ರೈತರಿಗೆ ಉತ್ಕೃಷ್ಟ ತೆಂಗಿನ ಗಿಡಗಳನ್ನು ಮಾರಾಟ ಮಾಡಲು ವ್ಯವಸ್ಥೆ ಮಾಡಲಾಗಿದೆ. ವಿವಿಧ ತೋಟಗಾರಿಕೆ ಕ್ಷೇತ್ರಗಳಲ್ಲಿನ ತೆಂಗಿನ ನರ್ಸರಿ ನಿರ್ವಹಣೆ ಸೇರಿ ರೂ. 3.00 ಲಕ್ಷಗಳಷ್ಟು ಅನುದಾನ ಖರ್ಚು ಭರಿಸಿ ಪ್ರಗತಿ ಸಾಧಿಸಲಾಗಿರುತ್ತದೆ.

B) <u>ಸಸ್ಯ ಸಂರಕ್ಷಣಾ ಪ್ರಯೋಗಾಲಯ</u> ;– ಈ ಯೋಜನೆಯಡಿ 6.26 ಲಕ್ಷ ಗೋನಿಯೋಜಸ್ ಪರೋಪಜೀವಿಗಳನ್ನು ಉತ್ಪಾದಿಸಿ ತೆಂಗು ಬೆಳೆಗೆ ಬೀಳುವ ಕಪ್ಪು ತಲೆ ಹುಳಗಳನ್ನು ಹತೋಟಿ ಮಾಡಲು ರೈತರ ತೆಂಗಿನ ತೋಟಗಳಲ್ಲಿ ಬಿಡುಗಡೆ ಮಾಡಲಾಗಿದೆ. 2.99 ಲಕ್ಷ ರೂಗಳನ್ನು ಖರ್ಚು ಮಾಡಿ ಪ್ರಯೋಗಶಾಲೆಗೆ ಅಗತ್ಯ ಉಪಕರಣಗಳನ್ನು ಖರೀದಿಸಲಾಗಿದೆ.

<u>ಪ್ರಚಾರ ಮತ್ತು ಸಾಹಿತ್ಯ (ಡಿ–06)</u> ;–

2020–21 ನೇ ಸಾಲಿನಲ್ಲಿ 1.00 ಲಕ್ಷ ರೂ ವೆಚ್ಚ ಭರಿಸಿ ಶ್ರೀ ಸಿದ್ದಗಂಗಾ ಜಾತ್ರೆಯ ಅಂಗವಾಗಿ ನಡೆದ ಸಿದ್ದಗಂಗಾ ಕೃಷಿ ಮತ್ತು ಕೈಗಾರಿಕಾ ವಸ್ತು ಪ್ರದರ್ಶನದಲ್ಲಿ ಇಲಾಖಾ ಮಳಿಗೆಗಳನ್ನು ಸ್ಥಾಪಿಸಿ, ತೋಟಗಾರಿಕೆ ಬೆಳೆಗಳು ಹಾಗೂ ತಂತ್ರಜ್ಞಾನದ ಪ್ರದರ್ಶಿಕೆಗಳನ್ನು ಪ್ರದರ್ಶಿಸಲಾಗಿದೆ. ರೈತ ಸಮುದಾಯಕ್ಕೆ ಇಲಾಖೆಯಿಂದ ದೊರೆಯುವ ಅನುಕೂಲಗಳ ಬಗ್ಗೆ ಮತ್ತು ತೋಟಗಾರಿಕೆ ಬೆಳೆ ಬೆಳೆಯುವ ಬಗ್ಗೆ ಹೆಚ್ಚಿನ ಪ್ರಚಾರ ನೀಡಲಾಗಿದೆ. ರೂ. 1.00 ಲಕ್ಷಗಳನ್ನು ಪ್ರಚಾರ ಸಾಮಗ್ರಿಗಳ ಮುದ್ರಣಕ್ಕೆ ವೆಚ್ಚ ಭರಿಸಲಾಗಿದೆ. ಹಾಗೂ ರೂ. 7.99 ಲಕ್ಷಗಳನ್ನು ಜಿಲ್ಲಾ ತೋಟಗಾರಿಕೆ ಕಛೇರಿ ಆವರಣದಲ್ಲಿ ಫಲಪುಷ್ಪ ಪ್ರದರ್ಶನಕ್ಕೆ ಪೂರಕ ಸ್ಥಿರ ಘಟಕಗಳ ನಿರ್ಮಾಣಕ್ಕೆ ವೆಚ್ಚ ಭರಿಸಲಾಗಿದೆ.

ಜೇನು ಕೃಷಿ (ಡಿ–08) ;–

ಈ ಯೋಜನೆಯಡಿ ಜೇನು ಕೃಷಿ ಸಹಾಯಕರಿಗೆ ಪ್ರತಿ ಮಾಹೆಗೆ ರೂ. 18590–00 ರಂತೆ ಒಟ್ಟು ರೂ 7.99 ಲಕ್ಷ ಗೌರವ ಧನ ನೀಡಲಾಗಿದೆ, ಹಾಗೂ ರೈತರಿಗೆ ಜೇನು ಪೆಟ್ಟಿಗೆ ಸಹಾಯಧನ ರೂ 4.5 ಲಕ್ಷ ವೆಚ್ಚ ಭರಿಸಲಾಗಿದೆ.

ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆ:

2020–21 ನೇ ಸಾಲಿನಲ್ಲಿ ವೈಯಕ್ತಿಕ ಕಾಮಗಾರಿಯಡಿ ವಿವಿಧ ತೋಟಗಾರಿಕೆ ಬೆಳೆಗಳಿಗೆ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಅಲೆಮಾರಿ ಜನಾಂಗಗಳು, ಬಡತನ ರೇಖೆ ಕೆಳಮಟ್ಟದಲ್ಲಿ ಇರುವ ಇತರೆ ಕುಟುಂಬಗಳು, ಸ್ತ್ರೀ ಪ್ರಧಾನ ಕುಂಟುಂಬಗಳು, ವಿಕಲಚೇತನ ಪ್ರಧಾನ ಕುಟುಂಬಗಳು, ಇಂದಿರಾ ಆವಾಜ್ ಯೋಜನೆ ಫಲಾನುಭವಿಗಳನ್ನು ಆಯ್ಕೆ ಮಾಡಿ ಮಾರ್ಗಸೂಚಿಯನ್ವಯ 476705 ಮಾನವ ದಿನಗಳ ಸೃಜಿಸಿ ಒಟ್ಟು ರೂ. 1300.66 ಲಕ್ಷಗಳಿಗೆ ವೆಚ್ಚ ಭರಿಸಲಾಗಿದೆ.

ತಾಲ್ಲೂಕು ಪಂಚಾಯತ್ ಕಾರ್ಯಕ್ರಮಗಳು

ರೈತರಿಗೆ ತರಬೇತಿ (ತೋಟಗಾರಿಕೆ ತರಬೇತಿ) (ಡಿ–10) :–

ಈ ಯೋಜನೆಯಡಿ 125 ರೈತ ಮಹಿಳೆಯರಿಗೆ ಹಣ್ಣು ಮತ್ತು ತರಕಾರಿ ಸಂಸ್ಕರಣೆ ಹಾಗೂ ಮೌಲ್ಯವರ್ಧನೆ ಕುರಿತು ತರಬೇತಿ ನೀಡಿ ಪ್ರತಿ ಫಲಾನುಭವಿಗೆ ರೂ 400 ರಂತೆ ಒಟ್ಟು ರೂ 0.50 ಲಕ್ಷಗಳಷ್ಟು ಪ್ರಗತಿ ಸಾಧಿಸಲಾಗಿರುತ್ತದೆ.

2020–21 ನೇ ಸಾಲಿನ ಕೇಂದ್ರ ವಲಯ, ರಾಜ್ಯ ವಲಯ ಯೋಜನೆಗಳ ಪ್ರಗತಿ ವರದಿ

1) ಎಸ್–04 ಸೂಕ್ಷ್ಮ ಹನಿ ನೀರಾವರಿ ಯೋಜನೆ (ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ):

ಕೇಂದ್ರ ಸರ್ಕಾರದ ಅನುದಾನದೊಂದಿಗೆ ರಾಜ್ಯ ಸರ್ಕಾರದ ಭಾಗಶ: ಅನುದಾನವನ್ನು ಒಳಗೊಂಡಂತೆ ತುಮಕೂರು ಜಿಲ್ಲೆಯ ತೋಟಗಾರಿಕೆ ಬೆಳೆಗಾರರಿಗೆ 2020–21 ನೇ ಸಾಲಿನಲ್ಲಿ ಹನಿ ನೀರಾವರಿ ಪದ್ದತಿ ಅಳವಡಿಸಿದ ರೈತರಿಗೆ 2 ಹೆಕ್ಟೇರ್ ವರೆಗೆ ಶೇ.90 ಹಾಗೂ 2 ಹೆಕ್ಟೇರ್ ಮೇಲ್ಪಟ್ಟು 5 ಹೆಕ್ಟೇರ್‌ವರೆಗೆ ಶೇ.45 ರಂತೆ ಹನಿ ನೀರಾವರಿ ಸಹಾಯ ಧನ ಪಾವತಿಸಲು ಒಟ್ಟು ರೂ 2376.43 ಲಕ್ಷ ರೂ. ಗಳ ವೆಚ್ಚ ಭರಿಸಿ 4337.72 ಹೆಕ್ಟೇರ್ ವಿಸ್ತೀರ್ಣದ ತೋಟಗಾರಿಕೆ ಬೆಳೆಗಳಿಗೆ ಹನಿ ನೀರಾವರಿ ಅಳವಡಿಸಲಾಗಿದೆ.

2) ಉತ್ಪಾಧನಾ ಸುಧಾರಣಾ ಕಾರ್ಯಯೋಜನೆಗಾಗಿ ತೆಂಗಿನಲ್ಲಿ ಸಂಯೋಜಿತ ಬೇಸಾಯ ಯೋಜನೆ:

ತೆಂಗು ಪ್ರಾತ್ಯಕ್ಷತೆಗಳ ನಿರ್ವಹಣೆ, ಮರುನಾಟಿ ಮತ್ತು ಪುನಶ್ಚೇತನ, ತೆಂಗು ಬೆಳೆಯ ಸಮಗ್ರ ಪೋಷಕಾಂಶ ನಿರ್ವಹಣೆ, ನೀರಾ ಸಂಸ್ಕರಣ ಘಟಕ ಸ್ಥಾಪನೆ, ತೆಂಗು ಪ್ರದೇಶ ವಿಸ್ತರಣೆಗೆ 2357.5 ಹೆಕ್ಟೇರ್ ಗಳಿಗೆ ರೂ 647.72 ಲಕ್ಷ ಸಹಾಯಧನ ವಿತರಿಸಲಾಗಿದೆ.

3) ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆ :

ಈ ಯೋಜನೆಯಡಿ ಕೋವಿಡ್–19 ನಿಂದ ಸಂಕಷ್ಟಕ್ಕೆ ಒಳಗಾದ ತರಕಾರಿ ಬೆಳೆಗಾರರಿಗೆ ಪರಿಹಾರಧನ ಭೌತಿಕ 784.7 ಹೆಕ್ಟೇರ್ ಗಳಿಗೆ ಒಟ್ಟು ರೂ. 117.7 ಲಕ್ಷಗಳಷ್ಟು ವೆಚ್ಚ ಭರಿಸಲಾಗಿದೆ. ಹಣ್ಣು ಬೆಳೆಗಾರರಿಗೆ ಪರಿಹಾರಧನ ಭೌತಿಕ 2188.52 ಹೆಕ್ಟೇರ್ ಗಳಿಗೆ ಒಟ್ಟು ರೂ. 328.28 ಲಕ್ಷಗಳಷ್ಟು ವೆಚ್ಚ ಭರಿಸಲಾಗಿದೆ ಹಾಗೂ ಹೂವು ಬೆಳೆಗಾರರಿಗೆ ಪರಿಹಾರಧನ ಭೌತಿಕ 436.4 ಹೆಕ್ಟೇರ್ ಗಳಿಗೆ ಒಟ್ಟು ರೂ. 108.89 ಲಕ್ಷಗಳಷ್ಟು ವೆಚ್ಚ ಭರಿಸಲಾಗಿದೆ. ಹಾಗೂ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯ ಹೊಂದಾಣಿಕೆ ಮೊತ್ತ ರೂ 23.20 ಲಕ್ಷ ವೆಚ್ಚ ಭರಿಸಲಾಗಿದೆ. ಸದರಿ ಯೋಜನೆಯಡಿ ಒಟ್ಟು ರೂ 575.94 ಲಕ್ಷ ವೆಚ್ಚ ಭರಿಸಲಾಗಿದೆ.

4) ಎಸ್–11 ಕೃಷಿ ಕ್ಷೇತ್ರ ಮತ್ತು ಸಸ್ಯವಾಟಿಕೆಗಳ ಅಭಿವೃದ್ಧಿ : **ಈ ಯೋಜನೆಯಡಿ ರೂ. 40.00 ಲಕ್ಷಗಳಷ್ಟು ಅನುದಾನ ಬಿಡುಗಡೆಯಾಗಿದ್ದು, ಈ ಪೈಕಿ ರೂ. 39.99 ಗಳಷ್ಟು ವೆಚ್ಚ ಭರಿಸಲಾಗಿರುತ್ತದೆ.**

5) ಎಸ್–13 ಇಲಾಖೆ ಪ್ರಯೋಗಶಾಲೆಗಳ ಅಭಿವೃದ್ಧಿ : **ಈ ಯೋಜನೆಯಡಿ ತರಕಾರಿ ಬೀಜಗಳ ಮಾದರಿಗಳನ್ನು ಸಂಗ್ರಹಿಸಲು ಪ್ರಯೋಗಶಾಲೆಗೆ ಸಲ್ಲಿಸಲು ರೂ. 0.60 ಲಕ್ಷಗಳ ವೆಚ್ಚ ಭರಿಸಲಾಗಿದೆ.**

6) ಎಸ್–12 ತೋಟಗಾರಿಕೆ ಬೆಳೆಗಳ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ : **ಈ ಯೋಜನೆಯಡಿ ಗೋನಿಯೋಜಸ್ ಪರೋಪಜೀವಿಗಳ ಉತ್ಪಾದನೆ, ಸಿಬ್ಬಂದಿ ವೇತನ, ಮೂಲಭೂತ ಸೌಕರ್ಯ ನಿರ್ವಹಣೆ ಮತ್ತು ಮೇಲ್ವಿಚಾರಣೆ ಮತ್ತು ಸಸ್ಯ ಸಂರಕ್ಷಣಾ ಔಷಧಿ ವಿತರಣೆಗೆ ಒಟ್ಟು ರೂ. 46.51 ಲಕ್ಷಗಳನ್ನು ವೆಚ್ಚ ಭರಿಸಲಾಗಿದೆ.**

7) ಎಸ್–20 – ಮಧುವನ ಮತ್ತು ಜೇನು ಸಾಕಾಣಿಕೆ ಅಭಿವೃದ್ಧಿ ಯೋಜನೆ : **ಈ ಯೋಜನೆಯಡಿ ಜೇನು ಕೃಷಿ ತರಬೇತಿ ಹಾಗೂ ಜೇನು ಪೆಟ್ಟಿಗೆಗಳ ವಿತರಣೆ, ಜೇನು ಪೆಟ್ಟಿಗೆ ಹಾಗೂ ಕಾಲೋನಿಗಳ ಖರೀದಿಸಿದ ರೈತರುಗಳಿಗೆ ಶೇ.75 ರ ಸಹಾಯಧನ ಮತ್ತು ಮಧುವನಗಳ ಅಭಿವೃದ್ಧಿಗಾಗಿ ಒಟ್ಟು ರೂ. 20.00 ಲಕ್ಷಗಳಷ್ಟು ಪ್ರಗತಿ ಸಾಧಿಸಲಾಗಿರುತ್ತದೆ.**

8) ತೋಟಗಾರಿಕೆ ಉದ್ಯಾನವನಗಳು ಮತ್ತು ತೋಟಗಳು : **ಸದರಿ ಕಾರ್ಯಕ್ರಮದಡಿಯಲ್ಲಿ ಡಾ// ಎಂ.ಹೆಚ್ ಮರಿಗೌಡ ತೋಟಗಾರಿಕೆ ಕ್ಷೇತ್ರದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ರೂ. 39.99 ಲಕ್ಷ ವೆಚ್ಚ ಭರಿಸಲಾಗಿದೆ.**

ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ

ಈ ಯೋಜನೆಯಡಿಯಲ್ಲಿ ತೋಟಗಾರಿಕೆಯಲ್ಲಿ ಯಂತ್ರೋಪಕರಣಗಳ ಬಳಕೆಯನ್ನು ಉತ್ತೇಜಿಸಲು ಇಲಾಖಾ ಮಾರ್ಗಸೂಚಿಯನ್ವಯ ಯಂತ್ರೋಪಕರಣಗಳ ಖರೀದಿ, ಈರುಳ್ಳಿ ಶೇಖರಣ ಘಟಕ ನಿರ್ಮಾಣ, ಸಂಸ್ಕರಣೆ ಮತ್ತು ಮೌಲ್ಯವರ್ಧನೆ, ಪಾಲಿಥೀನ್ ಶೀಟ್ ರೀಪ್ಲೇಸ್‌ಮೆಂಟ್, ನೀರು ಸಂಗ್ರಹಣಾ ಘಟಕಗಳ ನಿರ್ಮಾಣಕ್ಕೆ ರೈತ ಫಲಾನುಭವಿಗಳಿಗೆ ರೂ 607.98 ಲಕ್ಷಗಳ ಸಹಾಯಧನ ವಿತರಿಸಿ ಪ್ರಗತಿ ಸಾಧಿಸಲಾಗಿರುತ್ತದೆ.

2020–21 ನೇ ಸಾಲಿನ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆ

ಹಣ್ಣಿನ ಬೆಳೆಗಳ ಅಭಿವೃದ್ಧಿ :

ತೋಟಗಾರಿಕೆ ಬೆಳೆಗಳ ಉತ್ಪಾದನೆ ಹಾಗೂ ಉತ್ಪಾದಕತೆಯನ್ನು ಹೆಚ್ಚಿಸಲು, ಈ ಬೆಳೆಗಳ ಪ್ರದೇಶವನ್ನು ವಿಸ್ತರಿಸುವುದು, ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯ ಮೂಲಭೂತ ಉದ್ದೇಶಗಳಲ್ಲಿ ಒಂದಾಗಿರುತ್ತದೆ. ತೋಟಗಾರಿಕೆ ಬೆಳೆಗಳ ಪ್ರದೇಶ ವಿಸ್ತರಣೆ ಮೂಲಕ ತೋಟಗಾರಿಕೆ ಬೆಳೆಗಳನ್ನು/ ಹೊಸ ತಳಿಗಳನ್ನು ಪರಿಚಯಿಸಿ ರೈತರ ಆರ್ಥಿಕ ಆದಾಯವನ್ನು ಹೆಚ್ಚಿಸುವುದರ ಜೊತೆಗೆ ಆಧಾರಿತ ಚಟುವಟಿಕೆಗಳನ್ನು ಸಹ ಅಭಿವೃದ್ಧಿ ಪಡಿಸುವುದರ ಅಗತ್ಯತೆ ಇದೆ. ಈ ಹಿನ್ನೆಲೆಯಲ್ಲಿ ಹಣ್ಣು, ಪುಷ್ಪ, ಸಾಂಬಾರು ಬೆಳೆಗಳ ಪ್ರದೇಶ ವಿಸ್ತರಣೆ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗಿರುತ್ತದೆ.

ಹೊಸದಾಗಿ ನಾಟಿ ಮಾಡಿದ ಬಾಳೆ, ದಾಳಿಂಬೆ, ಮಾವು, ತರಕಾರಿ, ಹೂವು, ಕಾಳುಮೆಣಸು ಹಾಗೂ ಗೇರು ಬೆಳೆಗಳಿಗೆ ಸಹಾಯಧನವನ್ನು ರೈತರಿಗೆ ನೀಡಲಾಗಿದೆ. ಸದರಿ ಯೋಜನೆಯಡಿಯಲ್ಲಿ ಒಟ್ಟು 983.3 ಹೆಕ್ಟೇರ್‌ನಲ್ಲಿ ಬೆಳೆಗಳನ್ನು ಅಭಿವೃದ್ಧಿ ಪಡಿಸಿದ ರೈತರಿಗೆ ರೂ. 132.77 ಲಕ್ಷ ಸಹಾಯ ಧನ ವಿತರಿಸಲಾಗಿದೆ.

ಸಸ್ಯ ಸಂರಕ್ಷಣೆ ಹಾಗೂ ಪೋಷಕಾಂಶ ನಿರ್ವಹಣೆ:

ಈ ಕಾರ್ಯಕ್ರಮದಡಿ ಸಮಗ್ರ ಕೀಟ ಮತ್ತು ಸಮಗ್ರ ಪೋಷಕಾಂಶ ನಿರ್ವಹಣೆಗಾಗಿ ಅರ್ಹ ಫಲಾನುಭವಿಗಳಿಗೆ ರೂ 1200/ಹೆ ದಂತೆ ರೂ 27.00 ಲಕ್ಷ ವೆಚ್ಚ ಮಾಡಿ 2190 ಫಲಾನುಭವಿಗಳಿಗೆ ಸಹಾಯಧನ ನೀಡಲಾಗಿದೆ.

ಸಂರಕ್ಷಿತ ಬೇಸಾಯ :

ಈ ಕಾರ್ಯಕ್ರಮದಡಿ ಹೂವುಗಳು, ಬಣ್ಣದ ದೊಣ್ಣೆ ಮೆಣಸಿನಕಾಯಿ ಹಾಗೂ ತರಕಾರಿ ಸಸಿಗಳನ್ನು ಸಂರಕ್ಷಿತ ಬೇಸಾಯದಲ್ಲಿ ಬೆಳೆಯಲು, ದಾಳಿಂಬೆ ಬೆಳೆಗೆ ಪಕ್ಷಿ ನಿರೋಧಕ ಬಲೆ ಹಾಕಲು ಮತ್ತು ವಿವಿಧ ಬೆಳೆಗಳಿಗೆ ಪ್ಲಾಸ್ಟಿಕ್ ಹೊದಿಕೆ ಮಾಡಲು ಉತ್ತೇಜಿಸಲಾಗಿ ರೂ. 128.5 ಲಕ್ಷಗಳ ಸಹಾಯಧನ ನೀಡಲಾಗಿದೆ.

ಕೃಷಿಹೊಂಡ :

ಮಳೆ ನೀರನ್ನು ಸಂಗ್ರಹಿಸಿ ತೋಟಗಾರಿಕೆ ಬೆಳೆಗಳಿಗೆ ಸಂದಿಗ್ಧ ಹಂತಗಳಲ್ಲಿ ಬಳಕೆ ಮಾಡಿ ಬೆಳೆಗಳ ಉತ್ಪಾದಕತೆ ಹೆಚ್ಚಿಸಲು 103 ಸಂಖ್ಯೆ ಕೃಷಿ ಹೊಂಡ ನಿರ್ಮಿಸಲು ರೈತ ಫಲಾನುಭವಿಗಳಿಗೆ ರೂ. 200.7 ಲಕ್ಷ ರೂ.ಗಳ ಸಹಾಯ ಧನವನ್ನು ನೀಡಲಾಗಿದೆ.

ಕೊಯ್ಲೋತ್ತರ ನಿರ್ವಹಣೆ :

ತೋಟಗಾರಿಕೆ ಬೆಳೆಗಳ ಕೊಯ್ಲೋತ್ತರ ನಿರ್ವಹಣೆ ಮಾಡಲು ಪ್ಯಾಕ್ ಹೌಸ್, ಸೋಲಾರ್ ಟನ್ನಲ್ ಡ್ರೈಯರ್, ಪ್ರಾಥಮಿಕ ಸಂಸ್ಕರಣ ಘಟಕ, ಕೋಲ್ಡ್ ರೂಮ್ ಸ್ಟ್ಯಾಗಿಂಗ್, ಈರುಳ್ಳಿ ಸಂಸ್ಕರಣ ಘಟಕ ಗಳನ್ನು ನಿರ್ಮಿಸಿರುವ ಫಲಾನುಭವಿಗಳಿಗೆ ಒಟ್ಟು ರೂ. 146.99 ಲಕ್ಷಗಳ ಸಹಾಯ ಧನ ನೀಡಲಾಗಿದೆ.

ಯಾಂತ್ರೀಕರಣ :

ಈ ಯೋಜನೆಯಡಿಯಲ್ಲಿ ತೋಟಗಾರಿಕೆಯಲ್ಲಿ ಯಂತ್ರೋಪಕರಣಗಳ ಬಳಕೆಯನ್ನು ಉತ್ತೇಜಿಸಲು 20 ಹೆಚ್.ಪಿ ಕಡಿಮೆ ಟ್ರಾಕ್ಟರ್ ಖರೀದಿಸಿದ 62 ಫಲಾನುಭವಿಗಳಿಗೆ ಒಟ್ಟು ರೂ. 58.00 ಲಕ್ಷ ಸಹಾಯಧನ ವಿತರಿಸಲಾಗಿದೆ. ಹಾಗೂ ಗ್ರಾಮೀಣ ಮಾರುಕಟ್ಟೆ, ಮೊಬೈಲ್ ವೆಂಡಿಗ್ ಕಾರ್ಟ್, ಪ್ರಚಾರಕ್ಕೆ ಒಟ್ಟು ರೂ 29.15 ಲಕ್ಷ ವೆಚ್ ಭರಿಸಲಾಗಿದೆ.

2020–21 ನೇ ಸಾಲಿನ ಆಡಳಿತ ವರದಿ–ರೇಷ್ಮೆ ಇಲಾಖೆ

ರೇಷ್ಮೆ ವ್ಯವಸಾಯವು ಕಡಿಮೆ ವಿಸ್ತೀರ್ಣ, ಸಮಯ ಹಾಗೂ ವೆಚ್ಚದಲ್ಲಿ ಅಧಿಕ ಆದಾಯಗಳಿಸುವ ಕೃಷಿ ಆಧಾರಿತ ಕಸುಬು. ವರ್ಷದ ಎಲ್ಲಾ ಕಾಲದಲ್ಲೂ ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗ ಒದಗಿಸುವಲ್ಲಿ ಮಹತ್ತರ ಪಾತ್ರವಹಿಸುತ್ತದೆ. ತುಮಕೂರು ಜಿಲ್ಲೆಯ ಭೂಗುಣ ಮತ್ತು ಹವಾಗುಣ ರೇಷ್ಮೆ ಕೃಷಿಗೆ ತುಂಬಾ ಉಪಯುಕ್ತವಾಗಿದ್ದು, ರೇಷ್ಮೆ ಕೃಷಿಯನ್ನು ಅಭಿವೃದ್ಧಿಪಡಿಸಲು ತುಂಬಾ ಸಹಕಾರಿಯಾಗಿದೆ. ತುಮಕೂರು ಜಿಲ್ಲೆಯಲ್ಲಿ ಎಲ್ಲಾ ತಳಿಯ ಗೂಡುಗಳನ್ನು ಉತ್ಪಾದಿಸಲಾಗುತ್ತಿದೆ ಹಾಗೂ ರಾಜ್ಯದಲ್ಲಿ ದ್ವಿತಳಿ ಗೂಡು ಉತ್ಪಾದನೆಯಲ್ಲಿ ಜಿಲ್ಲೆ ಎರಡನೇ ಸ್ಥಾನದಲ್ಲಿದೆ. ತುಮಕೂರು ಜಿಲ್ಲೆಯಲ್ಲಿ 4946.04 ಹೆಕ್ಟೇರ್ ಪ್ರದೇಶದಲ್ಲಿ ಹಿಪ್ಪುನೇರಳೆ ಇದ್ದು, 9254 ರೈತರು ರೇಷ್ಮೆ ಕೃಷಿಯನ್ನು ಕೈಗೊಂಡಿರುತ್ತಾರೆ. 2020–21ನೇ ಸಾಲಿನಲ್ಲಿ 15.506 ಲಕ್ಷ ಮಿಶ್ರತಳಿ, 23.456 ಲಕ್ಷ ದ್ವಿತಳಿ ಮತ್ತು 12.98 ಲಕ್ಷ ಮೈಸೂರು ತಳಿ ಮೊಟ್ಟೆ ಸೇರಿದಂತೆ **ಒಟ್ಟು 51.942** ಲಕ್ಷ ರೇಷ್ಮೆ ಮೊಟ್ಟೆಗಳನ್ನು ಚಾಕಿ ಮಾಡಲಾಗಿದೆ ಹಾಗೂ 1136.556 ಮೆ.ಟನ್ ಮಿಶ್ರತಳಿ, 1558.00 ಮೆ.ಟನ್ ದ್ವಿತಳಿ ಮತ್ತು 384.44 ಮೆ.ಟನ್ ಮೈಸೂರು ತಳಿ ಬಿತ್ತನೆ ರೇಷ್ಮೆ ಗೂಡು ಸೇರಿದಂತೆ **ಒಟ್ಟು 3079.00** ಮೆ.ಟನ್ ಗೂಡು ಉತ್ಪಾದಿಸಲಾಗಿದೆ.

ಆಡಳಿತ

ತಾಂತ್ರಿಕ ಸೇವಾ ಕೇಂದ್ರಗಳು : ಜಿಲ್ಲೆಯಲ್ಲಿ ರೇಷ್ಮೆ ಕೃಷಿಯ ವಿವಿಧ ತಾಂತ್ರಿಕತೆಗಳನ್ನು ಮತ್ತು ಅಭಿವೃದ್ಧಿ ಕಾರ್ಯಕ್ರಮಗಳ ಸೌಲಭ್ಯವನ್ನು 22 ತಾಂತ್ರಿಕ ಸೇವಾ ಕೇಂದ್ರಗಳ ಮೂಲಕ ಒದಗಿಸಲಾಗುತ್ತಿದೆ. ಜಿಲ್ಲಾ ಮಟ್ಟದಲ್ಲಿ ರೇಷ್ಮೆ ಉಪನಿರ್ದೇಶಕರು, ತಾಲ್ಲೂಕು ಮಟ್ಟದಲ್ಲಿ ರೇಷ್ಮೆ ಸಹಾಯಕ ನಿರ್ದೇಶಕರ ಉಸ್ತುವಾರಿಯಲ್ಲಿ ರೇಷ್ಮೆ ವಿಸ್ತರಣಾಧಿಕಾರಿಗಳ ನೇತೃತ್ವದಲ್ಲಿ ವಲಯಾಧಿಕಾರಿಗಳ ಮುಖೇನ ಕೆಳಕಂಡ ಪ್ರಮುಖ ಸೇವೆಗಳನ್ನು ಒದಗಿಸಲಾಗುತ್ತಿದೆ.

1) ಹೊಸತಳಿ ಹಿಪ್ಪುನೇರಳೆ ಬೇಸಾಯ ಕೈಗೊಳ್ಳಲು, ರೈತರಿಗೆ ಮಾರ್ಗದರ್ಶನ ನೀಡಬೇಕಾದ ಬಿತ್ತನೆ ಕಡ್ಡಿ/ಸಸಿಗಳನ್ನು ಪೂರೈಕೆ ಮಾಡಿ ಹಿಪ್ಪುನೇರಳೆ ಸಸಿಗಳನ್ನು ಬೆಳೆಸಲು ತಾಂತ್ರಿಕ ಸಲಹೆ ನೀಡಿ ಪ್ರೋತ್ಸಾಹಿಸುವುದು.
2) ಉತ್ತಮ ಗುಣಮಟ್ಟದ ಹಿಪ್ಪುನೇರಳೆ ಸೊಪ್ಪು ಉತ್ಪಾದನೆ ಮಾಡಲು ಅಗತ್ಯವಿರುವ ತಾಂತ್ರಿಕ ಮಾಹಿತಿ ನೀಡುವುದು.
3) ಹೆಚ್ಚು ಇಳುವರಿ ನೀಡುವ ರೇಷ್ಮೆ ತಳಿಗಳನ್ನು ಸಾಕಣೆ ಮಾಡಲು ನೂತನ ತಾಂತ್ರಿಕೆತೆಗಳನ್ನು ನೀಡುವುದು. ರೋಗರಹಿತ ರೇಷ್ಮೆ ಮೊಟ್ಟೆ ಪೂರೈಕೆ ಮಾಡುವುದು.
4) ರೇಷ್ಮೆ ಹುಳುಗಳಿಗೆ ತಗಲುವ ರೋಗಗಳು ಮತ್ತು ಕೀಟಗಳ ಬಾಧೆ ನಿಯಂತ್ರಿಸಲು ಸಲಹೆ – ಮಾರ್ಗದರ್ಶನ ನೀಡುವುದು.
5) ವಿವಿಧ ರೇಷ್ಮೆ ಚಟುವಟಿಕೆಗಳಿಗೆ – ಬ್ಯಾಂಕುಗಳಿಂದ ಸಾಲ ಸೌಲಭ್ಯ ಪಡೆಯಲು ಸಹಕರಿಸುವುದು. ಇಲಾಖೆಯಿಂದ ಲಭ್ಯವಿರುವ ಸಹಾಯಧನ ಪಾವತಿಸುವುದು.

ರಾಜ್ಯ–ಕೇಂದ್ರ ಸರ್ಕಾರದ, ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್‌ನ ವಿವಿಧ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸುವುದು. ತರಬೇತಿ ಕಾರ್ಯಕ್ರಮ, ತಾಲ್ಲೂಕು ಮಟ್ಟದ ಕಾರ್ಯಾಗಾರ, ಮಹಿಳಾ ಪ್ರಾತ್ಯಕ್ಷತೆ ತಾಕು, ವಸ್ತುಪ್ರದರ್ಶನ, ರೇಷ್ಮೆ ಬೆಳೆ ಕ್ಷೇತ್ರೋತ್ಸವ ಆಚರಿಸುವುದು. ಮತ್ತಿತರ ಪ್ರಚಾರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು. ಅಧ್ಯಯನ ಪ್ರವಾಸ ಕೈಗೊಳ್ಳುವುದು.

ಹಣಕಾಸು : ಜಿಲ್ಲೆಯ ಆಡಳಿತ ನಿರ್ವಹಣೆಗಾಗಿ ವೇತನ/ ವೇತನೇತರ ಲೆಕ್ಕಶೀರ್ಷಿಕೆಯಡಿ ರೂ. 438.607 ಲಕ್ಷಗಳು ಸಂಬಳ, ಸಾರಿಗೆ, ವಿದ್ಯುಚ್ಛಕ್ತಿ, ದೂರವಾಣಿ, ಕಚೇರಿ ವೆಚ್ಚ ಮತ್ತು ವಾಹನಗಳ ನಿರ್ವಹಣೆಗಾಗಿ ಮತ್ತು ಇತರೆ ವೆಚ್ಚಗಳಿಗಾಗಿ ಭರಿಸಲಾಗಿದೆ.

31–03–2021ರಲ್ಲಿ ಇದ್ದಂತೆ ರೇಷ್ಮೆ ಇಲಾಖೆಯ ಸಿಬ್ಬಂದಿ ವಿವರಗಳು

ಕ್ರ ಸ ಂ.	ಹುದ್ದೆಗಳ ಹೆಸರು	ಮಂಜೂರಾದ ಹುದ್ದೆ	ಭರ್ತಿಯಾದ ಹುದ್ದೆ	ಖಾಲಿ ಹುದ್ದೆ	ಹುದ್ದೆ ಖಾಲಿ ಇರುವ ಕಛೇರಿಗಳು
1	ರೇಷ್ಮೆ ಉಪನಿರ್ದೇಶಕರು	1	1	0	
2	ರೇಷ್ಮೆ ಸಹಾಯಕ ನಿರ್ದೇಶಕರು	7	6	1	ರೇಷ್ಮೆ ಸಹಾಯಕ ನಿರ್ದೇಶಕರು ಚಿ.ನಾ. ಹಳ್ಳಿ
3	ರೇಷ್ಮೆ ವಿಸ್ತರಣಾಧಿಕಾರಿಗಳು	13	4	9	ತಾ.ಸೇ.ಕೇ.ಮಧುಗಿರಿ/ ಕೊಡಿಗೇನಹಳ್ಳಿ /ಶಿರಾ/ಬರಗೂರು/ಪಾವಗಡ /ವೈ.ಎನ್.ಹೊಸಕೋಟೆ/ ಚಿನಾಹಳ್ಳಿ/ತಿಪಟೂರು/ತುರುವೇಕೆರೆ/
4	ರೇಷ್ಮೆ ನಿರೀಕ್ಷಕರು	26	21	5	ತಾ.ಸೇ.ಕೇಂ, ಕೊಡಿಗೇನಹಳ್ಳಿ, ಜಿ.ಜಿ. ಪಾವಗಡ – 2 , ಸಿ.ಡಿ.ಸಿ. ತಾಳೇಕೆರೆ –1, ರೇಸನಿ,ತುಮಕೂರು –1
5	ರೇಷ್ಮೆ ಪ್ರದರ್ಶಕರು	37	10	27	ತಾಸೇಕೇ/ಹೊಳವನಹಳ್ಳಿ–3/ಮಧುಗಿರಿ–2/ಕೊಡಿಗೇನಹಳ್ಳಿ–2/ಪಾವಗಡ–2/ವೈ.ಎನ್.ಹೊಸಕೋಟೆ–3 /ಜಿ.ಜಿ.ಪಾವಗಡ–2/ಚಿ.ನಾ.ಹಳ್ಳಿ–2/ತುರುವೇಕೆರೆ–2/ಎಡಿಯೂರು –2/ನಿಡಸಾಲೆ–3/ಚೌಡನಕುಪ್ಪೆ–2/ ರೇಸನಿ ಪಾವಗಡ–1/ನಾಗವಲ್ಲಿ–1.
6	ರೇಷ್ಮೆ ಪ್ರವರ್ತಕರು	6	0	6	ಬಿತ್ತನೆಕೋಠಿ ಪಾವಗಡ–3/ ಚಿನಾಹಳ್ಳಿ–1/ ತುರುವೇಕೆರೆ–2
7	ಪತ್ರಾಂಕಿತ ವ್ಯವಸ್ಥಾಪಕರು	1	1	0	ರೇ.ಉ.ನಿ. ಕಛೇರಿ, ತುಮಕೂರು.
8	ಅಧೀಕ್ಷಕರು	1	0	1	
9	ಪ್ರ.ದ.ಸಹಾಯಕರು	1	1	0	
10	ದ್ವಿ.ದ.ಸಹಾಯಕರು	3	1	2	
11	ವಾಹನ ಚಾಲಕರು	6	0	6	ರೇಉನಿ ಕಚೇರಿ–1/ತಾಸೆಕೇ ತುಮಕೂರು–1/ತಾಸೇಕೇ ಮಧುಗಿರಿ–1/ತುರುವೇಕೆರೆ–1/ಪಾವಗಡ–1 /ಹೊಳವನಹಳ್ಳಿ–1/ಚೌಡನಕುಪ್ಪೆ–0
12	ಡಿ ಗ್ರೂಪ್	9	5	4	

	ಒಟ್ಟು	**111**	**50**	**61**	
ಸಂಖ್ಯಾತಿರಿಕ್ತ ಹುದ್ದೆಗಳು					
1	ರೇಷ್ಮೆ ಪ್ರವರ್ತಕರು	4	4	0	
2	ಡಿ ಗ್ರೂಪ್	5	5	0	
	ಒಟ್ಟು	**9**	**9**	**0**	
ದಿನಗೂಲಿ ಕೆಲಸಗಾರರು					
3	ದಿನಗೂಲಿ ಕೆಲಸಗಾರರು	4	4	0	

ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳು :

ದ್ವಿತಳಿ ರೇಷ್ಮೆ ಬೆಳೆಗಾರರಿಗೆ ಸಹಾಯ :– ಜಿಲ್ಲೆಯಲ್ಲಿ ರೇಷ್ಮೆ ಕೃಷಿಯನ್ನು ಅಭಿವೃದ್ಧಿ ಪಡಿಸಲು ಮತ್ತು ಅಂತರಾಷ್ಟ್ರೀಯ ಗುಣಮಟ್ಟದ ದ್ವಿತಳಿ ಗೂಡು ಉತ್ಪಾದಿಸಲು, ರೇಷ್ಮೆ ಕೃಷಿಕರು ಉತ್ಪಾದಿಸಿದ ದ್ವಿತಳಿ ಗೂಡಿಗೆ ಪ್ರೋತ್ಸಾಹ ನೀಡುವುದು ಅವಶ್ಯಕವಾಗಿದ್ದು, ಈ ಕಾರ್ಯಕ್ರಮದಲ್ಲಿ ಅಧ್ಯಯನ ಪ್ರವಾಸ, ವಿವಿಧ ಜಾತ್ರೆಗಳಲ್ಲಿ ಕೃಷಿಕರಿಗೆ ವಸ್ತು ಪ್ರದರ್ಶನ ಮತ್ತು ರೇಷ್ಮೆ ಕೃಷಿಕರ ರೇಷ್ಮೆ ಹುಳುಗಳಿಗೆ ತಗಲುವ ರೋಗ ಮತ್ತು ಕೀಟ ಬಾಧೆಗಳ ನಿಯಂತ್ರಣಕ್ಕಾಗಿ ಸೋಂಕು ನಿವಾರಕಗಳನ್ನು ಖರೀದಿಸಿ ರೇಷ್ಮೆ ಹುಳು ಸಾಕುವ ಮನೆಗಳಿಗೆ ಮತ್ತು ರೇಷ್ಮೆ ಹುಳು ಸಾಕುವ ಉಪಕರಣಗಳಿಗೆ ಸೋಂಕು ನಿವಾರಣೆ ಮಾಡಲು ವಿತರಿಸಿದೆ. ಇದರಲ್ಲಿ ರೂ. 56.60 ಲಕ್ಷಗಳ ಆರ್ಥಿಕ ಮತ್ತು 1012 ಭೌತಿಕ ಗುರಿಯಿದ್ದು, ರೂ. 56.574 ಲಕ್ಷಗಳ ಆರ್ಥಿಕ ಮತ್ತು 1012 ಭೌತಿಕ ಪ್ರಗತಿಯಾಗಿರುತ್ತದೆ.

ತಾಲ್ಲೂಕು ಪಂಚಾಯತ್ ಕಾರ್ಯಕ್ರಮಗಳು :

C) ಸಲಹಾ ಸೇವೆಗಳು, ಪ್ರದರ್ಶನಗಳು, ಪ್ರಚಾರ ಮತ್ತು ಶ್ರವಣ ದೃಶ್ಯ : ಇದೊಂದು ಪ್ರಮುಖ ಕಾರ್ಯಕ್ರಮವಾಗಿದ್ದು, ಈ ಕಾರ್ಯಕ್ರಮದಡಿಯಲ್ಲಿ ಜಿಲ್ಲೆಯ ತಾಂತ್ರಿಕ ಸೇವಾ ಕೇಂದ್ರಗಳ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳಲ್ಲಿ ಹಿಪ್ಪುನೇರಳೆ ತೋಟ ನಿರ್ವಹಣೆ, ರೇಷ್ಮೆ ಹುಳು ಸಾಕಾಣಿಕೆ ಮತ್ತು ರೋಗ ನಿಯಂತ್ರಣದ ಬಗ್ಗೆ ಸೂಕ್ತ ತಂತ್ರಜ್ಞಾನ ಅಳವಡಿಸಿಕೊಂಡು ಉತ್ತಮ ಇಳುವರಿ ಪಡೆಯುವ ಬಗ್ಗೆ ರೇಷ್ಮೆ ಬೆಳೆಗಾರರಿಗೆ ತಿಳುವಳಿಕೆ ನೀಡಲಾಗಿದೆ. ರೇಷ್ಮೆ ಕೃಷಿ ಕ್ಷೇತ್ರೋತ್ಸವಗಳನ್ನು ಆಚರಿಸುವುದರ ಮೂಲಕ ತಾಲ್ಲೂಕು ಮಟ್ಟದಲ್ಲಿ ಕಾರ್ಯಗಾರಗಳನ್ನು ಏರ್ಪಡಿಸುವುದು ಮತ್ತು ವಸ್ತುಪ್ರದರ್ಶನವನ್ನು ಏರ್ಪಡಿಸುವುದು ಹಾಗೂ ಉತ್ತಮ ಪ್ರಾತ್ಯಕ್ಷತಾ ತೋಟ ನಿರ್ವಹಿಸಿದ ಮಹಿಳಾ ರೇಷ್ಮೆ ಬೆಳೆಗಾರರಿಗೆ ಪ್ರೋತ್ಸಾನಧನ, ಹಿಪ್ಪುನೇರಳೆ ತೋಟಗಳ ಮಣ್ಣು ಪರೀಕ್ಷೆ ಮಾಡಿಸುವುದು. ರೈತರನ್ನು ರೇಷ್ಮೆ ಚಟುವಟಿಕೆಗಳ ಬಗ್ಗೆ ತಿಳುವಳಿಕೆ ಮೂಡಿಸಲು ಮುಂತಾದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿದೆ. 2020–21ನೇ ಸಾಲಿನಲ್ಲಿ 130 ಭೌತಿಕ ಮತ್ತು ರೂ. 13.00

ಲಕ್ಷಗಳ ಆರ್ಥಿಕ ಗುರಿ ನಿಗಧಿಪಡಿಸಲಾಗಿದ್ದು, ರೂ. 13.00 ಲಕ್ಷ ಬಿಡುಗಡೆಯಾಗಿದ್ದು 130 ಭೌತಿಕ ಮತ್ತು ರೂ. 12.98 ವೆಚ್ಚ ಭರಿಸಲಾಗಿದೆ.

ರಾಜ್ಯ ವಲಯದ ಕಾರ್ಯಕ್ರಮಗಳು :

1. **ರೇಷ್ಮೆ ಅಭಿವೃದ್ಧಿ ಯೋಜನೆ : (ರಾಜ್ಯ ನೆರವು)** ಈ ಯೋಜನೆಯು ರಾಜ್ಯ ಸರ್ಕಾರದ ಕಾರ್ಯಕ್ರಮವಾಗಿದ್ದು ಜಿಲ್ಲೆಯಲ್ಲಿ ದ್ವಿತಳಿ ರೇಷ್ಮೆ ಉತ್ಪಾದನೆ ಪ್ರೋತ್ಸಾಹಿಸಲು ಈ ಯೋಜನೆಯನ್ನು ಅನುಷ್ಟಾನಗೊಳಿಸಲಾಗುತ್ತಿದೆ. ಈ ಯೋಜನೆಯಡಿ ಒಟ್ಟು 761 ರೇಷ್ಮೆ ಬೆಳೆಗಾರರಿಗೆ ರೂ. 504.162 ಲಕ್ಷ, ಅದರಲ್ಲಿ ಪ್ರತ್ಯೇಕ ರೇಷ್ಮೆ ಹುಳು ಸಾಕುವ ಮನೆ ನಿರ್ಮಿಸಿಕೊಂಡಿರುವ 158 ಫಲಾನುಭವಿಗಳಿಗೆ ಒಟ್ಟು ರೂ. 376.50 ಲಕ್ಷಗಳ ಸಹಾಯಧನ ನೀಡಲಾಗಿದೆ. ಹುಳು ಸಾಕುವ ಸಲಕರಣೆ ಖರೀದಿಸಲು 603 ಜನರಿಗೆ ರೂ. 127.662 ಲಕ್ಷಗಳ ಸಹಾಯಧನ ನೀಡಲಾಗಿದೆ.
2. **ರಾಜ್ಯ ರೇಷ್ಮೆ ಅಭಿವೃದ್ಧಿ ಯೋಜನೆಯ ವಿಶೇಷ ಘಟಕ ಯೋಜನೆ :** ಈ ಯೋಜನೆಯಡಿ ಒಟ್ಟು 234 ಪರಿಶಿಷ್ಟ ಜಾತಿ ರೇಷ್ಮೆ ಬೆಳೆಗಾರರಿಗೆ ರೂ. 243.205 ಲಕ್ಷ ಅದರಲ್ಲಿ ರೇಷ್ಮೆ ಹುಳು ಸಾಕುವ ಮನೆ ನಿರ್ಮಾಣಕ್ಕೆ 44 ಫಲಾನುಭವಿಗಳಿಗೆ ರೂ. 122.00 ಲಕ್ಷ, ಹುಳು ಸಾಕುವ ಸಲಕರಣೆಗೆ 190 ಫಲಾನುಭವಿಗಳಿಗೆ ರೂ. 121.205 ಲಕ್ಷಗಳ ಸಹಾಯಧನ ನೀಡಲಾಗಿದೆ.
3. **ರಾಜ್ಯ ರೇಷ್ಮೆ ಅಭಿವೃದ್ಧಿ ಯೋಜನೆಯ ಗಿರಿಜನ ಉಪ ಯೋಜನೆ:** ಈ ಯೋಜನೆಯಡಿ ಒಟ್ಟು 99 ಪರಿಶಿಷ್ಟ ಪಂಗಡ ರೇಷ್ಮೆ ಬೆಳೆಗಾರರಿಗೆ ರೂ. 84.733 ಲಕ್ಷ ಅದರಲ್ಲಿ ರೇಷ್ಮೆ ಹುಳು ಸಾಕುವ ಮನೆ ನಿರ್ಮಾಣಕ್ಕೆ 19 ಫಲಾನುಭವಿಗಳಿಗೆ ರೂ. 54.289 ಲಕ್ಷಗಳು ಪ್ರೋತ್ಸಾಹಧನ ನೀಡಲಾಗಿದೆ. ಹುಳು ಸಾಕುವ ಸಲಕರಣೆಗೆ 80 ಫಲಾನುಭವಿಗಳಿಗೆ ರೂ. 30.444 ಲಕ್ಷಗಳ ಸಹಾಯಧನ ನೀಡಲಾಗಿದೆ.
4. **ನೂತನ ಕತೃತ್ವ ಶಕ್ತಿ ಯೋಜನೆ (ಸಾಮಾನ್ಯ) :** ಈ ಯೋಜನೆಯಡಿ ಒಟ್ಟು 2959 ಫಲಾನುಭವಿಗಳಿಗೆ ರೂ. 68.999 ಲಕ್ಷಗಳು ದ್ವಿತಳಿ ಚಾಕಿ ಪ್ರೋತ್ಸಾಹಧನ ನೀಡಲಾಗಿದೆ.
5. **ರೇಷ್ಮೆ ವ್ಯವಸಾಯ ಯೋಜನೆ :** ಈ ಯೋಜನೆಯಡಿ ರೈತರಿಂದ ರೈತರಿಗೆ ತರಬೇತಿ ಕಾರ್ಯಕ್ರಮಕ್ಕೆ ಒಟ್ಟು 2.725 ಲಕ್ಷ ಭರಿಸಿ, 237 ರೇಷ್ಮೆ ಬೆಳೆಗಾರರಿಗೆ ಪ್ರೋತ್ಸಾಹ ನೀಡಲಾಗಿದೆ.

ಕೇಂದ್ರ ವಲಯದ ಕಾರ್ಯಕ್ರಮಗಳು :

7. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ :

7ಅ. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ : ಸಾಮಾನ್ಯ ವರ್ಗದ 52 ರೇಷ್ಮೆ ಬೆಳೆಗಾರರಿಗೆ ರೂ. 7.80 ಲಕ್ಷಗಳನ್ನು ಟ್ರಂಚಿಂಗ್ & ಮಲ್ಚಿಂಗ್ ಸಹಾಯಧನ ನೀಡಲಾಗಿದೆ.

7ಆ. ವಿಶೇಷ ಘಟಕ ಯೋಜನೆ : ಪರಿಶಿಷ್ಟ ಜಾತಿಯ 115 ರೇಷ್ಮೆ ಬೆಳೆಗಾರರಿಗೆ ರೂ. 13.385 ಲಕ್ಷಗಳನ್ನು ಮಣ್ಣಿನ ಫಲವತ್ತತೆಗೆ ಹಾಗೂ ಟ್ರಂಚಿಂಗ್ & ಮಲ್ಚಿಂಗ್ ಸಹಾಯಧನ ನೀಡಲಾಗಿದೆ.

7ಇ. ಗಿರಿಜನ ಉಪಯೋಜನೆ : ಪರಿಶಿಷ್ಟ ಪಂಗಡದ 46 ರೇಷ್ಮೆ ಬೆಳೆಗಾರರಿಗೆ ರೂ. 5.043 ಲಕ್ಷ ಮಣ್ಣಿನ ಫಲವತ್ತತೆಗೆ ಹಾಗೂ ಟ್ರಂಚಿಂಗ್ & ಮಲ್ಚಿಂಗ್ ಸಹಾಯಧನ ನೀಡಲಾಗಿದೆ.

8. ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆ : ಯೋಜನೆಯು ಕೇಂದ್ರ ಸರ್ಕಾರದ ಕಾರ್ಯಕ್ರಮವಾಗಿದ್ದು, ಹನಿನೀರಾವರಿ ಘಟಕ ಅಳವಡಿಕೆಗೆ ಸಹಾಯಧನ ನೀಡಲಾಗುತ್ತಿದ್ದು, ಸದರಿ ಯೋಜನೆಯಡಿ 626 ಫಲಾನುಭವಿಗಳಿಗೆ 410 ಹೆಕ್ಟೇರ್‌ಗೆ ಒಟ್ಟು ರೂ. 383.20 ಲಕ್ಷಗಳ ಸಹಾಯಧನ ನೀಡಲಾಗಿದೆ.

9. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ:

ಈ ಯೋಜನೆಯಡಿ 649 ರೇಷ್ಮೆ ಕೃಷಿ ಚಟುವಟಿಕೆಗಳಿಗೆ ರೂ. 623.98 ಲಕ್ಷ ಕೂಲಿ ವೆಚ್ಚ ಪಾವತಿ ಆಗಿದೆ. 201273 ಮಾನವ ದಿನ ಸೃಷ್ಟಿ ಆಗಿರುತ್ತದೆ

ಆದಾಯ (ರಾಜಸ್ವ) :–

ರೇಷ್ಮೆ ಇಲಾಖೆಯು ವಿಸ್ತರಣೆ ಹಾಗೂ ಸಲಹಾ ಸೇವಾ ಇಲಾಖೆಯಾಗಿದ್ದು ರೈತರಿಗೆ ಕಾಲ ಕಾಲಕ್ಕೆ ತಾಂತ್ರಿಕ ಮಾಹಿತಿ ಹಾಗೂ ಸೌಲಭ್ಯಗಳನ್ನು ಒದಗಿಸುತ್ತಿದೆ. ಜಿಲ್ಲೆಯಲ್ಲಿ 9254 ರೇಷ್ಮೆ ಬೆಳೆಗಾರರು 3079 ಮೆ.ಟನ್ ರೇಷ್ಮೆ ಗೂಡು ಉತ್ಪಾದಿಸಿದ್ದು, ಅಂದಾಜು ರೂ. 1102.282 ಲಕ್ಷ ಆದಾಯಗಳಿಸುವಲ್ಲಿ ಮಹತ್ತರ ಪಾತ್ರ ವಹಿಸಿದೆ. ಒಟ್ಟಾರೆ ಜಿಲ್ಲೆಯಲ್ಲಿ ರೇಷ್ಮೆ ಕೃಷಿಯಿಂದ 9254 ಗ್ರಾಮೀಣ ಕುಟುಂಬಗಳಿಗೆ ವರ್ಷವಿಡೀ ಉದ್ಯೋಗ ದೊರಕಿಸಿ ಆರ್ಥಿಕ ಸ್ವಾವಲಂಭನೆ ಹೊಂದಲು ಸಹಕಾರಿಯಾಗಿರುತ್ತದೆ. ಇದರಿಂದ ಸರ್ಕಾರಕ್ಕೆ ಅಂದಾಜು ರೂ. 1102.282 ಲಕ್ಷ ಮಾರುಕಟ್ಟೆ ಶುಲ್ಕದ ಆದಾಯ ಬಂದಿರುತ್ತದೆ..

2020–21ನೇ ಸಾಲಿನ ತುಮಕೂರು ಜಿಲ್ಲೆಯ ತಾಂತ್ರಿಕ ಪ್ರಗತಿ ವರದಿ

ಕ್ರ ಸಂ.	ಕಾರ್ಯಕ್ರಮದ ಹೆಸರು	2019–20			2020–21		
		ಗುರಿ	ಸಾಧನೆ	ಶೇಕಡವಾರು ಸಾಧನೆ	ಗುರಿ	ಸಾಧನೆ	ಶೇಕಡವಾರು ಸಾಧನೆ
1	ಹಿಪ್ಪನೇರಳೆ ನಾಟಿ (ಹೆಕ್ಟರ್)	350.00	206.350	58.95	350.00	308.53	88.15
2	ದ್ವಿತಳಿ ಮೊಟ್ಟೆ (ಲಕ್ಷಗಳಲ್ಲಿ)	28.500	22.350	78.41	28.500	23.456	82.30
3	ದ್ವಿತಳಿ ಗೂಡು (ಮೆ.ಟನ್)	1852.500	1471.296	79.42	1852.500	1558.00	84.10
4	ಮಿಶ್ರತಳಿ ಮೊಟ್ಟೆ (ಲಕ್ಷಗಳಲ್ಲಿ)	25.500	18.910	74.15	25.500	15.507	60.81
5	ಮಿಶ್ರ ತಳಿ ಗೂಡು (ಮೆ.ಟನ್)	1657.500	1383.157	75.42	1657.500	1137.00	68.60
6	ಮೈಸೂರು ತಳಿ ಮೊಟ್ಟೆ (ಲಕ್ಷಗಳಲ್ಲಿ)	13.50	13.50	100.00	10.50	10.25	97.62
7	ಮೈಸೂರು ತಳಿ ಗೂಡು (ಮೆ.ಟನ್)	675.00	999.190	100.00	525.00	384.00	73.14
	ಒಟ್ಟು ಮೊಟ್ಟೆ	**67.500**	**54.04**	**80.00**	**64.50**	**49.213**	**76.30**
	ಒಟ್ಟು ಗೂಡು	**4185.00**	**3853.643**	**92.00**	**4185.00**	**3079.00**	**73.57**

ತುಮಕೂರು ಜಿಲ್ಲೆ ರೇಷ್ಮೆ ಇಲಾಖೆಯ 2020–21ನೇ ಸಾಲಿನ ಆರ್ಥಿಕ ಪ್ರಗತಿ ವರದಿ (ರೂ. ಲಕ್ಷಗಳಲ್ಲಿ)

ಕ್ರ ಸಂ	ಕಾರ್ಯಕ್ರಮದ ಹೆಸರು	2019–20		ಶೇಕಡ ಸಾಧನೆ	2020–21		ಶೇಕಡ ಸಾಧನೆ
		ಬಿಡುಗಡೆ	ಖರ್ಚು		ಬಿಡುಗಡೆ	ಖರ್ಚು	
1	ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (ಕೇಂದ್ರ)	48.371	48.266	100	26.38	26.229	99.42
2	ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ (ಕೇಂದ್ರ)	297.700	297.700	100	383.200	383.200	100
3	ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ	838.92	567.02	68	623.98	623.98	100
	ಕೇಂದ್ರ ಯೋಜನೆಗಳ ಒಟ್ಟು ಮೊತ್ತ	**1184.991**	**912.986**	**78**	**1033.56**	**1033.409**	
4	ರೇಷ್ಮೆ ಅಭಿವೃದ್ಧಿ ಯೋಜನೆ (ಸಾಮಾನ್ಯ) (ರಾಜ್ಯ)	209.942	209.936	100	504.165	504.162	100
5	ವಿಶೇಷ ಘಟಕ ಯೋಜನೆ (ರಾಜ್ಯ)	66.85	66.832	100	243.05	243.05	100
6	ಗಿರಿಜನ ಉಪ ಯೋಜನೆ (ರಾಜ್ಯ)	56.225	56.20	100	84.735	84.733	100
7	ನೂತನ ಕತೃತ್ವಶಕ್ತಿ (ಸಾಮಾನ್ಯ) (ರಾಜ್ಯ)	183.140	183.021	100	112.443	112.433	100
8	ರಾಜ್ಯ ರೇಷ್ಮೆ ವ್ಯವಸಾಯ ಯೋಜನೆ	1.350	1.347	100	2.725	2.725	100
	ರಾಜ್ಯ ಯೋಜನೆಗಳ ಒಟ್ಟು ಮೊತ್ತ	**517.507**	**517.336**	**100**	**947.118**	**947.103**	**100**
9	ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳು	90.00	89.932	100	56.60	56.576	99.95
10	ತಾಲ್ಲೂಕು ಪಂಚಾಯತ್ ಕಾರ್ಯಕ್ರಮಗಳು	13.00	12.858	99	13.00	12.98	99.85
	ಜಿಲ್ಲಾ ಯೋಜನೆಗಳ ಒಟ್ಟು ಮೊತ್ತ	**103.00**	**102.79**	**100**	**69.60**	**69.556**	**99.93**
	ಒಟ್ಟಾರೆ ಮೊತ್ತ	**1805.498**	**1533.112**	**85**	**2050.278**	**2050.068**	**99.99**

2020–21ನೇ ಸಾಲಿಗೆ ಮೀನುಗಾರಿಕೆ ಇಲಾಖೆಯ ವಾರ್ಷಿಕ ಆಡಳಿತ ವರದಿ

ತುಮಕೂರು ಜಿಲ್ಲೆಯಲ್ಲಿ ಮೀನುಗಾರಿಕೆಗೆ ವಿಫುಲವಾದ ಅವಕಾಶಗಳು ಇರುತ್ತವೆ. ತೆಂಗಿನ ನಾಡೆಂದು ಕರೆಯಲಾದ ತುಮಕೂರು ಜಿಲ್ಲೆಯನ್ನು ಕೆರೆಗಳ ಬೀಡೆಂದು ಸಹ ಕರೆಯಬಹುದು. ತುಮಕೂರು ಜಿಲ್ಲೆ 1707 ನೀರಾವರಿ ಕೆರೆಗಳನ್ನು ಹೊಂದಿದ್ದು ರಾಜ್ಯದಲ್ಲಿ ಎರಡನೇ ಸ್ಥಾನದಲ್ಲಿ ಇರುತ್ತದೆ. ಇತ್ತೀಚಿನ ವರ್ಷಗಳಲ್ಲಿ ಹೇಮಾವತಿ ನಾಲಾ ಪಾದಾರ್ಪಣೆ ಮಾಡಿರುವುದರಿಂದ ಮೀನುಗಾರಿಕೆ ಅಭಿವೃದ್ಧಿಗೆ ಇಲಾಖೆ ವತಿಯಿಂದ ವಿಫುಲವಾದ ಅವಕಾಶಗಳನ್ನು ಕಲ್ಪಿಸಿದೆ.

40 ಹೆಕ್ಟೇರ್‌ಗಿಂತ ಕಡಿಮೆ ಅಚ್ಚುಕಟ್ಟುವುಳ್ಳ ಕೆರೆಗಳನ್ನು ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ/165/ಜಿಪಸ/02 ದಿನಾಂಕ:01–03–2004 ಮತ್ತು ದಿನಾಂಕ:05–04–2004 ರ ಮೇರೆಗೆ ಆಯಾ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿರುವ ಕೆರೆಗಳನ್ನು ಆಯಾ ಗ್ರಾಮ ಪಂಚಾಯತಿಗಳಿಗೆ ಈಗಾಗಲೇ ವರ್ಗಾಯಿಸಲಾಗಿರುತ್ತದೆ. ಸದರಿ ಕೆರೆಗಳನ್ನು ಗುತ್ತಿಗೆ ನೀಡುವ ಹಾಗೂ ಹರಾಜು ಮೂಲಕ ವಿಲೇವಾರಿ ಮಾಡುವ ಪ್ರಕ್ರಿಯೆಯನ್ನು ಆಯಾ ಗ್ರಾಮ ಪಂಚಾಯತಿ ವತಿಯಿಂದಲೇ ನಿರ್ವಹಿಸಲಾಗುವುದಲ್ಲದೆ ಅಂತಹ ಕೆರೆಗಳಿಂದ ಬರುವಂತಹ ಆದಾಯವನ್ನು ಗ್ರಾಮ ಪಂಚಾಯತಿಗಳ ಆರ್ಥಿಕ ಅಭಿವೃದ್ಧಿಗೆ ವಿನಿಯೋಗಿಸಿಕೊಂಡು ಇತರೆ ಗ್ರಾಮಾಭಿವೃದ್ಧಿ ಕಾರ್ಯಗಳಿಗೆ ಖರ್ಚು ಮಾಡಲಾಗುವುದು. ಮೀನುಗಾರಿಕೆ ಇಲಾಖೆ ವತಿಯಿಂದ ಕೆರೆಗಳ ಅಭಿವೃದ್ಧಿ ಬಗ್ಗೆ ತಾಂತ್ರಿಕ ಸಲಹೆಯನ್ನು ನೀಡುವುದಲ್ಲದೆ ಕೆರೆಗಳಿಗೆ ಬೇಡಿಕೆಗನುಸಾರವಾಗಿ ಮೀನುಮರಿಗಳನ್ನು ಸಹ ಪೂರೈಸಲಾಗುವುದು.

ಜಿಲ್ಲೆಯಲ್ಲಿ ಕೆರೆ ಕಟ್ಟೆ ಜಲಾಶಯಗಳಲ್ಲಿ ಉತ್ತಮ ತಳಿಯ ಮೀನುಮರಿಗಳನ್ನು ವೈಜ್ಞಾನಿಕ ಪದ್ಧತಿಯನ್ನು ಅಳವಡಿಸಿ ಬಿತ್ತನೆ ಮಾಡಿ ಹೆಚ್ಚು ಮೀನು ಬೆಳೆಯುವುದು ಮತ್ತು ಪೌಷ್ಟಿಕ ಆಹಾರವನ್ನು ಹೆಚ್ಚು ಉತ್ಪಾದಿಸಿ ಸಾರ್ವಜನಿಕರಿಗೆ ಪೌಷ್ಟಿಕ ಆಹಾರ ಕೊರತೆ ನೀಗಿಸುವುದು ಈ ಇಲಾಖೆಯ ಮುಖ್ಯ ಉದ್ದೇಶ. ಗ್ರಾಮೀಣ ಜನತೆಗೆ ಉದ್ಯೋಗವಕಾಶ ಕಲ್ಪಿಸಿಕೊಟ್ಟು ತನ್ಮೂಲಕ ಅವರ ಆರ್ಥಿಕ ಮತ್ತು ಸಾಮಾಜಿಕ ಜೀವನ ಮಟ್ಟವನ್ನು ಉತ್ತಮಪಡಿಸುವುದು ಈ ಇಲಾಖೆಯ ಜವಾಬ್ದಾರಿಗಳಲ್ಲಿ ಒಂದಾಗಿದೆ.

ಜಿಲ್ಲೆಯ ಒಳನಾಡು ಮೀನುಗಾರಿಕೆ ಸಂಪನ್ಮೂಲಗಳು

ಕ್ರ.ಸಂ	ಸಂಪನ್ಮೂಲಗಳ ವಿವರ	ಕೆರೆಗಳ ಸಂಖ್ಯೆ	ಜಲವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ)
1	ಗ್ರಾಮ ಪಂಚಾಯತಿ ವ್ಯಾಪ್ತಿಕೆರೆಗಳು (40 ಹೆಕ್ಟೇರ್‌ಗಿಂತ ಕಡಿಮೆ ಅಚ್ಚುಕಟ್ಟುವುಳ್ಳ ಕೆರೆಗಳು)	1319	17458.00
2	ಇಲಾಖಾ ವ್ಯಾಪ್ತಿ ಕೆರೆಗಳು (40 ಹೆಕ್ಟೇರ್ ಮೇಲ್ಪಟ್ಟು ಅಚ್ಚು ಕಟ್ಟುವುಳ್ಳ ಕೆರೆಗಳು)	400	31333.00
3	ಜಲಾಶಯಗಳು	04	3078.00
	ಒಟ್ಟು	1723	51869.00

ಮೇಲ್ಕಂಡ ಜಲಾವೃತ್ತ ಪ್ರದೇಶಗಳಲ್ಲಿ ಉತ್ತಮ ತಳಿಯ ಮೀನುಗಳಾದ ಕಾಟ್ಲಾ, ರೋಹು, ಮೃಗಾಲ್, ಸಾಮಾನ್ಯಗೆಂಡೆ, ಬೆಳ್ಳಿಗೆಂಡೆ, ಮತ್ತು ಹುಲ್ಲುಗೆಂಡೆ ಮೀನುಮರಿಗಳನ್ನು ತಾಂತ್ರಿಕವಾಗಿ ಆಧುನಿಕ ಪದ್ಧತಿಯಲ್ಲಿ ಬಿತ್ತನೆ ಮಾಡಲಾಗುತ್ತದೆ. ಸರ್ವಕಾಲಿಕ ಮತ್ತು ದೀರ್ಘಾವಧಿ ನೀರುಳ್ಳ ಕೆರೆಗಳ ಮೀನು ಪಾಶುವಾರು ಹಕ್ಕನ್ನು ಟೆಂಡರ್ ಹರಾಜು ಮೂಲಕ ಹಾಗೂ ಅಲ್ಪಾವಧಿ ನೀರುಳ್ಳ ಕೆರೆಗಳನ್ನು ವಾರ್ಷಿಕ ಹರಾಜುಗಳ ಮೂಲಕ ವಿಲೇವಾರಿ ಮಾಡಲಾಗುತ್ತದೆ. ಇದರ ಜೊತೆಗೆ ಮೀನುಗಾರರ ಸಹಕಾರ ಸಂಘಗಳಿಗೆ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆ ಆಧಾರದ ಮೇಲೆ ನೀಡಲಾಗುತ್ತಿದೆ. ಜಿಲ್ಲೆಯಲ್ಲಿ ಸುಮಾರು 30,000 ವೃತ್ತಿಪರ ಮೀನುಗಾರರು ಮೀನುಗಾರಿಕೆಯಲ್ಲಿ ಕಾರ್ಯನಿರತರಾಗಿರುತ್ತಾರೆ. ಇಲಾಖಾ ಮೀನುಮರಿ ಉತ್ಪಾದನಾ ಕೇಂದ್ರ ಮಾರ್ಕೋನಹಳ್ಳಿಯಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಇದಲ್ಲದೆಯೇ ಖಾಸಗಿ ಮೀನುಮರಿ ಉತ್ಪಾದನಾ ಕೇಂದ್ರವಾದ ಬೃಂದಾವನ ಮೀನುಮರಿ ಉತ್ಪಾದನಾ ಕೇಂದ್ರ, ಕುಣಿಗಲ್ ಇವು ಉತ್ಪಾದನೆಯನ್ನು ಕೈಗೊಂಡಿದೆ.

ಜಿಲ್ಲಾ ವಲಯ ಯೋಜನೆಗಳು

1. ಅ. ಒಳನಾಡು ಮೀನುಗಾರಿಕೆ ಅಭಿವೃದ್ಧಿಗೆ ಸಹಾಯ:

ಜಿಲ್ಲೆಯಲ್ಲಿನ ಮೀನುಮರಿ ಬೇಡಿಕೆಯನ್ನು ಪೂರೈಸುವ ಸಲುವಾಗಿ ಸರ್ಕಾರಿ ಹಾಗೂ ಖಾಸಗಿ ಮೀನುಮರಿ ಉತ್ಪಾದನಾ ಕೇಂದ್ರಗಳಿಂದ ಸುಧಾರಿತ ಜಾತಿಯ ಸ್ವಾನ್, ಫ್ರೈ ಮೀನುಮರಿಗಳನ್ನು ಆಯಾತ ಮಾಡಿಕೊಂಡು ತಾಲ್ಲೂಕು ಮಟ್ಟದ ನರ್ಸರಿಗಳಲ್ಲಿ ಪಾಲನೆ ಮಾಡಲಾಗುತ್ತದೆ. ತಾಲ್ಲೂಕು ಮಟ್ಟದ ಮೀನುಮರಿ ಪಾಲನಾ ಕೇಂದ್ರಗಳಲ್ಲಿ ಬಿತ್ತನೆಮರಿಯಾಗುವವರೆಗೆ ಪೋಷಿಸಿ ರೈತರಿಗೆ ಸರ್ಕಾರಿ ದರದಲ್ಲಿ ಪೂರೈಸಲಾಗುವುದು. ಈ

ಯೋಜನೆಯಡಿ ಕೆರೆಗಳ ಹರಾಜು ಪ್ರಕಟಣೆ, ಜಾಹೀರಾತು ಮುದ್ರಣ ಬಾಬ್ತು, ದಿನಪತ್ರಿಕೆ ಜಾಹೀರಾತು ವೆಚ್ಚ, ಮೀನುಮರಿ ಪಾಲನಾ ಕೇಂದ್ರಗಳ ಬೋರ್‌ವೆಲ್‌ಗಳ ಪಂಪ್‌ಸೆಟ್ ದುರಸ್ತಿ ವಿದ್ಯುತ್‌ಚ್ಛಕ್ತಿ ಶುಲ್ಕ ಪಾವತಿ ಮೀನುಮರಿ ಆಹಾರ ಖರೀದಿ, ಫಲವತ್ತೀಕರಣ ಸಾಮಾಗ್ರಿ ಖರೀದಿ, ಹಾಗೂ ಕಛೇರಿ ಉಪಯೋಗಕ್ಕಾಗಿ ಜೆರಾಕ್ಸ್/ಡೂಪ್ಲಿಕೇಟಿಂಗ್ ಮಿಷನ್, ಯು.ಪಿ.ಎಸ್ ಇತ್ಯಾದಿ ನಿರ್ವಹಣೆ ಹಾಗೂ ಮೀನುಮರಿಗಳ ಸಾಗಾಟ ವೆಚ್ಚ, ಪಾಲನಾ ಕೊಳಗಳ ರಿಪೇರಿ ವೆಚ್ಚ, ಜಿಲ್ಲಾ/ ತಾಲ್ಲೂಕು ಕಛೇರಿಗಳಿಗೆ ಹೊರಗುತ್ತಿಗೆ ವಾಹನ ವೆಚ್ಚ ಪಾವತಿ. ಬಾವಿ ಹೊಂಡಗಳಲ್ಲಿ ಮೀನುಗಾರಿಕೆ ಅಭಿವೃದ್ಧಿ ಯೋಜನೆಯಡಿ ಅವಶ್ಯವಿರುವ ತಾಲ್ಲೂಕುಗಳಲ್ಲಿ ಕೃಷಿ ಹೊಂಡ ಹೊಂದಿರುವ ರೈತರಿಗೆ ಉಚಿತವಾಗಿ 250 ಸಾಮಾನ್ಯಗೆಂಡೆ ಜಾತಿಯ ಮೀನುಮರಿಗಳನ್ನು ವಿತರಿಸುವ ವೆಚ್ಚ ಭರಿಸಲಾಗುವುದು. 2020–21ನೇ ಸಾಲಿನಲ್ಲಿ ಈ ಯೋಜನೆಗಾಗಿ ರೂ.28.00 ಲಕ್ಷ ಅನುದಾನದಲ್ಲಿ ರೂ.28.00 ಲಕ್ಷ ಪೂರ್ಣ ವೆಚ್ಚ ಭರಿಸಿದೆ.

ಆ. <u>ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆ:–</u>

ಸದರಿ ಯೋಜನೆಯಡಿ ಪರಿಶಿಷ್ಟ ಜಾತಿಯ 100 ಜನ ಮೀನುಗಾರರಿಗೆ ಮತ್ತು ಪರಿಶಿಷ್ಟ ಪಂಗಡದ 50 ಜನ ಮೀನುಗಾರರಿಗೆ ತಲಾ ರೂ. 10,000–00 ಗಳಂತೆ ಒಟ್ಟು 150 ಜನ ಮೀನುಗಾರರಿಗೆ 15.00 ಲಕ್ಷ ವೆಚ್ಚದಲ್ಲಿ ಮೀನುಗಾರಿಕೆ ಸಲಕರಣೆ ಕಿಟ್ ಖರೀದಿಸಿ ವಿತರಿಸಿದೆ.

2. <u>ವಸ್ತು ಪ್ರದರ್ಶನ ಮತ್ತು ತರಬೇತಿ:–</u>

ಮೀನುಗಾರಿಕೆ ಇಲಾಖೆಯ ಚಟುವಟಿಕೆ ಮೀನು ಅಭಿವೃದ್ಧಿ ಅದರ ಆರ್ಥಿಕ ವಿಶ್ಲೇಷಣೆ ಕುರಿತಂತೆ ಸಾರ್ವಜನಿಕರಲ್ಲಿ ತಿಳುವಳಿಕೆ ಮೂಡಿಸಲು ವಸ್ತುಪ್ರದರ್ಶನ ಕಾರ್ಯಕ್ರಮದಲ್ಲಿ ಬಿತ್ತಿ ಚಿತ್ರಗಳು, ಇಲಾಖಾ ಯೋಜನೆ/ಕಾರ್ಯಕ್ರಮಗಳ ಕರಪತ್ರಗಳ ಮುದ್ರಣ, ವಿವಿಧ ಜಾತಿಯ ಅಲಂಕಾರಿಕ ಮೀನುಗಳ ಪ್ರದರ್ಶನವನ್ನು ಏರ್ಪಡಿಸಲಾಗಿದೆ. ಸಿದ್ಧಗಂಗಾ ಕೃಷಿ ಮತ್ತು ಕೈಗಾರಿಕಾ ವಸ್ತುಪ್ರದರ್ಶನದಲ್ಲಿ ಮಳಿಗೆ ತೆರೆದು ಸಾರ್ವಜನಿಕರಿಗೆ ಮಾಹಿತಿ ಒದಗಿಸಲಾಗಿದೆ. 2020–21 ನೇ ಸಾಲಿನಲ್ಲಿ ಈ ಯೋಜನೆಗಾಗಿ ರೂ.4.00 ಲಕ್ಷ ಅನುದಾನದಲ್ಲಿ ರೂ.4.00 ಲಕ್ಷ ಪೂರ್ಣ ವೆಚ್ಚ ಭರಿಸಿದೆ.

3. <u>ಮೀನು ಮಾರುಕಟ್ಟೆ ಮತ್ತು ಮತ್ಸ್ಯವಾಹಿನಿಗೆ ಸಹಾಯಧನ:</u>–

ಮೀನು ಹಿಡಿದು ಮಾರಾಟ ಮಾಡುವ ಮೀನುಗಾರರಿಗೆ ಅವರು ಹಿಡಿದ ಮೀನು ಕೆಡದಂತೆ ತ್ವರಿತವಾಗಿ ಮೀನು ಮಾರಾಟ ಮಾಡಲು ಮೊಪೆಡ್ (ಟಿ.ವಿ.ಎಸ್) ಮತ್ತು ಸೈಕಲ್ ನೀಡುವ ಯೋಜನೆ ರೂಪಿಸಿದೆ. ಮೊಪೆಡ್‌ನ ಘಟಕ ವೆಚ್ಚಕ್ಕೆ ಶೇ.25% ರಂತೆ ಸಹಾಯಧನವಾಗಿ ಗರಿಷ್ಟ ರೂ. 10,000–00 ಸಹಾಯಧನ ನೀಡಲಾಗುವುದು. 2020–21 ನೇ ಸಾಲಿನಲ್ಲಿ ಈ ಯೋಜನೆಗಾಗಿ ರೂ.5.00 ಲಕ್ಷ ಅನುದಾನದಲ್ಲಿ 50 ಜನ ಫಲಾನುಭವಿಗಳಿಗೆ ಮೊಪೆಡ್ ಖರೀದಿಗೆ ಸಹಾಯಧನ ನೀಡಿ ರೂ.5.00 ಲಕ್ಷಗಳ ವೆಚ್ಚ ಭರಿಸಿ ಪೂರ್ಣ ಪ್ರಗತಿ ಸಾಧಿಸಲಾಗಿದೆ.

4. ಮೀನುಗಾರಿಕೆ ಕಟ್ಟಡಗಳು ಮತ್ತು ಸೌಲಭ್ಯಗಳ ನಿರ್ಮಾಣ ನಿರ್ವಹಣೆ:–

ಸದರಿ ಯೋಜನೆಯಡಿ ಶಿರಾ ನರ್ಸರಿಯಲ್ಲಿರುವ ಕೊಳಗಳ ದುರಸ್ತಿ ಮತ್ತು ಕೊಳಗಳಿಗೆ ನೀರು ಪೂರೈಕೆ ಪೈಪ್ ಲೈನ್ ದುರಸ್ತಿ ಕಾಮಗಾರಿಗೆ ರೂ.2.50 ಲಕ್ಷ ವೆಚ್ಚ ಮಾಡಲಾಗಿದ್ದು, ಇದೇ ನರ್ಸರಿಯಲ್ಲಿರುವ ಕೊಳವೆ ಬಾವಿಗೆ ವಿದ್ಯುದೀಕರಣ ಸಂಪರ್ಕ ಕಲ್ಪಿಸುವ ದುರಸ್ತಿ ಕಾಮಗಾರಿಗೆ ರೂ.1.00 ಲಕ್ಷ ವೆಚ್ಚ ಮಾಡಲಾಗಿರುತ್ತದೆ. ತಿಪಟೂರು ತಾಲ್ಲೂಕಿನ ಈಡೇನಹಳ್ಳಿ ಮೀನು ಮರಿ ಪಾಲನಾ ಕೇಂದ್ರದಲ್ಲಿರುವ ಕೊಳಗಳ ದುರಸ್ತಿ ಕಾಮಗಾರಿಗೆ ರೂ.2.00 ಲಕ್ಷ ವೆಚ್ಚ ಮಾಡಲಾಗಿರುತ್ತದೆ. ಪಾವಗಡ ಕಛೇರಿ ಕಟ್ಟಡದ ಮೇಲ್ಛಾವಣಿ ದುರಸ್ತಿ ಕಾಮಗಾರಿಗೆ ರೂ.1.00 ಲಕ್ಷ ವೆಚ್ಚ ಮಾಡಲಾಗಿರುತ್ತದೆ. ಚಿಕ್ಕನಾಯನಕಹಳ್ಳಿ ತಾಲ್ಲೂಕಿನ ಬೋರನಕಣಿವೆ ಮೀನು ಮರಿ ಪಾಲನಾ ಕೇಂದ್ರದಲ್ಲಿ ಹೊಸದಾಗಿ ಕೊಳವೆ ಬಾವಿ ಕೊರೆಸಿ ಮೋಟಾರ್ ಅಳವಡಿಸುವ ಕಾಮಗಾರಿಗೆ ರೂ.2.50 ಲಕ್ಷ ವೆಚ್ಚ ಮಾಡಿದ್ದು, ಸದರಿ ಹೊಸ ಕೊಳವೆ ಬಾವಿಯಿಂದ ಮೀನು ಮರಿ ಪಾಲನಾ ಕೊಳಗಳಿಗೆ ಪೈಪ್ ಲೈನ್ ಅಳವಡಿಸುವ ಕಾಮಗಾರಿ ಮತ್ತು ನರ್ಸರಿ ದುರಸ್ತಿ ಕಾಮಗಾರಿಗೆ ರೂ.2.81 ಲಕ್ಷ ವೆಚ್ಚ ಮಾಡಲಾಗಿರುತ್ತದೆ. ಕೊರಟಗೆರೆ ತಾಲ್ಲೂಕಿನ ಮೀನು ಮರಿ ಪಾಲನಾ ಕೇಂದ್ರದ ಕೊಳಗಳ ದುರಸ್ತಿ ಮತ್ತು ಕಾಪೌಂಡ್ ಗೋಡೆ ದುರಸ್ತಿ ಕಾಮಗಾರಿಗೆ ರೂ.1.00 ಲಕ್ಷ ವೆಚ್ಚ ಮಾಡಲಾಗಿರುತ್ತದೆ. ಗುಬ್ಬಿ ತಾಲ್ಲೂಕಿನ ಮೀನು ಮರಿ ಪಾಲನಾ ಕೇಂದ್ರದಲ್ಲಿರುವ ಕೊಳಗಳಿಗೆ ಮೆಟ್ಟಿಲುಗಳನ್ನು ಅಳವಡಿಸುವ ಕಾಮಗಾರಿ ಮತ್ತು ಕಾಪೌಂಡ್ ಗೋಡೆ ದುರಸ್ತಿ ಕಾಮಗಾರಿಗೆ ರೂ.1.00 ಲಕ್ಷ ವೆಚ್ಚ ಮಾಡಲಾಗಿರುತ್ತದೆ. ಅಲ್ಲದೆ ಮಧುಗಿರಿ ತಾಲ್ಲೂಕು ಮೀನು ಮರಿ ಪಾಲನಾ ಕೇಂದ್ರದಲ್ಲಿರುವ ಕೊಳಗಳ ದುರಸ್ತಿ ಕಾಮಗಾರಿಗೆ ರೂ.2.50 ಲಕ್ಷ ವೆಚ್ಚ ಮಾಡಲಾಗಿರುತ್ತದೆ. ಮೀನುಗಾರಿಕೆ ಉಪ ನಿರ್ದೇಶಕರು, ತುಮಕೂರು ಜಿಲ್ಲಾ ಕಛೇರಿಯ ಆವರಣದಲ್ಲಿರುವ ಶೌಚಾಲಯಗಳಲ್ಲಿ ದುರಸ್ತಿ ಕೆಲಸ ಟೈಲ್ಸ್ ಅಳವಡಿಕೆ ವೆಚ್ಚ ಹಾಗೂ ಆವರಣದ ಫೆನ್ಸಿಂಗ್‌ಗೆ ಬಣ್ಣ ಹೊಡಿಸುವ ಕಾಮಗಾರಿಗೆ ರೂ.1.50 ಲಕ್ಷ ವೆಚ್ಚ ಮಾಡಲಾಗಿರುತ್ತದೆ. ಅಲ್ಲದೆ ತುಮಕೂರು ತಾಲ್ಲೂಕು ಕಛೇರಿ ವ್ಯಾಪ್ತಿಯ ಮತ್ಸ್ಯಾಲಯಕ್ಕೆ ದಿನನಿತ್ಯ ಅಗತ್ಯವಿರುವ ನೀರಿನ ಪೂರೈಕೆಗಾಗಿ ಮಳೆ ನೀರು ಕೊಯ್ಲು ಕೊಳವೆ ಬಾವಿಯ ಮರು ಪೂರಣ, ನೆಲಮಟ್ಟದ ನೀರು ಸಂಗ್ರಹಣ ತೊಟ್ಟಿ ನಿರ್ಮಾಣ ಕಾಮಗಾರಿಗಳು ಹಾಗೂ ಕಛೇರಿ ಸುತ್ತ ಸಿಮೆಂಟ್ ಕಾಂಕ್ರೀಟ್ ನೆಲ ಹಾಸು ದುರಸ್ತಿ ಕಾಮಗಾರಿಗೆ ರೂ.1.50 ಲಕ್ಷ ವೆಚ್ಚ ಮಾಡಲಾಗಿರುತ್ತದೆ. ಸದರಿ ಯೋಜನೆಯಡಿ ಎಲ್ಲಾ ಕಾಮಗಾರಿಗಳ ನಿರ್ವಹಣೆ ಬಾಬ್ತು, ಸಂಬಂಧಿಸಿದ ಕಖಇಆ ಇಲಾಖೆ ಕಛೇರಿಗಳಿಗೆ ವೆಚ್ಚ ಭರಿಸಲು ಒಟ್ಟು ರೂ.19.31 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದ್ದು, ಕಖಇಆ ಇಲಾಖೆ ಕಛೇರಿಗಳ ಮೂಲಕ ಸದರಿ ಕಾಮಗಾರಿಗಳ ಅನುಷ್ಠಾನವಾಗಿರುತ್ತದೆ.

ಮೀನುಗಾರಿಕೆ ಇಲಾಖೆ, ತುಮಕೂರು ಸಾಮಾನ್ಯ ಮಾಹಿತಿಗಳ ವಿವರಗಳು

1. ಜಲ ಸಂಪನ್ಮೂಲಗಳ ವಿವರ

ಕ್ರ.ಸಂ	ವಿವರಗಳು	ಸಂಖ್ಯೆ	ಜಲವಿಸ್ತೀರ್ಣ
1	> 40 ಹೆಕ್ಟೇರ್ ಅಚ್ಚುಕಟ್ಟು ಇರುವ ಕೆರೆಗಳು	400	31333.00
2	< 40 ಹೆಕ್ಟೇರ್ ಅಚ್ಚುಕಟ್ಟು ಇರುವ ಕೆರೆಗಳು (ಗ್ರಾಮ ಪಂಚಾಯತಿ ಕೆರೆಗಳು)	1319	17458.00
3	ಜಲಾಶಯಗಳು	04	3078.00
	ಒಟ್ಟು	1723	51869.00

2. ಮೀನುಮರಿ ಪಾಲನಾ ಕೇಂದ್ರಗಳ ವಿವರಗಳು

1	ಇಲಾಖಾ ವ್ಯಾಪ್ತಿ (ರಾಜ್ಯವಲಯ)	1 ಸಂಖ್ಯೆ
2	ಮೀನುಮರಿ ಪಾಲನಾ ಕೇಂದ್ರಗಳು	7 ಕಾರ್ಯ ನಿರ್ವಹಿಸುತ್ತಿವೆ.

3. ಮೀನುಗಾರಿಕೆ ಸಹಕಾರ ಸಂಘಗಳು.

ಕಾರ್ಯ ನಿರ್ವಹಿಸುತ್ತಿರುವ ಸಹಕಾರ ಸಂಘಗಳ ಸಂಖ್ಯೆ	ಸದಸ್ಯರ (ಮೀನುಗಾರರು) ಸಂಖ್ಯೆ
30	15,617

1	ವೃತ್ತಿಪರ ಮೀನುಗಾರರ ಸಂಖ್ಯೆ	30,000 ಸಂಖ್ಯೆ
2	ಮೀನುಮರಿ ಬೇಡಿಕೆ (ಸರಾಸರಿ)	200 ರಿಂದ 250 ಲಕ್ಷ
3	ಮೀನಿನ ಉತ್ಪಾದನಾ ಮೌಲ್ಯ (ಸರಾಸರಿ ಅಂದಾಜು)	50 ರಿಂದ 60 ಕೋಟಿ
4	ಮೀನುಮರಿ ದಾಸ್ತಾನು ಜಲಪ್ರದೇಶ (ಸರಾಸರಿ)	30000 ಹೆಕ್ಟೇರ್
5	ಪ್ರತಿ ಹೆಕ್ಟೇರ್‌ಗೆ ಮೀನುಮರಿ ಬಿತ್ತನೆ ಪ್ರಮಾಣ	2000 ರಿಂದ 4000 / ಹೆಕ್ಟೇರ್
6	ಪ್ರತಿ ಹೆಕ್ಟೇರ್‌ಗೆ ಮೀನಿನ ಉತ್ಪಾದನೆ (ಅಂದಾಜು)	2000 ರಿಂದ 3000 ಕೆ.ಜಿ/ ಹೆಕ್ಟೇರ್
7	ಕೆರೆಗಳ ವಿಲೇವಾರಿಯಿಂದ ಬಂದ ಆದಾಯ	ರೂ.1,16,24,996/–

ಜಿಲ್ಲಾ ಪಂಚಾಯತ್, ಮೀನುಗಾರಿಕೆ ಉಪ ನಿರ್ದೇಶಕರು, ತುಮಕೂರು ರವರ ಕಛೇರಿಯ ವ್ಯಾಪ್ತಿಯಲ್ಲಿನ ಹುದ್ದೆಗಳ ವಿವರಗಳು

ಕ್ರ.ಸಂ.	ಹುದ್ದೆಗಳ ಪದನಾಮ	ವೃಂದ	ಮಂಜೂರಾದ ಹುದ್ದೆಗಳ ಸಂಖ್ಯೆ	ಭರ್ತಿಯಾದ ಹುದ್ದೆಗಳ ಸಂಖ್ಯೆ	ಖಾಲಿ ಇರುವ ಹುದ್ದೆಗಳ ಸಂಖ್ಯೆ	ಭರ್ತಿಯಾಗಿರುವ ಹುದ್ದೆಗಳ ಪೈಕಿ			
						ಪ.ಜಾತಿ	ಪ.ಪಂಗಡ	ಪುರುಷರು	ಮಹಿಳೆಯರು
1	ಮೀನುಗಾರಿಕೆ ಉಪ ನಿರ್ದೇಶಕರು	ಎ	01	01	–	–	01	01	–
2	ಮೀನುಗಾರಿಕೆ ಸಹಾಯಕ ನಿರ್ದೇಶಕರು	ಬಿ	09	06	03	01	–	03	03
3	ಕಛೇರಿ ಅಧೀಕ್ಷಕರು	ಸಿ	01	01	–	–	01	01	–
4	ಪ್ರಥಮ ದರ್ಜೆ ಸಹಾಯಕರು	ಸಿ	02	02	–	–	01	01	02
5	ದ್ವಿತೀಯ ದರ್ಜೆ ಸಹಾಯಕರು	ಸಿ	02	01	01	01	–	01	–
6	ಪೆರಳಿಪ್ಪುಗಾರರು	ಸಿ	01	–	01	–	–	–	–
7	ವಾಹನ ಚಾಲಕರು	ಸಿ	01	–	01	–	–	–	–
8	ಮೀನುಗಾರಿಕೆ ಪೋಲೀಸಾರಕರು	ಸಿ	02	02	–	–	–	02	–
9	ಮೀನುಗಾರಿಕೆ ಕ್ಷೇತ್ರಪಾಲಕರು	ಸಿ	22	02	20	–	–	02	–
10	"ಡಿ" ಗುಂಪಿನ ನೌಕರರು	ಡಿ	04	02	02	01	–	01	01
ಒಟ್ಟು ಸಂಖ್ಯೆ			45	17	28	3	3	11	6

ಮೀನುಗಾರಿಕೆ ಉಪ ನಿರ್ದೇಶಕರು, ತುಮಕೂರು

ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ್, ತುಮಕೂರು.

2020–21 ನೇ ಸಾಲಿನ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಆಡಳಿತ ವರದಿ

ಇಲಾಖೆಯ ಸಂಕ್ಷಿಪ್ತ ವಿವರಗಳು:

2020–21 ನೇ ಸಾಲಿನಲ್ಲಿ ತುಮಕೂರು ಜಿಲ್ಲೆಯಲ್ಲಿ ಗ್ರಾಮೀಣ ಮತ್ತು ನಗರ ಪ್ರದೇಶಗಳ ವಿಧ್ಯಾರ್ಥಿ ಮತ್ತು ವಿದ್ಯಾರ್ಥಿಗಳಲ್ಲದ ಯುವಜನರು ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ರಚನಾತ್ಮಕವಾಗಿ ತಮ್ಮನ್ನು ತೊಡಗಿಸಿಕೊಳ್ಳಲು ಮತ್ತು ತಮ್ಮ ಪ್ರತಿಭೆಯನ್ನು ಅಭಿವೃದ್ಧಿಪಡಿಸಲು, ಸ್ವಯಂ ಉದ್ಯೋಗದಲ್ಲಿ ತೊಡಗಲು ಕ್ರೀಡೆ ಮತ್ತು ಆಟೋಟಗಳಲ್ಲಿ ಉತ್ತಮ ಸಾಧನಾ ಮಟ್ಟ ತಲುಪಲು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ತರಬೇತಿ ಶಿಬಿರಗಳನ್ನು ಹಾಗೂ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕಾರ್ಯಗತಗೊಳಿಸಲು ಅಲ್ಲದೆ, ದಸರಾ, ಗ್ರಾಮೀಣ ಕ್ರೀಡಾಕೂಟ, ಯುವಜನ ಮೇಳಗಳು ಮತ್ತು ಯುವಜನೋತ್ಸವ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಯುವಜನರನ್ನು ಪ್ರೋತ್ಸಾಹಿಸಲು ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದ ಸ್ಪರ್ಧೆಗಳನ್ನು ಸಂಘಟಿಸಲು ತಗಲುವ ವೆಚ್ಚ ಮತ್ತು ಜಿಲ್ಲಾ, ರಾಜ್ಯ ಮಟ್ಟದ ಸ್ಪರ್ದೆಗಳಲ್ಲಿ ಭಾಗವಹಿಸಿದ್ದವರಿಗೆ ಪ್ರಯಾಣ ಭತ್ಯೆ/ದಿನಭತ್ಯೆಗಳನ್ನು ನೀಡಲು ಕ್ರಮವಹಿಸಲಾಗಿತ್ತು. ಆದರೆ ಪ್ರಸ್ತುತ ಸಾಲಿನಲ್ಲಿ ಕೋವಿಡ್–19 ರ ಹಿನ್ನೆಲೆಯಲ್ಲಿ ಹಮ್ಮಿಕೊಂಡ ಕಾರ್ಯಕ್ರಮಗಳನ್ನು ಸಂಘಟಿಸಲು ಸಾಧ್ಯವಾಗಿರುವುದಿಲ್ಲ. ಆದ್ದರಿಂದ, ಜಿಲ್ಲಾ ಮಟ್ಟದ ಯುವಜನೋತ್ಸವ , ಸ್ವಾಮಿ ವಿವೇಕಾನಂದ ಜಯಂತಿ, ರಾಷ್ಟ್ರೀಯ ಹಬ್ಬಗಳ ಆಚರಣೆ, ಜಿಲ್ಲಾ ಮಟ್ಟದ ರಾಜ್ಯ ಸರ್ಕಾರಿ ನೌಕರರ ಕ್ರೀಡಾಕೂಟಗಳನ್ನು ಮಾತ್ರ ಸಂಘಟಿಸಲಾಗಿದೆ.

ಮೇಲಿನ ಉದ್ದೇಶಗಳನ್ನು ಪೂರೈಸಲು 2020–21 ನೇ ಸಾಲಿನಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮಗಳ ಗುರಿ ಮತ್ತು ಸಾಧನೆ (ಆರ್ಥಿಕ ಮತ್ತು ಭೌತಿಕ) ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

ಯೋಜನೇತರ ಕಾರ್ಯಕ್ರಮಗಳು:–

ಕ್ರ ಸಂ	ಲೆಕ್ಕಶೀರ್ಷಿಕೆ	2020–21					
		ಆರ್ಥಿಕ			ಭೌತಿಕ		
		ಬಿಡುಗಡೆ	ಸಾಧನೆ	ಶೇಕಡವಾರು ಸಾಧನೆ	ಗುರಿ	ಸಾಧನೆ	ಶೇಕಡವಾರು ಸಾಧನೆ
	ಕ್ರೀಡಾಕೂಟ ಮತ್ತು ರಾಲಿಗಳ ಸಂಘಟನೆ ಮತ್ತು ಅದರಲ್ಲಿ ಭಾಗವಹಿಸುವವರಿಗೆ ಟಿಎ.ಡಿಎ. 2205–00–104–0–26	40.00	10.21	25.52	27	07	18.52
2	ಸಹಾಯಕ ಯುವಜನ ಸೇವಾ ಮತ್ತು ಕ್ರೀಡಾಧಿಕಾರಿಗಳ ವೇತನ ಮತ್ತು ಕಛೇರಿ ವೆಚ್ಚ 2205–00–104–0–27	18.54	17.96	96.88	04	04	100
3	ಕಛೇರಿ ವೆಚ್ಚ 2205–00–104–0–27	5.00	5.00	100	01	01	100
4	ಕ್ರೀಡಾಂಗಣ ನಿರ್ಮಾಣ ಮತ್ತು ನಿರ್ವಹಣೆ 2205–00–104–0–28	38.51	38.51	100	09	09	100
5	ಕ್ರೀಡಾ ಶಾಲೆಗಳು 2205–00–104–0–29	25.00	18.41	73.64	01	01	100
6	ಕಷ್ಟಪರಿಸ್ಥಿತಿಯಲ್ಲಿರುವ ಕ್ರೀಡಾ ಪಟುಗಳಿಗೆ ಆರ್ಥಿಕ ನೆರವು 2205–00–104–0–30	2.08	2.08	100	08	08	100
7	ಗ್ರಾಮೀಣ ಕ್ರೀಡಾಕೇಂದ್ರ 2205–00–104–0–31	10.00	8.42	84.2	57	49	86
8	ಕ್ರೀಡಾ ಕಾರ್ಯಕ್ರಮಗಳು ಮತ್ತು ಪಂದ್ಯಗಳು, ವಿಧ್ಯಾರ್ಥಿಗಳು ಮತ್ತು ವಿಧ್ಯಾರ್ಥಿಯೇತರರಿಗೆ ಸಹಾಯ 2205–00–104–0–32	1.80	–	–	10	–	–
9	ಕ್ರೀಡಾ ಸಾಮಗ್ರಿಗಳನ್ನು ಕೊಳ್ಳಲು ಮತ್ತು ಆಟದ ಮೈಧಾನಗಳನ್ನು ಅಭಿವೃದ್ಧಿ ಗೊಳಿಸಲು ಶೈಕ್ಷಣಿಕ ಮತ್ತು ಇತರೆ ಸಂಸ್ಥೆಗಳಿಗೆ ಸಹಾಯ 2205–00–104–0–33	2.45	0.97	88	09	09	100
10	ಗ್ರಾಮಾಂತರ ಪ್ರದೇಶಗಳಲ್ಲಿ ಕ್ರೀಡೆಗಳಿಗೆ ಪ್ರೋತ್ಸಾಹ 2205–00–104–0–35	1.00	1.00	100	10	10	100

11	ಕ್ರೀಡಾ ಸಾಮಾಗ್ರಿ ಖರೀದಿಗಾಗಿ ಜಿಲ್ಲಾ ಮತ್ತು ವಿಭಾಗೀಯ ಯುವ ಜನ ಸೇವೆಗಳ ಮಂಡಳಿಗೆ ಸಹಾಯ 2205–00–104–0–36	1.00	–	–	01	–	–
	ಒಟ್ಟು	145.38	102.56	70.55	136	98	72.05

ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಪ್ರಾರಂಭದಿಂದ ಆದ ಸಂಚಿತ ಪರಿಣಾಮಗಳು ಈ ಕೆಳಕಂಡಂತಿರುತ್ತವೆ.

ಯೋಜನೇತರ ಕಾರ್ಯಕ್ರಮಗಳು

1. 2205–00–104–0–26 ಕ್ರೀಡಾಕೂಟ ಮತ್ತು ರಾಲಿಗಳ ಸಂಘಟನೆ ಮತ್ತು ಅದರಲ್ಲಿ ಭಾಗವಹಿಸುವವರಿಗೆ ಪ್ರಯಾಣ ಮತ್ತು ದಿನಭತ್ಯೆ : ಈ ಯೋಜನೆ ಅಡಿಯಲ್ಲಿ ರೂ.40.00 ಲಕ್ಷಗಳು ನಿಗಧಿಪಡಿಸಲಾಗಿದ್ದು, ಸದರಿ ಅನುದಾನದಲ್ಲಿ ಜಿಲ್ಲಾ ಮಟ್ಟದ ರಾಜ್ಯ ಸರ್ಕಾರಿ ನೌಕರರ ಕ್ರೀಡಾಕೂಟ, ಜಿಲ್ಲಾ ಮಟ್ಟದ ಯುವಜನೋತ್ಸವ ಸಂಘಟನೆ, ರಾಷ್ಟ್ರೀಯ ಹಬ್ಬಗಳ ಅಂಗವಾಗಿ ಆಚರಣೆ, ಸ್ವಾಮಿವಿವೇಕಾನಂದ ರಾಷ್ಟ್ರೀಯ ಯುವಸಪ್ತಾಹ ಕಾರ್ಯಕ್ರಮ, ಕಛೇರಿ ವಾಹನ ಬಾಡಿಗೆಗಾಗಿ ರೂ.10,20,611/–ಗಳನ್ನು ವೆಚ್ಚ ಭರಿಸಲಾಗಿದೆ. ಹಾಗೂ ಈ ಶೀರ್ಷಿಕೆಯಡಿ ರೂ 29,79,389/–ಗಳು ಉಳಿಕೆಯಾಗಿದೆ. ಹಾಗೂ ಸದರಿ ಸಾಲಿನಲ್ಲಿ ಕೋವಿಡ್–19ರ ಹಿನ್ನೆಲೆಯಲ್ಲಿ ಸಕಾಲದಲ್ಲಿ ಕ್ರೀಡಾಕೂಟ/ಕಾರ್ಯಕ್ರಮಗಳನ್ನು ಸಂಘಟಿಸಲು ಸಾಧ್ಯವಾಗದೆ ಉಳಿಕೆಯಾಗಿರುತ್ತದೆ.

2. 2205–00–104–0–27 ಸಹಾಯಕ ಯುವಜನ ಸೇವಾ ಅಧಿಕಾರಿಗಳು:

ಈ ಲೆಕ್ಕ ಶೀರ್ಷಿಕೆಯಡಿಯಲ್ಲಿ ಅಧಿಕಾರಿಗಳ ಹಾಗೂ ಸಿಬ್ಬಂಧಿವರ್ಗದವರ ವೇತನಕ್ಕಾಗಿ ರೂ.18,54,000/– ಹಾಗೂ ಕಚೇರಿ ವೆಚ್ಚಕ್ಕಾಗಿ ರೂ.5,00,000/– ಗಳು ಬಿಡುಗಡೆಯಾಗಿರುತ್ತದೆ. ಕಚೇರಿ ಇತರೆ ವೆಚ್ಚಗಳಾದ ದೂರವಾಣಿ ಶುಲ್ಕ, ಸ್ವಚ್ಚತಾ ಸಾಮಗ್ರಿ ಖರೀದಿ. ಅಧಿಕಾರಿಗಳ ವರ್ಗಾವಣೆ ಹಾಗೂ ಪ್ರಯಾಣ ಭತ್ಯೆ, ದಿನಪತ್ರಿಕೆಗಳ ಖರೀದಿ, ಕಛೇರಿಗೆ ಅಂಚೆ ಚೀಟಿಗಳನ್ನು ಖರೀದಿಸಿದ ಬಾಬ್ತು ಹಾಗೂ ಇತರೆ ವೆಚ್ಚದ ಬಾಬ್ತು ರೂ.5,00,000/–ಗಳನ್ನು ಹಾಗೂ ಅಧಿಕಾರಿಗಳು ಮತ್ತು ಸಿಬ್ಬಂಧಿಯವರ ವೇತನಕ್ಕಾಗಿ ರೂ.17,95,692/–ಗಳನ್ನು ವೆಚ್ಚ ಭರಿಸಲಾಗಿದೆ.

3. 2205–00–104–0–28 ಕ್ರೀಡಾಂಗಣ ನಿರ್ಮಾಣ ಮತ್ತು ನಿರ್ವಹಣೆ:

ಈ ಶೀರ್ಷಿಕೆಯಡಿ ತುಮಕೂರು ಜಿಲ್ಲಾ ಕ್ರೀಡಾಂಗಣ ನಿರ್ವಹಣೆಗೆ ರೂ.38.51 ಲಕ್ಷಗಳನ್ನು ಜಿಲ್ಲಾ ಕ್ರೀಡಾಂಗಣ ಖಾತೆಗೆ ರೂ.6.51 ಲಕ್ಷಗಳನ್ನು ಮತ್ತು ತಿಪಟೂರು, ಮಧುಗಿರಿ, ಸಿರಾ, ಪಾವಗಡ, ತುರುವೇಕೆರೆ, ಚಿ.ನಾ.ಹಳ್ಳಿ, ಕೊರಟಗೆರೆ ಹಾಗೂ ಕುಣಿಗಲ್ ತಾಲ್ಲೂಕು ಕ್ರೀಡಾಂಗಣಗಳ ನಿರ್ವಹಣೆಗಳಾದ ಗುರುತುಗಾರರ ಹಾಗೂ ಕಾವಲುಗಾರರ ವೇತನ, ವಿದ್ಯುತ್ಶಕ್ತಿ ಬಿಲ್ಲು, ದೂರವಾಣಿ ಶುಲ್ಕ ಹಾಗೂ ಇತರೆ ಸಾದಿಲ್ವಾರು ವೆಚ್ಚಗಳಿಗಾಗಿ ತಲಾ ರೂ.4.00 ಲಕ್ಷಗಳನ್ನು ಅಂದರೆ, ರೂ.38.51 ಲಕ್ಷಗಳನ್ನು ಅನುದಾನ ಬಿಲ್ಲಿನಲ್ಲಿ ಡ್ರಾಮಾಡಿ ಆಯಾ ತಾಲ್ಲೂಕು ಕ್ರೀಡಾಂಗಣ ಸಮಿತಿ ಖಾತೆಗೆ ಜಮೆ ಮಾಡಲಾಗಿದೆ.

4. 2205–00–104–0–29 ಕ್ರೀಡಾ ಶಾಲೆಗಳು:

ಈ ಶೀರ್ಷಿಕೆಯಡಿ ಜಿಲ್ಲಾ ಕ್ರೀಡಾಶಾಲೆಯಲ್ಲಿ ಕ್ರೀಡಾಪಟುಗಳು ಆಟೋಟ, ಜಿಮ್ನಾಸ್ಟಿಕ್ ಕ್ರೀಡೆಯಲ್ಲಿ ತರಬೇತಿ ಪಡೆಯುತ್ತಿದ್ದು, ಇವರುಗಳಿಗೆ ಊಟದ ವ್ಯವಸ್ಥೆಯ ವೆಚ್ಚವನ್ನು ರಾಜ್ಯ ವಲಯದಿಂದ ಭರಿಸಲಾಗುತ್ತಿದೆ. ಜಿಲ್ಲಾಪಂಚಾಯತ್ ವಲಯದಿಂದ ವಿದ್ಯುತ್ ಶುಲ್ಕ, ಸುರಕ್ಷತಾವೆಚ್ಚ, ಕ್ರೀಡಾಪಟುಗಳಿಗೆ ಕ್ರೀಡಾಗಂಟು, ಭದ್ರತಾ ಸಿಬ್ಬಂಧಿ, ಶಿಕ್ಷಕರ ಗೌರವಧನ, ವೈದ್ಯಕೀಯ ತಪಾಸಣಾ ವೆಚ್ಚ, ಇತರೆ ಸಿಬ್ಬಂಧಿಯವರ ಗೌರವಧನ, ಸ್ವಚ್ಚತಾ ಸಾಮಗ್ರಿ ಖರೀದಿ ವೆಚ್ಚ, ಕ್ರೀಡಾ ಶಾಲೆ/ನಿಲಯದ ವಿದ್ಯುತ್ ದುರಸ್ಥಿ ಮತ್ತು ಕಟ್ಟಡದ ಪೇಂಟಿಂಗ್ ಹಾಗೂ ಇತರೆ ಅವಶ್ಯಕ ಸಾದಿಲ್ವಾರು ವೆಚ್ಚಗಳಿಗೆ ರೂ.18,41,325/– ಗಳನ್ನು ಭರಿಸಲಾಗಿದೆ. (ರೂ.6,58,675/– ಉಳಿಕೆಯಾಗಿರುತ್ತದೆ) ಹಾಗೂ ಕೋವಿಡ್–19 ರ ಹಿನ್ನೆಲೆಯಲ್ಲಿ ಕ್ರೀಡಾನಿಲಯ ಪ್ರಾರಂಭಿಸದೇ ಇದ್ದುದರಿಂದ ಉಳಿಕೆಯಾಗಿರುತ್ತದೆ.

5. 2205–00–104–0–30 ಕಷ್ಟಪರಿಸ್ಥಿತಿಯಲ್ಲಿರುವ ಕ್ರೀಡಾಪಟುಗಳು ಮತ್ತು ಕುಸ್ತಿದಾರರಿಗೆ ಆರ್ಥಿಕ ನೆರವು:

ಈ ಶೀರ್ಷಿಕೆಯಡಿ ಕಷ್ಟಪರಿಸ್ಥಿತಿಯಲ್ಲಿರುವ ತುಮಕೂರು ಜಿಲ್ಲೆಯ ಒಟ್ಟು 11 ಕ್ರೀಡಾ/ ಕುಸ್ತಿಪಟುಗಳಿಗೆ ರೂ. 2,08,000/–ಗಳು ಮಾಸಾಶನಕ್ಕಾಗಿ ಬಿಡುಗಡೆಯಾಗಿರುತ್ತದೆ. ಇದರಲ್ಲಿ 09 ಕ್ರೀಡಾ/ ಕುಸ್ತಿಪಟುಗಳಿಗೆ ಮಾಶಾಸನ ರೂ.2,07,500/–ಗಳನ್ನು ವೆಚ್ಚಭರಿಸಲಾಗಿದೆ. ಈ ಶೀರ್ಷಿಕೆಯಡಿ ರೂ. 500/– ಉಳಿಕೆಯಾಗಿರುತ್ತದೆ.

6. 2205–00–104–0–31 ಗ್ರಾಮೀಣ ಕ್ರೀಡಾ ಕೇಂದ್ರಗಳು:

ಈ ಯೋಜನೆ ಅಡಿಯಲ್ಲಿ ಜಿಲ್ಲಾ ಪಂಚಾಯತ್ ಸದಸ್ಯರಿಂದ ಅನುಮೋದನೆಗೊಂಡ 48 ಶಾಲೆಗಳಿಗೆ ಕ್ರೀಡಾ ಸಾಮಗ್ರಿಗಳನ್ನು ಖರೀದಿಸಲು ತಲಾ ರೂ. 17,540/– ರಂತೆ ಸಹಾಯಧನ ನೀಡಲು ರೂ.8,41,920/–ಗಳನ್ನು ವಿನಿಯೋಗಿಸಿದೆ ಹಾಗೂ ರೂ. 1,58,080/–ಗಳು ಉಳಿಕೆಯಾಗಿರುತ್ತದೆ. ಹಾಗೂ ಕೆಲವು ಶಾಲೆಗಳಿಂದ ವೇಳೆಗೆ ಸರಿಯಾಗಿ ಪ್ರಸ್ತಾವನೆಗಳು ಬಾರದೇ ಇರುವುದರಿಂದ ಅನುದಾನ ಉಳಿಕೆಯಾಗಿರುತ್ತದೆ.

7. 2205–00–104–0–32 ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿಯೇತರರಿಗೆ ಸಹಾಯ:

ಈ ಶೀರ್ಷಿಕೆಯಡಿಯಲ್ಲಿ ರೂ.1,80,000/–ಗಳು ಬಿಡುಗಡೆಯಾಗಿರುತ್ತದೆ. ಆದರೆ ಈ ಶೀರ್ಷಿಕೆಯಡಿಯಲ್ಲಿ ಅನುದಾನವನ್ನು ವೆಚ್ಚಭರಿಸಲಾಗಿಲ್ಲ. ಆದ್ದರಿಂದ, ರೂ.1,80,000/–ಗಳು ಉಳಿಕೆಯಾಗಿರುತ್ತದೆ. ಕೋವಿಡ್–19ರ ಹಿನ್ನೆಲೆಯಲ್ಲಿ ಕ್ರಮವಹಿಸಲು ಸಾಧ್ಯವಾಗದ ಕಾರಣ ಅನುದಾನ ಉಳಿಕೆಯಾಗಿರುತ್ತದೆ.

8. 2205–00–104–0–33 ಕ್ರೀಡಾ ಸಾಮಗ್ರಿಗಳನ್ನು ಕೊಳ್ಳಲು ಮತ್ತು ಆಟದ ಮೈದಾನಗಳನ್ನು ಅಭಿವೃದ್ಧಿಗೊಳಿಸಲು ಶೈಕ್ಷಣಿಕ ಮತ್ತು ಇತರೆ ಸಂಸ್ಥೆಗಳಿಗೆ ಸಹಾಯಧನ:

ಈ ಶೀರ್ಷಿಕೆಯಡಿಯಲ್ಲಿ ತಾಲ್ಲೂಕು, ಜಿಲ್ಲಾ ಮತ್ತು ತಾಲ್ಲೂಕು ಕ್ರೀಡಾಂಗಣಗಳಲ್ಲಿ ದೈನಂದಿನ ಅಭ್ಯಾಸಕ್ಕೆ ಕ್ರೀಡಾಸಾಮಗ್ರಿಗಳನ್ನು ಖರೀದಿಸಲು ರೂ. 2,45,000/–ಗಳನ್ನು ಬಿಡುಗಡೆ ಮಾಡಲಾಗಿದ್ದು, ಸದರಿ ಅನುದಾನದಲ್ಲಿ ಕ್ರೀಡಾ ಸಲಕರಣೆಗಳನ್ನು ಖರೀದಿಸಲು ರೂ.96,880/–ಗಳನ್ನು ವೆಚ್ಚಭರಿಸಲಾಗಿದೆ. ಹಾಗೂ ರೂ.1,48,120/–ಗಳು ಉಳಿಕೆಯಾಗಿರುತ್ತದೆ. ಕೋವಿಡ್–19ರ ಹಿನ್ನೆಲೆಯಲ್ಲಿ ಕ್ರಮವಹಿಸಲು ಸಾಧ್ಯವಾಗದ ಕಾರಣ ಅನುದಾನ ಉಳಿಕೆಯಾಗಿರುತ್ತದೆ.

9. 2205–00–104–0–35 ಗ್ರಾಮಾಂತರ ಪ್ರದೇಶಗಳಲ್ಲಿ ಕ್ರೀಡೆಗಳಿಗೆ ಪ್ರೋತ್ಸಾಹ:

ಜಿಲ್ಲಾ ಎಲ್ಲಾ ತಾಲ್ಲೂಕುಗಳಲ್ಲಿ ನಡೆದ ಕ್ರೀಡಾಶಾಲೆ/ನಿಲಯ ಆಯ್ಕೆ ಪ್ರಕ್ರಿಯೆಗೆ ರೂ.1,00,000/– ಗಳನ್ನು ವೆಚ್ಚ ಭರಿಸಲಾಗಿದೆ.

10. 2205–00–104–0–36 ಕ್ರೀಡಾ ಸಾಮಗ್ರಿ ಖರೀದಿಗಾಗಿ ಜಿಲ್ಲಾ ಮತ್ತು ವಿಭಾಗೀಯ ಯುವಜನ ಸೇವೆಗಳ ಮಂಡಳಿಗೆ ಸಹಾಯ:

ಈ ಶೀರ್ಷಿಕೆಯಡಿಯಲ್ಲಿ ಜಿಲ್ಲಾ ಕ್ರೀಡಾಂಗಣದಲ್ಲಿ ದೈನಂದಿನ ಅಭ್ಯಾಸ ಮಾಡುವ ಕ್ರೀಡಾಪಟುಗಳ ಉಪಯೋಗಕ್ಕಾಗಿ ಕ್ರೀಡಾ ಸಾಮಗ್ರಿಗಳನ್ನು ಖರೀದಿಸಲು ಹಾಗೂ ಮೆಡಿಕಲ್ ಕಿಟ್ ಖರೀದಿಸಲು ರೂ. 1,00,000/–ಗಳನ್ನು ಬಿಡುಗಡೆಮಾಡಲಾಗಿರುತ್ತದೆ. ಆದರೆ ಸದರಿ ಲೆಕ್ಕಶೀರ್ಷಿಕೆ ಯಡಿಯಲ್ಲಿ ಅನುದಾನವನ್ನು ವೆಚ್ಚಭರಿಸಲಾಗಿಲ್ಲ.

ಇಲಾಖಾ ಸಿಬ್ಬಂದಿ ವಿವರ:–

ಗುಂಪು	ಮಂಜೂರಾದ ಹುದ್ದೆಯ ಸಂಖ್ಯೆ	ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳ ಸಂಖ್ಯೆ	ಖಾಲಿ ಹುದ್ದೆಗಳ ಸಂಖ್ಯೆ	ಷರಾ
ಗುಂಪು–ಎ	–	–	–	–
ಗುಂಪು–ಬಿ	1	1	–	–
ಗುಂಪು–ಸಿ	2	2	–	–
ಗುಂಪು–ಡಿ	1	1	–	–
ಒಟ್ಟು	4	4	–	–

ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಗಳ ಕಚೇರಿ, ತುಮಕೂರು/ಮಧುಗಿರಿ ಜಿಲ್ಲೆ.
ವಾರ್ಷಿಕ ವರದಿ 2020–21

ಜಿಲ್ಲೆಯ ಹಿನ್ನೆಲೆ:

ಕರ್ನಾಟಕ ರಾಜ್ಯದ ಜಿಲ್ಲೆಗಳಲ್ಲಿ ಒಂದಾಗಿರುವ ತುಮಕೂರು ಜಿಲ್ಲೆಯು ಕಲ್ಪತರು ನಾಡು ಎಂದೇ ಪ್ರಸಿದ್ಧಿ ಪಡೆದಿದೆ. ಈ ಜಿಲ್ಲೆಯು ಒಟ್ಟು 10598 ಚ.ಕಿ.ಮೀ. ಅಳತೆಯನ್ನು ಹೊಂದಿದೆ. ಈ ಜಿಲ್ಲೆಯು ರಾಜ್ಯದ ಆಗ್ನೇಯ ದಿಕ್ಕಿನಲ್ಲಿದ್ದು 12.45 ರಿಂದ 14.20 ರೇಖಾಂಶ ಮತ್ತು 77.31 ಅಕ್ಷಾಂಶದಲ್ಲಿದೆ. ತುಮಕೂರು ಜಿಲ್ಲೆಯು ಭೌಗೋಳಿಕ ಹಾಗೂ ಸಾಂಸ್ಕೃತಿಕ ವೈವಿಧ್ಯತೆಗಳನೊಳಗೊಂಡಿದ್ದು ಶಿಕ್ಷಣ ಕ್ಷೇತ್ರದಲ್ಲಿ ಗಣನೀಯ ಪ್ರಗತಿಯನ್ನು ಸಾಧಿಸಿದೆ. ಈ ಜಿಲ್ಲೆಯು ಬೆಂಗಳೂರು, ಕೋಲಾರ ಮತ್ತು ಮಂಡ್ಯ ಜಿಲ್ಲೆಗಳಿಂದ ಸುತ್ತುವರೆದಿದ್ದು, ಉತ್ತರದಲ್ಲಿ ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯಿದೆ.

ವಿಶ್ವ ಇಂದು ಎದುರಿಸುತ್ತಿರುವ ಬಹು ದೊಡ್ಡ ಸಮಸ್ಯೆ ಎಂದರೆ ಅನಕ್ಷರತೆ. ಬಹುಸಂಖ್ಯಾತ ಅನಕ್ಷರತೆ ಭಾರತ ದೇಶದ ಪಾಪ ಹಾಗೂ ಕಳಂಕವಾಗಿದೆ. ಮಾನವ ಅಭಿವೃದ್ಧಿಯ ಮೂಲ ಮಾನದಂಡವಾದ ಸಾಕ್ಷರತೆಯು ನಮ್ಮ ಪ್ರಥಮ ಆದ್ಯತೆ ಯಾಗಬೇಕಾಗಿದೆ. ಅನಕ್ಷರಸ್ಥರಿಗೆ ಓದು ಬರಹ ಕಲಿಸಿ ನವಸಾಕ್ಷರರನ್ನಾಗಿಸಿ ಅವರು ಕಲಿತಿದ್ದನ್ನು ಬಳಸಿ ಬೆಳೆಸುವುದರ ಜೊತೆಗೆ ಜೀವನ ಕೌಶಲ್ಯ ಕಲ್ಪಿಸಲು ಮತ್ತು ಸಮುದಾಯದಲ್ಲಿ ಪಾಲ್ಗೊಳ್ಳಲು **ಎಲ್ಲರಿಗೂ ಶಿಕ್ಷಣ, ಎಲ್ಲರಿಗೂ ಆರೋಗ್ಯ, ಎಲ್ಲರಿಗೂ ಆದಾಯ,** ಎಂಬ ತತ್ವದಂತೆ ವಿದ್ಯಾರ್ಜನೆ ಪಡೆದವರು ಬದುಕಿನ ಶಿಕ್ಷಣ ಪಡೆಯಬೇಕಾಗಿದೆ.

ವಯಸ್ಕರ ಶಿಕ್ಷಣ ಇಲಾಖೆಯು ಜಿಲ್ಲೆಯಲ್ಲಿರುವ 15+ ವಯೋಮಾನದ ಅನಕ್ಷರಸ್ಥರನ್ನು ಗುರುತಿಸಿ ಅವರಿಗೆ ಓದುಬರಹ ಲೆಕ್ಕಾಚಾರದ ಮೂಲಕ ಸಾಕ್ಷರರನ್ನಾಗಿ ಮಾಡುವ ಮುಖ್ಯ ಉದ್ದೇಶವನ್ನು ಹೊಂದಿ ಪ್ರಾರಂಭಿಸಲ್ಪಟ್ಟಿತು. ಗ್ರಾಮೀಣ ಕ್ರಿಯಾತ್ಮಕ ಸಾಕ್ಷರತಾ ಯೋಜನೆಯನ್ನು ಸರ್ಕಾರವು ರದ್ದುಗೊಳಿಸಿ ಇದರ ಬದಲಾಗಿ ರಾಜ್ಯಾದ್ಯಾಂತ ಜಿಲ್ಲಾ ಸಾಕ್ಷರತಾ ಸಮಿತಿಗಳನ್ನು ರಚಿಸಿ ಸಾಕ್ಷರತಾ ಕಾರ್ಯಕ್ರಮವನ್ನು ಅನುಷ್ಠಾನ ಗೊಳಿಸುವ ಜವಾಬ್ದಾರಿಯನ್ನು 1993–94 ರಿಂದ ವಹಿಸಿಕೊಂಡ ನಂತರಜಿಲ್ಲಾ ವಯಸ್ಕರ ಶಿಕ್ಷಣ ಇಲಾಖೆಯು ಸಾಕ್ಷರತಾ ಸಮಿತಿ ಸಹಯೋಗದಲ್ಲಿ ಕಾರ್ಯಕ್ರಮಗಳನ್ನು ರಾಷ್ಟ್ರೀಯ ಸಾಕ್ಷರತಾ ಮಿಷನ್ ಪ್ರಾಧಿಕಾರ & ರಾಜ್ಯ ಸಾಕ್ಷರತಾ ಮಿಷನ್ ಪ್ರಾಧಿಕಾರಿಗಳ ನಿರ್ದೇಶನಗಳನ್ವಯ ಅನುಷ್ಠಾನಗೊಳಿಸುತ್ತಿದೆ.

ಜಿಲ್ಲಾ ಸಾಕ್ಷರತಾ ಸಮಿತಿಯು 1993ರಲ್ಲಿ ಅಸ್ತಿತ್ವಕ್ಕೆ ಬಂದಿದ್ದು, ಜಿಲ್ಲೆಯಲ್ಲಿ ಮೂಲ ಸಾಕ್ಷರತೆ ಸಾಧನೆಗಾಗಿ ಸುವರ್ಣ ಸಾಕ್ಷರತಾ ಆಂದೋಲನ, ಸಾಕ್ಷರೋತ್ತರ ಕಾರ್ಯಕ್ರಮ, ಕನ್ನಡನಾಡು ಸಾಕ್ಷರ ನಾಡು, ಕಲಿಯುತ್ತಿರುವ ಸಮಾಜ ಮತ್ತು ನಿರಂತರ ಕಲಿಕೆಗಾಗಿ ಮುಂದುವರಿಕೆ ಶಿಕ್ಷಣ, ಸಾಕ್ಷರತೆಯಲ್ಲಿ ಹಿಂದುಳಿದ ಜಿಲ್ಲೆಗಳಲ್ಲಿ ಅನಕ್ಷರಸ್ಥರ ಸಮುದಾಯದ ಕಲಿಕೆಗೆ ಪುನ:ಶ್ಚೇತನ ಕಾರ್ಯಕ್ರಮ, ವಿದ್ಯಾರ್ಥಿಗಳ ಮೂಲಕ ಸಾಕ್ಷರತೆ, ಕಿರುಸಾಕ್ಷರತೆ, ಸ್ವಸಹಾಯ ಸಂಘಗಳ ಅನಕ್ಷರಸ್ಥ ಸದಸ್ಯರ ಸಾಕ್ಷರತೆಗಾಗಿ ಕಲಿಕೆ–ಗಳಿಕೆ ಕಾರ್ಯಕ್ರಮ, ಗ್ರಾಮ ಪಂಚಾಯಿತಿಗಳ ಅನಕ್ಷರಸ್ಥ ಸದಸ್ಯರ ಕಲಿಕೆಗೆ ಸಾಕ್ಷರತಾ ಸನ್ಮಾನ ಕಾರ್ಯಕ್ರಮ, ಅಕ್ಷರಅರಿವಿನ ಕ್ರಿಯಾತ್ಮಕ ಜಲ ಸಾಕ್ಷರತೆ, ಜೈಲು ಸಾಕ್ಷರತೆ ಎಜುಸ್ಯಾಟ್ ಮೂಲಕ ಸಾಕ್ಷರತೆ, ಶಿಬಿರ ಸಾಕ್ಷರತೆ, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಅನಕ್ಷರಸ್ಥರಿಗಾಗಿ ವಿಶೇಷ ಘಟಕಯೋಜನೆ ಮತ್ತು ಗಿರಿಜನಉಪಯೋಜನೆ (ಎಸ್‌ಸಿಪಿ/ಟಿಎಸ್‌ಪಿ) ಯಡಿಯಲ್ಲಿ ಸಾಕ್ಷರತೆ, ರೇಡಿಯೋ ಮೂಲಕ ಸಾಕ್ಷರತೆ, ಕಂಪ್ಯೂಟರ್ ಮೂಲಕ ಸಾಕ್ಷರತೆ ಮತ್ತು ಉಪಗ್ರಹ ಆಧಾರಿತ ಕಾರ್ಯಕ್ರಮ, ವಿಶೇಷ ಘಟಕಯೋಜನೆ ಹಾಗೂ ಗಿರಿಜನ ಉಪಯೋಜನೆ ಅಡಿಯಲ್ಲಿ ನವಸಾಕ್ಷರರಾದವರಿಗೆ ವೃತ್ತಿ ಕೌಶಲ ತರಬೇತಿ

ಹಾಗೂ ಸಮುದಾಯ ಶಿಕ್ಷಣ ಮತ್ತು ವೃತ್ತಿ ಕೌಶಲ ಕಾರ್ಯಕ್ರಮಇಂತಹ ಹಲವಾರು ವಿನೂತನ ಸಾಕ್ಷರತಾ ಕಾರ್ಯಕ್ರಮಗಳನ್ನು ರೂಪಿಸಿ ಜಾರಿಗೆತಂದಿದೆ.

2011 ರಜನಗಣತಿಯ ಪ್ರಕಾರತುಮಕೂರುಜಿಲ್ಲೆಯ ಸಾಕ್ಷರತೆಯ ಪ್ರಮಾಣ(ಶೇಕಡವಾರು)

ಕ್ರ. ಸಂ	ವಿವರ	ಒಟ್ಟು ಸಾಕ್ಷರತಾ ಪ್ರಮಾಣ	ಪುರುಷ ಸಾಕ್ಷರತಾ ಪ್ರಮಾಣ	ಮಹಿಳಾ ಸಾಕ್ಷರತಾ ಪ್ರಮಾಣ
1	ಒಟ್ಟು	75.14	82.81	67.38
2	ಗ್ರಾಮೀಣ ಪ್ರದೇಶ	71.66	80.48	62.71
3	ನಗರ ಪ್ರದೇಶ	87.32	90.93	83.67

2011 ರಜನಗಣತಿಯ ಪ್ರಕಾರತುಮಕೂರುಜಿಲ್ಲೆಯತಾಲ್ಲೂಕುವಾರು ಸಾಕ್ಷರತೆಯ ಪ್ರಮಾಣ (ಶೇಕಡವಾರು)

ಕ್ರ.ಸಂ.	ತಾಲ್ಲೂಕುಗಳ ಹೆಸರು	ಗ್ರಾಮೀಣ			ನಗರ			ಒಟ್ಟು		
		ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು
1	ಚಿಕ್ಕನಾಯಕನಹಳ್ಳಿ	82.58	66.78	**74.65**	90.57	80.86	**85.64**	83.98	69.29	**76.59**
2	ಗುಬ್ಬಿ	80.96	66.07	**73.56**	93.25	86.43	**89.83**	81.82	67.52	**74.71**
3	ಕೊರಟಗೆರೆ	79.14	61.95	**70.6**	89.83	80.28	**85.02**	80.09	63.63	**71.9**
4	ಕುಣಿಗಲ್	76.27	55.65	**65.89**	89.09	80.46	**84.82**	78.2	59.27	**68.69**
5	ಮಧುಗಿರಿ	78.07	57.89	**68.03**	89.42	80.19	**84.79**	79.3	60.33	**69.85**
6	ಪಾವಗಡ	75.05	54	**64.6**	88.33	75.36	**81.83**	76.57	56.48	**64.32**
7	ಶಿರಾ	78.61	59.63	**69.24**	87.47	79.99	**83.77**	80.21	63.32	**66.58**
8	ತಿಪಟೂರು	87.22	72.43	**79.8**	91.72	84.46	**88.3**	88.42	75.71	**82.05**
9	ತುಮಕೂರು	83.77	67.74	**76.05**	91.83	85.92	**88.91**	87.82	77.11	**82.6**
10	ತುರುವೇಕೆರೆ	84.91	67.39	**76.05**	93.5	84.65	**89.05**	85.77	69.1	**77.34**
	ಒಟ್ಟು ಮೊತ್ತ	80.48	62.71	**71.66**	90.93	83.67	**87.32**	82.81	67.38	**75.14**

ಕೇಂದ್ರ ಪುರಸ್ಕೃತಯೋಜನೆ

ದಿನಾಂಕ 08.09.2010ರಿಂದ31.03.2017ರವರೆಗೆ ಸಾಕ್ಷರ ಭಾರತ್‌ಕಾರ್ಯಕ್ರಮ ಅನುಷ್ಠಾನಗೊಂಡಿದ್ದು, ದಿನಾಂಕ:01.04.2017ರಿಂದಯಾವುದೇಕಾರ್ಯಕ್ರಮಇರುವುದಿಲ್ಲ.

2020–21 ನೇ ಸಾಲಿನ ಮೂಲ ಸಾಕ್ಷರತಾ ಕಾರ್ಯಕ್ರಮಗಳು

ಕೋವಿಡ್–19 ಸಾಂಕ್ರಾಮಿಕ ರೋಗ ಹರಡಿದ್ದರಿಂದ 2020–21 ನೇ ಸಾಲಿಗೆ ಸರ್ಕಾರದ ನಿರ್ದೇಶನದಂತೆ ಮೂಲ ಸಾಕ್ಷರತಾ ಕಾರ್ಯಕ್ರಮ ಅನುಷ್ಠಾನಗೊಳಿಸಲು ಸಾಧ್ಯವಾಗಲಿಲ್ಲ ಆದರೆ 2019–20 ನೇ ಸಾಲಿನ ಸಾಕ್ಷರತಾ ಕಾರ್ಯಕ್ರಮಗಳಲ್ಲಿ ಕಲಿಕೆ ಅಪೂರ್ಣಗೊಳಿಸಿದ ಕಲಿಕಾರ್ಥಿಗಳಿಗೆ ಕಲಿಕೆ ಮುಂದುವರೆಸಿ ಪೂರ್ಣಗೊಳಿಸಲಾಗಿದೆ. ಹಾಗೂ ರಾಜ್ಯ ಸರ್ಕಾರದಿಂದ ಯಾವುದೇ ಕಾರ್ಯಕ್ರಮ ಅನುಷ್ಠಾನಗೊಳಿಸಿರುವುದಿಲ್ಲ.

2020–21 ನೇ ಸಾಲಿನ ಆಡಳಿತ ವರದಿ

ಕೈಮಗ್ಗ ಮತ್ತು ಜವಳಿ ಇಲಾಖೆ ಜಿಲ್ಲಾ ಪಂಚಾಯತ್, ತುಮಕೂರು ವತಿಯಿಂದ ಅನುಷ್ಟಾನಗೊಳಿಸುತ್ತಿರುವ ಯೋಜನಾ ಕಾರ್ಯಕ್ರಮಗಳ

ವಿವರ ಮತ್ತು ಇಲಾಖೆಯ ಅಂಕಿ–ಅಂಶಗಳು

ಜಿಲ್ಲೆಯಲ್ಲಿ ಕೈಮಗ್ಗ ಮತ್ತು ಜವಳಿ ಇಲಾಖೆಯ ಜಿಲ್ಲಾ ಮಟ್ಟದ ಕಛೇರಿಯಿದ್ದು, ಸ್ವತಂತ್ರವಾಗಿ 1992 ರಿಂದ ಕಾರ್ಯನಿರ್ವಹಿಸುತ್ತಿದೆ. ಜಿಲ್ಲಾ ಮಟ್ಟದಲ್ಲಿ ಈ ಇಲಾಖೆಯು ಜಿಲ್ಲಾ ಪಂಚಾಯಿತಿಯ ಆಡಳಿತ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿದೆ. ತಾಲ್ಲೂಕು ಮಟ್ಟದಲ್ಲಿ ಇಲಾಖೆಯ ಪ್ರತ್ಯೇಕ ಕಚೇರಿಯಾಗಲಿ, ಸಿಬ್ಬಂದಿಯಾಗಲಿ ಇರುವುದಿಲ್ಲ. ಜಿಲ್ಲಾ ಮಟ್ಟದ ಕಛೇರಿಯು ತುಮಕೂರಿನ ಸಿದ್ದಗಂಗಾ ಬಡಾವಣೆಯ 5 ನೇ ಅಡ್ಡ ರಸ್ತೆಯಲ್ಲಿರುವ ಖಾಸಗಿ ಕಟ್ಟಡವೊಂದರಲ್ಲಿ ಕಾರ್ಯನಿರ್ವಹಿಸುತ್ತಿದೆ. ಉಪ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ ಇವರು ಕಛೇರಿಯ ಮುಖ್ಯಸ್ಥರಾಗಿದ್ದು, ನಾಲ್ಕು ತಾಂತ್ರಿಕ ಸಿಬ್ಬಂದಿ ಹಾಗೂ ಇಬ್ಬರು ಸಹಾಯಕ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ.

ಇಲಾಖೆಯ ಜಿಲ್ಲಾ ಮಟ್ಟದ ಕಚೇರಿಯಲ್ಲಿರುವ ಮಂಜೂರಾದ ಸಿಬ್ಬಂದಿ ಸಂಖ್ಯಾಬಲ:–

ಗುಂಪು	ಮಂಜೂರಾದ ಹುದ್ದೆಗಳ ಸಂಖ್ಯೆ	ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳ ಸಂಖ್ಯೆ	ಖಾಲಿ ಹುದ್ದೆಗಳ ಸಂಖ್ಯೆ
ಎ	01	01	–
ಬಿ	02	02	–
ಸಿ	04	03	01
ಡಿ	01	01(ಹೊರಗುತ್ತಿಗೆ)	0
ಒಟ್ಟು	08	07	01

ಇಲಾಖೆ ಸಂಘಟನೆ ರಚನೆ (District Chart)



ಜಿಲ್ಲೆಯಲ್ಲಿ ಕೈಮಗ್ಗ ನೇಕಾರಿಕೆ ಹಾಗೂ ಜವಳಿ ಆಧಾರಿತ ಉತ್ಪಾದನಾ ಚಟುವಟಿಕೆಗಳ ಅಭಿವೃದ್ಧಿಗಾಗಿ ಇಲಾಖೆಯ ಕಛೇರಿ ಕಾರ್ಯನಿರ್ವಹಿಸುತ್ತಿದ್ದು, ಇದಕ್ಕಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ರೂಪಿಸಿರುವ ಅನೇಕ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ. ಕೇಂದ್ರ ವಲಯ ಯೋಜನೆಗಳಾದ ಕ್ಲಸ್ಟರ್ ಮತ್ತು ರಾಜ್ಯ ಸರ್ಕಾರದ ಯೋಜನೆಗಳಾದ ನೇಕಾರರ ಕಲ್ಯಾಣ ಯೋಜನೆ, ನೂತನ ಜವಳಿ ನೀತಿ ಯೋಜನೆ, ಹೊಸ ವಿನ್ಯಾಸ ಮತ್ತು ಪ್ರವೃತ್ತಿ ಯೋಜನೆ, ಕೈಮಗ್ಗ ಉತ್ಪನ್ನಗಳ ಮಾರಾಟದ ಮೇಲೆ ಶೇ.20 ರ ಪ್ರೋತ್ಸಾಹನ ರಿಬೇಟ್, ಉಣ್ಣೆವಲಯ ಪುನಶ್ಚೇತನ ಯೋಜನೆ ಮತ್ತು ವಿದ್ಯುತ್‌ಮಗ್ಗ ನೇಕಾರರಿಗೆ ರಿಯಾಯಿತಿ ಧರದಲ್ಲಿ ವಿದ್ಯುತ್ ಪೂರೈಕೆ, ವಿದ್ಯುತ್ ಮಗ್ಗ / ಸೆಮಿ ಆಟೋ ವಿದ್ಯುತ್ ಮಗ್ಗಗಳ ಪೂರೈಕೆ ಇವೇ ಮುಂತಾದ ಯೋಜನೆಗಳು ಪ್ರಮುಖ ಯೋಜನೆಗಳಾಗಿವೆ. ಇದೇ ರೀತಿ ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯತಿಯ ಮೂಲಕ ಅನುಷ್ಠಾನಗೊಳಿಸುತ್ತಿರುವ ಕೈಮಗ್ಗ ಉದ್ದಿಮೆಗಳಿಗೆ ಸಹಾಯಧನ ಯೋಜನೆಯಡಿ ಕೈಮಗ್ಗಗಳ ಆಧುನೀಕರಣಕ್ಕಾಗಿ ಸಹಾಯಧನ ಇತ್ಯಾದಿ ಪ್ರಮುಖ ಯೋಜನೆಗಳಿವೆ.

ತುಮಕೂರು ಜಿಲ್ಲೆಯಲ್ಲಿ ಪ್ರಮುಖವಾಗಿ ಉಣ್ಣೆ ಕೈಮಗ್ಗ ನೇಕಾರಿಕೆಯು ಸಾಂಪ್ರದಾಯಿಕ ಕಸುಬಾಗಿ ನಡೆಯುತ್ತಿದ್ದು, ಸ್ಥಳೀಯವಾಗಿ ದೊರೆಯುವ ಕುರಿಗಳ ತುಪ್ಪಟದಿಂದ ಕಂಬಳಿಗಳನ್ನು ಕೈಮಗ್ಗಗಳಲ್ಲಿ ತಯಾರಿಸಿ ಮಾರಾಟ ಮಾಡಲಾಗುತ್ತಿದೆ. ಉಣ್ಣೆ ಕಂಬಳಿ ತಯಾರಿಕೆಯ ಈ ಉದ್ಯೋಗವನ್ನು ಅವಲಂಭಿಸಿ ಜಿಲ್ಲೆಯಲ್ಲಿ ಸುಮಾರು 12500 ಕುಟುಂಬಗಳು ಜೀವನ ಸಾಗಿಸುತ್ತಿವೆ. ಜಿಲ್ಲೆಯ ಶಿರಾ, ಪಾವಗಡ, ಚಿಕ್ಕನಾಯಕನಹಳ್ಳಿ ಹಾಗೂ ತಿಪಟೂರು ತಾಲ್ಲೂಕುಗಳಲ್ಲಿ ಉಣ್ಣೆ ಕಂಬಳಿ ಉತ್ಪಾದನೆ ಚಟುವಟಿಕೆಯು ಗಣನೀಯ ಪ್ರಮಾಣದಲಿದ್ದು, ರಾಜ್ಯ ಸರ್ಕಾರದ ಉಣ್ಣೆ ವಲಯ ಅಭಿವೃದ್ಧಿಗಾಗಿ ಉಣ್ಣೆ ಪುನಶ್ಚೇತನ ಯೋಜನೆಯನ್ನು ಜಾರಿಗೆ ತಂದಿರುತ್ತದೆ.

ಕಂಬಳಿ ಉತ್ಪಾದನೆಯ ನೇಕಾರರಿಗೆ ಅವರು ಕಸುಬನ್ನು ಮುಂದುವರಿಸಲು ಅನುಕೂಲವಾಗುವಂತೆ ಘನಸರ್ಕಾರದಿಂದ ಹಲವಾರು ಸವಲತ್ತುಗಳನ್ನು ಅವರ ಕಸುಬಿಗೆ ಪೂರಕವಾಗಿ ಒದಗಿಸಲಾಗುತ್ತಿದೆ. ತಯಾರಾದ ಕಂಬಳಿಗಳನ್ನು ಮಾರಾಟ ಮಾಡುವ ಜವಾಬ್ದಾರಿಯನ್ನು ನೇಕಾರರೇ ಸ್ಥಾಪಿಸಿಕೊಂಡ ಸ್ಥಳಿಯ ಸಹಕಾರ ಸಂಘಗಳು ವಹಿಸಿಕೊಳ್ಳುತ್ತವೆ. ನೇಕಾರರು ತಯಾರಿಸಿದ ಕಂಬಳಿಗಳನ್ನು ಸಂಘದ ವತಿಯಿಂದ ಖರೀದಿಸಿ, ದಾಸ್ತಾನಿಟ್ಟುಕೊಂಡು ಉತ್ತಮ ಬೆಲೆ ಬಂದಾಗ ಎಸ್ಟೇಟುಗಳಿಗೆ ಅವುಗಳನ್ನು ಮಾರಾಟ ಮಾಡುತ್ತಾರೆ. ನೇಕಾರರ ಬೆನ್ನುಲುಬಾಗಿ ನಿಂತಿರುವ ಈ ಸಹಕಾರ ಸಂಘಗಳಿಗೆ ದುಡಿಮೆ ಬಂಡವಾಳ, ಮಗ್ಗ ಸಲಕರಣೆಗಳಿಗೆ ಸಹಾಯಧನ ಇತ್ಯಾದಿ ರೂಪದಲ್ಲಿ ಆರ್ಥಿಕ ಸಹಾಯವನ್ನು ಒದಗಿಸಲಾಗುತ್ತಿದೆ. ವಸತಿ ಸಹಿತ ಕಾರ್ಯಾಗಾರವು ಇಂತಹ ಒಂದು ಪ್ರಮುಖ ಸೌಲಭ್ಯವಾಗಿದ್ದು, ವಾಸಿಸಲು ಮನೆ ಇಲ್ಲದ ನೇಕಾರರಿಗೆ ವಾಸಕ್ಕಾಗಿ ಮನೆ ಮತ್ತು ಮಗ್ಗ ಅಳವಡಿಸಿಕೊಳ್ಳುವುದಕ್ಕಾಗಿ ಒಂದು ಕಾರ್ಯಾಗಾರವನ್ನು ಈ ಯೋಜನೆಯಡಿ ಒದಗಿಸಲಾಗುವುದು. ಇದರ ಲಾಭ ಪಡೆದ ಅನೇಕ ಉಣ್ಣೆ ನೇಕಾರರು ಸೂರು ಹೊಂದಿದವರಾಗಿ ನೆಮ್ಮದಿಯ ಜೀವನ ಸಾಗಿಸುತ್ತಿದ್ದಾರೆ.

ಉಣ್ಣೆ ಕಂಬಳಿ ತಯಾರಿಕೆ ಬಿಟ್ಟರೆ ಜಿಲ್ಲೆಯಲ್ಲಿ ವ್ಯಾಪಕವಾಗಿ ನಡೆಯುತ್ತಿರುವ ಕೈಮಗ್ಗ ಚಟುವಟಿಕೆಯೆಂದರೆ ರೇಷ್ಮೆ ಸೀರೆ ಉತ್ಪಾದನೆ. ಜಿಲ್ಲೆಯ ಗುಬ್ಬಿ, ತಿಪಟೂರು, ಪಾವಗಡ ಮತ್ತು ಚಿಕ್ಕನಾಯಕನಹಳ್ಳಿ ತಾಲ್ಲೂಕುಗಳಲ್ಲಿ ರೇಷ್ಮೆ ಸೀರೆ ಉತ್ಪಾದನೆ ಗಣನೀಯ ಪ್ರಮಾಣದಲ್ಲಿ ನಡೆಯುತ್ತಿದೆ. ಕುಣಿ ಕೈಮಗ್ಗಗಳನ್ನು ಉಪಯೋಗಿಸಿಕೊಂಡು ಸಾಂಪ್ರದಾಯಿಕ ಮಾದರಿಯ ಅಪ್ಪಟ ರೇಷ್ಮೆ ಮತ್ತು ಜರಿ ಸೀರೆಗಳನ್ನು ತಯಾರಿಸುತ್ತಾರೆ.

ಇತ್ತೀಚಿನ ದಿನಗಳಲ್ಲಿ ಅತ್ಯಾಧುನಿಕ ವಿದ್ಯುತ್ ಚಾಲಿತ ಮಗ್ಗಗಳಿದ್ದರೂ ಸಹ ಕೈಮಗ್ಗಗಳಲ್ಲಿ ತಯಾರಾಗುವ ಅಪ್ಪಟ ರೇಷ್ಮೆ ಸೀರೆಗಳಿಗೆ ತನ್ನದೇ ಆದ ವಿಶೇಷ ಸ್ಥಾನವಿದ್ದು, ಮಾರುಕಟ್ಟೆಯಲ್ಲಿ ಉತ್ತಮ ಬೇಡಿಕೆ ಇದೆ.

ಕೈಮಗ್ಗ ಉತ್ಪಾದನೆಗಳಲ್ಲಿ ಹತ್ತಿ ಬಟ್ಟೆ ಉತ್ಪಾದನೆಯೂ ಪ್ರಮುಖ ಸ್ಥಾನ ಹೊಂದಿದೆಯಾದರೂ ತುಮಕೂರು ಜಿಲ್ಲೆಯಲ್ಲಿ ಹತ್ತಿ ಬಟ್ಟೆ ಉತ್ಪಾದನೆಯಾಗುತ್ತಿಲ್ಲ. ಜಿಲ್ಲೆಯಲ್ಲಿ ಪ್ರಮುಖವಾಗಿ ಕಾಣಸಿಗುವ ಮತ್ತೊಂದು ಜವಳಿ ಚಟುವಟಿಕೆಯೆಂದರೆ ವಿದ್ಯುತ್‌ಮಗ್ಗ ನೇಕಾರಿಕೆ, ಜಿಲ್ಲೆಯ ತಿಪಟೂರು, ತುರುವೇಕೆರೆ, ಮತ್ತು ಗುಬ್ಬಿ ತಾಲ್ಲೂಕುಗಳಲ್ಲಿ ಈ ಉದ್ದಿಮೆ ಇರುತ್ತದೆ. ಇದರಲ್ಲಿ ತಿಪಟೂರು ತಾಲ್ಲೂಕಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯುತ್ ಮಗ್ಗಗಳಿದ್ದು, ಜಿಲ್ಲೆಯಾದ್ಯಂತ ಸುಮಾರು 7861 ವಿದ್ಯುತ್ ಮಗ್ಗಗಳಿವೆ. ಬಹುತೇಕ ಎಲ್ಲಾ ಮಗ್ಗಗಳಲ್ಲಿ ಪಾಲಿಯಸ್ಟರ್ /ಆರ್ಟ್‌ಸಿಲ್ಕ್ ಸೀರೆಗಳನ್ನು ಉತ್ಪಾದನೆ ಮಾಡಲಾಗುತ್ತಿದೆ. ವಿದ್ಯುತ್‌ಮಗ್ಗ ನೇಕಾರರಿಗಾಗಿ ಕೇಂದ್ರ ಸರ್ಕಾರದಿಂದ ತಾಂತ್ರಿಕತೆ ಉನ್ನತೀಕರಣ ಯೋಜನೆ ಜಾರಿಯಲ್ಲಿದ್ದು ಜಾಗತಿಕ ಮಾರುಕಟ್ಟೆಗೆ ಹೊಂದುವಂತಹ ಉತ್ಪನ್ನಗಳ ತಯಾರಿಕೆಗೆ ಅವಶ್ಯವಿರುವ ಆಧುನಿಕ ಮಗ್ಗಗಳನ್ನು ಅಳವಡಿಸಿಕೊಳ್ಳುವ ನೇಕಾರರಿಗೆ ಆರ್ಥಿಕ ಸೌಲಭ್ಯವನ್ನು ಈ ಯೋಜನೆಯಡಿ ಒದಗಿಸಲಾಗುತ್ತಿದೆ. ಇದಲ್ಲದೆ ರಾಜ್ಯ ಸರ್ಕಾರದಿಂದ ವಿದ್ಯುತ್ ಮಗ್ಗ ನೇಕಾರರಿಗೆ ಇವರು ವಿನಿಯೋಗಿಸುವ

ವಿದ್ಯುತ್‌ನ್ನು ರಿಯಾಯಿತಿ ದರದಲ್ಲಿ ಒದಗಿಸಲಾಗುತ್ತಿದೆ. ಮಗ್ಗಗಳನ್ನು ಆಧುನೀಕರಿಸಿಕೊಳ್ಳುವ ನೇಕಾರರಿಗೆ ಸಹಾಯ ಧನವನ್ನು ಒದಗಿಸಲಾಗುತ್ತಿದೆ.

ಜಿಲ್ಲೆಯಲ್ಲಿ ಒಟ್ಟು 36 ಕೈಮಗ್ಗ ನೇಕಾರರ ಸಹಕಾರ ಸಂಘಗಳು ಮತ್ತು 05 ವಿದ್ಯುತ್ ಮಗ್ಗ ನೇಕಾರರ ಸಹಕಾರ ಸಂಘಗಳು ಕಾರ್ಯ ನಿರ್ವಹಿಸುತ್ತಿವೆ. ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗವನ್ನು ಒದಗಿಸಿರುವ ಕೈಮಗ್ಗ ನೇಕಾರಿಕೆಯನ್ನು ಉಳಿಸಿ ಬೆಳೆಸುವುದು ಹಾಗು ಮತ್ತೊಂದು ಕಡೆ ಮಾರುಕಟ್ಟೆ ಜಾಗತೀಕರಣದ ಹಿನ್ನೆಲೆಯಲ್ಲಿ ವಿದ್ಯುತ್‌ಮಗ್ಗ ನೇಕಾರರನ್ನು ತಾಂತ್ರಿಕತೆ ಉನ್ನತೀಕರಣಕ್ಕೆ ಪ್ರೋತ್ಸಾಹಿಸಿ ಜಾಗತಿಕ ಮಾರುಕಟ್ಟೆಗೆ ಅವರ ಉತ್ಪನ್ನಗಳು ಹೊಂದುವಂತೆ ಮಾಡಲಾಗುತ್ತಿದೆ.

ಜಿಲ್ಲೆಯಲ್ಲಿರುವ ತಾಲ್ಲೂಕುವಾರು ಕೈಮಗ್ಗ / ವಿದ್ಯುತ್‌ಮಗ್ಗಗಳ ಅಂಕಿ–ಅಂಶಗಳು

ಕ್ರ.ಸಂ	ತಾಲ್ಲೂಕು	ರೇಷ್ಮೆ/ಉಣ್ಣೆ/ಹತ್ತಿ ನೇಕಾರರು	ವಿದ್ಯುತ್‌ಮಗ್ಗ	ಒಟ್ಟು
1	ಚಿಕ್ಕನಾಯಕನಹಳ್ಳಿ	549	101	650
2	ಗುಬ್ಬಿ	899	1110	2009
3	ಪಾವಗಡ	3237	151	3388
4	ಶಿರಾ	931	04	935
5	ತಿಪಟೂರು	553	3097	3650
6	ತುರುವೇಕರೆ	169	257	426
7	ಕೊರಟಗೆರೆ	0	15	15
8	ಮಧುಗಿರಿ	17	30	47
9	ತುಮಕೂರು	0	12	12
	ಒಟ್ಟು	6355	4777	11132

ಜಿಲ್ಲೆಯಲ್ಲಿ ಅಸ್ತಿತ್ವದಲ್ಲಿರುವ ನೊಂದಾಯಿತ ನೇಕಾರ ಸಹಕಾರ ಸಂಘಗಳ ಅಂಕಿ–ಅಂಶಗಳು

ಕ್ರ.ಸಂ.	ತಾಲ್ಲೂಕು	ಕೈಮಗ್ಗ/			ವಿದ್ಯುತ್	
		ರೇಷ್ಮೆ	ಉಣ್ಣೆ	ಹತ್ತಿ	ಮಗ್ಗ	ಒಟ್ಟು
1	ತಿಪಟೂರು	05	01	01	00	07
2	ಪಾವಗಡ	04	08	01	–	13
3	ಗುಬ್ಬಿ	03	–	1	01	05
4	ಚಿಕ್ಕನಾಯಕನಹಳ್ಳಿ	02	01	–	–	03
5	ತುರುವೇಕೆರೆ	–	–	–	02	02
6	ಶಿರಾ	–	05	–	–	05
7	**ಮಧುಗಿರಿ**	–	–	–	01	01
	ಒಟ್ಟು	**14**	**15**	**03**	**04**	**36**

ಜಿಲ್ಲಾವಲಯ ಯೋಜನೆಗಳು

ಕ್ರ.ಸಂ	ಯೋಜನೆಯ ಹೆಸರು	ವಿವರ
1.	**ಕೈಮಗ್ಗ ಉದ್ಯಮಗಳಿಗೆ ಸಹಾಯಧನ**	ಕೈಮಗ್ಗ ನೇಕಾರರ ಸಹಕಾರ ಸಂಘಗಳನ್ನು ನಿರಂತರ ಉತ್ಪಾದನೆಯಲ್ಲಿ ತೊಡಗಿಸಲು ಅನುಕೂಲವಾಗುವಂತೆ ಸುಧಾರಿತ ಕೈಮಗ್ಗ ಮತ್ತು ಆದುನಿಕ ಸುಧಾರಿತ ಸಲಕರಣೆಗಳ ಖರೀದಿಗಾಗಿ ಸಹಾಯಧನ ರೂಪದಲ್ಲಿ ನೀಡಲಾಗುವುದು.

ಇಲಾಖಾ ಕಾರ್ಯಕ್ರಮಗಳ ವಿವರಗಳು

(ರೂ.ಲಕ್ಷಗಳಲ್ಲಿ)

ಕ್ರ.ಸಂ	ಕಾರ್ಯಕ್ರಮಗಳು		ಅನುದಾನ ಹಂಚಿಕೆ		ಸಾಧನೆ		ಷರಾ
			ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	
1	ಜಿಲ್ಲಾ ವಲಯ ಯೋಜನೆ ಕೈಮಗ್ಗ ಉದ್ದಿಮೆಗಳಿಗೆ ಸಹಾಯಧನ–ಕೈಮಗ್ಗಗಳ ಆಧುನೀಕರಣ	ಸಾಮಾನ್ಯ	15	10.00	15	10.00	ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ 20 ನೇಕಾರರ ಸಹಕಾರ ಸಂಘಗಳ ಮಗ್ಗರಹಿತ ನೇಕಾರರಿಗೆ ಕೈಮಗ್ಗ ಯಂತ್ರೋಪಕರಣಗಳನ್ನು ಖರೀದಿಸಲು ಹಾಗೂ ಆಧುನೀಕರಣಗೊಳಿಸುವ ಸಲುವಾಗಿ ಬಿಡುಗಡೆ ಮಾಡಲಾಗಿದೆ
		ಎಸ್.ಸಿ.ಪಿ	02	1.00	02	1.00	
		ಟಿ.ಎಸ್.ಪಿ	02	1.00	02	1.00	
	ಒಟ್ಟು		19	12.0	19	12.0	
2	ಕೈಮಗ್ಗ ಮತ್ತು ವಸ್ತ್ರ–ಲಯಗಳಿಗೆ ವೇತನಾಂಶ (ಯೋಜನೇತರ)		08	50.60	07	50.60	ಅಧಿಕಾರಿ / ಸಿಬ್ಬಂದಿ ವರ್ಗದವರ ವೇತನ ಮತ್ತು ಆಡಳಿತ ವೆಚ್ಚಗಳು
	ಒಟ್ಟು		08	62.60	07	62.60	

ರಾಜ್ಯ ವಲಯ ಯೋಜನೆಯಡಿ ಈ ಕೆಳಕಂಡ ಕಾರ್ಯಕ್ರಮಗಳು ಚಾಲ್ತಿಯಲ್ಲಿರುತ್ತವೆ

ಕ್ರ. ಸಂ	ಯೋಜನೆಯ ಹೆಸರು	ವಿವರ
1.	**ನೂತನ ಜವಳಿ ಮತ್ತು ಸಿದ್ಧ ಉಡುಪು ನೀತಿ(2019–24)** ಅ) ಪ್ರೋತ್ಸಾಹಧನ ಮತ್ತು ಉತ್ತೇಜನಗಳಡಿ ರಿಯಾಯಿತಿ ಹಾಗೂ ಸಹಾಯಧನ ಆ) ತರಬೇತಿ ಇ) ಕೌಶಲ್ಯಾಭಿವೃದ್ಧಿ ಕೇಂದ್ರಗಳ ಬಲವರ್ಧನೆ	* ಜವಳಿ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿ ಮತ್ತು ಸಿದ್ದ ಉಡುಪು ವಲಯಕ್ಕೆ ಆದ್ಯತೆ * ಉದ್ಯೋಗ ಸೃಜನೆ – ವಿಶೇಷವಾಗಿ ಮಹಿಳೆಯರು, ಗ್ರಾಮೀಣ ಪ್ರದೇಶದ ಮತ್ತು ಹಿಂದುಳಿದ ಪ್ರದೇಶದ ವಿದ್ಯಾವಂತ ನಿರುದ್ಯೋಗಿ ಯುವಜನತೆಗೆ ತರಬೇತಿಯನ್ನು ನೀಡಲಾಗುವುದು. * ಹಿಂದುಳಿದ ತಾಲ್ಲೂಕಗಳ ಅಭಿವೃದ್ಧಿ * ಜವಳಿ ಕ್ಷೇತ್ರದ ವಿವಿಧ ಕೌಶಲ್ಯಗಳ ಅಭಿವೃದ್ಧಿ * ಬೆಂಗಳೂರು ಜಿಲ್ಲೆಯಲ್ಲಿ ಕೇಂದ್ರಿಕೃತವಾಗುತ್ತಿರುವ ಜವಳಿ ಕೈಗಾರಿಕೆಗಳನ್ನು ರಾಜ್ಯದ ಇತರೆ ಪ್ರದೇಶಗಳಿಗೆ ಆಕರ್ಷಿಸುವುದು. * ಜವಳಿ ಕೈಗಾರಿಕೆಗಳ ತಾಂತ್ರಿಕ ಉನ್ನತೀಕರಣ ಹಾಗೂ ಮೌಲ್ಯ ವರ್ಧನೆ * ರಾಜ್ಯದ ಸರ್ವತೋಮುಖ ಆರ್ಥಿಕ ಅಭಿವೃದ್ಧಿ * ಸಾಲಾಧಾರಿತ ಜವಳಿ ಘಟಕಗಳಿಗೆ ಪ್ರೋತ್ಸಾಹಧನ ಮತ್ತು ಉತ್ತೇಜನಗಳಡಿ ರಿಯಾಯಿತಿ ಹಾಗೂ ಸಹಾಯಧನ ನೀಡುವುದು * ತರಬೇತಿ ಅವಧಿಯಲ್ಲಿ 45 ದಿನಗಳ ಅವಧಿಗೆ ರೂ 3500/–ಗಳ ಶಿಷ್ಯವೇತನ ನೀಡಲಾಗುವುದು.
2.	**ನೇಕಾರರ ಕಲ್ಯಾಣ ಯೋಜನೆ (ಕೈಮಗ್ಗ ನೇಕಾರರ ಸಹಕಾರ ಸಂಘದ ಸದಸ್ಯರಿಗೆ ಮಾತ್ರ)** ಅ) ವೈದ್ಯಕೀಯ ವೆಚ್ಚ ಮರುಪಾವತಿ ಆ)ಅಂತ್ಯ ಸಂಸ್ಕಾರ ವೆಚ್ಚ	(ಅ) ನೇಕಾರರ ಅಥವಾ ಕುಟುಂಬದ ಸದಸ್ಯರು ಕ್ಯಾನ್ಸರ್ ರೋಗದ ಚಿಕಿತ್ಸೆಗಾಗಿ ಗರಿಷ್ಠ ರೂ.50,000 ಮತ್ತು ಚಿಕಿತ್ಸಾ ಅವಧಿಯಲ್ಲಿ ವಾರ್ಷಿಕ ರೂ.500/–ನ್ನು ನೀಡಲಾಗುವುದು. (ಆ) ಹೃದಯ ಅಥವಾ ಕಿಡ್ನಿ ಚಿಕಿತ್ಸೆಗಾಗಿ ಗರಿಷ್ಠ ರೂ.50,000/– ಮತ್ತು ಚಿಕಿತ್ಸಾ ಅವಧಿಯಲ್ಲಿ ಪ್ರತಿ ವರ್ಷಕ್ಕೆ ರೂ.500/–ನ್ನು ನೀಡಲಾಗುವುದು. (ಇ) ಬುದ್ಧಿ ಭ್ರಮಣೆ ಮತ್ತು ಕುಷ್ಟ ರೋಗಿಗಳ ಶೂಷ್ರೂಷೆಗಾಗಿ ವಾರ್ಷಿಕ ರೂ.500/– ನೀಡಲಾಗುವುದು. (ಈ) ನೇಕಾರರ ಅಂತ್ಯ ಸಂಸ್ಕಾರಕ್ಕಾಗಿ ಮೃತ ನೇಕಾರರ ಕುಟುಂಬದವರಿಗೆ ರೂ.5000/– ನೀಡಲಾಗುವುದು

3.	**ವಸತಿ ಸಹಿತ ಕಾರ್ಯಾಗಾರ**	ನೇಕಾರರಿಗೆ ಸಾಮಾಜಿಕ ಬದುಕನ್ನು ರೂಪಿಸಿ ಆರ್ಥಿಕವಾಗಿ ಸದೃಢಗೊಳಿಸಲು, ತಮ್ಮ ವೃತ್ತಿಯನ್ನು ಸೂಕ್ತ ಪರಿಸರದಲ್ಲಿ ನಿರ್ವಹಿಸಲು ಸಾಧ್ಯವಾಗುವಂತೆ ಮಗ್ಗದ ಕೋಣೆಯುಳ್ಳ ಮನೆಗಳನ್ನು ನಿರ್ಮಾಣದ ಸಲುವಾಗಿ ಪ್ರಸಕ್ತ ಸಾಲಿಗೆ ಯಾಶವುದೇ ಗುರಿ ಮಂಜೂರಾಗಿರುವುದಿಲ್ಲ.
4.	ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆ	ನೇಕಾರರು ಎದುರಿಸುತ್ತಿರುವ ಸಮಸ್ಯೆಗಳನ್ನು ಬಗೆಹರಿಸಲು ಮತ್ತು ಅವರ ವರಮಾನ ಮಟ್ಟವನ್ನು ಹೆಚ್ಚಿಸಲು ನೇಕಾರರಿಗೆ ತಲಾ 02 ವಿದ್ಯುತ್ ಮಗ್ಗಗಳನ್ನು ಒದಗಿಸುವ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಪ್ರತಿ ನೇಕಾರರಿಗೆ ತಲಾ 02 ವಿದ್ಯುತ್ ಮಗ್ಗಗಳನ್ನು ಒದಗಿಸಲು ಉದ್ದೇಶಿಸಿ ಘಟಕ ವೆಚ್ಚ ರೂ. 3.10 ಲಕ್ಷಗಳಲ್ಲಿ ಶೇ.90% ರಷ್ಟು ಅಂದರೆ ರೂ. 2,70 ಲಕ್ಷಗಳ ಸಹಾಯಧನವನ್ನು ಮಾರ್ಗಸೂಚಿಯಲ್ಲಿ ಅವಕಾಶ ಕಲ್ಪಿಸಲಾಗಿದೆ. 02 ವಿದ್ಯುತ್‌ಮಗ್ಗಗಳ ಖರೀದಿಗಾಗಿ ಬ್ಯಾಂಕಿನಿಂದ ಸಾಲ ಪಡೆದು ಯಂತ್ರೋಪಕರಣಗಳನ್ನು ಖರೀದಿ ಮಾಡಿ ಅಳವಡಿಸಿದ ಘಟಕಗಳಿಗೆ ಸಹಾಯಧನವನ್ನು ಮರುಪಾವತಿ (ಃಚಿಛಿಞಜಟಿಜ¸ ಣಘುಜಥಿ) ಆಧಾರದ ಮೇಲೆ ಬಿಡುಗಡೆ ಮಾಡಲಾಗುವುದು. ಪ್ರಸಕ್ತ ಸಾಲಿನಲ್ಲಿ ಗಿರಿಜನ ಉಪಯೋಜನೆಯಡಿ ಭೌತಿಕ–01 ಆರ್ಥಿಕ; ರೂ. 2.70 ಲಕ್ಷಗಳ ಅನುದಾನ ಬಿಡುಗಡೆ ಮಾಡಲಾಗಿದೆ
5.	ಕೈಮಗ್ಗ ಉತ್ಪನ್ನಗಳ ಮಾರಾಟದ ಮೇಲೆ 20% ರಿಬೇಟ್	ರಾಜ್ಯದ ಕೈಮಗ್ಗ ನೇಕಾರರ ಸಹಕಾರ ಸಂಘಗಳವರು ಹೊಂದಿರುವ ದಾಸ್ತಾನು ವಿಲೇವಾರಿ, ಕೈಮಗ್ಗ ಉತ್ಪನ್ನಗಳಿಗೆ ಪ್ರೋತ್ಸಾಹಿಸಲು ಮತ್ತು ಯಾಂತ್ರಿಕೃತ ಮಗ್ಗಗಳಲ್ಲಿ ಉತ್ಪಾದಿಸಿದ ಬಟ್ಟೆಗಳ ಮಾರುಕಟ್ಟೆ ಪೈಪೋಟಿ ಸರಿದೂಗಿಸಲು, ವಾರ್ಷಿಕ ನಿಗದಿಪಡಿಸಿದ 365 ದಿನಗಳಲ್ಲಿ ಮಾರಾಟ ಮಾಡಿದ ಕೈಮಗ್ಗ ಉತ್ಪನ್ನಗಳ ಮೇಲೆ 20% ರಿಬೇಟ್‌ನ್ನು ರಾಜ್ಯ ಸರ್ಕಾರದ ವತಿಯಿಂದ ಮರುಪಾವತಿಸಲಾಗುವುದು
6.	ಕೈಮಗ್ಗ ನೇಕಾರರ ಮಿತವ್ಯಯ ನಿಧಿ ಯೋಜನೆ	ಈ ಯೋಜನೆಯು ನೇಕಾರರು ಉಳಿತಾಯ ಮಾಡುವ ಪ್ರವೃತ್ತಿ ಬೆಳೆಸಿಕೊಳ್ಳಲು ಪ್ರೋತ್ಸಾಹದಾಯಕವಾಗಿರುತ್ತದೆ. ಈ ಯೋಜನೆಯಡಿಯಲ್ಲಿ ನೇಕಾರರ ದುಡಿಮೆಯಿಂದ ಶೇಕಡ 8ರಷ್ಟನ್ನು ಕಟಾಯಿಸಿ ರಾಜ್ಯ ಸರ್ಕಾರದಿಂದ ಶೇಕಡ 8 ರಷ್ಟು ಸಮ ಚಂದಾವನ್ನು ಸೇರಿಸಿ ಸಂಬಂಧಪಟ್ಟ ತಾಲ್ಲೂಕು ಖಜಾನೆಯ ನೇಕಾರರ ಖಾತೆಗೆ ಜಮಾ ಮಾಡಲಾಗುವುದು. ಜಮೆಯಾದ ಮೊತ್ತಕ್ಕೆ ರಾಜ್ಯ ಸರ್ಕಾರದ ವತಿಯಿಂದ ವಾರ್ಷಿಕ ಶೇಕಡ 12 ರಷ್ಟು ಬಡ್ಡಿ ನೀಡಲಾಗುವುದು ಈ ಯೋಜನೆಯಡಿಯಲ್ಲಿ ಅಳವಡಿಕೆಯಾದ ಫಲಾನುಭವಿ ಮದುವೆ, ಮನೆ ಕಟ್ಟಡ, ವೈದ್ಯಕೀಯ ಹಾಗೂ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಮುಂಗಡವನ್ನು ಪಡೆಯಬಹುದಾಗಿದೆ. ಈ ಯೋಜನೆಯಲ್ಲಿ ಅಳವಡಿಸಲಾದ ಫಲಾನುಭವಿಗಳು 15 ವರ್ಷಗಳಾದ ನಂತರ ಅಥವಾ ನೇಕಾರರ ವೃತ್ತಿ ಮಾಡಲು ಸಾಧ್ಯವಾಗದಿದ್ದ ಪಕ್ಷದಲ್ಲಿ ಅಥವಾ ಅವನಿಗೆ 60 ವರ್ಷ ತುಂಬಿದ ನಂತರ ಪಾವತಿಯಾದ ಪೂರ್ತಿ ಹಣವನ್ನು ಬಡ್ಡಿ ಸಮೇತ ಹಿಂದಿರುಗಿಸಲಾಗುವುದು.
7.	ವಿದ್ಯುತ್ ಮಗ್ಗ ಘಟಕ/ ವಿದ್ಯುತ್ ಮಗ್ಗ ನೇಕಾರರಿಗೆ ರಿಯಾಯಿತಿ	ವಿದ್ಯುತ್ ಮಗ್ಗ ಹೊಂದಿರುವ ನೇಕಾರರಿಗೆ ತಮ್ಮ ಉತ್ಪಾದನಾ ವೆಚ್ಚ ಕಡಿಮೆ ಮಾಡುವ ಉದ್ದೇಶದಿಂದ ನೇಕಾರರ ವಿದ್ಯುತ್ ಬಿಲ್ಲನ್ನು ಆಧರಿಸಿ ವಿದ್ಯುತ್ ಸರಬರಾಜು ಕಂಪನಿಗೆ ನೇರವಾಗಿ ಹಣ ಬಿಡುಗಡೆ ಮಡಲಾಗುವುದು. ವಿದ್ಯುತ್ ಸಹಾಯಧನವನ್ನು ಉಪಯೋಗಕ್ಕೆ ಅನುಗುಣವಾಗಿ ಪ್ರತಿ ಯೂನಿಟ್‌ಗೆ ರಿಯಾಯ್ತಿ ದರದಲ್ಲಿ (ರೂ.1.25) 20 ಹೆಚ್.ಪಿ. ಯವರೆಗೆ ಸಂಪರ್ಕ ಹೊಂದಿರುವ ಘಟಕಗಳಿಗೆ ನೀಡಲಾಗುವುದು.

	ವಿದ್ಯುತ್ ಸಹಾಯಧನ	
8	ವಿದ್ಯುತ್ ಮಗ್ಗ ಘಟಕ ಸ್ಥಾಪಿಸಲು ಶೇ.50% ಸಹಾಯಧನ ಯೋಜನೆ	ನೇಕಾರರು ಎದುರಿಸುತ್ತಿರುವ ಸಮಸ್ಯೆಗಳನ್ನು ಬಗೆಹರಿಸಲು ಮತ್ತು ಅವರ ವರಮಾನ ಮಟ್ಟವನ್ನು ಹೆಚ್ಚಿಸಲು ನೇಕಾರರಿಗೆ ತಲಾ 02 ವಿದ್ಯುತ್ ಮಗ್ಗಗಳನ್ನು ಒದಗಿಸುವ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಪ್ರತಿ ನೇಕಾರರಿಗೆ ತಲಾ 02 ವಿದ್ಯುತ್ ಮಗ್ಗಗಳನ್ನು ಒದಗಿಸಲು ಉದ್ದೇಶಿಸಿ ಘಟಕ ವೆಚ್ಚ ರೂ. 3.10 ಲಕ್ಷಗಳಲ್ಲಿ ಶೇ.50% ರಷ್ಟು ಅಂದರೆ ರೂ. 1.50 ಲಕ್ಷಗಳ ಸಹಾಯಧನವನ್ನು ಮಾರ್ಗಸೂಚಿಯಲ್ಲಿ ಅವಕಾಶ ಕಲ್ಪಿಸಲಾಗಿದೆ. 02 ವಿದ್ಯುತ್‌ಮಗ್ಗಗಳ ಖರೀದಿಗಾಗಿ ಬ್ಯಾಂಕಿನಿಂದ ಸಾಲ ಪಡೆದು ಯಂತ್ರೋಪಕರಣಗಳನ್ನು ಖರೀದಿ ಮಾಡಿ ಅಳವಡಿಸಿದ ಘಟಕಗಳಿಗೆ ಸಹಾಯಧನವನ್ನು ಮರುಪಾವತಿ (ಃಚಿಛಿಞಜಟಿಜ¸ಣಛುಜಥಿ) ಆಧಾರದ ಮೇಲೆ ಬಿಡುಗಡೆ ಮಾಡಲಾಗುವುದು. ಸದರಿ ಯೋಜನೆಯಡಿ 2020–2021 ನೇ ಸಾಲಿಗೆ ಯಾವುದೇ ಅನುದಾನ ಮಂಜೂರು ಆಗಿರುವುದಿಲ್ಲ.
9	ಉಣ್ಣೆ ವಲಯ ಪುನಶ್ಚೇತನಕ್ಕಾಗಿ ಸಹಾಯಧನ ಯೋಜನೆ	ಸದರಿ ಯೋಜನೆಯಡಿ 2020–2021 ನೇ ಸಾಲಿಗೆ ಯಾವುದೇ ಅನುದಾನ ಮಂಜೂರು ಆಗಿರುವುದಿಲ್ಲ.
10	ನಿಧಿ ಯೋಜನೆ	ಸದರಿ ಯೋಜನೆಯಡಿ 2020–2021 ನೇ ಸಾಲಿಗೆ 12 ಫಲಾನುಭವಿಗಳಿಗೆ ರೂ.1.82 ಲಕ್ಷಗಳ ಸಹಾಯಧನವನ್ನು ಮಂಜೂರು ಮಾಡಿದೆ.

<u>ಕೇಂದ್ರ ಪುರಸ್ಕೃತ ಯೋಜನೆ</u>

ಕ್ರ.ಸಂ	ಯೋಜನೆಯ ಹೆಸರು	ವಿವರ
1	ಕೈಮಗ್ಗ ವಸ್ತು ಪ್ರದರ್ಶನ ಹಾಗೂ ಮಾರಾಟ ಮೇಳ	ರಾಜ್ಯ ಮಟ್ಟದ ನೇಕಾರ ಸಹಕಾರ ಸಂಘಗಳ ಮುಖಾಂತರ ರೇಷ್ಮೆ/ ಉಣ್ಣೆ ನೇಕಾರರು ಕೈಮಗ್ಗ ಉತ್ಪನ್ನಗಳನ್ನು ಮಾರಾಟ ಮತ್ತು ಪ್ರದರ್ಶನ ಮಾಡಲು ಅನುಕೂಲವಾಗುವಂತೆ ಈ ಇಲಾಖೆಯಿಂದ ವಿಶೇಷ ಕೈಮಗ್ಗ ಮೇಳವನ್ನು ಆಯೋಜಿಸಿ, ಸದರಿ ಮೇಳದಲ್ಲಿ ರಾಜ್ಯದ ಎಲ್ಲ ಕೈಮಗ್ಗ ನೇಕಾರ ಸಹಕಾರ ಸಂಘಗಳು ಭಾಗವಹಿಸಿ, ತಮ್ಮ ಉತ್ಪನ್ನಗಳನ್ನು ಮಾರಾಟ ಮತ್ತು ಪ್ರದರ್ಶನ ಮಾಡಲು ಉಚಿತವಾಗಿ ಮಳಿಗೆಗಳು ಮತ್ತು ಇತರ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡಲಾಗುವುದು. ರಾಜ್ಯದ ನೇಕಾರ ಸಹಕಾರ ಸಂಘಗಳಲ್ಲದೆ ದೇಶಾದ್ಯಂತ ಇರುವ ನೇಕಾರ ಸಹಕಾರ ಸಂಘಗಳು ಕೂಡ ಮೇಳದಲ್ಲಿ ಪಾಲ್ಗೊಂಡು ತಮ್ಮ ಉತ್ಪಾದನೆ ಮತ್ತು ಉತ್ಪನ್ನಗಳ ನೈಪುಣ್ಯತೆಗಳನ್ನು ಅರಿತು, ಗ್ರಾಹಕರ ಅನುಕೂಲಕ್ಕೆ ತಕ್ಕಂತೆ ದೈನಂದಿನ ಉತ್ಪಾದನೆಯಲ್ಲಿ ಇನ್ನೂ ಹೆಚ್ಚಿನ ಬದಲಾವಣೆ ತರಲು ವಾತಾವರಣ

		ಸೃಷ್ಠಿಯಾಗುತ್ತದೆ. ಈ ಮೇಳ ಕೈಮಗ್ಗ ಉತ್ಪನ್ನಗಳಿಗೆ ಮಾತ್ರ ಸೀಮಿತವಾಗಿರುತ್ತದೆ. (2020–2021 ನೇ ಸಾಲಿನಲ್ಲಿ ತುಮಕೂರು ಜಿಲ್ಲೆಗೆ ಯಾವುದೇ ಕೈಮಗ್ಗ ವಸ್ತು ಪ್ರದರ್ಶನ ಹಾಗೂ ಮಾರಾಟ ಮೇಳ ಅನುಷ್ಟಾನಕ್ಕೆ ಅನುದಾನ ಮಂಜೂರಾಗಿರುವುದಿಲ್ಲ.)
2	ನೇಕಾರರ ಮುದ್ರ ಯೋಜನೆ	ಕೈಮಗ್ಗ ನೇಕಾರರು ಬ್ಯಾಂಕ್ / ಹಣಕಾಸು ಸಂಸ್ಥೆಗಳಿಂದ ಸಾಲ–ಸೌಲಭ್ಯ ಪಡೆದು ನೇಕಾರಿಕೆಗೆ ಬೇಕಾಗಿರುವ ಮಗ್ಗ ಸಲಕರಣೆಗಳು ಹಾಗೂ ದುಡಿಮೆ ಬಂಡವಾಳವನ್ನು ಹೊಂದಿ ನೇಕಾರಿಕೆ ವೃತ್ತಿಯನ್ನು ನಿರಂತರವಾಗಿ ಮುಂದುವರಿಸಿಕೊಂಡು ಹೋಗಲು ಅನುಕೂಲವಾಗುವಂತೆ ಈ ಯೋಜನೆಯನ್ನು ಜಾರಿಗೆ ತರಲಾಗಿರುತ್ತದೆ.

ಆಡಳಿತ ವರದಿ

ಸಮಾಜ ಕಲ್ಯಾಣ ಇಲಾಖೆ ವತಿಯಿಂದ 2020–21ನೇ ಸಾಲಿನಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ ಸಾಧಿಸಿದ ಪ್ರಗತಿಯ ವಿವರಗಳು.

2020–21ನೇ ಸಾಲಿನಲ್ಲಿ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಕಾರ್ಯಕ್ರಮಗಳ ಅನುಷ್ಟಾನಕ್ಕಾಗಿ ಒದಗಿಸಲಾದ, ಬಿಡುಗಡೆಯಾದ ಹಾಗೂ ವೆಚ್ಚವಾದ ಅನುದಾನದ ವಿವರಗಳು ಕೆಳಕಂಡಂತಿದೆ.

ಕಾರ್ಯಕ್ರಮ	ವಲಯ	ನಿಗಧಿಯಾದ ಅನುದಾನ	ಬಿಡುಗಡೆಯಾದ ಅನುದಾನ	ವೆಚ್ಚವಾದ ಅನುದಾನ
ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳು (ಪ ಜಾತಿ)	ಯೋಜನೇತರ	3145.02	3212.96	3174.67
ತಾಲ್ಲೂಕು ಪಂಚಾಯತ್ ಕಾರ್ಯಕ್ರಮಗಳು (ಪ ಜಾತಿ)	ಯೋಜನೇತರ	2534.79	1943.09	1756.20
ಯೋಜನೇತರ ಕಾಯಕ್ರಮಗಳ ಒಟ್ಟು		**5679.81**	**5156.05**	**4930.87**

ಮೇಲ್ಕಂಡ ಕಾರ್ಯಕ್ರಮಗಳಿಗೆ ಒದಗಿಸಲಾದ ಅನುದಾನದಲ್ಲಿ ಕಾರ್ಯಕ್ರಮವಾರು ವೆಚ್ಚ ಹಾಗೂ ಭೌತಿಕ ಸಾದನೆ ವಿವರಗಳು ಕೆಳಕಂಡಂತಿದೆ.

ಪ ಜಾತಿ ಕಲ್ಯಾಣ ಕಾರ್ಯಕ್ರಮಗಳು

ಕಾರ್ಯನಿರ್ವಾಹಕ ಸಿಬ್ಬಂದಿ;

ಜಂಟಿ ನಿರ್ದೇಶಕರ ಕಛೇರಿ ತುಮಕೂರು ಮತ್ತು ಜಿಲ್ಲೆಯ 10 ತಾಲ್ಲೂಕುಗಳ ಸಹಾಯಕ ನಿರ್ದೇಶಕರ ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ ವೇತನ ಮತ್ತು ಭತ್ಯೆಗಳೂ ಹಾಗೂ ಕಛೇರಿ ನಿರ್ವಹಣೆ ವೆಚ್ಚಗಳನ್ನು ಭರಿಸಲಾಗಿದೆ. ಈ ಕಾರ್ಯಕ್ರಮದಲ್ಲಿ ವೆಚ್ಚದ ವಿವರಗಳು ಕೆಳಕಂಡಂತಿದೆ.

ವಲಯ	ನಿಗಧಿಯಾದ ಅನುದಾನ	ಬಿಡುಗಡೆಯಾದ ಅನುದಾನ	ವೆಚ್ಚ	ಬೌತಿಕ ಸಾಧನೆ
ಯೋಜನೇತರ	457.20	422.53	417.91	11 ಕಛೇರಿಗಳು

ಪ ಜಾತಿ ವಿದ್ಯಾರ್ಥಿಗಳ ಕಾಲೇಜು ವಿದ್ಯಾರ್ಥಿನಿಲಯಗಳ ನಿರ್ವಹಣೆ;

ಜಿಲ್ಲೆಯಲ್ಲಿ ಒಟ್ಟು 36 ಕಾಲೇಜು ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿರುತ್ತವೆ. ಇವುಗಳಲ್ಲಿನ ಸಿಬ್ಬಂದಿ ಸಂಬಳ ಮತ್ತು ಭತ್ಯಗಳು ಹಾಗೂ ಈ ನಿಲಯಗಳ ನಿರ್ವಹಣೆಗಾಗಿ ಕೆಳಕಂಡಂತೆ ವೆಚ್ಚವನ್ನು ಮಾಡಲಾಗಿದೆ.

ವಲಯ	ನಿಗಧಿಯಾದ ಅನುದಾನ	ಬಿಡುಗಡೆಯಾದ ಅನುದಾನ	ವೆಚ್ಚ	ಭೌತಿಕ ಸಾಧನೆ
ಯೋಜನೇತರ	1028.97	1221.07	1195.63	36 ವಿ ನಿ ಗಳು

ಕಾಲೇಜು ವಿದ್ಯಾರ್ಥಿಗಳಿಗೆ ಪುರಸ್ಕಾರ/ಇತರೆ ರಿಯಾಯ್ತಿಗಳು ಶ್ರೇಷ್ಟತೆ ಪಡೆದ ಪ ಜಾತಿ ವಿದ್ಯಾರ್ಥಿಗಳಿಗೆ ಸಹಾಯ;

ಮೆಟ್ರಿಕ್ ನಂತರದ ವಿವಿಧ ಕೋರ್ಸುಗಳಲ್ಲಿ ವ್ಯಾಸಂಗ ಮಾಡಿ ಪ್ರಥಮ ಭಾರಿಗೆ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾದ ಪ ಜಾತಿ ವಿದ್ಯಾರ್ಥಿಗಳಿಗೆ ಸರ್ಕಾರ ನಿಗಧಿಪಡಿಸಿರುವ ವಿವಿಧ ದರಗಳಲ್ಲಿ ಪುರಸ್ಕಾರ ಹಣವನ್ನು ಪಾವತಿಸಲಾಗುವುದು. ಇದಕ್ಕಾಗಿ ನಿಗಧಿಯಾದ ಅನುದಾನದಲ್ಲಿ ಕೆಳಕಂಡ ವಿವರಗಳಂತೆ ಪ್ರೋತ್ಸಾಹ ಶಿಷ್ಯವೇತನ ಪಾವತಿಗಾಗಿ ವೆಚ್ಚ ಮಾಡಲಾಗಿದೆ ಒಟ್ಟು 1807 ವಿದ್ಯಾರ್ಥಿಗಳಿಗೆ ದ್ವಿತೀಯ ಪಿ.ಯು.ಸಿ ವಿದ್ಯಾರ್ಥಿಗಳಿಗೆ ತಲಾ ರೂ.20000–00, ಪದವಿ ಕೋರ್ಸ್ ರೂ.25000–00 ಸ್ನಾತಕೋತ್ತರ ಪದವಿ ರೂ.30000–00 & ಇಂಜಿನಿಯರಿಂಗ್/ಮೆಡಿಕಲ್/ಆಗ್ರಿಕಲ್ಚರ್/ವೆಟರ್ನರಿ ರೂ.35000–00ರಂತೆ ನಗದು ಬಹುಮಾನ ಹಣವನ್ನು ಪಾವತಿಸಲಾಗಿದೆ.

ವಲಯ	ನಿಗಧಿಯಾದ ಅನುದಾನ	ಬಿಡುಗಡೆಯಾದ ಅನುದಾನ	ವೆಚ್ಚ	ಭೌತಿಕ ಸಾಧನೆ
ಯೋಜನೇತರ	379.25	379.25	379.20	1708 ವಿದ್ಯಾರ್ಥಿಗಳು

ಖಾಸಗಿ ವಿದ್ಯಾರ್ಥಿನಿಲಯಗಳಿಗೆ ಸಹಾಯಾನುದಾನ;

ಜಿಲ್ಲೆಯಲ್ಲಿರುವ ಖಾಸಗಿ ಅನುದಾನಿತ ವಿದ್ಯಾರ್ಥಿನಿಲಯಗಳ ನಿರ್ವಹಣೆ ಅನುದಾನವನ್ನು ಈ ಕಾರ್ಯಕ್ರಮದಲ್ಲಿ ಪಾವತಿಸಲಾಗುವುದು. ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ 16 ಖಾಸಗಿ ಅನುದಾನಿತ ವಿದ್ಯಾರ್ಥಿನಿಲಯಗಳ ನಿರ್ವಹಣೆಗೆ ಕೆಳಕಂಡಂತೆ ವೆಚ್ಚ ಮಾಡಲಾಗಿದೆ.

ವಲಯ	ನಿಗಧಿಯಾದ ಅನುದಾನ	ಬಿಡುಗಡೆಯಾದ ಅನುದಾನ	ವೆಚ್ಚ	ಭೌತಿಕ ಸಾಧನೆ
ಯೋಜನೇತರ	87.60	0.00	0.00	16 ವಿ ನಿಲಯಗಳು

ಪ ಜಾತಿ ವಿದ್ಯಾರ್ಥಿಗಳಿಗೆ ನಿವಾಸಿ ಶಾಲೆಗಳು;

ಜಿಲ್ಲೆಯಲ್ಲಿ ತುಮಕೂರು ಮತ್ತು ಪಾವಗಡದಲ್ಲಿ ಪ ಜಾತಿ ವಿದ್ಯಾರ್ಥಿಗಳ ಶೈಕ್ಷಣಿಕ ಅನುಕೂಲಕ್ಕಾಗಿ ವಸತಿ ಶಾಲೆಗಳನ್ನು ನಡೆಸಲಾಗುತ್ತಿದೆ. ಈ 2 ಶಾಲೆಗಳ ನಿರ್ವಹಣೆ ಮತ್ತು ಸಿಬ್ಬಂದಿ ಸಂಬಳ ಭತ್ಯೆಗಳ ವೆಚ್ಚಗಳನ್ನು ಈ ಕಾರ್ಯಕ್ರಮದಲ್ಲಿ ಭರಿಸಲಾಗಿದೆ.

ವಲಯ	ನಿಗಧಿಯಾದ ಅನುದಾನ	ಬಿಡುಗಡೆಯಾದ ಅನುದಾನ	ವೆಚ್ಚ	ಭೌತಿಕ ಸಾಧನೆ
ಯೋಜನೇತರ	102.00	100.11	91.94	2 ಶಾಲೆಗಳು

ಪ ಜಾತಿ ವಿದ್ಯಾರ್ಥಿಗಳಿಗೆ ಇತರೆ ರಿಯಾಯತಿಗಳು ;ನೂತನ ಪದವೀಧರರಿಗೆ ತರಬೇತಿ

ಕಾನೂನು ತರಬೇತಿ ಪಡೆದ ಪ ಜಾತಿ ಅಬ್ಯರ್ಥಿಗಳು ತಮ್ಮ ವೃತ್ತಿಯನ್ನು ನಡೆಸಲು ಅನುಕೂಲವಾಗುವಂತೆ ಸರ್ಕಾರಿ ವಕೀಲರಲ್ಲಿ 2 ವರ್ಷಗಳ ಅವಧಿಗೆ ಕಾನೂನು ಆಡಳಿತ ತರಬೇತಿಯನ್ನು ನೀಡಲಾಗುವುದು. ಈ ಅವಧಿಯಲ್ಲಿ ಮಾಹೆಯಾನ ರೂ 10000/– ದಂತೆ ಶಿಷ್ಯವೇತನವನ್ನು ಮತ್ತು ಒಂದು ಭಾರಿ ರೂ 5000 ಮೊತ್ತದಲ್ಲಿ ಕಾನೂನು ಪುಸ್ತಕಗಳು ಮತ್ತು ಪೀಠೋಪಕರಣಗಳನ್ನು ಒದಗಿಸಲಾಗುವುದು. ಅದರಂತೆ ಈ ಕಾರ್ಯಕ್ರಮದಲ್ಲಿ ಕೆಳಕಂಡಂತೆ ವೆಚ್ಚಗಳನ್ನು ಭರಿಸಲಾಗಿದೆ.

ವಲಯ	ನಿಗಧಿಯಾದ ಅನುದಾನ	ಬಿಡುಗಡೆಯಾದ ಅನುದಾನ	ವೆಚ್ಚ	ಭೌತಿಕ ಸಾಧನೆ
ಯೋಜನೇತರ	19.03	19.03	13.65	33 ಅಭ್ಯರ್ಥಿಗಳು

ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು;

ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಒಟ್ಟು 65 ವಿದ್ಯಾರ್ಥಿನಿಲಯಗಳ ನಿರ್ವಹಣೆ ಮತ್ತು ಅಲ್ಲಿನ ಸಿಬ್ಬಂದಿ ವೇತನ ಹಾಗೂ ಭತ್ಯೆಗಳನ್ನು ಪಾವತಿಸಲು ವೆಚ್ಚ ಮಾಡಲಾಗಿದೆ.

ವಲಯ	ನಿಗಧಿಯಾದ ಅನುದಾನ	ಬಿಡುಗಡೆಯಾದ ಅನುದಾನ	ವೆಚ್ಚ	ಭೌತಿಕ ಸಾಧನೆ
ಯೋಜನೇತರ	1722.79	1274.46	1239.04	62 ವಿದ್ಯಾರ್ಥಿಗಳು

ಪ ಜಾತಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ;

ಪ.ಜಾತಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಪಾವತಿಸುವ ಕಾರ್ಯಕ್ರಮದಲ್ಲಿ ಕೆಳಕಂಡಂತೆ ಅನುದಾನ ನಿಗಧಿಯಾಗಿದ್ದು ಮುಂದೆ ನಮೂದಿಸಿರುವಂತೆ ವಿವಿಧ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪ ಜಾತಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ಪಾವತಿಸಲಾಗಿದೆ.

ಕಾರ್ಯಕ್ರಮ	ವಲಯ	ನಿಗಧಿಯಾದ ಅನುದಾನ	ಬಿಡುಗಡೆಯಾದ ಅನುದಾನ	ವೆಚ್ಚ	ಭೌತಿಕ ಸಾಧನೆ
ಪ ಜಾತಿ ವಿದ್ಯಾರ್ಥಿಗಳಿಗೆ ಮೆ ನಂತರದ ವಿದ್ಯಾರ್ಥಿ ವೇತನ **(ಜಿ.ಪಂ)**	ಯೋಜನೇತರ	1090.00	1090.00	1090.00	15684 ವಿದ್ಯಾರ್ಥಿಗಳು
ಹೆಚ್ಚಿನ ಊಟ ಮತ್ತು ವಸತಿ ವೆಚ್ಚಗಳು	ಯೋಜನೇತರ	400.00	256.63	112.63	5370 ನಿಲಯಾರ್ಥಿಗಳು
ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ **(ತಾ ಪಂ)**	ಯೋಜನೇತರ	392.97	392.97	390.88	49200 ವಿದ್ಯಾರ್ಥಿಗಳು

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ
2020–21ರ ಆಡಳಿತ ವರದಿ

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖಾವತಿಯಿಂದ 2020–21ನೇ ಸಾಲಿನಲ್ಲಿ ವಿವಿಧ ಕಾರ್ಯಕ್ರಮಗಳ ಅಡಿಯಲ್ಲಿ ಸಾಧಿಸಿದ ಪ್ರಗತಿಯ ವಿವರಗಳು

2020–21ನೇ ಸಾಲಿನಲ್ಲಿ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖಾವತಿಯಿಂದ ವಿವಿಧ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಒದಗಿಸಲಾದ, ಬಿಡುಗಡೆಯಾದ ಮತ್ತು ವೆಚ್ಚ ಮಾಡಲಾದ ವಿವರಗಳು ಈ ಕೆಳಕಂಡಂತಿವೆ.

ಕ್ರ.ಸಂ	ಕಾರ್ಯಕ್ರಮದ ವಿವರ	ವಲಯ	ನಿಗಧಿಪಡಿಸಿದ ಅನುದಾನ	ಬಿಡುಗಡೆಯಾದ ಅನುದಾನ	ವೆಚ್ಚ ಮಾಡಲಾದ ಅನುದಾನ
1	ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳು	ಯೋಜನೇತರ	1217.89	1207.53	1139.45
2	ತಾಲ್ಲೂಕು ಪಂಚಾಯತ್ ಕಾರ್ಯಕ್ರಮಗಳು	ಯೋಜನೇತರ	1629.00	1452.25	1452.10
ಒಟ್ಟು			**2846.89**	**2659.78**	**2591.55**

ಕಾರ್ಯಕ್ರಮಗಳು

1.ವಿದ್ಯಾರ್ಥಿ ನಿಲಯಗಳು, ವಿದ್ಯಾರ್ಥಿ ವೇತನ ಮತ್ತು ಧನ ಸಹಾಯ: ಯೋಜನೆ ಕಾರ್ಯಕ್ರಮ:

ಈ ಕಾರ್ಯಕ್ರಮಕ್ಕೆ **ರೂ 325.61** ಲಕ್ಷಗಳನ್ನು ನಿಗಧಿಪಡಿಸಲಾಗಿದೆ. ಈ ಕಾರ್ಯಕ್ರಮದಲ್ಲಿ ಒಟ್ಟು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ನಿರ್ವಹಣೆ ಧನ ಮತ್ತು ಕಾನೂನು ಪದವೀಧರರ ಶಿಷ್ಯ ವೇತನಕ್ಕಾಗಿ ಒಟ್ಟು **ರೂ 325.34** ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

2.ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ವಿದ್ಯಾರ್ಥಿನಿಲಯಗಳ ನಿರ್ವಹಣೆ:–

ಈ ಜಿಲ್ಲೆಯಲ್ಲಿ 5 ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು, 2 ಆಶ್ರಮ ಶಾಲೆಗಳು, ಈ ಕಾರ್ಯಕ್ರಮದಡಿ ಕಾರ್ಯ ನಿರ್ವಹಿಸುತ್ತಿರುತ್ತವೆ. ಇವುಗಳ ನಿರ್ವಹಣೆ ಮತ್ತು ಅಲ್ಲಿನ ಸಿಬ್ಬಂದಿ ವೇತನ ಹಾಗೂ ಭತ್ಯೆಗಳನ್ನು ಪಾವತಿಸಲು ಈ ಕೆಳಕಂಡಂತೆ ವೆಚ್ಚ ಮಾಡಲಾಗಿದೆ.

ವಲಯ	ನಿಗಧಿಯಾದ ಅನುದಾನ	ಬಿಡುಗಡೆಯಾದ ಅನುದಾನ	ವೆಚ್ಚ	ಭೌತಿಕ ಸಾಧನೆ
ಯೋಜನೆ	182.47	178.75	165.78	5 ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು ಮತ್ತು 2 ಆಶ್ರಮ ಶಾಲೆಗಳು

3.ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ:

ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಪಾವತಿಸುವ ಕಾರ್ಯಕ್ರಮದಲ್ಲಿ ಕೆಳಕಂಡಂತೆ ಅನುದಾನ ನಿಗಧಿಯಾಗಿದ್ದು, ಮುಂದೆ ನಮೂದಿಸಿರುವಂತೆ ವಿವಿಧ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ಪಾವಸಿಸಲಾಗಿದೆ.

ಕ್ರ.ಸಂ	ಕಾರ್ಯಕ್ರಮ	ವಲಯ	ನಿಗಧಿಯಾದ ಅನುದಾನ	ಬಿಡುಗಡೆಯಾದ ಅನುದಾನ	ವೆಚ್ಚ	ಭೌತಿಕ ಸಾಧನೆ
ಎ)	ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ	ಯೋಜನೇತರ	220.00	220.00	220.00	17000
ಬಿ)	ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ	ಯೋಜನೆ/ಯೋಜನೇತರ	1681.00	1557.66	1557.66	7000
ಸಿ)	ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಹೆಚ್ಚಿನ ಊಟ ಮತ್ತು ವಸತಿ ವೆಚ್ಚಗಳು	ಯೋಜನೇತರ	94.00	94.00	93.85	10

4.ಖಾಸಗಿ ಅನುದಾನಿತ ವಿದ್ಯಾರ್ಥಿನಿಲಯಗಳಿಗೆ ಸಹಾಯಾನುಧಾನ:

ತುಮಕೂರು ಟೌನ್ ಇಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಸಗಿ ವಾಲ್ಮೀಕಿ ಅನುದಾನಿತ ಬಾಲಕರ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯದ ನಿರ್ವಹಣೆ ಬಾಬ್ತು ನಿಗಧಿಯಾದ ರೂ 6.00 ಲಕ್ಷಗಳಲ್ಲಿ ರೂ 0.27 ಗಳನ್ನು ವೆಚ್ಚ ಮಾಡಲಾಗಿದೆ.

5.ಆಶ್ರಮ ಶಾಲೆಗಳು:

ಕೊರಟಗೆರೆ ತಾಲ್ಲೂಕು ಕಾಶಾಪುರ ಗೇಟ್‌ನಲ್ಲಿ ಪರಿಶಿಷ್ಟ ವರ್ಗದ 1 ರಿಂದ 5ನೇ ತರಗತಿ ಮಕ್ಕಳ ಶೈಕ್ಷಣಿಕ ಅಭಿವೃದ್ದಿಗಾಗಿ ಆಶ್ರಮ ಶಾಲೆಯನ್ನು ನಡೆಸಲಾಗುತ್ತಿದೆ. ಅಲ್ಲಿನ ಮಕ್ಕಳ ನಿರ್ವಹಣೆ ಮತ್ತು ಅಲ್ಲಿನ ಸಿಬ್ಬಂದಿಗೆ ಸಂಬಳ ಮತ್ತು ಇತರೆ ಭತ್ಯೆ ಪಾವತಿಗೆ ನಿಗಧಿಯಾಗಿರುವ ಒಟ್ಟು ರೂ 83.03 ಲಕ್ಷಗಳ ಅನುದಾನದಲ್ಲಿ ಒಟ್ಟು ರೂ 39.43 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

6.ಮೆಟ್ರಿಕ್ ಪೂರ್ವ ಸರ್ಕಾರಿ ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ವಹಣೆ:–

ಈ ಕಾರ್ಯಕ್ರಮದಡಿ ರೂ 10.00 ಲಕ್ಷ ನಿಗಧಿ, ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಚಿಕ್ಕಮಾಲೂರು, ಮಧುಗಿರಿ ತಾಲ್ಲೂಕು ದುರಸ್ಥಿಗಾಗಿ ರೂ 10.00 ಲಕ್ಷಗಳನ್ನು ವೆಚ್ಚ ಮಾಡಿದೆ.

7.ಕಾರ್ಯಕಾರಿ ಸಿಬ್ಬಂದಿ–ಜಿಲ್ಲಾ ಗಿರಿಜನ ಕಲ್ಯಾಣ ಕಛೇರಿ:

ಈ ಲೆಕ್ಕ ಶೀರ್ಷಿಕೆಯಲ್ಲಿ ರೂ 83.03 ಲಕ್ಷ ನಿಗಧಿಯಾಗಿದ್ದು, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಅಧಿಕಾರಿ ಮತ್ತು ಅವರ ಪೂರಕ ಸಿಬ್ಬಂದಿಗೆ ವೇತನ ಮತ್ತು ಇತರೇ ಭತ್ಯಗಳಿಗಾಗಿ ಹಾಗೂ ಕಛೇರಿಯ ಕಟ್ಟಡದ ಬಾಡಿಗೆ, ವಿದ್ಯುತ್ ವೆಚ್ಚ, ವಾಹನ ಬಾಡಿಗೆ, ಕಛೇರಿ ಲೇಖನ ಸಾಮಗ್ರಿ, ದೂರವಾಣಿ ವೆಚ್ಚ ಮುಂತಾದ ಸಾದಿಲ್ವಾರು ವೆಚ್ಚಕ್ಕಾಗಿ ರೂ 80.63 ಲಕ್ಷ ಅನುದಾನವನ್ನು ವೆಚ್ಚ ಭರಿಸಲಾಗಿದೆ.

2020–21 ನೇ ಸಾಲಿನ ವಾರ್ಷಿಕ ಆಡಳಿತ ವರದಿ

ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ತುಮಕೂರು

ಹಿಂದುಳಿದ ವರ್ಗಗಳ ಜನಾಂಗದ ಅಭಿವೃದ್ಧಿಗಾಗಿ ವಿವಿಧ ಕಾರ್ಯಕ್ರಮಗಳನ್ನು ರೂಪಿಸಿ, ಹಿಂದುಳಿದ ವರ್ಗಗಳ ಇಲಾಖೆಯ ಮುಖಾಂತರ ಶೈಕ್ಷಣಿಕ ಹಾಗೂ ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಈ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಜಿಲ್ಲಾವಲಯದಲ್ಲಿ ಯೋಜನೇತರ ಬಾಬ್ತಿಗೆ 2020–21ನೇ ಸಾಲಿನಲ್ಲಿ ಒದಗಿಸಿರುವ ಹಾಗೂ ಖರ್ಚು ಮಾಡಿರುವ ಹಣದ ವಿವರಗಳು ಈ ಕೆಳಕಂಡಂತಿರುತ್ತವೆ.

(ರೂ. ಲಕ್ಷಗಳಲ್ಲಿ)

ಕ್ರ. ಸಂ	ವಿವರ	2020–21ನೇ ಸಾಲಿನ ಆಯವ್ಯಯ	ಜಿಲ್ಲಾ ಪಂಚಾಯತ್‌ನಿಂದ ಬಿಡುಗಡೆಯಾದ ಹಣ	ಖರ್ಚು ಮಾಡಿದ ಹಣ
1	2	3	4	5
1	ಯೋಜನೇತರ	5989.26	5933.46	5401.115
	ಒಟ್ಟು	5989.26	5933.46	5401.115

1) ವಿದ್ಯಾರ್ಥಿನಿಲಯಗಳ ನಿರ್ವಹಣೆ ಮತ್ತು ಇತರೆ ವೆಚ್ಚ:

ಗ್ರಾಮಾಂತರ ಪ್ರದೇಶಗಳಿಗೆ ಸೇರಿದ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ವಿವಿಧ ಮೆಟ್ರಿಕ್‌ನಂತರದ ಮತ್ತು ಮೆಟ್ರಿಕ್‌ಪೂರ್ವ ಕೋರ್ಸುಗಳಲ್ಲಿ ವ್ಯಾಸಂಗವನ್ನು ಮುಂದುವರೆಸಲು ಅನುಕೂಲ ಕಲ್ಪಿಸುವ ದೃಷ್ಟಿಯಿಂದ 2020–21ನೇ ಸಾಲಿನಲ್ಲಿ ಯೋಜನೇತರ ಕಾರ್ಯಕ್ರಮದಲ್ಲಿ ಒಟ್ಟು ರೂ. 2846.065 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ಒಟ್ಟು ರೂ. 2506.23 ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ. ಇದರಿಂದಾಗಿ ಒಟ್ಟು 5117 ವಿದ್ಯಾರ್ಥಿಗಳು ಪ್ರಯೋಜನ ಪಡೆದಿರುತ್ತಾರೆ.

2) ಖಾಸಗಿ ವಿದ್ಯಾರ್ಥಿನಿಲಯಗಳಿಗೆ ಸಹಾಯಧನ:

ಈ ಜಿಲ್ಲೆಯಲ್ಲಿ ಒಟ್ಟು 08 ಖಾಸಗಿ ವಿದ್ಯಾರ್ಥಿನಿಲಯಗಳು 2020–21 ಕಾರ್ಯನಿರ್ವಹಿಸುತ್ತಿದ್ದು, 300 ವಿದ್ಯಾರ್ಥಿಗಳು ಪ್ರವೇಶ ಪಡೆದಿರುತ್ತಾರೆ. ಸದರಿ ವಿದ್ಯಾರ್ಥಿಗಳ ಊಟದ ವೆಚ್ಚ ಬಾಬ್ತು 2020–21ನೇ ಸಾಲಿನಲ್ಲಿ 8.005 ಲಕ್ಷ ರೂ.ಗಳ ಸಹಾಯಾನುದಾನ ಮಂಜೂರಾಗಿದ್ದು, ರೂ. 7.96 ಲಕ್ಷಗಳನ್ನು ಖರ್ಚು ಮಾಡಲಾಗಿರುತ್ತದೆ.

3) ಕಟ್ಟಡಗಳ ನಿರ್ಮಾಣ ಮತ್ತು ನಿರ್ವಹಣೆ:

2020–21ನೇ ಸಾಲಿನಲ್ಲಿ ಸ್ವಂತ ಕಟ್ಟಡ ಹೊಂದಿರುವ 25 ವಿದ್ಯಾರ್ಥಿನಿಲಯಗಳ ಕಟ್ಟಡಗಳ ದುರಸ್ತಿ ಕಾರ್ಯ ಕೈಗೊಳ್ಳಲಾಗಿದೆ. ಇದಕ್ಕಾಗಿ ರೂ. 53.19 ಲಕ್ಷ ಅನುದಾನವನ್ನು ಬಿಡುಗಡೆ ಮಾಡಿದ್ದು, ಕಟ್ಟಡಗಳ ದುರಸ್ಥಿ ಕಾರ್ಯಕೈಗೊಳ್ಳಲು ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ತುಮಕೂರು ಹಾಗೂ ಮಧುಗಿರಿ ಇವರಿಗೆ ಕ್ರಮವಾಗಿ ರೂ. 30.39 ಲಕ್ಷಗಳು ಹಾಗೂ ರೂ. 22.80 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಮಾರ್ಚ್–2021 ರ ಅಂತ್ಯಕ್ಕೆ ರೂ. 53.19ಲಕ್ಷಗಳ ವೆಚ್ಚ ಭರಿಸಲಾಗಿದೆ.

4) ವಕೀಲರಿಗೆ ಶಿಷ್ಯವೇತನ:

ಹಿಂದುಳಿದ ವರ್ಗಗಳಿಗೆ ಸೇರಿದ ಕಾನೂನು ಪದವಿಯನ್ನು ಪಡೆದಿರುವ ನಿರುದ್ಯೋಗಿಗಳನ್ನು ಜಿಲ್ಲಾ ಆಯ್ಕೆ ಸಮಿತಿಯ ಮೂಲಕ ಆಯ್ಕೆ ಮಾಡಿ 04 ವರ್ಷಗಳ ಅವಧಿಗೆ ವಕೀಲ ವೃತ್ತಿ ತರಬೇತಿಯನ್ನು ನೀಡಲಾಗುವುದು. ಈ ಕಾರ್ಯಕ್ರಮದಡಿಯಲ್ಲಿ 2020–21ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತ್ ಕಾರ್ಯಕ್ರಮದಿಂದ ರೂ. 19.20 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ಒಟ್ಟು 40 ಅಭ್ಯರ್ಥಿಗಳಿಗೆ ಒಟ್ಟು 16.05 ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ.

5) ಕಾರ್ಯನಿರ್ವಾಹಕ ಸಿಬ್ಬಂದಿ:

ಹಿಂದುಳಿದ ವರ್ಗಗಳ ಅಭಿವೃದ್ಧಿ ಕಾರ್ಯಕ್ರಮವನ್ನು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ನಿಯಂತ್ರಣ ಹಾಗೂ ಮಾರ್ಗದರ್ಶನದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಇವರಿಗೆ ಸಹಾಯಕರಾಗಿ ಜಿಲ್ಲಾಮಟ್ಟದಲ್ಲಿ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಹಾಗೂ ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ತಾಲ್ಲೂಕು ಹಿಂದುಳಿದ ವರ್ಗಗಳ ವಿಸ್ತರಣಾಧಿಕಾರಿಗಳ ಮುಖಾಂತರ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಸಿಬ್ಬಂದಿ ವೇತನ ಇತರ ಭತ್ಯೆ ಇನ್ನಿತರ ಸಾದಿಲ್ವಾರು ಖರ್ಚುಗಳನ್ನು ಭರಿಸುವ ಸಲುವಾಗಿ ಯೋಜನೇತರ ಕಾರ್ಯಕ್ರಮದಡಿ 2020–21ನೇ ಸಾಲಿನಲ್ಲಿ ಒಟ್ಟು ರೂ. 74.43 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಮಾರ್ಚ್–2021 ರ ಅಂತ್ಯಕ್ಕೆ ರೂ. 74.43 ಲಕ್ಷಗಳ ವೆಚ್ಚ ಭರಿಸಲಾಗಿದೆ.

6) ಆಶ್ರಮಶಾಲೆಗಳು:

ಈ ಇಲಾಖಾವತಿಯಿಂದ ಜಿಲ್ಲೆಯಲ್ಲಿ 06 ಆಶ್ರಮಶಾಲೆಗಳನ್ನು ನಡೆಸಲಾಗುತ್ತಿದೆ. 2020–21ನೇ ಸಾಲಿಗೆ ರೂ. 102.51 ಲಕ್ಷ ಬಿಡುಗಡೆಯಾಗಿದ್ದು, ರೂ. 46.75 ಲಕ್ಷ ಅನುದಾನವನ್ನು ಖರ್ಚು ಮಾಡಲಾಗಿದೆ.

7) ಶುಲ್ಕ ವಿನಾಯಿತಿ:

ಈ ಕಾರ್ಯಕ್ರಮದಲ್ಲಿ ಸರ್ಕಾರಿ ಮತ್ತು ಸರ್ಕಾರದಿಂದ ಮಾನ್ಯತೆ ಪಡೆದಿರುವ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿದ್ದು (ವಿದ್ಯಾರ್ಥಿಗಳ) ಯಾವುದೇ ಜಾತಿ ಮತ್ತು ಮತ ಹಾಗೂ ಧರ್ಮಗಳಿಗೆ ಸೇರಿರುವ ಅವರ ಪೋಷಕರ ಕುಟುಂಬದ ವಾರ್ಷಿಕ ಆದಾಯ ರೂ. 1.00 ಲಕ್ಷಗಳ ಅಥವಾ ಅದಕ್ಕಿಂತ ಕಡಿಮೆ ಇದ್ದಲ್ಲಿ ಹಾಗೂ ಪ್ರವರ್ಗ–1 ಕ್ಕೆ ಸೇರಿದ ಕುಟುಂಬದ ವಾರ್ಷಿಕ ಆದಾಯ ರೂ. 2.50 ಲಕ್ಷದೊಳಗಿನ ವಿದ್ಯಾರ್ಥಿಗಳಿಗೆ ಸರ್ಕಾರದಿಂದ ನಿಗಧಿಗೊಳಿಸಲ್ಪಡುವ ಬೋಧನಾ ಶುಲ್ಕ, ಪ್ರಯೋಗಾಲಯ ಶುಲ್ಕ, ಪರೀಕ್ಷಾ ಶುಲ್ಕ, ಗ್ರಂಥಾಲಯ ಶುಲ್ಕ ಮತ್ತು ಕ್ರೀಡಾ ಶುಲ್ಕಗಳಿಂದ ವಿನಾಯಿತಿ ನೀಡಲಾಗುತ್ತಿದೆ. 2020–21ನೇ ಸಾಲಿಗೆ ಒಟ್ಟು 2337.50 ಲಕ್ಷ ರೂ.ಗಳು ಬಿಡುಗಡೆಯಾಗಿದ್ದು, ರೂ. 2337.50 ಲಕ್ಷಗಳ ವೆಚ್ಚ ಭರಿಸಲಾಗಿದೆ.

8) ಶ್ರೀ ಡಿ.ದೇವರಾಜ ಅರಸು ಹುಟ್ಟುಹಬ್ಬ ಜನ್ಮ ದಿನಾಚರಣೆ:

ಕರ್ನಾಟಕ ರಾಜ್ಯದ ಮಾಜಿ ಮುಖ್ಯಮಂತ್ರಿಗಳಾದ ಡಿ.ದೇವರಾಜ ಅರಸು ರವರ ಹುಟ್ಟುಹಬ್ಬ ಆಚರಣೆಯನ್ನು ಪ್ರತಿ ವರ್ಷ ಜಿಲ್ಲಾ ಮಟ್ಟದಲ್ಲಿ ಆಗಸ್ಟ್ ತಿಂಗಳಲ್ಲಿ ಆಚರಿಸುತ್ತಿದ್ದು, ಈ ಕಾರ್ಯಕ್ರಮಕ್ಕೆ 2020–21ನೇ ಸಾಲಿಗೆ ರೂ.1.00 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ಈ ಕಾರ್ಯಕ್ರಮಕ್ಕೆ ರೂ. 1.00 ಲಕ್ಷ ವೆಚ್ಚ ಮಾಡಲಾಗಿದೆ.

9) ಹಿಂದುಳಿದ ವರ್ಗಗಳ ವಿಸ್ತರಣಾಧಿಕಾರಿಗಳ ವೇತನ ಮತ್ತು ಕಛೇರಿ ವೆಚ್ಚ:

ಜಿಲ್ಲೆಯ 10 ತಾಲ್ಲೂಕು ವಿಸ್ತರಣಾಧಿಕಾರಿಗಳ ವೇತನ ಹಾಗೂ ಕಛೇರಿ ವೆಚ್ಚಗಳಿಗಾಗಿ 2020–21ನೇ ಸಾಲಿಗೆ ರೂ. 85.86 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ಈ ಬಾಬ್ತು ರೂ. 81.07 ಲಕ್ಷಗಳ ವೆಚ್ಚ ಭರಿಸಲಾಗಿದೆ.

10) ವಿದ್ಯಾರ್ಥಿನಿಲಯಗಳ ಸುಧಾರಣೆ:

ಮೆಟ್ರಿಕ್‌ಪೂರ್ವ ವಿದ್ಯಾರ್ಥಿನಿಲಯಗಳ ನಿಲಯಾರ್ಥಿಗಳಿಗೆ ಹಾಸಿಗೆ, ಹೊದಿಕೆ, ತಟ್ಟೆ, ಲೋಟ, ಪಾತ್ರೆ ಮುಂತಾದ ಮೂಲಭೂತ ಸೌಕರ್ಯ ಕಲ್ಪಿಸುವ ಸಂಬಂಧ ಯೋಜನೇತರ ಕಾರ್ಯಕ್ರಮದಡಿ ರೂ. 23.41 ಲಕ್ಷಗಳ ಕಾರ್ಯಕ್ರಮವಿರುತ್ತದೆ. ಆ ಪ್ರಕಾರ 2020–21ನೇ ಸಾಲಿಗೆ ಯೋಜನೇತರ ಬಾಬ್ತಿನಲ್ಲಿ ಒಟ್ಟು ರೂ. 23.41 ಲಕ್ಷ ಅನುದಾನ ಒದಗಿಸಿದ್ದು, ಒಟ್ಟು 10 ತಾಲ್ಲೂಕಿನ 50 ವಿದ್ಯಾರ್ಥಿನಿಲಯಗಳಿಗೆ ಸುಧಾರಣೆಗೋಸ್ಕರ ರೂ. 23.40 ಲಕ್ಷಗಳನ್ನು ಖರ್ಚು ಮಾಡಲಾಗಿರುತ್ತದೆ.

11) ಹೊಲಿಗೆ ತರಬೇತಿ ಕೇಂದ್ರಗಳು:

ಹಿಂದುಳಿದ ವರ್ಗಗಳಿಗೆ ಸೇರಿದ ನಿರುದ್ಯೋಗಿ ಮಹಿಳೆಯರಿಗೆ ಹೊಲಿಗೆ ತರಬೇತಿ ನೀಡಿ ಸ್ವಯಂ ಉದ್ಯೋಗದಲ್ಲಿ ತೊಡಗಿ ಜೀವನ ನಡೆಸುವಂತಾಗಲು ಈ ಕೇಂದ್ರಗಳನ್ನು ನಡೆಸಲಾಗುತ್ತಿದೆ. ಆಯ್ಕೆಯಲ್ಲಿ ವಿಧವೆಯವರು ಹಾಗೂ ನಿರ್ಗತಿಕರಿಗೆ ಆದ್ಯತೆ ನೀಡಲಾಗುತ್ತದೆ.

ತುಮಕೂರು ಜಿಲ್ಲೆಯಲ್ಲಿ ಮಧುಗಿರಿ ಹಾಗೂ ತುಮಕೂರು ಟೌನ್‌ನಲ್ಲಿ ಹೊಲಿಗೆ ತರಬೇತಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. 2020–21ನೇ ಸಾಲಿನಲ್ಲಿ ರೂ. 8.35 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ರೂ. 5.71 ಲಕ್ಷಗಳನ್ನು ಖರ್ಚು ಮಾಡಲಾಗಿದೆ.

12) ವಿದ್ಯಾರ್ಥಿನಿಲಯಗಳಲ್ಲಿರುವವರಿಗೆ ಪ್ರೋತ್ಸಾಹಕಗಳು:

ವಿದ್ಯಾರ್ಥಿನಿಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ಎಸ್.ಎಸ್.ಎಲ್.ಸಿ ಪಿ.ಯು.ಸಿ ಮತ್ತು ಪದವಿ ಪರೀಕ್ಷೆಗಳಲ್ಲಿ ಹೆಚ್ಚು ಅಂಕ ಗಳಿಸಿರುವ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡುವ ಸಲುವಾಗಿ 2020–21ನೇ ಸಾಲಿಗೆ ರೂ. 44.20 ಲಕ್ಷ ಅನುದಾನ ಬಿಡುಗಡೆಯಾಗಿದ್ದು, 2017 ವಿದ್ಯಾರ್ಥಿಗಳಿಗೆ ರೂ. 33.475 ಲಕ್ಷಗಳ ಪ್ರೋತ್ಸಾಹಧನ ನೀಡಲಾಗಿದೆ.

13) ಖಾಸಗಿ ಅನಾಥಾಲಯಗಳಿಗೆ ಸಹಾಯಧನ ನೀಡಿಕೆ:

ಸರ್ಕಾರದಿಂದ ಮಾನ್ಯತೆ ಪಡೆದ ಖಾಸಗಿ ಸ್ವಯಂಸೇವಾ ಸಂಸ್ಥೆಗಳು ನಡೆಸುವ ಅನಾಥಾಲಯಗಳಿಗೆ ಪ್ರೋತ್ಸಾಹಧನ ನೆರವು ನೀಡುವ ದೃಷ್ಟಿಯಿಂದ ಸಹಾಯಧನವನ್ನು ನೀಡಲಾಗುತ್ತಿದೆ. ತುಮಕೂರು ಜಿಲ್ಲೆಯಲ್ಲಿ 2020–21ನೇ ಸಾಲಿನಲ್ಲಿ 08 ಅನಾಥಾಲಯಗಳು ಕಾರ್ಯನಿರ್ವಹಿಸುತ್ತಿದ್ದು, ಈ ಕಾರ್ಯಕ್ರಮಕ್ಕೆ ರೂ. 326.92 ಲಕ್ಷ ಅನುದಾನವು ಜಿಲ್ಲಾ ಪಂಚಾಯತ್‌ನಿಂದ ಬಿಡುಗಡೆಯಾಗಿರುತ್ತದೆ. ಒಟ್ಟು 3227 ವಿದ್ಯಾರ್ಥಿಗಳಿಗೆ ಊಟದ ವೆಚ್ಚಕ್ಕಾಗಿ ರೂ. 213.88 ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ.

ಮೇಲ್ಕಂಡಂತೆ ಇಲಾಖಾ ಕಾರ್ಯಕ್ರಮಗಳನ್ನು 2020–21ನೇ ಸಾಲಿನಲ್ಲಿ ಕೈಗೊಂಡಿದ್ದು, ಪ್ರಗತಿ ಸಾಧಿಸಲಾಗಿದೆ.

ಜಿಲ್ಲಾ ಪಂಚಾಯತ್, ತುಮಕೂರು

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ತುಮಕೂರು

2020–21ನೇ ಸಾಲಿನ ವಾರ್ಷಿಕ ಆಡಳಿತ ವರದಿ

ಸಮಗ್ರ ಶಿಶು ಅಭಿವೃದ್ಧಿ ಯೋಜನೆ:

ತುಮಕೂರು ಜಿಲ್ಲೆಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಮಹಿಳೆಯರ ಹಾಗೂ ಮಕ್ಕಳ ಕ್ಷೇಮಾಭಿವೃದ್ಧಿಗಾಗಿ ಹಮ್ಮಿಕೊಂಡಿರುವ ಕಾರ್ಯಕ್ರಮಗಳಲ್ಲಿ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯು (ಐ.ಸಿ.ಡಿ.ಎಸ್) ಸಹ ಒಂದಾಗಿರುತ್ತದೆ.

ಜಿಲ್ಲೆಯ 10 ತಾಲ್ಲೂಕುಗಳಲ್ಲಿ ಒಟ್ಟು 11 ಐ.ಸಿಡಿ.ಎಸ್. ಯೋಜನೆಗಳು ಇದ್ದು, ಚಿಕ್ಕನಾಯಕನಹಳ್ಳಿ, ಗುಬ್ಬಿ, ಕೊರಟಗೆರೆ, ಕುಣಿಗಲ್, ಮಧುಗಿರಿ, ಪಾವಗಡ, ಶಿರಾ, ತಿಪಟೂರು, ತುಮಕೂರು (ಗ್ರಾ), ತುಮಕೂರು (ನ) ಹಾಗೂ ತುರುವೇಕೆರೆ ಇವು ಕಾರ್ಯನಿರತ ಯೋಜನೆಗಳಾಗಿರುತ್ತದೆ. ಒಟ್ಟು 11 ಯೋಜನೆಗಳಲ್ಲಿ 4109 ಅಂಗನವಾಡಿ ಕೇಂದ್ರಗಳು ಮಂಜೂರಾಗಿದ್ದು, ಎಲ್ಲಾ 4109 ಅಂಗನವಾಡಿ ಕೇಂದ್ರಗಳೂ ಕಾರ್ಯನಿರ್ವಹಿಸುತ್ತಿವೆ.

ಪೂರಕ ಪೌಷ್ಠಿಕ ಆಹಾರ ಕಾರ್ಯಕ್ರಮ:

- ಪೂರಕ ಪೌಷ್ಟಿಕ ಆಹಾರ ಕಾರ್ಯಕ್ರಮದಡಿ ಬರುವ 06 ತಿಂಗಳಿಂದ 6 ವರ್ಷದ ಫಲಾನುಭವಿಗಳಿಗೆ ಪ್ರತಿ ಮಗುವಿಗೆ ಘಟಕವೆಚ್ಚ ರೂ. 8/–ರಂತೆ ವಾರ್ಷಿಕ 300 ದಿನಗಳಿಗೆ ಉಪಹಾರವನ್ನು ವಿತರಿಸಲಾಗಿದೆ

- ಪೂರಕ ಪೌಷ್ಟಿಕ ಆಹಾರ ಕಾರ್ಯಕ್ರಮದಡಿ ಗರ್ಭಿಣಿ ಮತ್ತು ಬಾಣಂತಿಯರಿಗೆ ಮಧ್ಯಾಹ್ನದ ಬಿಸಿಯೂಟ ನೀಡುವ ಕಾರ್ಯಕ್ರಮವಾದ ಮಾತೃಪೂರ್ಣ ಯೋಜನೆಯ ವೆಚ್ಚವನ್ನು ಭರಿಸಲಾಗುವುದು ಸದರಿ ಕಾರ್ಯಕ್ರಮದಡಿ ಗರ್ಭಿಣಿ ಮತ್ತು ಬಾಣಂತಿಯರಿಗೆ ಘಟಕ ವೆಚ್ಚ ರೂ.21/–ರಂತೆ ವಾರ್ಷಿಕ 300 ದಿನಗಳಿಗೆ ಉಪಹಾರವನ್ನು ವಿತರಿಸಲಾಗಿದೆ

- ಪ್ರಾಯಪೂರ್ವ ಬಾಲಕಿಯರಿಗಾಗಿ ಪೌಷ್ಟಿಕ ಆಹಾರ ಕಾರ್ಯಕ್ರಮದಡಿ 11 ವರ್ಷದಿಂದ 14 ವರ್ಷದ ಒಳಗಿನ ಶಾಲೆಯಿಂದ ಹೊರಗುಳಿದ ಕಿಶೋರಿಯನ್ನು ಗುರಿತಿಸಿ ಸದರಿ ಫಲಾನುಭವಿಗಳಿಗೆ ಘಟಕ ವೆಚ್ಚ ರೂ. 9.50/–ದಂತೆ 300 ದಿನಗಳಿಗೆ ಮನೆಗೆ ಆಹಾರ ಸಾಮಗ್ರಿಗಳನ್ನು ವಿತರಿಸಲಾಗಿದೆ.

- 2020–21ನೇ ಸಾಲಿಗೆ ಕೆಳಗಿನಂತೆ ಗುರಿ ನಿಗದಿಪಡಿಸಿ ಸಾಧನೆ ಮಾಡಲಾಗಿರುತ್ತದೆ

  - 06 ತಿಂಗಳಿಂದ 06 ವರ್ಷದ ಮಕ್ಕಳ ಗುರಿ 135543 ಇದ್ದು, 145936 ಫಲಾನುಭವಿಗಳಿಗೆ ಆಹಾರ ಹಂಚಿಕೆ ಮಾಡಿ ಶೇ108ರಷ್ಟು ಸಾಧನೆ ಮಾಡಲಾಗಿರುತ್ತದೆ.

  - ಗರ್ಭಿಣಿ, ಬಾಣಂತಿ, ಅಂಗನವಾಡಿ ಕಾರ್ಯಕರ್ತೆ/ ಸಹಾಯಕಿಯರು 34061 ಫಲಾನುಭವಿಗಳ ಗುರಿ ಇದ್ದು 38617 ಫಲಾನುಭವಿಗಳಿಗೆ ಮಧ್ಯಾಹ್ನದ ಬಿಸಿಯೂಟವನ್ನು ನೀಡಲಾಗಿರುತ್ತದೆ ಶೇ 113 ರಷ್ಟು ಸಾಧನೆ ಮಾಡಲಾಗಿರುತ್ತದೆ.

  - ಪ್ರಾಯಪೂರ್ವ ಬಾಲಕಿಯರ ಪೌಷ್ಟಿಕ ಆಹಾರ ಕಾರ್ಯಕ್ರಮದಡಿ 15 ಫಲಾನುಭವಿಗಳ ಗುರಿ ಇದ್ದು, 15 ಫಲಾನುಭವಿಗಳಿಗೆ ಮನೆಗೆ ಆಹಾರವನ್ನು ವಿತರಣೆ ಮಾಡಲಾಗಿರುತ್ತದೆ ಶೇ.100 ರಷ್ಟು ಸಾಧಿಸಲಾಗಿದೆ.

  - ಒಟ್ಟಾರೆಯಾಗಿ ಪೂರಕ ಪೌಷ್ಟಿಕ ಆಹಾರ ಕಾರ್ಯಕ್ರಮದಡಿ 2020–21ನೇ ಸಾಲಿಗೆ 170201 ಫಲಾನುಭವಿಗಳ ಗುರಿ ಇದ್ದು 184568 ಫಲಾನುಭವಿಗಳಿಗೆ ಆಹಾರವನ್ನು ವಿತರಿಸಲಾಗಿದ್ದು ಶೇ 108 ರಷ್ಟು ಭೌತಿಕವಾಗಿ ಸಾಧನೆ ಮಾಡಲಾಗಿರುತ್ತದೆ.

  ಪೂರಕ ಪೌಷ್ಟಿಕ ಆಹಾರ ಕಾರ್ಯಕ್ರಮದಡಿ 2020–21ನೇ ಸಾಲಿಗೆ ಆರ್ಥಿಕವಾಗಿ ರೂ. 6983.00 ಅನುದಾನವನ್ನು ನಿಗದಿಪಡಿಸಿದ್ದು, ವಾರ್ಷಿಕ ಗುರಿಗೆ ರೂ. 6401.07 ಲಕ್ಷಗಳು ಬಿಡುಗಡೆಯಾಗಿದ್ದು ರೂ. 6398.46 ಲಕ್ಷಗಳು ವೆಚ್ಚಭರಿಸಿದ್ದು ಶೇ 100 ರಷ್ಟು ಸಾಧನೆ ಮಾಡಲಾಗಿರುತ್ತದೆ ಹಾಗೂ ಗಟಿಠಿಜಟಿಣ ಚಿಟಠಣಟಿಣ ರೂ. 4948.37 ಲಕ್ಷಗಳು ಅನುದಾನ ಬಿಡುಗಡೆಯಾಗಿದ್ದು, ರೂ. 762.89 ಲಕ್ಷಗಳು ವೆಚ್ಚ ಭರಿಸಲಾಗಿರುತ್ತದೆ.

- **<u>ಕೇಂದ್ರ ಪುರಸ್ಕೃತ ಯೋಜನೆಯ ಸಿಬ್ಬಂದಿ ಹಾಗೂ ಆಡಳಿತ ವೆಚ್ಚ</u>** ತುಮಕೂರು ಜಿಲ್ಲೆಯ 11 ಶಿಶು ಅಭಿವೃದ್ಧಿ ಯೋಜನೆಗಳಲ್ಲಿ 248 ಅಧಿಕಾರಿ/ ಸಿಬ್ಬಂದಿಗಳ ಹುದ್ದೆ ಮಂಜೂರಾಗಿದ್ದು 154 ಅಧಿಕಾರಿ/ ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ ಹಾಗೂ 3590 ಅಂಗನವಾಡಿ ಕಾರ್ಯಕರ್ತೆಯರು, 519 ಮಿನಿ ಅಂಗನವಾಡಿ ಕಾರ್ಯಕರ್ತೆಯರು ಹಾಗೂ 3590 ಅಂಗನವಾಡಿ ಸಹಾಯಕಿಯರು ಒಟ್ಟು 7699 ಅಂಗನವಾಡಿ ಕಾರ್ಯಕರ್ತೆ ಹಾಗೂ ಸಹಾಯಕಿಯರು ಐ.ಸಿ.ಡಿಎಸ್ ಯೋಜನೆಯಡಿ ಕಾರ್ಯನಿರ್ವಹಿಸುತ್ತಿದ್ದಾರೆ. **ಸದರಿ ಯೋಜನೆಯಡಿ** 2020–21ನೇ ಸಾಲಿಗೆ ಆರ್ಥಿಕವಾಗಿ ರೂ. 9095.66 ಅನುದಾನವನ್ನು ನಿಗದಿಪಡಿಸಿದ್ದು, ವಾರ್ಷಿಕ ಗುರಿಗೆ ರೂ. 9095.61 ಲಕ್ಷಗಳು ಬಿಡುಗಡೆಯಾಗಿದ್ದು ರೂ. 8168.30 ಲಕ್ಷಗಳು ವೆಚ್ಚಭರಿಸಿದ್ದು ಶೇ

90 ರಷ್ಟು ಸಾಧನೆ ಮಾಡಲಾಗಿರುತ್ತದೆ ಹಾಗೂ ಗಟಿಠಿಜಟಿಣ ಚಿಟಠಣಟಿಣ ರೂ. 4293.36 ಲಕ್ಷಗಳು ಅನುದಾನ ಬಿಡುಗಡೆಯಾಗಿದ್ದು, ರೂ. 276.23 ಲಕ್ಷಗಳು ವೆಚ್ಚ ಭರಿಸಲಾಗಿರುತ್ತದೆ.

- **ಕ್ಷೀರಭಾಗ್ಯಯೋಜನೆ :–**ಸರ್ಕಾರದ ಆದೇಶದಂತೆ ದಿ:1–8–2013 ರಿಂದ ಹಾಲಿನ ಪುಡಿಯನ್ನು ಕೆ.ಎಂ.ಎಫ್. ಅವರಿಂದ ಖರೀದಿಸಿ ಜಿಲ್ಲೆಯ 11 ಯೋಜನೆಗಳ 4109 ಅಂಗನವಾಡಿ ಕೇಂದ್ರಗಳಲ್ಲಿನ 6 ತಿಂಗಳಿಂದ 6 ವರ್ಷದ ಮಕ್ಕಳಿಗೆ ಹಾಗೂ ಮಾತೃಪೂರ್ಣ ಯೋಜನೆಯ ಫಲಾನುಭವಿಗಳಿಗೆ ಹಾಲು ವಿತರಣೆಯನ್ನು ಮಾಡಲಾಗಿದೆ. ವಾರದಲ್ಲಿ 05 ದಿನ ಪ್ರತಿ ದಿನ 15 ಗ್ರಾಂ ಹಾಲಿನ ಪುಡಿಯಿಂದ 150 ಮಿಲಿ ಹಾಲನ್ನು ತಯಾರಿಸಿ 10 ಗ್ರಾಂ ಸಕ್ಕರೆ ಬೆರೆಸಿ ವಿತರಿಸಲಾಗುತ್ತಿದೆ.

2021–22ನೇ ಸಾಲಿನಲ್ಲಿ 525370 ಕೆ.ಜಿ.ಗಳ ಹಾಲಿನಪುಡಿ ಖರೀದಿಸಿ ವಿತರಣೆ ಮಾಡಲಾಗಿದೆ. ಒಟ್ಟು 1408.00 ಲಕ್ಷ ವೆಚ್ಚ ಭರಿಸಲಾಗಿದೆ.

ಸದರಿ ವೆಚ್ಚವನ್ನು ಪೂರಕ ಪೌಷ್ಟಿಕ ಆಹಾರ ಕಾರ್ಯಕ್ರಮದಲ್ಲಿ ಬಿಡುಗಡೆಯಾದ ಅನುದಾನದಲ್ಲಿಯೇ ಭರಿಸಲಾಗಿರುತ್ತದೆ.

- **ಶಾಲಾ ಪೂರ್ವ ಶಿಕ್ಷಣ ಕಾರ್ಯಕ್ರಮ:** ಜಿಲ್ಲೆಯಲ್ಲಿ ನಿಗಧಿತ ವೇಳಾಪಟ್ಟಿ ಪ್ರಕಾರ ಸಮಗ್ರ ಪದ್ಧತಿ ಅನುಸರಿಸುತ್ತಿದ್ದು, ಶಾಲಾ ಪೂರ್ವ ಶಿಕ್ಷಣದಲ್ಲಿ ಶೇ.95ರಷ್ಟು ಪ್ರಗತಿ ಸಾದಿಸಲಾಗಿದ್ದು, ಇಲಾಖೆಯಿಂದ ನಿಗಧಿಪಡಿಸಲಾದ ರೂಢಿಗತವಲ್ಲದ ಶಾಲಾಪೂರ್ವ ಶಿಕ್ಷಣದ ಪಠ್ಯಕ್ರಮನುಸಾರ ಕ್ರಿಯಾತ್ಮಕ ಚಟುವಟಿಕೆ, ಹಾಡು, ಕಥೆ, ಅಕ್ಷರಅಭ್ಯಾಸ ಮುಂತಾದ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದೆ. 3–6 ವರ್ಷದ ಮಕ್ಕಳು ಗುರಿ–59231 ಸಾಧನೆ–69374 ಶೇ 117% ಸಾಧನೆ ಮಾಡಲಾಗಿದೆ.

- **ಆರೋಗ್ಯ ತಪಾಸಣಾ ಕಾರ್ಯಕ್ರಮ:** ಈ ಕಾರ್ಯಕ್ರಮದಲ್ಲಿ ಜಿಲ್ಲೆಯಲ್ಲಿ ವೈದ್ಯಾಧಿಕಾರಿಗಳು ಅಂಗನವಾಡಿ ಕೇಂದ್ರಕ್ಕೆ ಬರುವ ಮಕ್ಕಳಿಗೆ ಆರೋಗ್ಯ ತಪಾಸಣೆ ಮಾಡಬೇಕಾಗಿರುತ್ತದೆ. ಪ್ರತಿ ತ್ರೈಮಾಸಿಕಕ್ಕೆ ಸರಾಸರಿ 4109 ಕೇಂದ್ರಗಳಲ್ಲಿ ಮಕ್ಕಳಿಗೆ ಆರೋಗ್ಯ ತಪಾಸಣೆ ಮಾಡಬೇಕಿದ್ದು ವೈದ್ಯಾಧಿಕಾರಿಗಳು 95% ಅಂಗನವಾಡಿ ಕೇಂದ್ರಕ್ಕೆ ಭೇಟಿ ನೀಡಿ ಕೇಂದ್ರಗಳಲ್ಲಿನ ಮಕ್ಕಳಿಗೆ ಆರೋಗ್ಯ ತಪಾಸಣೆಯನ್ನು ಮಾಡಿರುತ್ತಾರೆ.

- **ಅಪೌಷ್ಟಿಕ ಮಕ್ಕಳ ವಿವರ ಹಾಗೂ ವೈದ್ಯಕೀಯ ವೆಚ್ಚ:** ಜಿಲ್ಲೆಯಲ್ಲಿ ಅಂಗನವಾಡಿ ಕೇಂದ್ರಗಳಿಗೆ ಬರುವ ಮಕ್ಕಳನ್ನು ತೂಕ ಮಾಡಲಾಗಿದ್ದು, ಮಾರ್ಚ್ 2021 ಅಂತ್ಯಕ್ಕೆ ಒಟ್ಟು 148920 ಮಕ್ಕಳನ್ನು ತೂಕ ಮಾಡಲಾಗಿದ್ದು 141539 ಸಾಮಾನ್ಯ ಮಕ್ಕಳು 7205 ಸಾಧಾರಣಾ ಮಕ್ಕಳು ಹಾಗೂ 176 ತೀವ್ರ ಅಪೌಷ್ಟಿಕ ಮಕ್ಕಳಿರುತ್ತಾರೆ. ಅಪೌಷ್ಟಿಕ

ಮಕ್ಕಳಿಗೆ ಒಂದೂವರೆಪಟ್ಟು ಆಹಾರವನ್ನು ರೂ. 9.50/–ಗಳ ವೆಚ್ಚದಲ್ಲಿ ನೀಡಲಾಗುತ್ತಿದೆ. ಪ್ರತಿ ಅಪೌಷ್ಟಿಕ ಮಗುವಿಗೆ ವಾರ್ಷಿಕ ವೈದ್ಯಕೀಯ ವೆಚ್ಚಕ್ಕಾಗಿ ರೂ.2000/– ನೀಡಲಾಗುತ್ತಿದೆ. ಹೆಚ್ಚಿನ ಚಿಕಿತ್ಸೆಗಾಗಿ ಎನ್.ಆರ್.ಸಿ ಕೇಂದ್ರಗಳಿಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗುತ್ತಿದೆ. 2020–21 ನೇ ಸಾಲಿಗೆ ಅಪೌಷ್ಟಿಕ ಮಕ್ಕಳ ವೈದ್ಯಕೀಯ ವೆಚ್ಚದಡಿ ರೂ. 2.86 ಲಕ್ಷಗಳು ಬಿಡುಗಡೆಯಾಗಿದ್ದು, ರೂ. 2.44 ಲಕ್ಷಗಳನ್ನು ಖರ್ಚು ಭರಿಸಲಾಗಿರುತ್ತದೆ. ಶೇ 85 ರಷ್ಟು ಖರ್ಚು ಭರಿಸಲಾಗಿರುತ್ತದೆ. ಹಾಗೂ ಅಪೌಷ್ಟಿಕ ಹಾಗೂ ತೀವ್ರ ಅಪೌಷ್ಟಿಕ ಮಕ್ಕಳ ಸುಧಾರಣೆಗಾಗಿ ಸ್ಪಿರುಲಿನಾ ಪೌಂಡೇಷನ್ ವತಿಯಿಂದ ತುಮಕೂರು ಜಿಲ್ಲೆಯಲ್ಲಿರುವ 1800 ಅಪೌಷ್ಟಿಕ ಹಾಗೂ ತೀವ್ರ ಅಪೌಷ್ಟಿಕ ಮಕ್ಕಳಿಗೆ 6 ತಿಂಗಳಿಂದ 3 ವರ್ಷದ ವರೆಗಿನ ಮಕ್ಕಳಿಗೆ ಸ್ಪಿರುಲಿನಾ ಗ್ರಾನ್ಯುಲ್ಸ್ (ಕಾಳುಗಳು) ಹಾಗೂ 3–6 ವರ್ಷದ ಮಕ್ಕಳಿಗೆ ಪ್ರತಿ ಮಗುವಿಗೆ ದಿನಕ್ಕೆ 02 ರಂತೆ ಸ್ಪಿರುಲಿನಾ ಚಿಕ್ಕಗಳನ್ನು ಉಚಿತವಾಗಿ ವಿತರಣೆ ಮಾಡಲಾಗುತ್ತಿದೆ.

- **<u>ಅಂಗನವಾಡಿ ಕಾರ್ಯಕರ್ತೆಯರ ಮರಣಪರಿಹಾರ ಹಾಗೂ ವೈದ್ಯಕೀಯ ವೆಚ್ಚ ಮರುಪಾವತಿ</u>**: ಸದರಿ ಕಾರ್ಯಕ್ರಮದಡಿ ಅಂಗನವಾಡಿ ಕಾರ್ಯಕರ್ತೆ ಹಾಗೂ ಸಹಾಯಕಿಯರು ಸೇವಯಲ್ಲಿರುವಾಗ ಮರಣ ಹೊಂದಿದಲ್ಲಿ ಮರಣ ಪರಿಹಾರ ನಿಧಿಯಾಗಿ ರೂ. 50000/–ಗಳನ್ನು ನೀಡಲಾಗುತ್ತದೆ ಹಾಗೂ ಅಂಗನವಾಡಿ ಕಾರ್ಯಕರ್ತೆ ಹಾಗೂ ಸಹಾಯಕಿರು ವೈದ್ಯಕೀಯ ಸೇವೆ ಪಡೆದಲ್ಲಿ ಮರುಪಾವತಿಯ ಅವಕಾಶವಿರುತ್ತದೆ. ಸದರ ಕಾರ್ಯಕ್ರಮದಡಿ 2020–21ನೇ ಸಾಲಿಗೆ ರೂ. 6.45 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದ್ದು, ಶೇ 100 ರಷ್ಟು ಖರ್ಚು ಭರಿಸಲಾಗಿರುತ್ತದೆ.

- **<u>ಅಂಗನವಾಡಿಕಟ್ಟಡ ನಿರ್ಮಾಣ:</u>**

1. ಜಿಲ್ಲೆಯಲ್ಲಿ 11 ಯೋಜನೆಗಳಲ್ಲಿ 4109 ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಇದರಲ್ಲಿ 2883 ಸ್ವಂತಕಟ್ಟಡ ಹೊಂದಿದ್ದು ಉಳಿಕೆ 1226 ಕೇಂದ್ರಗಳನ್ನು ಪಂಚಾಯಿತಿ, ಸಮುದಾಯ, ಯುವಕ ಸಂಘ, ಶಾಲೆ ಹಾಗೂ ಬಾಡಿಗೆ ಕಟ್ಟಡಗಳಲ್ಲಿ ನಡೆಸಲಾಗುತ್ತಿದೆ.

2. 2015–16ನೇ ಸಾಲಿಗೆ ಆರ್.ಐ.ಡಿ.ಎಫ್–20ರಡಿ 36 ಕಟ್ಟಡಗಳು, ಆರ್.ಐ.ಡಿ.ಎಫ್–21 ರಡಿ 23 ಕಟ್ಟಡಗಳು, ಕಟ್ಟಡಗಳು ಒಟ್ಟು 59 ಕಟ್ಟಡಗಳು ಮಂಜೂರಾಗಿದ್ದು ಪ್ರತಿ ಕಟ್ಟಡಕ್ಕೆ ಘಟಕ ವೆಚ್ಚ ರೂ 9.17 ಲಕ್ಷದಂತೆ ರೂ. 541.03 ಲಕ್ಷಗಳು ಬಿಡುಗಡೆಯಾಗಿರುತ್ತದೆ.

3. 2016–17ನೇ ಸಾಲಿಗೆ ಆರ್.ಐ.ಡಿ.ಎಫ್ –22ರಡಿ 32 ಕಟ್ಟಡಗಳು ಮಂಜೂರಾಗಿದ್ದು, ಪ್ರತಿ ಕಟ್ಟಡಕ್ಕೆ ಘಟಕ ವೆಚ್ಚ ರೂ 9.17ಲಕ್ಷದಂತೆ ಒಟ್ಟು 293.44 ಲಕ್ಷಗಳು ಬಿಡುಗಡೆಯಾಗಿರುತ್ತದೆ.

4. ಎಸ್‌ಡಿಪಿ ಯೋಜನೆಯಡಿ 2015–16ನೇ ಸಾಲಿಗೆ 03 ಕಟ್ಟಡಗಳು, 2016–17ನೇ ಸಾಲಿಗೆ 03 ಕಟ್ಟಡಗಳು ಮಂಜೂರಾಗಿದ್ದು ಪ್ರತಿ ಕಟ್ಟಡಕ್ಕೆ ಘಟಕ ವೆಚ್ಚ ರೂ 9.17ರಂತೆ ಒಟ್ಟು 06 ಕಟ್ಟಡಗಳಿಗೆ ರೂ 55.02 ಲಕ್ಷಗಳು ಬಿಡುಗಡೆಯಾಗಿರುತ್ತದೆ.

5. 2017–18ನೇ ಸಾಲಿಗೆ 21 ಕಟ್ಟಡಗಳು ಮಂಜೂರಾಗಿದ್ದು ಪ್ರತಿ ಕಟ್ಟಡಕ್ಕೆ ಘಟಕ ವೆಚ್ಚ ರೂ. 10.80 ದಂತೆ ಒಟ್ಟು ರೂ. 226.80ಲಕ್ಷಗಳು ಬಿಡುಗಡೆಯಾಗಿರುತ್ತದೆ.

6. ನರೇಗಾ ಒಗ್ಗೂಡಿಸುವಿಕೆ ಯೋಜನೆಯಡಿ 2016–17ನೇ ಸಾಲಿಗೆ 140 ಕಟ್ಟಡಗಳು, 2017–18ನೇ ಸಾಲಿಗೆ 310 ಕಟ್ಟಡಗಳು ಒಟ್ಟು 450 ಕಟ್ಟಡಗಳು ಮಂಜೂರಾಗಿದ್ದು ಪ್ರತಿ ಕಟ್ಟಡಕ್ಕೆ ಘಟಕ ವೆಚ್ಚ ರೂ. 8.00 ಲಕ್ಷದಂತೆ (ಇಲಾಖೆ ರೂ.3.00 ಲಕ್ಷ + ನರೇಗಾ ರೂ.5.00 ಲಕ್ಷ) ನಿಗದಿಪಡಿಸಿದ್ದು, ಒಟ್ಟು ರೂ 1350.00 ಲಕ್ಷಗಳು ಬಿಡುಗಡೆಯಾಗಿರುತ್ತದೆ.

7. 2016–17ನೇ ಸಾಲಿಗೆ 474 ಶೌಚಾಲಯಗಳನ್ನು ನಿರ್ಮಿಸಲು ಪ್ರತಿ ಶೌಚಾಲಯಕ್ಕೆರೂ. 15000/–ದಂತೆ ಒಟ್ಟುರೂ. 71.10 ಲಕ್ಷಗಳು ಬಿಡುಗಡೆಯಾಗಿದ್ದು, ಸದರಿ ನುದಾನವನ್ನು ಸಂಬಂಧಿಸಿದ ಗ್ರಾಮಪಂಚಾಯಿತಿಗಳ ಖಾತೆಗೆ ಜಮೆ ಮಾಡಲಾಗಿದ್ದು, ಸದರಿ ಅನುದಾನ ಜೊತೆಗೆ ರೂ. 5000/–ಗಳನ್ನು ಸೇರಿಸಿ ಗ್ರಾಮಪಂಚಾಯತ್ ಅನುದಾನವನ್ನು ಬಳಸಿಕೊಂಡು ಶೌಚಾಲಯಗಳನ್ನು ನಿರ್ಮಿಸಲಾಗಿರುತ್ತದೆ.

8. 2018–19ನೇ ಸಾಲಿನಲ್ಲಿ ಸ್ವಚ್ಛಭಾರತ್ ಮಿಷನ್ ಯೋಜನೆಯಡಿ ಶೌಚಾಲಯಗಳ ದುರಸ್ತಿಗಾಗಿ 337 ಶೌಚಾಲಯಗಳಿಗೆ ಮಂಜೂರಾಗಿರುತ್ತದೆ ಹಾಗೂ ಶೌಚಾಲಯಗಳ ನಿರ್ಮಾಣದಡಿ 241 ಶೌಚಾಲಯಗಳನ್ನು ನಿರ್ಮಿಸಲು ಗ್ರಾಮಪಂಚಾಯಿತಿಗಳಿಗೆ ಮಂಜೂರಾಗಿರುತ್ತದೆ.

9. 2019–20ನೇ ಸಾಲಿನಲ್ಲಿ ಅಂಗನವಾಡಿ ಕಟ್ಟಡಗಳ ಮೂಲಭೂತ ಸೌಕರ್ಯ (ದುರಸ್ತಿ/ ಉನ್ನತೀಕರಣಕ್ಕಾಗಿ) 83 ಅಂಗನವಾಡಿ ಕಟ್ಟಡಗಳ ಉನ್ನತೀಕರಣಕ್ಕಾಗಿ ಮಂಜೂರಾಗಿದ್ದು, ಪ್ರತಿ ಕಟ್ಟಡಕ್ಕೆ ರೂ. 2.00ಲಕ್ಷದಂತೆ ನಿಗದಿಪಡಿಸಿದ್ದು, ಒಟ್ಟು ರೂ. 166.00 ಲಕ್ಷಗಳು ಬಿಡುಗಡೆಯಾಗಿರುತ್ತದೆ.

10. 2019–20ನೇ ಎಸ್.ಡಿ.ಪಿ ಯೋಜನೆಯಡಿ 17 ಅಂಗನವಾಡಿ ಕಟ್ಟಡಗಳು ಮಂಜೂರಾಗಿದ್ದು, ಪ್ರತಿ ಕಟ್ಟಡಕ್ಕೆ ಘಟಕ ವೆಚ್ಚ ರೂ. 16.50 ರಂತೆ ಒಟ್ಟು ರೂ. 280.50 ಲಕ್ಷಗಳು ಬಿಡುಗಡೆಯಾಗಿರುತ್ತದೆ.

11. 2019–20ನೇ ಸಾಲಿಗೆ ನರೇಗಾ ಒಗ್ಗೂಡಿಸುವಿಕೆ ಯೋಜನೆಯಡಿ ಒಟ್ಟು 03 ಅಂಗನವಾಡಿ ಕಟ್ಟಡಗಳು ಮಂಜೂರಾಗಿದ್ದು, ಪ್ರತಿ ಕಟ್ಟಡಕ್ಕೆ ರೂ. 10.00 ಲಕ್ಷದಂತೆ ನಿಗದಿಪಡಿಸಿ ರೂ. 30.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ.

12. 2019–20ನೇ ಸಾಲಿಗೆ ಲೆಕ್ಕಶೀರ್ಷಿಕೆ: 2211–00–101–0–61 ರಡಿ ಅಂಗನವಾಡಿ ಕಟ್ಟಡಗಳ ನಿರ್ವಹಣೆಗಾಗಿ ಇಲಾಖೆಯ ಅನುದಾನ ರೂ.170.00 ಲಕ್ಷ ನಿಗಧಿಪಡಿಸಲಾಗಿದ್ದು, ಪ್ರತಿ ತಾಲ್ಲೂಕಿಗೆ ರೂ. 16.00 ಲಕ್ಷದಂತೆ ತಾಲ್ಲೂಕ್ ಪಂಚಾಯಿತಿಗಳಿಗೆ ಬಿಡುಗಡೆಯಾಗಿದ್ದು ಒಟ್ಟು ತುಮಕೂರು ಜಿಲ್ಲೆಯಲ್ಲಿ 340 ಅಂಗನವಾಡಿ ಕಟ್ಟಡಗಳನ್ನು ಗುರಿ ನಿಗಧಿಪಡಿಸಲಾಗಿದ್ದು, 304 ಅಂಗನವಾಡಿ ಕಟ್ಟಡಗಳ ಸಣ್ಣಪುಟ್ಟ ದುರಸ್ತಿ, ನಿರ್ವಹಣೆಗಾಗಿ ಹಾಗೂ ವಿದ್ಯುದ್ದೀಕರಣಕ್ಕಾಗಿ ರೂ. 153.57 ಲಕ್ಷಗಳಷ್ಟು ಖರ್ಚನ್ನು ಭರಿಸಲಾಗಿರುತ್ತದೆ. ಶೇ 90 ರಷ್ಟು ಸಾಧನೆ ಮಾಡಲಾಗಿರುತ್ತದೆ.

13. 2020–21ನೇ ಸಾಲಿಗೆ ನರೇಗಾ ಒಗ್ಗೂಡಿಸುವಿಕೆ ಯೋಜನೆಯಡಿ ಒಟ್ಟು 03 ಅಂಗನವಾಡಿ ಕಟ್ಟಡಗಳು ಮಂಜೂರಾಗಿದ್ದು ಪ್ರತಿ ಕಟ್ಟಡಕ್ಕೆ ರೂ 10.00 ಲಕ್ಷದಂತೆ ನಿಗದಿಪಡಿಸಿ 30.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ.

14. 2020–21ನೇ ಸಾಲಿಗೆ ನರೇಗಾ ಒಗ್ಗೂಡಿಸುವಿಕೆ ಮತ್ತು ವಿಶೇಷ ಅಭಿವೃದ್ಧಿ ಯೋಜನೆಯಡಿ ಒಟ್ಟು 27 ಅಂಗನವಾಡಿ ಕಟ್ಟಡಗಳು ಮಂಜೂರಾಗಿದ್ದು ಪ್ರತಿ ಕಟ್ಟಡಕ್ಕೆ ರೂ. 10.00 ಲಕ್ಷದಂತೆ ನಿಗದಿಪಡಿಸಿ ಒಟ್ಟು ರೂ. 270.00 ಲಕ್ಷಗಳು ಬಿಡುಗಡೆ ಮಾಡಲಾಗಿರುತ್ತದೆ.

15. ಪೂರಕ ಅಂದಾಜಿನಲ್ಲಿ 18 ಅಂಗನವಾಡಿ ಕಟ್ಟಡಗಳು ಮಂಜೂರಾಗಿದ್ದು ಪ್ರತಿ ಕಟ್ಟಡಕ್ಕೆ ರೂ. 16.50ರಂತೆ ಒಟ್ಟು ರೂ. 297.00 ಲಕ್ಷಗಳ ಅನುದಾನ ಬಿಡುಗಡೆಯಾಗಿರುತ್ತದೆ

- **<u>ಅನಾಥ ಮಕ್ಕಳ ರಕ್ಷಣೆಗಾಗಿ ನಿರ್ಗತಿಕ ಮಕ್ಕಳ ಕುಟೀರ</u>:** ಅನಾಥ ಮತ್ತು ನಿರ್ಗತಿಕ ಮಕ್ಕಳಿಗೆ ಪೋಷಣೆ ಮತ್ತು ರಕ್ಷಣೆ ಒದಗಿಸಿ ಸಾಮಾನ್ಯ ಮಕ್ಕಳ ಹಾಗೂ ಸತ್‌ಪ್ರಜೆಗಳನ್ನಾಗಿ ಮಾಡುವುದು, ಈ ಯೋಜನೆಯ ಆದ್ಯ ಉದ್ದೇಶವಾಗಿದೆ. ಅರ್ಹ ಸ್ವಯಂಸೇವಾ ಸಂಸ್ಥೆಗಳ ಮುಖಾಂತರ ಇಂತಹ ಕುಟೀರಗಳನ್ನು ಸ್ಥಾಪಿಸಿ, ಊಟ, ವಸತಿ, ವೈದ್ಯಕೀಯ ಸವಲತ್ತುಗಳನ್ನು ಮಕ್ಕಳಿಗೆ ಒದಗಿಸಲಾಗುತ್ತದೆ.

ಜಿಲ್ಲೆಯಲ್ಲಿ 07 ಸಂಸ್ಥೆಗಳ ವತಿಯಿಂದ 13 ನಿರ್ಗತಿಕ ಮಕ್ಕಳು ಕುಟೀರಗಳು ನಿರ್ವಹಿಸುತ್ತಿದ್ದು 2020–21ನೇ ಸಾಲಿಗೆ ಸದರಿ ಕುಟೀರಗಳಿಗೆ ರೂ.36.83ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ಕೊವೀಡ್–19ರ ಸಾಂಕ್ರಮಿಕ ಕಾರಣದಿಂದ ಅನಾಥ ಮಕ್ಕಳ ಕುಟೀರಗಳಲ್ಲಿ ಮಕ್ಕಳು ದಾಖಲಾದ ಕಾರಣ ಕುಟೀರಗಳ ನಿರ್ವಹಣೆ ಹಾಗೂ ಸಿಬ್ಬಂದಿಗಳ ಗೌರವಧನಕ್ಕಾಗಿ ರೂ. 10.50 ಲಕ್ಷಗಳ ವೆಚ್ಚ ಭರಿಸಲಾಗಿರುತ್ತದೆ.

ರಾಜ್ಯವಲಯ ಯೋಜನೆಗಳು:

- **<u>ಸಾಂತ್ವನ ಯೋಜನೆ:</u>** ತುಮಕೂರು ಜಿಲ್ಲೆಯಲ್ಲಿ 10 ಸಾಂತ್ವನ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿದ್ದು, ದೌರ್ಜನ್ಯ ಮತ್ತು ಅತ್ಯಾಚಾರಕ್ಕೊಳಪಟ್ಟ ಮಹಿಳೆಯರಿಗೆ ಸಮಾಲೋಚನೆ, ಆರ್ಥಿಕ ಸಹಾಯ, ಕಾನೂನು ಸಹಾಯ ನೀಡುವುದು, ಆಶ್ರಯ ಒದಗಿಸುವುದು ಹಾಗೂ ಸ್ವಯಂ ಉದ್ಯೋಗ ಮಾಡಲು ಅನುಕೂಲವಾಗುವಂತೆ ತರಬೇತಿ ನೀಡಿ ಸ್ವಾವಲಂಬಿಗಳಾಗಿ ಬದುಕುವಂತೆ ಮಾಡುವುದು ಈ ಯೋಜನೆಯ ಉದ್ದೇಶವಾಗಿರುತ್ತದೆ. ಸದರಿ ಯೋಜನೆಯನ್ನು ಸ್ವಯಂಸೇವಾ ಸಂಸ್ಥೆ ವತಿಯಿಂದ ಅನುಷ್ಠಾನಗೊಳಿಸಲಾಗುತ್ತಿದೆ.

- 2020–21ನೇ ಸಾಲಿಗೆ ಒಟ್ಟು ರೂ 62.53 ಲಕ್ಷಗಳು ಬಿಡುಗಡೆಯಾಗಿದ್ದು, ರೂ. 62.53 ಲಕ್ಷಗಳು ಖರ್ಚಾಗಿರುತ್ತದೆ. ಸಾಂತ್ವನ ಕೇಂದ್ರಗಳಲ್ಲಿ ಕೌಟುಂಬಿಕ ಕಲಹದಡಿ 1922 ಪ್ರಕರಣಗಳು ದಾಖಲಾಗಿದ್ದು, 1269 ಪ್ರಕರಣಗಳು ಇತ್ಯರ್ಥಗೊಳಿಸಲಾಗಿರುತ್ತದೆ, 653 ಪ್ರಕರಣಗಳು ಬಾಕಿ ಉಳಿದಿರುತ್ತವೆ.

- **<u>ಸ್ತ್ರೀಶಕ್ತಿ ಯೋಜನೆ:</u>** ಸ್ತ್ರೀಶಕ್ತಿ ಯೋಜನೆ: ಸ್ತ್ರೀಶಕ್ತಿ ಗುಂಪು, ಸಮಾಜದ ಬಡ ಕುಟುಂಬದ, ಸಮಾನ ಮನಸ್ಕರ, ಸಮಾನ ವಯಸ್ಕರ, ಆರ್ಥಿಕ, ಸಾಮಾಜಿಕ ಹಿನ್ನೆಲೆಯುಳ್ಳ ಪರಸ್ಪರ ವಿಶ್ವಾಸದಿಂದ ಕೂಡಿದ 15 ರಿಂದ 20 ಜನ ಮಹಿಳೆಯರು ಒಂದಡೆ ಸೇರಿ ತಮ್ಮ ಸಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗಾಗಿ ಸ್ವಇಚ್ಚೆಯಿಂದ ರಚಿಸಿಕೊಂಡ ಗುಂಪಾಗಿದೆ. ಈ ಯೋಜನೆಯಡಿ ಗ್ರಾಮೀಣ ಪ್ರದೇಶದ ಬಡತನ ರೇಖೆಗಿಂತ ಕೆಳಗಿರುವ ಮಹಿಳೆಯರಿಗೆ ಆದಾಯೋತ್ಪನ್ನ ಚಟುವಟಿಕೆಗಳಲ್ಲಿ ತೊಡಗಿಸುವುದರ ಮೂಲಕ ಬಡ ಮಹಿಳೆಯರ ಆದಾಯವನ್ನು ಹೆಚ್ಚಿಸಿ ಅವರಲ್ಲಿ ಆರ್ಥಿಕ ಸ್ಥಿರತೆಯನ್ನು ಮೂಢಿಸುವುದು ಸದರಿ ಯೋಜನೆಯ ಉದ್ದೇಶವಾಗಿರುತ್ತದೆ. ಜಿಲ್ಲೆಯಲ್ಲಿ ಒಟ್ಟು 11040 ಗುಂಪುಗಳನ್ನು ರಚಿಸಲಾಗಿದ್ದು, ಒಟ್ಟು 177077 ಸದಸ್ಯರಿರುತ್ತಾರೆ. ತಾಲ್ಲೂಕು ಮಟ್ಟದಲ್ಲಿ 07 ಸ್ತ್ರೀಶಕ್ತಿ ಭವನಗಳು ಪೂರ್ಣಗೊಂಡಿರುತ್ತವೆ 03 ತುರುವೇಕೆರೆ, ಕುಣಿಗಲ್ ಮತ್ತು ತುಮಕೂರು (ಗ್ರಾ) ತಾಲ್ಲೂಕುಗಳಲ್ಲಿ ಕಾಮಗಾರಿ ಪ್ರಗತಿ ಹಂತದಲ್ಲಿರುತ್ತವೆ.

2020–21ನೇ ಸಾಲಿಗೆ ಒಟ್ಟುರೂ. 9.85 ಲಕ್ಷಗಳನ್ನು ಸ್ತ್ರೀಶಕ್ತಿ ಗುಂಪುಗಳಿಗೆ ಸುತ್ತುನಿಧಿ, ವಸ್ತುಪ್ರದರ್ಶನ ಮಾರಾಟ ಮೇಳ, ಕೌಶಲ್ಯಾಭಿವೃದ್ಧಿ ತರಬೇತಿಗಾಗಿ ಬಿಡುಗಡೆ ಮಾಡಲಾಗಿದ್ದು, ಶೇ 100ರಷ್ಟು ಅನುದಾನವನ್ನು ಖರ್ಚು ಭರಿಸಲಾಗಿರುತ್ತದೆ.

- **<u>ಭಾಗ್ಯಲಕ್ಷ್ಮಿ ಯೋಜನೆ:</u>** ಸಮಾಜದಲ್ಲಿ ಹೆಣ್ಣು ಮಗುವಿನ ಸ್ಥಾನಮಾನ ಹೆಚ್ಚಿಸುವುದು ಆರೋಗ್ಯ ವಿದ್ಯಾಭ್ಯಾಸ, ಗಂಡು ಹೆಣ್ಣು ಲಿಂಗಾನುಪಾತ ಸರಿದೂಗಿಸುವುದು ಹಾಗೂ ಹೆಣ್ಣು ಮಕ್ಕಳ ಮದುವೆಯನ್ನು 18 ವರ್ಷತುಂಬಿದ ನಂತರವೇ ಮಾಡಬೇಕೆಂಬ ಉದ್ದೇಶದಿಂದ ಸದರಿ ಯೋಜನೆಯನ್ನು ದಿನಾಂಕ:1–4–2006 ರಿಂದ ಜಾರಿಗೆ

ತಂದಿದ್ದು 2020–21ನೇ ಸಾಲಿನ ಅಂತ್ಯದರವೆಗೆ 161525 ಫಲಾನುಭವಿಗಳಿಗೆ ಮಂಜೂರಾತಿ ನೀಡಲಾಗಿರುತ್ತದೆ. ಹಾಗೂ 149882 ಫಲಾನುಭವಿಗಳಿಗೆ ಭಾಗ್ಯಲಕ್ಷ್ಮಿ ಬಾಂಡ್‌ಗಳನ್ನು ವಿತರಿಸಲಾಗಿದೆ.

- **<u>ಪ್ರಧಾನ ಮಂತ್ರಿ ಮಾತೃವಂದನಾ ಯೋಜನೆ:</u>** ಮಹಿಳೆಯ ಮೊದಲ ಪ್ರಸವದ ಮತ್ತು ಪ್ರಸವದ ನಂತರದ ವಿಶ್ರಾಂತಿಗಾಗಿ ಪ್ರೋತ್ಸಾಹಧನದ ರೂಪದಲ್ಲಿ ವೇತನ ನಷ್ಟಕ್ಕಾಗಿ ಗರ್ಭಿಣಿ ಮತ್ತು ಬಾಣಂತಿಯರ ಆರೋಗ್ಯದ ಸುಧಾರಣೆಗೆ ಪ್ರಧಾನ ಮಂತ್ರಿಗಳು ಪ್ಯಾನ್ ಇಂಡಿಯಾ ಅಡಿಯಲ್ಲಿ" ಪ್ರಧಾನ ಮಂತ್ರಿ ಮಾತೃವಂದನಾ ಯೋಜನೆ" ಎಂಬ ಯೋಜನೆಯನ್ನು ಘೋಷಿಸಿರುತ್ತಾರೆ. ದಿನಾಂಕ: 01–01–2017ರ ನಂತರದ ಗರ್ಭಿಣಿ/ ಬಾಣಂತಿ ಮಹಿಳೆಯರಿಗೆ ರೂ. 5000/–ಗಳ ಸಹಾಯಧನವನ್ನು ಗರ್ಭಿಣಿಯಾಗಿ 150 ದಿನಗಳ ನಂತರ ಮೊದಲ ಕಂತು ರೂ. 1000/– ಗರ್ಭಿಣಿಯಾಗಿ 180 ದಿನಗಳ ನಂತರ ಎರಡನೇ ಕಂತು ರೂ.2000/– ಬಾಣಂತಿಯಾಗಿ ಮೂರುವರೆ ತಿಂಗಳ ನಂತರ ಮೂರನೇ ಕಂತು ರೂ. 2000/–ಗಳನ್ನು ಹೀಗೆ ಒಟ್ಟು 03 ಕಂತುಗಳಲ್ಲಿ ನೇರ ನಗದು ವರ್ಗಾವಣೆ ಮೂಲಕ ಫಲಾನುಭವಿಯ ಬ್ಯಾಂಕ್ ಉಳಿತಾಯ ಖಾತೆಗೆ ವರ್ಗಾಯಿಸುವುದು. ಸದರಿ ಯೋಜನೆ ಸೌಲಭ್ಯವನ್ನು ಮೊದಲ ಜೀವಂತ ಹೆರಿಗೆಗೆ ಮಾತ್ರ ಸೀಮಿತಗೊಳಿಸಲಾಗಿದೆ.

2019–20ನೇ ಸಾಲಿನಲ್ಲಿ 14006 ಫಲಾನುಭವಿಗಳಿಗೆ ಯೋಜನೆಯಡಿ ರೂ. 77208000/–ಗಳನ್ನು ಫಲಾನುಭವಿಗಳ ಬ್ಯಾಂಕ್ ಖಾತೆಗೆ ನೇರ ನಗದು ಮೂಲಕ ವರ್ಗಾವಣೆ ಮಾಡಲಾಗಿರುತ್ತದೆ.

- **<u>ಮಾತೃಪೂರ್ಣ ಕಾರ್ಯಕ್ರಮ:–</u>** ಮಾತೃಪೂರ್ಣ ಕಾರ್ಯಕ್ರಮವು ದಿನಾಂಕ: 01–10–2017ರಿಂದ ರಾಜ್ಯಾದ್ಯಂತ ಜಾರಿಗೆ ಬಂದಿರುತ್ತದೆ. ಸದರಿ ಕಾರ್ಯಕ್ರಮದಡಿ ಅಂಗನವಾಡಿ ಕೇಂದ್ರದಲ್ಲಿ ಗರ್ಭಿಣಿ ಮತ್ತು ಬಾಣಂತಿಯರಿಗೆ ಮಧ್ಯಾಹ್ನದ ಬಿಸಿಯೂಟವನ್ನು ನೀಡಲಾಗುತ್ತಿದೆ. ಹಾಗೂ ಕಬ್ಬಿಣಾಂಶದ ಮಾತ್ರೆಗಳನ್ನು ನೀಡಲಾಗುತ್ತದೆ. ಫಲಾನುಭವಿಗಳ ಆರೋಗ್ಯ ತಪಾಸಣೆ ಹಾಗೂ ಮನೆ ಭೇಟಿ ಮಾಡಿ ಸಮಾಲೋಚನೆ ಮಾಡಲಾಗುತ್ತದೆ. ಈ ಕಾರ್ಯಕ್ರಮದಿಂದ ಅಪೌಷ್ಟಿಕ ಮಕ್ಕಳ ಜನನ ಪ್ರಮಾಣ ಕಡಿಮೆಯಾಗಿದೆ.

2020–21ನೇ ಸಾಲಿನ ಮಾರ್ಚ್ 2021ರ ಅಂತ್ಯಕ್ಕೆ ಮಾತೃಪೂರ್ಣ ಕಾರ್ಯಕ್ರಮದಡಿ ಶೇ. 113ರಷ್ಟು ಸಾಧನೆ ಮಾಡಲಾಗಿರುತ್ತದೆ.

- **<u>ಸ್ವಾಧಾರ ಕೇಂದ್ರ:–</u>** ಸಂಕಷ್ಟ ಪರಿಸ್ಥಿತಿಯಲ್ಲಿರುವ ಮಹಿಳೆಯರಿಗೆ ಆಶ್ರಯ, ಆರೈಕೆ ಮತ್ತು ಕೌಶಾಲ್ಯಭಿವೃದ್ಧಿ ತರಬೇತಿ ನೀಡಲು ಸ್ವಯಂ ಸೇವಾ ಸಂಸ್ಥೆಗಳ ಮುಖಾಂತರ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಜಿಲ್ಲೆಯಲ್ಲಿ ಪ್ರಸ್ತುತ 01 ಸ್ವಾಧಾರ ಕೇಂದ್ರ ಕಾರ್ಯನಿರ್ವಹಿಸುತ್ತಿದೆ.

1) ಅಂಬಿಕಾ ಮಹಿಳಾ ಸ್ವಾಧಾರ ಕೇಂದ್ರ, ಗುರುಟವರ್, 2ನೇ ಮಹಡಿ, ಉಪ್ಪಾರಹಳ್ಳಿ, ತುಮಕೂರು

- **<u>ಸ್ವೀಕಾರ ಕೇಂದ್ರ:–</u>** ಈ ಸಂಸ್ಥೆಗೆ 18 ಮೇಲ್ಪಟ್ಟ ಮಹಿಳಾ ನಿರಾಶ್ರಿತರು, ರಕ್ಷಣೆ ಕೋರಿ ಬಂದ, ತೊಂದರೆಗೀಡಾದ, ಸ್ವಇಚ್ಛೆಯಿಂದ ಬಂದ, ಕೌಟುಂಬಿಕ ದೌರ್ಜನ್ಯಕ್ಕೆ ಒಳಗಾದ ಮಹಿಳೆಯರನ್ನು ದಾಖಲು ಮಾಡಿಕೊಂಡು, ಉಚಿತ ಆಶ್ರಯ, ಊಟ, ತಿಂಡಿ, ಉಡುಪು, ಆರೋಗ್ಯ ತಪಾಸಣೆ, ಶುದ್ಧ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸಲಾಗುವುದು ಹಾಗೂ ಮಹಿಳೆಯರಿಗೆ ಕೌಶಲ್ಯ ತರಬೇತಿ ನೀಡಲಾಗುವುದು. ಇದಲ್ಲದೆ ಆಪ್ತ ಸಮಾಲೋಚನೆ ನಡೆಸುವ ಮೂಲಕ ಪುನರ್‌ವಸತಿ ಕಲ್ಪಿಸುವುದು ಈ ಸಂಸ್ಥೆಯ ಉದ್ದೇಶವಾಗಿರುತ್ತದೆ. ಸ್ವೀಕಾರ ಕೇಂದ್ರವು ಅಮರಜ್ಯೋತಿ ನಗರ, ಕುಣಿಗಲ್ ರಸ್ತೆ, ತುಮಕೂರು ಇಲ್ಲಿನ ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ. ಮಾರ್ಚ್ 2021ರ ಅಂತ್ಯಕ್ಕೆ ಕೇಂದ್ರದಲ್ಲಿ 01 ಮಗು ಹಾಗೂ 9 ಮಹಿಳೆಯರು ಆಶ್ರಯ ಪಡೆದಿರುತ್ತಾರೆ.

- **<u>ಓಎಸ್‌ಸಿ (ಸಖಿ):</u>** ದೌರ್ಜನ್ಯಕ್ಕೊಳಗಾದ ಮಹಿಳೆಯರಿಗೆ ಒಂದೇ ಸೂರಿನಡಿ ವೈದ್ಯಕೀಯ ಸೇವೆ, ಪೊಲೀಸ್ ಸೇವೆ, ಕಾನೂನು ಸೇವೆ, ಸಮಾಲೋಚನೆ ಮತ್ತು ತಾತ್ಕಾಲಿಕ ವಸತಿ ಒದಗಿಸುವ ಕೇಂದ್ರ ಸರ್ಕಾರದ "ಒನ್ ಸ್ಟಾಪ್ ಸೆಂಟರ್–ಸಖಿ" ಯೋಜನೆಯನ್ನು ಪ್ರಾರಂಭಿಸಲು ದಿ:21–12–2017 ರಂದು ನಡೆದ ಕೇಂದ್ರ ಸರ್ಕಾರದ ಪಿ.ಎ.ಬಿ ಸಭೆಯಲ್ಲಿ ಮಂಜೂರಾತಿ ನೀಡಲಾಗಿದೆ. ಅದರಂತೆ ಸದರಿ ಯೋಜನೆಯ ಸೇವೆಯನ್ನು ರಾಜ್ಯ ಸರ್ಕಾರದ ಅನುದಾನದಲ್ಲಿ ಅನುಷ್ಠಾನಗೊಳ್ಳುತ್ತಿರುವ ಗೆಳತಿ ವಿಶೇಷ ಚಿಕಿತ್ಸಾ ಘಟಕ ಯೋಜನೆಯಡಿ ಒದಗಿಸಲಾಗುತ್ತಿತ್ತು. ಪ್ರಸ್ತುತ ಸಖಿ (ಒನ್ ಸ್ಟಾಪ್ ಸೆಂಟರ್) ಸರ್ಕಾರಿ ಜಿಲ್ಲಾ ಆಸ್ಪತ್ರೆ, ತುಮಕೂರು ಕಟ್ಟಡದ ಮೊದಲನೇ ಮಹಡಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದೆ. ಘಟಕದ ಸ್ವಂತ ಕಟ್ಟಡ

ನಿರ್ಮಾಣಕ್ಕೆ ರೂ. 36.75 ಲಕ್ಷಗಳ ಅಂದಾಜುಪಟ್ಟಿಗೆ ಅನುಮೋದನೆ ಪಡೆಯಲಾಗಿದ್ದು ಇದುವರೆಗೆ ರೂ. 30.35 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ಕಟ್ಟಡ ಕಾಮಗಾರಿಯನ್ನು ಪಿ.ಆರ್.ಇ.ಡಿ, ತುಮಕೂರು ಇವರಿಗೆ ನೀಡಲಾಗಿದ್ದು ಮಾರ್ಚ್ 2021ರ ಅಂತ್ಯದ ವೇಳೆಗೆ ಕಾಮಗಾರಿ ಪ್ಲಾಸ್ಟಿಂಗ್ ಹಂತದಲ್ಲಿರುತ್ತದೆ. ಸಖಿ ಯೋಜನೆಯ ಘಟಕ ಆಡಳಿತಾಧಿಕಾರಿ–01, ಸಮಾಲೋಚಕರು–01, ಸಮಾಜ ಸೇವಾ ಕಾರ್ಯಕರ್ತರು–02, ಕಾನೂನು ಸಲಹೆಗಾರರು–02, ಸ್ವಚ್ಛತಾಗಾರರು–01 ಹುದ್ದೆಗಳನ್ನು ತಾತ್ಕಾಲಿಕ ಸಿಬ್ಬಂದಿಗಳಿಂದ ಭರ್ತಿ ಮಾಡಲಾಗಿರುತ್ತದೆ.

- **<u>ಕೌಟುಂಬಿಕ ದೌರ್ಜನ್ಯ ತಡೆಕಾಯ್ದೆ:</u>** ಕೌಟುಂಬಿಕ ದೌರ್ಜನ್ಯಕ್ಕೊಳಗಾದ ಮಹಿಳೆಯರಿಗೆ ಸಂಬಂಧಿಸಿದಂತೆ ರಕ್ಷಣೆ/ ನ್ಯಾಯ ಒದಗಿಸುವ ಉದ್ದೇಶದಿಂದ ಭಾರತ ಸರ್ಕಾರವು ಕೌಟುಂಬಿಕ ಹಿಂಸೆಯಿಂದ ಮಹಿಳೆಯರನ್ನು ರಕ್ಷಿಸುವ ಅಧಿನಿಯಮ 2005 ಹಾಗೂ ನಿಯಮ 2006ನ್ನು ಜಾರಿಗೆ ತಂದಿರುತ್ತದೆ. ಸದರಿ ಯೋಜನೆಯಡಿ ಜಿಲ್ಲಾಮಟ್ಟದಲ್ಲಿ 01– ಕಂಪ್ಯೂಟರ್ ಆಪರೇಟರ್ ಹಾಗೂ 01 ಮಸೆಂಜರ್ ಹಾಗೂ 11 ಶಿಶು ಅಭಿವೃದ್ಧಿ

ಯೋಜನೆಗಳಲ್ಲಿ 11– ಕಂಪ್ಯೂಟರ್ ಆಪರೇಟರ್ ಮತ್ತು 11 ಮೆಸೆಂಜರ್‌ಗಳು ಕಾರ್ಯನಿರ್ವಹಿಸುತ್ತಿದ್ದು, ಸದರಿ ಸಿಬ್ಬಂದಿಗಳ ಗೌರವಧನಕ್ಕಾಗಿ ರೂ. 27.36 ಲಕ್ಷಗಳು ಬಿಡುಗಡೆಯಾಗಿದ್ದು ರೂ. 26.90 ಲಕ್ಷಗಳು ಖರ್ಚಾಗಿರುತ್ತದೆ. 2020–21ನೇ ಸಾಲಿನಲ್ಲಿ ಒಟ್ಟು 153 ಪ್ರಕರಣಗಳು ದಾಖಲಾಗಿದ್ದು, 74 ಪ್ರಕರಣಗಳನ್ನು ಸಮಾಲೋಚನೆ ಮೂಲಕ ಇತ್ಯರ್ಥಪಡಿಸಲಾಗಿರುತ್ತದೆ. 35 ಪ್ರಕರಣಗಳಿಗೆ ನ್ಯಾಯಾಲಯದಲ್ಲಿ ಡಿ.ಐ.ಆರ್ ದಾಖಲಿಸಲಾಗಿದ್ದು ವರ್ಷಾಂತ್ಯದಲ್ಲಿ 44 ಪ್ರಕರಣಗಳು ಸಂರಕ್ಷಣಾಧಿಕಾರಿಗಳ ಹಂತದಲ್ಲಿ ಬಾಕಿ ಇರುತ್ತವೆ.

- **<u>ಬಾಲ್ಯವಿವಾಹ ನಿಷೇದ:</u>** ಬಾಲ್ಯವಿವಾಹದಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ರೇಡಿಯೋ ಕಾರ್ಯಕ್ರಮ, ಹೋರ್ಡಿಂಗ್ ಅಳವಡಿಸುವುದು, ಗೋಡೆ ಬರಹ, ಕರಪತ್ರಗಳು, ಬ್ರೋಷರ್‌ಗಳು, ಬೀದಿ ನಾಟಕ, ಕಲಾ ಜಾಥಾ ಮತ್ತು ಸೈಕಲ್ ಜಾಥಾಗಳ ಮೂಲಕ ಅರಿವು ಮೂಢಿಸಲಾಗುತ್ತಿದೆ. ಬಾಲ್ಯವಿವಾಹಕ್ಕೆ ಸಂಬಂಧಪಟ್ಟಂತೆ ದೂರಗಳು ಸ್ವೀಕೃತಗೊಂಡ ಸಂದರ್ಭದಲ್ಲಿ ನಿಷೇದಾಧಿಕರಿಗಳು ತಕ್ಷಣ ಕಾರ್ಯಪ್ರವೃತ್ತರಾಗಿ ಬಾಲ್ಯವಿವಾಹನಗಳನ್ನು ತಡೆಯಲು, ಬಾಲ್ಯವಿವಾಹಗಳು ನಡೆದಿದ್ದಲ್ಲಿ ಸಂಬಂಧಿಸಿದವರ ವಿರುದ್ಧ ಎಫ್.ಐ.ಆರ್ ದಾಖಲಿಸಲು ಕ್ರಮವಹಿಸುತ್ತಿದ್ದಾರೆ. 2020–21ನೇ ಸಾಲಿನಲ್ಲಿ ಒಟ್ಟು 123 ಬಾಲ್ಯ ವಿವಾಹಗಳನ್ನು ತಡೆಹಿಡಿಯಲಾಗಿದ್ದು, 07 ಬಾಲ್ಯವಿವಾಹಗಳು ನಡೆದಿದ್ದು, 07 ಪ್ರಕರಣಗಳಲ್ಲಿ ಎಫ್.ಐ.ಆರ್ ದಾಖಲಿಸಲಾಗಿರುತ್ತದೆ.

- **<u>ಪೋಷಣ್ ಅಭಿಯಾನ್</u>**: ಪೋಷಣ್ ಅಭಿಯಾನ ಕಾರ್ಯಕ್ರಮವು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಎಲ್ಲಾ ಪೌಷ್ಟಿಕತೆಯ ಯೋಜನೆಗಳನ್ನು ಒಗ್ಗೂಡಿಸುವ ಕಾರ್ಯಕ್ರಮವಾಗಿದೆ. 0–6 ವರ್ಷದ ಮಕ್ಕಳು, ಗರ್ಭಿಣಿಯರು ಮತ್ತು ಬಾಣಂತಿಯರ ಪೌಷ್ಟಿಕತೆಯ ಸ್ಥಿತಿಯನ್ನು ನಿರ್ಧಿಷ್ಟ ಅವಧಿಗೆ ಅನುಗುಣವಾಗಿ ಸುಧಾರಿಸುವುದು. ಈ ಯೋಜನೆಯ ಮುಖ್ಯವಾದ ಉದ್ದೇಶವಾಗಿದೆ. ಸದರಿ ಯೋಜನೆಯು 2017–18ನೇ ಸಾಲಿನಲ್ಲಿ ಪ್ರಾರಂಭವಾಗಿದ್ದು, ಈ ಯೋಜನೆಯನ್ನು ಸಾನ್ಮನ್ಯ ಪ್ರಧಾನ ಮಂತ್ರಿಗಳು ದಿನಾಂಕ: 08–03–2018ರಂದು ಚಾಲನೆ ನೀಡಿರುತ್ತಾರೆ. ಸದರಿ ಯೋಜನೆಯು ಜಿಲ್ಲೆಯಲ್ಲಿ 2019–20ನೇ ಸಾಲಿನಲ್ಲಿ ಪ್ರಾರಂಭವಾಗಿದ್ದು, ಸದರಿ ಯೋಜನೆಯನ್ನು ಅನುಷ್ಠಾನಗೊಳಸಲು ತರಬೇತಿ ಹಾಗೂ ಇತರೆ ವೆಚ್ಚಕ್ಕಾಗಿ 2020–21ನೇ ಸಾಲಿನಲ್ಲಿ ರೂ. 150.91ಲಕ್ಷಗಳು ಬಿಡುಗಡೆಯಾಗಿದ್ದು, ರೂ. 134.71ಲಕ್ಷಗಳು ಖರ್ಚು ಭರಿಸಲಾಗಿರುತ್ತದೆ.

<u>ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ:</u>

- **<u>ಉದ್ಯೋಗಿನಿ ಯೋಜನೆ:</u>** ಸಮಾಜದಲ್ಲಿ ಆರ್ಥಿಕವಾಗಿ ಹಿಂದುಳಿದಿರುವ 18 ರಿಂದ 55 ವರ್ಷದೊಳಗಿನ ಮಹಿಳೆಯರು ಆದಾಯ ಉತ್ಪನ್ನಕರ ಚಟುವಟಿಕೆಗಳಲ್ಲಿ ತೊಡಗಿ ಸ್ವಯಂ ಉದ್ಯೋಗಿಗಳಾಗಲು ನಿಗಮದಿಂದ ಸಹಾಯಧನ ಮತ್ತು ಬ್ಯಾಂಕುಗಳಿಂದ ಸಾಲವನ್ನು ಒದಗಿಸಿಕೊಡುವುದು ಉದ್ಯೋಗಿನಿ ಯೋಜನೆಯ ಮುಖ್ಯ ಉದ್ದೇಶವಾಗಿದೆ.

- ಎಸ್.ಸಿ ಮತ್ತು ಎಸ್.ಟಿ ಫಲಾನುಭವಿಗಳಿಗೆ ಸಾಲದ ಘಟಕ ವೆಚ್ಚ ಗರಿಷ್ಠ ರೂ.300000/– ಸಹಾಯಧನದ ಮೊತ್ತ ಶೇ. 50% ಅಥವಾ ಗರಿಷ್ಠ 150000/– ಸಹಾಯಧನವನ್ನು ನಿಗಮದಿಂದ ಸಂಬಂಧಿಸಿದ ಬ್ಯಾಂಕುಗಳಿಗೆ ನೀಡಲಾಗುತ್ತದೆ.

- ವಿಧವೆ, ವಿಕಲಚೇತನ, ಅಂಗವಿಕಲರು ಮತ್ತು ಸಾಮಾನ್ಯ ಮಹಿಳೆಯರಿಗೆ ಸಾಲದ ಘಟಕ ವೆಚ್ಚ ಗರಿಷ್ಠ ರೂ.300000/– ಸಹಾಯಧನದ ಮೊತ್ತ ಶೇ. 30% ಅಥವಾ ಗರಿಷ್ಠ 90000/– ಸಹಾಯಧನವನ್ನು ನಿಗಮದಿಂದ ಸಂಬಂಧಿಸಿದ ಬ್ಯಾಂಕುಗಳಿಗೆ ನೀಡಲಾಗುತ್ತದೆ.

2020–21ನೇ ಸಾಲಿನಲ್ಲಿ ಭೌತಿಕ ಗುರಿ–70 ಇದ್ದು ಆರ್ಥಿಕ ಗುರಿ–8212500 ಇರುತ್ತದೆ. ಇದುವರೆವಿಗೂ ಭೌತಿಕ ಸಾಧನೆ–6 ಆರ್ಥಿಕ ಸಾಧನೆ ರೂ.370000/– ಆಗಿರುತ್ತದೆ.

- **<u>ಕಿರುಸಾಲ (ಮೈಕ್ರೋ ಕ್ರೆಡಿಟ್) ಯೋಜನೆ:</u>** ಸ್ತ್ರೀ ಶಕ್ತಿ ಸ್ವ–ಸಹಾಯ ಗುಂಪಿನ ಸದಸ್ಯರುಗಳು ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಪ್ರತಿ ಗುಂಪಿಗೆ ಬಡ್ಡಿರಹಿತವಾಗಿ ರೂ.2.00 ಲಕ್ಷಗಳ ಸಾಲವನ್ನು ಆರ್.ಟಿ.ಜಿ.ಎಸ್ ಮೂಲಕ ನೇರವಾಗಿ ಸ್ತ್ರೀ ಶಕ್ತಿ ಗುಂಪಿನ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗುತ್ತದೆ.

2020–21ನೇ ಸಾಲಿನಲ್ಲಿ ಭೌತಿಕ ಗುರಿ–14 ಇದ್ದು, ಆರ್ಥಿಕ ಗುರಿ–3900000 ಇರುತ್ತದೆ. ಇದುವರೆವಿಗೂ ಭೌತಿಕ ಸಾಧನೆ–12 ಆರ್ಥಿಕ ಸಾಧನೆ ರೂ. 3180000/– ಆಗಿರುತ್ತದೆ.

- **<u>ದಮನಿತ ಯೋಜನೆ:</u>** ಚೇತನ ಯೋಜನೆಯಡಿ 18 ರಿಂದ 60 ವರ್ಷದೊಳಗಿನ ದಮನಿತ ಮಹಿಳೆಯರಿಗೆ ಆದಾಯೊತ್ಪನ್ನ ಚಟುವಟಿಕೆಗಳನ್ನು ಕೈಗೊಳ್ಳಲು ಅನುವಾಗುವಂತೆ ನಿಗಮದಿಂದ ನೇರವಾಗಿ ಪ್ರತಿ ಎಸ್.ಸಿ ಮತ್ತು ಎಸ್.ಟಿ ಫಲಾನುಭವಿಗಳಿಗೆ ರೂ.1.00 ಲಕ್ಷ ಗಳ ನೇರ ಸಾಲ ಮತ್ತು ಸಹಾಯಧನವನ್ನು ನಿಗಮದಿಂದ ನೇರವಾಗಿ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗುತ್ತದೆ. ಇದರಲ್ಲಿ ರೂ.50.000/– ಸಾಲ ಮತ್ತು ರೂ.50.000/–ಗಳನ್ನು ಸಹಾಯಧನವನ್ನು ಮತ್ತು ಇತರೆ ಫಲಾನುಭವಿಗಳಿಗೆ ರೂ.50.000/– ಇದರಲ್ಲಿ ರೂ.25.000/– ಸಾಲ ರೂ.25000/– ಸಹಾಯಧನವನ್ನು ಈ ಯೋಜನೆಯಡಿ ನೀಡಲಾಗುವುದು. ಫಲಾನುಭವಿಗಳು 25 ಕಂತುಗಳಲ್ಲಿ ಸಾಲ ನಿಗಮಕ್ಕೆ ಮರುಪಾವತಿಸಬೇಕಿರುತ್ತದೆ.

2020–21ನೇ ಸಾಲಿನಲ್ಲಿ ಭೌತಿಕ ಗುರಿ–11 ಇದ್ದು ಆರ್ಥಿಕ ಗುರಿ–550000 ಇರುತ್ತದೆ. ಇದುವರೆವಿಗೂ ಭೌತಿಕ ಸಾಧನೆ–09 ಆರ್ಥಿಕ ಸಾಧನೆ ರೂ.450000/– ಆಗಿರುತ್ತದೆ.

- **<u>ಧನಶ್ರೀ ಯೋಜನೆ:</u>** 2016–17ನೇ ಸಾಲಿನಿಂದ **"ಧನಶ್ರೀ"** ಎಂಬ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯಡಿ ಕರ್ನಾಟಕ ರಾಜ್ಯದಲ್ಲಿ ವಾಸಿಸುತ್ತಿರುವ 18–60 ವಯೋಮಿತಿಯ ಹೆಚ್.ಐ.ವಿ ಸೋಂಕಿತ ಮಹಿಳೆಯರಿಗೆ ಸ್ವಯಂ ಉದ್ಯೋಗ ಕೈಗೊಂಡು ಅಭಿವೃದ್ಧಿ ಹೊಂದಲು ಪ್ರೇರೇಪಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ. ಪ್ರತಿ ಫಲಾನುಭವಿಗೆ ರೂ.50.000/–ಗಳ ನೇರ ಸಾಲ ಮತ್ತು ಸಹಾಯಧನವನ್ನು ನಿಗಮದಿಂದ ನೇರವಾಗಿ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗುತ್ತದೆ. ಇದರಲ್ಲಿ ರೂ.25.000/– ಸಾಲ ಮತ್ತು ರೂ.25.000/–ಗಳನ್ನು ಸಹಾಯಧನವನ್ನು ಈ ಯೋಜನೆಯಡಿ ನೀಡಲಾಗುವುದು. ಫಲಾನುಭವಿಗಳು 25 ಕಂತುಗಳಲ್ಲಿ ಸಾಲ ನಿಗಮಕ್ಕೆ ಮರುಪಾವತಿಸಬೇಕಿರುತ್ತದೆ.

2020–21ನೇ ಸಾಲಿನಲ್ಲಿ ಭೌತಿಕ ಗುರಿ–15 ಇದ್ದು ಆರ್ಥಿಕ ಗುರಿ–750000 ಇರುತ್ತದೆ. ಇದುವರೆವಿಗೂ ಭೌತಿಕ ಸಾಧನೆ–13 ಆರ್ಥಿಕ ಸಾಧನೆ–650000 ರೂ./– ಆಗಿರುತ್ತದೆ.

- **<u>ಲಿಂಗತ್ವ ಅಲ್ಪಸಂಖ್ಯಾತರ ಪುನರ್ವಸತಿ ಯೋಜನೆ:</u>** ಲಿಂಗತ್ವ ಅಲ್ಪಸಂಖ್ಯಾತರು ಗೌರವಾನ್ವಿತ ಜೀವನವನನ್ನು ನಡೆಸಲು ಹಾಗೂ ಸಮಾಜದ ಮುಖ್ಯವಾಹಿನಿಗೆ ತರುವ ಉದ್ದೇಶದಿಂದ ನಿಗಮದಿಂದ 2012–13ನೇ ಸಾಲಿನಿಂದ ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ವೈಯಕ್ತಿಕವಾಗಿ ಸ್ವಯಂ ಉದ್ಯೋಗ ಕೈಗೊಳ್ಳಲು ಪ್ರತಿ ಫಲಾನುಭವಿಗೆ ರೂ.50.000/–ಗಳ ನೇರ ಸಾಲ ಮತ್ತು ಸಹಾಯಧನವನ್ನು ನಿಗಮದಿಂದ ನೇರವಾಗಿ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗುತ್ತದೆ. ಇದರಲ್ಲಿ ರೂ.25.000/– ಸಾಲ ಮತ್ತು ರೂ.25.000/–ಗಳನ್ನು ಸಹಾಯಧನವನ್ನು ಈ ಯೋಜನೆಯಡಿ ನೀಡಲಾಗುವುದು. ಫಲಾನುಭವಿಗಳು 25 ಕಂತುಗಳಲ್ಲಿ ಸಾಲ ನಿಗಮಕ್ಕೆ ಮರುಪಾವತಿಸಬೇಕಿರುತ್ತದೆ.

2020–21ನೇ ಸಾಲಿನಲ್ಲಿ ಭೌತಿಕ ಗುರಿ–25 ಇದ್ದು ಆರ್ಥಿಕ ಗುರಿ–1250000 ಇರುತ್ತದೆ. ಇದುವರೆವಿಗೂ ಭೌತಿಕ ಸಾಧನೆ–24 ಆರ್ಥಿಕ ಸಾಧನೆ–1200000 ರೂ./– ಆಗಿರುತ್ತದೆ.

- **<u>ಮಹಿಳಾ ಶಕ್ತಿ ಕೇಂದ್ರ ಯೋಜನೆ.</u>**

ಕೌಶಲ್ಯ ಅಭಿವೃದ್ಧಿ, ಉದ್ಯೋಗ, ಡಿಜಿಟಲ್ ಸಾಕ್ಷರತೆ, ಆರೋಗ್ಯ ಮತ್ತು ಪೌಷ್ಟಿಕತೆಗಳ ಮೂಲಕ ಗ್ರಾಮೀಣ ಮಹಿಳೆಯರನ್ನು ಸಬಲೀಕರಣಗೊಳಿಸಲು ಒಂದೇ ಕಡೆ ಎಲ್ಲಾ ಸಹಾಯ ಸೇವೆಗಳನ್ನು ನೀಡುವ ಸಲುವಾಗಿ ಮಹಿಳಾ ಶಕ್ತಿ ಕೇಂದ್ರ ಯೋಜನೆಯನ್ನು 2017–18ನೇ ಸಾಲಿನಲ್ಲಿ ಅನುಷ್ಟಾನಗೊಳಿಸಲಾಯಿತು. ಗ್ರಾಮೀಣ ಮಹಿಳೆಯರು ತಮ್ಮ ಅರ್ಹತೆ ಮತ್ತು ಅಧಿಕಾರಗಳನ್ನು ಪಡೆಯಲು ಜಾಗೃತಿ ಮೂಢಿಸುವುದು, ತರಬೇತಿ ಮತ್ತು ಸಾಮರ್ಥ್ಯ ನಿರ್ಮಾಣದ ಮೂಲಕ

ಸರ್ಕಾರದ ಇಲಾಖೆಯನ್ನು ಸಂಪರ್ಕಿಸಲು ಒಂದು ಇಂಟರ್‌ಫೇಸ್ ಆಗಿ ಕಾರ್ಯನಿರ್ವಹಿಸುವುದಾಗಿದೆ ಹಾಗೂ ಲಿಂಗ ಸಮಾನತೆ ಚೈತನ್ಯವನ್ನು ಉತ್ತೇಜಿಸಿ **"ಬದಲಾವಣೆಯ ಏಜೆಂಟ್"** ಆಗಿ ಸೇವೆ ಸಲ್ಲಿಸುವುದಾಗಿದೆ.

ಮಹಿಳೆಯರ ಸಬಲೀಕರಣಕ್ಕಾಗಿ (ಬಿಬಿಬಿಪಿ, ಮಹಿಳಾ ವಿಶೇಷ ಚಿಕಿತ್ಸಾ ಘಟಕ, ಮಹಿಳಾ ಸಹಾಯವಾಣಿ, ಮಹಿಳಾ ಪೋಲೀಸ್ ಸ್ವಯಂ ಸೇವಕರು, ಸ್ವಾಧಾರ್ ಮತ್ತು ಉಜ್ವಲ ಇತ್ಯಾದಿಗಳು.) ಸರ್ಕಾರದಲ್ಲಿ ಮಹಿಳೆಯರಿಗಾಗಿ ಮೀಸಲಿರುವ ಯೋಜನೆಗಳು, ಕಾರ್ಯಕ್ರಮಗಳು ಮತ್ತು ಸೇವೆಗಳ ಮಾಹಿತಿಯನ್ನು ಒದಗಿಸಲು ಜಿಲ್ಲಾ ಮಟ್ಟದ ಮಹಿಳಾ ಕೇಂದ್ರವನ್ನು ಸ್ಥಾಪಿಸಲಾಗಿದೆ.

2020–21 ನೇ ಸಾಲಿನ ತುಮಕೂರು ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯ ಆಡಳಿತ ವರದಿ.

ತುಮಕೂರು ಜಿಲ್ಲೆಯಲ್ಲಿ ಪಶುಪಾಲನಾ ಇಲಾಖೆಯು ಜಾನುವಾರು ಆರೋಗ್ಯ ರಕ್ಷಣೆ ಹಾಗೂ ಸಂಪತ್ತಿನ ಅಭಿವೃದ್ಧಿಗೆ ಸಂಬಂಧಿಸಿದಂತೆ ವಿವಿಧ ಕಾರ್ಯಗಳನ್ನು ಅನುಷ್ಠಾನಗೊಳಿಸಲು 250 ಪಶು ಸಂಸ್ಥೆಗಳಿರುತ್ತವೆ. ರೈತಾಪಿ ಜನರ ಆರ್ಥಿಕ ಅಭಿವೃದ್ಧಿಗಾಗಿ ಇಲಾಖೆಯು ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುತ್ತದೆ. ಇಲಾಖೆಯಲ್ಲಿ ಒಟ್ಟು 968 ಹುದ್ದೆಗಳು ಮಂಜೂರಾಗಿದ್ದು, ಅದರಲ್ಲಿ 579 ಹುದ್ದೆಗಳು ಭರ್ತಿಯಾಗಿರುತ್ತದೆ. ಅಲ್ಲದೆ ಜಿಲ್ಲೆಯಲ್ಲಿ ಪಶುವೈದ್ಯಕೀಯ ಪರೀಕ್ಷಕರ ತರಬೇತಿ ಕೇಂದ್ರ, ಹಳ್ಳಿಕಾರ್ ತಳಿ ಅಭಿವೃದ್ಧಿ ಕ್ಷೇತ್ರ ಹಾಗೂ ಕುರಿ ಮಂಡಳಿ ಘಟಕಗಳು ಕಾರ್ಯನಿರ್ವಹಿಸುತ್ತಿವೆ. 19ನೇ ಜಾನುವಾರು ಗಣತಿ ಪ್ರಕಾರ ಜಿಲ್ಲೆಯಲ್ಲಿ 431251 ದನಗಳು, 142047 ಎಮ್ಮೆಗಳು, 1290008 ಕುರಿಗಳು, 427926 ಮೇಕೆಗಳು, 2107798 ಕೋಳಿಗಳು ಹಾಗೂ 5956 ಹಂದಿಗಳು ಪಶು ಸಂಪತ್ತಿನ ಗಣತಿಯಲ್ಲಿದ್ದು, ಕುರಿಗಳ *ಸಂಖ್ಯೆಯಲ್ಲಿ* ರಾಜ್ಯದಲ್ಲಿ ಮೊದಲನೆಯ ಸ್ಥಾನ ಹೊಂದಿರುತ್ತದೆ.

ಜಿಲ್ಲೆಯ ಕಡತಗಳ ಸುಗಮ ಹಾಗೂ ತುರ್ತಾಗಿ ವಿಲೇವಾರಿಗಾಗಿ ಗಣಕೀಕರಣ ಯಂತ್ರವನ್ನು ಉಪನಿರ್ದೇಶಕರ ಕಛೇರಿಯಲ್ಲಿ ಅಳವಡಿಸಲಾಗಿದೆ.

ಜಿಲ್ಲೆಯಲ್ಲಿನ ಪಶುಚಿಕಿತ್ಸಾ ಸಂಸ್ಥೆಗಳ ವಿವರ:

1) ಪಶು ಆಸ್ಪತ್ರೆಗಳು	–	44
2) ಪಶು ಚಿಕಿತ್ಸಾಲಯಗಳು	–	122
3) ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳು	–	74
4) ಸಂಚಾರಿ ಪಶು ಚಿಕಿತ್ಸಾಲಯಗಳು	–	10

ಇತರೆ ಸಂಸ್ಥೆಗಳು:

5) ಪಾಲಿಕ್ಲಿನಿಕ್	–	1
6) ಕೋಳಿ ವಿಸ್ತರಣಾ ಕೇಂದ್ರ	–	1
7) ಪಶುವೈದ್ಯಕೀಯ ಪರೀಕ್ಷಕರ ತರಬೇತಿ ಕೇಂದ್ರ (ರಾಜ್ಯವಲಯ)	–	1
8) ಕುರಿ ಅಭಿವೃದ್ಧಿ ಮಂಡಳಿ	–	1
9) ಹಳ್ಳಿಕಾರ್ ತಳಿ ಸಂವರ್ಧನಾ ಕೇಂದ್ರ ಕುಣಿಕೇನಹಳ್ಳಿ ತುರುವೇಕೆರೆ ತಾಲ್ಲೂಕು (ರಾಜ್ಯ ವಲಯ)	–	1

ಜಿಲ್ಲೆಯ ಪಶು ಆಸ್ಪತ್ರೆಗಳು ಮತ್ತು ಪಶುಚಿಕಿತ್ಸಾಲಯಗಳಲ್ಲಿ ಪದವೀಧರ ಪಶುವೈದ್ಯಾಧಿಕಾರಿಗಳು ಕಾರ್ಯನಿರ್ವಹಿಸುತ್ತಿರುತ್ತಾರೆ. ಇವರ ಸಹಾಯಕ್ಕೆ ಪ್ರತಿ ಕೇಂದ್ರಗಳಲ್ಲಿ ಜಾನುವಾರು ಅಧಿಕಾರಿಗಳು, ಹಿರಿಯ ಪಶುವೈದ್ಯಕೀಯ ಪರೀಕ್ಷಕರು, ಪಶುವೈದ್ಯಕೀಯ ಪರೀಕ್ಷಕರು, ಪಶುವೈದ್ಯಕೀಯ ಸಹಾಯಕರು ಹಾಗೂ ಡಿ. ದರ್ಜೆ ನೌಕರರ ಸಿಬ್ಬಂದಿ ವರ್ಗವಿರುತ್ತದೆ. ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳು ಆಯಾ ಸಂಸ್ಥೆಯ ವ್ಯಾಪ್ತಿಯ ಪಶು ಆಸ್ಪತ್ರೆ ಮತ್ತು ಪಶುಚಿಕಿತ್ಸಾಲಯದ ನಿಯಂತ್ರಣದಲ್ಲಿ ಕೆಲಸ ನಿರ್ವಹಿಸುತ್ತಿವೆ.

ಈ ಇಲಾಖೆಯಲ್ಲಿ ಜಾನುವಾರುಗಳ ಚಿಕಿತ್ಸೆ, ಕೃತಕ ಗರ್ಭಧಾರಣೆ ಹಾಗೂ ರೋಗಗಳ ವಿರುದ್ಧ ಲಸಿಕೆ ಕಾರ್ಯಕ್ರಮ ಮತ್ತು ಪಶು ಸಂಪತ್ತಿನ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ(ಪ್ರಗತಿ ವಿವರ ಈ ಕೆಳಕಂಡಂತಿದೆ).

2020–21 ನೇ ಸಾಲಿನಲ್ಲಿ ವಿವಿಧ ಯೋಜನೆಯಡಿಯಲ್ಲಿ ಸಾಧಿಸಿದ ಪ್ರಗತಿಯು ಈ ಕೆಳಕಂಡಂತಿದೆ

ತುಮಕೂರು ಜಿಲ್ಲೆಯಲ್ಲಿ ಜಾನುವಾರುಗಳಿಗೆ ಚಿಕಿತ್ಸೆ ನೀಡಲಾದ ವಿವರ

ಕ್ರ.ಸಂ.	ವಿವರಗಳು	2020–21
1	ಚಿಕಿತ್ಸೆ ನೀಡಲಾದ ಪ್ರಾಣಿಗಳ ಸಂಖ್ಯೆ	**770203**
2	ಕಸಿ ಮಾಡಿದ ಪ್ರಾಣಿಗಳ ಸಂಖ್ಯೆ	**118479**
3	ಚಪ್ಪೆ ರೋಗದ ವಿರುದ್ಧ ಲಸಿಕೆ ಹಾಕಿದ ಸಂಖ್ಯೆ	**16907**
4	ಕೊಕ್ಕರೆ ರೋಗದ ವಿರುದ್ಧ ಲಸಿಕೆ ಹಾಕಿದ ಸಂಖ್ಯೆ	**390193**
5	**ಗಳಲೆ ರೋಗದ ವಿರುದ್ದ ವಿರುದ್ಧ ಲಸಿಕೆ ಹಾಕಿದ ಸಂಖ್ಯೆ**	**1073089**
6	ಕುರಿಗಳ ಕರುಳು ಬೇನಿ ವಿರುದ್ಧ ಲಸಿಕೆ ಹಾಕಿದ ಸಂಖ್ಯೆ	**1582046**
7	ಕಾಲುಬಾಯಿ ಜ್ವರದ ವಿರುದ್ಧ ಲಸಿಕೆ ಹಾಕಿದ ಸಂಖ್ಯೆ	**494509**
8	ಕುರಿ ಸಿಡುಬು ವಿರುದ್ಧ ಲಸಿಕೆ ಹಾಕಿದ ಸಂಖ್ಯೆ	**89580**
9	ಎಫ್–1	**28633**
10	ನರಡಿ ರೋಗದ ವಿರುದ್ಧ ಲಸಿಕೆ ಹಾಕಿದ ಸಂಖ್ಯೆ	**39651**
11	ಜಂತು ನಾಶಕ ಔಷಧಿ ಕುಡಿಸಿದ ಸಂಖ್ಯೆ	**1051986**
12	ಕೃತಕ ಗರ್ಭಧಾರಣೆ ಮಾಡಿದ ಜಾನುವಾರುಗಳ ಸಂಖ್ಯೆ	**299066**
13	ಗರ್ಭ ತಪಾಸಣೆ ಮಾಡಿದ ಜಾನುವಾರುಗಳ ಸಂಖ್ಯೆ	**238943**
14	ಜನಿಸಿದ ಕರುಗಳ ಸಂಖ್ಯೆ	**792826**
15	ಮೇವು ಅಭಿವೃದ್ಧಿ (ಹೆಕ್ಟೇರುಗಳಲ್ಲಿ)	**9642**
16	ಪಿ.ಪಿ.ಆರ್. ಲಸಿಕೆ ಹಾಕಿದ ಸಂಖ್ಯೆ	**1021133**

1) ಕಟ್ಟಡಗಳು: 2403–00–101–0–28 ಯೋಜನೆ:

ಸದರಿ ಕಾರ್ಯಕ್ರಮದಡಿ ಅನುಮೋದಿಸಲಾಗಿದ್ದ ರೂ.80.00 ಲಕ್ಷಗಳಲ್ಲಿ, ಜಿಲ್ಲೆಯ 75 ವಿವಿಧ ಪಶು ಸಂಸ್ಥೆಗಳ ಕಟ್ಟಡಗಳ ದುರಸ್ತಿ ಮತ್ತು ಇತರೆ ಕಾಮಗಾರಿಗಳನ್ನು ಪಂಚಾಯತ್ ರಾಜ್ ಇಂಜನಿಯರಿಂಗ್ ವಿಭಾಗ ತುಮಕೂರು/ಮಧುಗಿರಿ ಇವರ ಮುಖಾಂತರ ಕಾಮಗಾರಿಗಳಿಗೆ ರೂ. 80.00 ಲಕ್ಷ ವೆಚ್ಚಗಳನ್ನು ಭರಿಸಲಾಗಿದೆ.

2) ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ, ತೆರೆಯುವುದು ಮತ್ತು ಉನ್ನತೀಕರಿಸುವುದು: 2403–00–101–0–61

ಸದರಿ ಯೋಜನೆಯಡಿ 69 ವಿವಿಧ ಪಶು ಸಂಸ್ಥೆಗಳಲ್ಲಿ **231** ವಿವಿಧ ವೃಂದದ ಹುದ್ದೆಗಳು ಮಂಜೂರಾಗಿರುತ್ತದೆ. ಸದರಿ ಕಾರ್ಯಕ್ರಮಕ್ಕೆ ರೂ. 3767.43 ಲಕ್ಷಗಳನ್ನು ನಿಗದಿಪಡಿಸಿದ್ದು, ಅದರಲ್ಲಿ ರೂ. 3478.62 ಲಕ್ಷಗಳನ್ನು ಖರ್ಚು ಭರಿಸಲಾಗಿದೆ.

3) ಆಸ್ಪತ್ರೆ ಮತ್ತು ಔಷದಾಲಯಗಳು :2403–00–101–0–27:ಯೋಜನೆ

ಈ ಯೋಜನೆಯಡಿ ರೂ. 143.58 ಲಕ್ಷಗಳು ನಿಗದಿಯಾಗಿದ್ದು, ಇದರಲ್ಲಿ ಜಿಲ್ಲೆಯಲ್ಲಿ 248 ವಿವಿಧ ಪಶು ಸಂಸ್ಥೆಗಳಿಗೆ ಅವಶ್ಯವಾಗಿ ಬೇಕಾದ 45000 ಲೀಟರ್ ದ್ರವಸಾರಜನಕ, ಔಷಧಿ ರಾಸಾಯನಿಕಗಳು ಹಾಗೂ ಇತರೆ ಸಾಮಗ್ರಿಗಳನ್ನು ಸರಬರಾಜು ಮಾಡಿ ರೂ. 143.58 ಲಕ್ಷಗಳನ್ನು ಖರ್ಚು ಮಾಡಲಾಗಿದೆ.

4) ವಿಸ್ತರಣಾ ಘಟಕಗಳನ್ನು ಬಲಪಡಿಸುವಿಕೆ:2403–00–101–0–30 ಯೋಜನೆ

ಸದರಿ ಯೋಜನೆಯಡಿಯಲ್ಲಿ ರೂ. 31.87 ಲಕ್ಷಗಳ ನಿಗದಿಯಾಗಿದ್ದು, ಅದರಲ್ಲಿ ರೂ. 31.87 ಲಕ್ಷಗಳ ವೆಚ್ಚವನ್ನು ಭರಿಸಿ ಪ್ರಗತಿ ಸಾಧಿಸಿದೆ. ಅದರಲ್ಲಿ 25 ಮಿಶ್ರತಳಿ ಹಸು ಮತ್ತು ಕರುಗಳ ಪ್ರದರ್ಶನವನ್ನು ಹಾಗೂ 4 ಹಾಲು ಕರೆಯುವ ಸ್ಪರ್ದೆ,01 ರೇಬೀಸ್ ಜಾಗೃತಿ ಶಿಬಿರ, 2 ಮುಖ್ಯ ಜಾನುವಾರುಗಳ ಜಾತ್ರೆಗಳಲ್ಲಿ ಉತ್ತಮ ರಾಸುಗಳಿಗೆ ಬಹುಮಾನ ವಿತರಣೆ,5700 ಆಸೀಲು ಕೋಳಿ ಮರಿಗಳ ವಿತರಣೆ ಹಾಗೂ ಜಿಲ್ಲೆಯ ಪ್ರಮುಖ 2 ಕೃಷಿ ಮತ್ತು ಕೈಗಾರಿಕಾ ವಸ್ತು ಪ್ರದರ್ಶನಗಳಲ್ಲಿ ಇಲಾಖಾ ಮಳಿಗೆಗಳನ್ನು ತೆರೆದು ರೈತಾಪಿ ಜನರಿಗೆ ಇಲಾಖೆಯ ಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಲಾಗಿದೆ.

5) ರಾಷ್ಟ್ರೀಯ ಜಾನುವಾರು ಮಿಷನ್ (ಓಐಒ): 2403–00106–0–03–422 ಯೋಜನೆ

ರಾಜ್ಯವಲಯದ ಸದರಿ ಯೋಜನೆಯಡಿಯಲ್ಲಿ ರೂ. 12.487 ಲಕ್ಷಗಳ ನಿಗಧಿಯಾಗಿದ್ದು, ಗ್ರಾಮೀಣ ಪ್ರದೇಶದ ಪರಿಶಿಷ್ಟ ಜಾತಿ ವರ್ಗದ ರೈತ ಫಲಾನುಭವಿಗಳಿಗೆ ಹಿತ್ತಲ ಕುರಿ ಸಾಕಾಣಿಕೆ ಭೌತಿಕ–10, ಆರ್ಥಿಕ–5.94, ಹಾಗೂ

ಹಿತ್ತಲ ಮೇಕೆ ಸಾಕಾಣಿಕೆ ಭೌತಿಕ–11, ಆರ್ಥಿಕ–6.534 ಒಟ್ಟು 21 ಫಲಾನುಭವಿಗಳಿಗೆ ರೂ. 12.47 ಲಕ್ಷ ವೆಚ್ಚದಲ್ಲಿ ಘಟಕಗಳನ್ನು ಒದಗಿಸಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ.

6) <u>ಪಶುವೈದ್ಯಕೀಯ ಪರೀಕ್ಷಕರ ತರಬೇತಿ ಕೇಂದ್ರ, ತುಮಕೂರು</u>

ತುಮಕೂರಿನಲ್ಲಿ ರಾಜ್ಯ ವಲಯ ಯೋಜನೆಯಲ್ಲಿ 1 ಪಶುವೈದ್ಯಕೀಯ ಪರೀಕ್ಷಕರ ತರಬೇತಿ ಕೇಂದ್ರ ಕೆಲಸ ನಿರ್ವಹಿಸುತ್ತಿದ್ದು, ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ತಾಂತ್ರಿಕ ಸಿಬ್ಬಂದಿಗಳಾದ ಜಾನುವಾರು ಅಧಿಕಾರಿ, ಹಿರಿಯ ಪಶುವೈದ್ಯಕೀಯ ಪರೀಕ್ಷಕರು, ಪಶುವೈದ್ಯಕೀಯ ಪರೀಕ್ಷಕರು ಹಾಗೂ ಪಶುವೈದ್ಯಕೀಯ ಸಹಾಯಕರಿಗೆ ಪುನಃಶ್ಚೇತನ ತರಬೇತಿ ನೀಡಲಾಗುತ್ತಿದೆ. ಹಾಗೂ ಜಿಲ್ಲೆಯ ಆಸಕ್ತ ರೈತರಿಗೆ ಹೈನುಗಾರಿಕೆ, ಕುರಿ/ಮೇಕೆ ಸಾಕಾಣಿಕೆ ಹಾಗೂ ಕೋಳಿ ಸಾಕಾಣಿಕೆ ಬಗ್ಗೆ 3 ದಿನಗಳ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ.

7) ತುರುವೇಕೆರೆ ತಾಲ್ಲೂಕು ಕುಣಿಕೇನಹಳ್ಳಿ ಕೇಂದ್ರದಲ್ಲಿ ಒಂದು ಹಳ್ಳಿಕಾರ್ ತಳಿ ಸಂವರ್ಧನಾ ಕೇಂದ್ರ ಇದ್ದು, ಹಳ್ಳಿಕಾರ್ ರಾಸುಗಳ ಅಭಿವೃದ್ಧಿ ಹಾಗೂ ಮೇವು ಅಭಿವೃದ್ಧಿ ಕಾರ್ಯವನ್ನು ನಿರ್ವಹಿಸುತ್ತಿದೆ.

ಜಿಲ್ಲಾ ಪಂಚಾಯತ್, ತುಮಕೂರು

ಕೃಷಿ ಇಲಾಖೆಯ 2020–21 ನೇ ಸಾಲಿನ ಆಡಳಿತಾತ್ಮಕ ವರದಿ

1. <u>ತುಮಕೂರು ಜಿಲ್ಲೆ ಹವಾಮಾನ ಮತ್ತು ಬೆಳೆ ಪರಿಸ್ಥಿತಿ :</u>

ತುಮಕೂರು ಜಿಲ್ಲೆಯ ವಾರ್ಷಿಕ ವಾಡಿಕೆ ಮಳೆ 669.3 ಮಿ.ಮೀ. ಆಗಿದ್ದು, ಪ್ರಸಕ್ತ [2020] ಸಾಲಿನಲ್ಲಿ 828.1 [ಶೇ.+24] ಮಿ.ಮೀ. ಮಳೆ ಆಗಿರುತ್ತದೆ. ಕಳೆದ [2019] ಸಾಲಿನಲ್ಲಿ 763 [ಶೇ.+11] ಮಿ.ಮೀ. ಮಳೆಯಾಗಿರುತ್ತದೆ. ಪ್ರಸಕ್ತ ಸಾಲಿನಲ್ಲಿ ವಾಡಿಕೆ ಮಳೆಗಿಂತ ಶೇ. +24 ರಷ್ಟು ಹೆಚ್ಚಿನ ಮಳೆಯಾಗಿರುತ್ತದೆ .

ತುಮಕೂರು ಜಿಲ್ಲೆಯ ವಾಡಿಕೆ ಮತ್ತು ವಾಸ್ತವಿಕ ಮಳೆ ವಿವರ – ಜನವರಿ 2020 ರಿಂದ 31 ಡಿಸೆಂಬರ್ 2020 ರವರೆಗೆ (ಮಿ.ಮೀ.ಗಳಲ್ಲಿ)

ಕ್ರ.ಸಂ	ತಾಲ್ಲೂಕು	ಪೂರ್ವ ಮುಂಗಾರು 2020 (ಜನವರಿ 2020 ರಿಂದ ಮೇ 2020 ರ ಅಂತ್ಯಕ್ಕೆ)			ಮುಂಗಾರು 2020 (ಜೂನ್ 1 2020 ರಿಂದ ಸೆಪ್ಟೆಂಬರ್ 30 2020 ರ ವರೆಗೆ)			ಹಿಂಗಾರು 2020 (ಅಕ್ಟೋಬರ್ ರಿಂದ 31 ಡಿಸೆಂಬರ್ 2020 ರ ವರೆಗೆ)			2020 ರ ಸರಾಸರಿ ಮಳೆ (ಜನವರಿಯಿಂದ 31 ಡಿಸೆಂಬರ್ 2020 ರ ವರೆಗೆ)		
		ವಾಡಿಕೆ ಮಳೆ	ವಾಸ್ತವಿಕ ಮಳೆ	ಶೇಕಡ	ವಾಡಿಕೆ ಮಳೆ	ವಾಸ್ತವಿಕ ಮಳೆ	ಶೇಕಡ	ವಾಡಿಕೆ ಮಳೆ	ವಾಸ್ತವಿಕ ಮಳೆ	ಶೇಕಡ	ವಾಡಿಕೆ ಮಳೆ	ವಾಸ್ತವಿಕ ಮಳೆ	ಶೇಕಡ
1	ಚಿಕ್ಕನಾಯಕನ ಹಳ್ಳಿ	145	140	-4	398	427	7	218	150	-31	760	717	-6
2	ಗುಬ್ಬಿ	153	141	-8	439	516	17	217	146	-33	809	803	-1
3	ಕುಣಿಗಲ್	180	215	19	437	469	7	208	226	9	825	909	10
4	ತಿಪಟೂರು	174	151	-13	323	565	75	233	170	-27	730	886	21
5	ತುಮಕೂರು	130	154	18	489	615	26	210	147	-30	830	916	10
6	ತುರುವೇಕೆರೆ	160	174	9	373	485	30	239	196	-18	772	855	11
7	ಕೊರಟಗೆರೆ	153	122	-20	418	582	39	206	159	-23	777	864	11
8	ಮಧುಗಿರಿ	122	94	-23	401	585	46	207	186	-10	730	864	18
9	ಪಾವಗಡ	104	101	-3	324	565	74	184	156	-15	611	821	34
10	ಶಿರಾ	119	96	-20	344	490	43	175	154	-12	638	740	16
ಒಟ್ಟು		125	134	8	358	527	47	186	167	-10	669	828	24

ಜಿಲ್ಲೆಯಲ್ಲಿ 2020 ನೇ ಸಾಲಿನಲ್ಲಿ ಉತ್ತಮ ಮಳೆಯಾಗಿದ್ದು ಜಿಲ್ಲೆಯಾದ್ಯಂತ ಮುಂಗಾರು ಹಂಗಾಮಿನಲ್ಲಿ 381300 ಹೆ. ಪ್ರದೇಶದಲ್ಲಿ ವಿವಿಧ ಬೆಳೆಗಳ ಬಿತ್ತನೆ ಗುರಿಗೆ, 360785 ಹೆ. (ಶೇ.95) ರಷ್ಟು ಬಿತ್ತನೆಯಾಗಿರುತ್ತದೆ. ಪ್ರಮುಖವಾಗಿ ರಾಗಿ ಬಿತ್ತನೆಗೆ 150000 ಹೆಕ್ಟೇರ್ ಗುರಿಯಿದ್ದು, ಸುಮಾರು 154900 ಹೆ. [ಶೇ.103] ರಷ್ಟು ಬಿತ್ತನೆಯಾಗಿರುತ್ತದೆ. ಶೇಂಗಾ ಬೆಳೆಯ ಬಿತ್ತನೆಗೆ 122027 ಹೆಕ್ಟೇರ್ ಗುರಿಯಿದ್ದು, 121314 ಹೆ. [ಶೇ.99] ಪ್ರದೇಶದಲ್ಲಿ ಬಿತ್ತನೆಯಾಗಿರುತ್ತದೆ.

ಕ್ರ.ಸಂ	ಬೆಳೆಗಳು	ಮುಂಗಾರು ಹಂಗಾಮು		ಹಿಂಗಾರು ಹಂಗಾಮು		ಬೇಸಿಗೆ ಹಂಗಾಮು	
		ಕ್ಷೇತ್ರ (ಹೆ)	ಉತ್ಪಾದನೆ (ಮೆ.ಟನ್)	ಕ್ಷೇತ್ರ (ಹೆ)	ಉತ್ಪಾದನೆ (ಮೆ.ಟನ್)	ಕ್ಷೇತ್ರ (ಹೆ)	ಉತ್ಪಾದನೆ (ಮೆ.ಟನ್)
1	ಏಕದಳ ಧಾನ್ಯ ಬೆಳೆಗಳು	193627	432000	386	306	717	3380
2	ದ್ವಿದಳ ಧಾನ್ಯ ಬೆಳೆಗಳು	42527	35000	2238	1100	5	0.15
3	ಎಣ್ಣೆಕಾಳು ಬೆಳೆಗಳು	123334	85000	0	0	791	1700
4	ವಾಣಿಜ್ಯ ಬೆಳೆಗಳು	1297	240	0	0	0	0
	ಒಟ್ಟು	**360785**	**552240**	**2624**	**1406**	**1513**	**5080.15**

1. <u>2020–21 ನೇ ಸಾಲಿನಲ್ಲಿ ಜಿಲ್ಲಾ ವಲಯದ ವಿವಿಧ ಯೋಜನೆಗಳಲ್ಲಿ ಸಾಧಿಸಿದ ಪ್ರಗತಿ :</u>

ಎ) <u>ಕೃಷಿ ಕಛೇರಿ ಕಟ್ಟಡಗಳ ಕಾರ್ಯಕ್ರಮ</u> : (ಜಿ.ವ)

ಈ ಯೋಜನೆಯಡಿಯಲ್ಲಿ ರೂ.30.00 ಲಕ್ಷ ಅನುದಾನವನ್ನು ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗಕ್ಕೆ ಬಿಡುಗಡೆ ಮಾಡಲಾಗಿದ್ದು, ರೂ.30.00 ಲಕ್ಷ ಅನುದಾನವನ್ನು ವೆಚ್ಚ ಮಾಡಲಾಗಿದೆ. ಲೆಕ್ಕ ಶೀರ್ಷಿಕೆ:2435–00–101–0–33 (ಉಪ ಶೀರ್ಷಿಕೆ 140)

ಕ್ರ. ಸಂ	ತಾಲ್ಲೂಕು	ನಿಗಧಿಯಾದ ಅನುದಾನ (ರೂ.ಲಕ್ಷಗಳಲ್ಲಿ)	ಕಾಮಗಾರಿ ವಿವರ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಷರಾ
1	**2**	**3**	**4**	**5**	**6**
1	ಕುಣಿಗಲ್	3.00	ಸ.ಕೃ.ನಿ. ನೂತನ ಕಛೇರಿಯ ಮುಂಭಾಗ ಸಿಮೆಂಟ್ ಕಾಂಕ್ರೀಟ್ ಹಾಕುವ ಕಾಮಗಾರಿ.	1.50	ಕಾಮಗಾರಿ ಪೂರ್ಣಗೊಂಡಿದೆ
			ಅಮೃತೂರು ರೈತ ಸಂಪರ್ಕ ಕೇಂದ್ರದ ನೂತನ ಕಟ್ಟಡದ ಮುಂಭಾಗ ಕಾಂಪೌಂಡ್ ಮತ್ತು ಗೇಟ್ ನಿರ್ಮಾಣ ಕಾಮಗಾರಿ.	1.50	
2	ತಿಪಟೂರು	3.00	ಸ.ಕೃ.ನಿ. ಕಛೇರಿಯ ನೆಲಹಾಸು, ವೆಟ್ರಿಫೈಡ್ ಟೈಲ್ಸ್ ಹಾಕುವುದು ಹಾಗೂ ಬಿ.ಹೆಚ್. ರಸ್ತೆಯಿಂದ ಕಛೇರಿಯವರೆಗೆ ಸಿ.ಸಿ. ರಸ್ತೆ ನಿರ್ಮಾಣ ಮಾಡುವುದು ಮತ್ತು ಮೇಲ್ಛಾವಣಿ ರಿಪೇರಿ.	1.00	ಕಾಮಗಾರಿ ಪೂರ್ಣಗೊಂಡಿದೆ
			ಹೊನ್ನವಳ್ಳಿ ರೈತ ಸಂಘರ್ಕ ಕೇಂದ್ರದ ಕಾಂಪೌಂಡ್ ಒಳಗೆ ಮಣ್ಣನ್ನು ತುಂಬಿ ನೆಲವನ್ನು ಸಮ ಮಾಡಿ ಕಾಂಕ್ರೀಟ್ ಹಾಕುವುದು.	1.00	
			ನೊಣವಿನಕೆರೆ ರೈತ ಸಂಪರ್ಕ ಕೇಂದ್ರದ ಕಛೇರಿ ಮುಂದೆ ಕಾಂಕ್ರೀಟ್ ರಸ್ತೆ ನಿರ್ಮಾಣ ಮಾಡುವುದು.	1.00	
3	ತುಮಕೂರು	**3.00**	ರೈತ ಸಂಪರ್ಕ ಕೇಂದ್ರ ಕಟ್ಟಡದ ಮೇಲ್ಛಾವಣಿ ದುರಸ್ಥಿ ಕಾಮಗಾರಿ	2.50	ಕಾಮಗಾರಿ ಪೂರ್ಣಗೊಂಡಿದೆ.

			ಸ.ಕೃ.ನಿ. ಕಛೇರಿ ಶೌಚಾಲಯಕ್ಕೆ ನೀರಿನ ಟ್ಯಾಂಕ್ ಮತ್ತು ಪೈಪ್‌ಲೈನ್ ರಿಪೇರಿ	0.50	
4	ಗುಬ್ಬಿ	**3.00**	ಸ.ಕೃ.ನಿ. ಕಛೇರಿಯ ಕಟ್ಟಡದ ಮೇಲೆ ಛಾವಣಿಯ ಚುರ್ಕಿ ಕಾಮಗಾರಿ	2.50	ಕಾಮಗಾರಿ ಪೂರ್ಣಗೊಂಡಿದೆ
			ಸ.ಕೃ.ನಿ. ಕಛೇರಿಯ ಆವರಣದಲ್ಲಿ ಗುಂಡಿ ಮುಚ್ಚಿ ಸಮತಟ್ಟು ಮಾಡುವುದು	0.50	
5	ತುರುವೇಕೆರೆ	3.00	ಕಸಬಾ ರೈತ ಸಂಪರ್ಕ ಕೇಂದ್ರದ ಕಾಂಪೌಂಡ್ ನಿರ್ಮಾಣ ಕಾಮಗಾರಿ.	2.00	ಕಾಮಗಾರಿ ಪೂರ್ಣಗೊಂಡಿದೆ
			ಮಾಯಸಂದ್ರ ರೈತ ಸಂಪರ್ಕ ಕೇಂದ್ರ ಹೊಸ ನಿವೇಶನದ ರಿವಿಟ್‌ಮೆಂಟ್.	1.00	ಕಾಮಗಾರಿ ಪೂರ್ಣಗೊಂಡಿದೆ
	ಒಟ್ಟು ಮೊತ್ತ	**15.00**		**15.00**	
	ಮಧುಗಿರಿ ವಿಭಾಗ				
6	ಚಿ.ನಾ.ಹಳ್ಳಿ	**3.00**	ಹಂದನಕೆರೆ ರೈತ ಸಂಪರ್ಕ ಕೇಂದ್ರದ ಮುಂಭಾಗದಿಂದ ಮುಖ್ಯ ರಸ್ತೆಯವರೆಗೆ ಸಿ.ಸಿ. ರಸ್ತೆ ಮತ್ತು ಕಛೇರಿ ದುರಸ್ಥಿ	1.00	ಕಾಮಗಾರಿ ಪೂರ್ಣಗೊಂಡಿದೆ.
			ಹುಳಿಯಾರು ರೈತ ಸಂಪರ್ಕ ಕೇಂದ್ರದಿಂದ ಕೆ.ಇ.ಬಿ. ಮುಖ್ಯ ರಸ್ತೆಯಿಂದ ಚರಂಡಿ ಡಕ್ ಮತ್ತು ರೈತ ಸಂಪರ್ಕ ಕೇಂದ್ರದವರೆಗೆ ರಸ್ತೆ ನಿರ್ಮಾಣ	1.00	
			ಕಸಬಾ ರೈತ ಸಂಪರ್ಕ ಕೇಂದ್ರದ ದಾರಿಯ ಚರಂಡಿಯ ಪೈಪ್ ಕಲ್ವರ್ಟ್	1.00	ಕಾಮಗಾರಿ ಪೂರ್ಣಗೊಂಡಿದೆ

			ನಿರ್ಮಾಣ		
7	ಶಿರಾ	**3.00**	ತಾವರೆಕೆರೆ ರೈತ ಸಂಪರ್ಕ ಕೇಂದ್ರದಲ್ಲಿ ಮಹಿಳಾ ಶೌಚಾಲಯ ನಿರ್ಮಾಣ ಕಾಮಗಾರಿ.	0.60	ಕಾಮಗಾರಿ ಪೂರ್ಣಗೊಂಡಿದೆ
			ಸ.ಕೃ.ನಿ. ಕಛೇರಿಯ ಕಟ್ಟಡದ ಸುಣ್ಣ–ಬಣ್ಣ ಮತ್ತು ಇತರೆ ದುರಸ್ಥಿ ಕಾಮಗಾರಿಗಳು	2.40	
8	ಕೊರಟಗೆರೆ	**3.00**	ತೋವಿನಕೆರೆ ರೈತ ಸಂಪರ್ಕ ಕೇಂದ್ರದ ಕಾಂಪೌಂಡ್ ಗೋಡೆಗೆ ಗೇಟ್ ನಿರ್ಮಾಣ	0.48	ಕಾಮಗಾರಿ ಪೂರ್ಣಗೊಂಡಿದೆ
			ತೋವಿನಕೆರೆ ರೈತ ಸಂಪರ್ಕ ಕೇಂದ್ರದ ಸುತ್ತ ಸಿಮೆಂಟ್ ಕಾಂಕ್ರೀಟ್ ಹಾಕುವ ಕಾಮಗಾರಿ	2.44	
			ತೋವಿನಕೆರೆ ರೈತ ಸಂಪರ್ಕ ಕೇಂದ್ರದ ಧ್ವಜಸ್ಥಂಭ ಬದಲಾವಣೆ/ನಿರ್ಮಾಣ	0.08	ಕಾಮಗಾರಿ ಪೂರ್ಣಗೊಂಡಿದೆ
9	ಮಧುಗಿರಿ	**3.00**	ಪುರವರ ರೈತ ಸಂಪರ್ಕ ಕೇಂದ್ರ ಕಟ್ಟಡದ ಮುಂಭಾಗ ತಗ್ಗು–ದಿಬ್ಬದಿಂದ ಕೂಡಿದ್ದ ಗುಂಡಿ ಮುಚ್ಚುವುದು.	1.00	ಕಾಮಗಾರಿ ಪೂರ್ಣಗೊಂಡಿದೆ.
			ಪುರವರ ರೈತ ಸಂಪರ್ಕ ಕೇಂದ್ರ ಕಟ್ಟಡದ ಸುತ್ತ ಕಾಂಪೌಂಡ್ ನಿರ್ಮಾಣ ಕಾಮಗಾರಿ	2.00	
10	ಪಾವಗಡ	**3.00**	ಸ.ಕೃ.ನಿ. ಕಛೇರಿಯಲ್ಲಿ ಆಡಳಿತ ವಿಭಾಗ ಮತ್ತು ತಾಂತ್ರಿಕ ವಿಭಾಗದಲ್ಲಿ ಕ್ಯಾಬಿನ್ ನಿರ್ಮಾಣ.	2.50	ಕಾಮಗಾರಿ ಪೂರ್ಣಗೊಂಡಿದೆ.
			ಕಸಬಾ ರೈತ ಸಂಪರ್ಕ ಕೇಂದ್ರದ ರೈತ ಮಹಿಳೆ	0.50	

			ವಸತಿ ಗೃಹದಲ್ಲಿ ಸುಣ್ಣ–ಬಣ್ಣ ಹಾಗೂ ನೀರಿನ ಸಂಪ್ ಮತ್ತು ಟ್ಯಾಂಕ್ ನಿರ್ಮಾಣ		
	ಒಟ್ಟು ಮೊತ್ತ	**15.00**		**15.00**	
	ಮಹಾಮೊತ್ತ	**30.00**		**30.00**	**–**

ಬಿ) ಕೃಷಿ ತರಬೇತಿ ಶಾಲೆ : ಈ ಯೋಜನೆಯಡಿಯಲ್ಲಿ ರೂ.5.78 ಲಕ್ಷ ಅನುದಾನವನ್ನು ಬಿಡುಗಡೆ ಮಾಡಲಾಗಿದ್ದು, ರೂ.5.77 ಲಕ್ಷ ಅನುದಾನವನ್ನು ವೆಚ್ಚ ಮಾಡಲಾಗಿದೆ. ಲೆಕ್ಕ ಶೀರ್ಷಿಕೆ:2435–00–101–0–37.

ತುಮಕೂರು ಜಿಲ್ಲೆಯಲ್ಲಿರುವ ಕೃಷಿ ಇಲಾಖಾಧಿಕಾರಿಗಳು/ ನೌಕರರ ಹುದ್ದೆಗಳು ಮಂಜೂರಾದ, ಭರ್ತಿಯಾಗಿರುವ ಮತ್ತು ಖಾಲಿ ಇರುವ ಹುದ್ದೆಗಳ ಕ್ರೋಢೀಕೃತ ವರದಿ ಮಾರ್ಚ್ 2021 ರಲ್ಲಿದ್ದಂತೆ

ಕ್ರ. ಸಂ	**ಹುದ್ದೆಗಳ ಹೆಸರು**	**ಹುದ್ದೆಗಳ ಮಾಹಿತಿ (ಸಂಖ್ಯೆಯಲ್ಲಿ)**			**ಷರಾ**
		ಮಂಜೂರು	**ಭರ್ತಿ**	**ಖಾಲಿ**	
ಗ್ರೂಪ್ "ಎ"					
1	ಜಂಟಿ ಕೃಷಿ ನಿರ್ದೇಶಕರು	1	1	0	
2	ಉಪ ಕೃಷಿ ನಿರ್ದೇಶಕರು	2	2	0	
3	**ಸಹಾಯಕ ಕೃಷಿ ನಿರ್ದೇಶಕರು**	15	12	3	
4	ಸಹಾಯಕ ಕೃಷಿ ನಿರ್ದೇಶಕರು (ರೈತ ಮಹಿಳೆ)	2	2	0	
5	ಆಡಳಿತಾಧಿಕಾರಿಗಳು	1	0	1	
ಒಟ್ಟು		**21**	**17**	**4**	
ಗ್ರೂಪ್ "ಬಿ"					
1	ಆಡಳಿತ ಸಹಾಯಕರು	2	1	1	
2	ಕೃಷಿ ಅಧಿಕಾರಿಗಳು	82	57	25	
3	ಸಹಾಯಕ ಕೃಷಿ ಅಧಿಕಾರಿಗಳು	134	37	97	
	ಒಟ್ಟು	**218**	**95**	**123**	
ಗ್ರೂಪ್ "ಸಿ"					

1	ಅಧೀಕ್ಷಕರು	16	11	5	
2	ಪ್ರಥಮ ದರ್ಜೆ ಸಹಾಯಕರು	21	20	1	
3	ದ್ವಿತೀಯ ದರ್ಜೆ ಸಹಾಯಕರು	29	18	11	
4	ಶೀಘ್ರಲಿಪಿಗಾರರು	1	0	1	
5	ಬೆರಳಚ್ಚುಗಾರರು /ಹಿರಿಯ ಬೆರಳಚ್ಚುಗಾರರು	15	5	10	
6	ವಾಹನ ಚಾಲಕರು / ಹಿರಿಯ ವಾಹನ ಚಾಲಕರು	16	3	13	
7	ಕೃಷಿ ಸಹಾಯಕರು	1	1	0	
8	ರೇಖಾಗಾರರು	2	2	0	
9	ಕೃಷಿ ಉಪಕರಣಗಳ ಮೇಲ್ವಿಚಾರಕರು	2	1	1	
ಒಟ್ಟು		**103**	**61**	**42**	
ಗ್ರೂಪ್ "ಡಿ'					
1	ಡಿ ಗ್ರೂಪ್ ನೌಕರರು	40	23	17	
2	ಬಾಣಸಿಗರು	1	0	1	
	ಒಟ್ಟು	**41**	**23**	**18**	
	ಒಟ್ಟು (A+B+C+D)	**383**	**196**	**187**	

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ತುಮಕೂರು.

ಆಡಳಿತ ವರದಿ

ಅಲ್ಪಸಂಖ್ಯಾತರ ಕಲ್ಯಾಣ ಇಲಾಖಾ ವತಿಯಿಂದ 2020–21ನೇ ಸಾಲಿನಲ್ಲಿ ವಿವಿಧ ಕಾರ್ಯಕ್ರಮಗಳ ಅಡಿಯಲ್ಲಿ ಸಾಧಿಸಿದ ಪ್ರಗತಿಯ ವಿವರಗಳು.

2020–21ನೇ ಸಾಲಿನಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖಾ ವತಿಯಿಂದ ವಿವಿಧ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಒದಗಿಸಲಾದ, ಬಿಡುಗಡೆಯಾದ ಮತ್ತು ವೆಚ್ಚ ಮಾಡಲಾದ ವಿವರಗಳು ಈ ಕೆಳಕಂಡಂತಿವೆ.

ಕ್ರ ಸಂ	ಕಾರ್ಯಕ್ರಮದ ವಿವರ	ವಲಯ	ನಿಗದಿಪಡಿಸಿದ ಅನುದಾನ (ರೂ.ಲಕ್ಷಗಳಲ್ಲಿ)	ಬಿಡುಗಡೆಯಾದ ಅನುದಾನ (ರೂ.ಲಕ್ಷಗಳಲ್ಲಿ)	ವೆಚ್ಚ ಮಾಡಲಾದ ಅನುದಾನ (ರೂ.ಲಕ್ಷಗಳಲ್ಲಿ)
1	1) ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳು	ಯೋಜನೇತರ	504.66	504.66	449.49
		ಒಟ್ಟು	**504.66**	**504.66**	**449.49**

ಕಾರ್ಯಕ್ರಮಗಳ ವಿವರ

(1) ಅಲ್ಪಸಂಖ್ಯಾತರ ವಿದ್ಯಾರ್ಥಿನಿಲಯಗಳ ನಿರ್ವಹಣೆ:

ಅಲ್ಪಸಂಖ್ಯಾತರ ವಿದ್ಯಾರ್ಥಿನಿಲಯಗಳ ನಿರ್ವಹಣೆಗಾಗಿ ರೂ.449.53 ಲಕ್ಷಗಳನ್ನು ನಿಗದಿಪಡಿಸಲಾಗಿದೆ. ತುಮಕೂರು ಜಿಲ್ಲೆಯಲ್ಲಿ ಈ ಕಾರ್ಯಕ್ರಮದಡಿ 02 ಮೆಟ್ರಿಕ್‌ಪೂರ್ವ ವಿದ್ಯಾರ್ಥಿನಿಲಯಗಳು ಮತ್ತು 15 ಮೆಟ್ರಿಕ್‌ನಂತರ ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿರುತ್ತವೆ. ಸದರಿ ವಿದ್ಯಾರ್ಥಿನಿಲಯಗಳ ನಿರ್ವಹಣೆ ಮತ್ತು ಅಲ್ಲಿನ ಸಿಬ್ಬಂದಿ ವೇತನ ಹಾಗೂ ಭತ್ಯೆಗಳನ್ನು ಪಾವತಿಸಲು ಈ ಕೆಳಕಂಡಂತೆ ವೆಚ್ಚ ಮಾಡಲಾಗಿದೆ.

ವಲಯ	ನಿಗದಿಯಾದ ಅನುದಾನ	ಬಿಡುಗಡೆಯಾದ ಅನುದಾನ	ವೆಚ್ಚ	ಭೌತಿಕ ಸಾಧನೆ
ಯೋಜನೇತರ	**449.53**	**449.53**	**395.77**	**2 ಮೆಟ್ರಿಕ್‌ಪೂರ್ವ ಮತ್ತು 15 ಮೆಟ್ರಿಕ್‌ನಂತರ ವಿದ್ಯಾರ್ಥಿನಿಲಯಗಳು**

(2) ಕಾನೂನು ಪದವೀಧರರಿಗೆ ಶಿಷ್ಯವೇತನ:

ಸದರಿ ಕಾರ್ಯಕ್ರಮಕ್ಕೆ ರೂ.2.55 ಲಕ್ಷಗಳನ್ನು ನಿಗದಿಪಡಿಸಿದ್ದು, 10 ಅಭ್ಯರ್ಥಿಗಳಿಗೆ ಮಾಹೆಯಾನ ರೂ.5,000/– ಗಳಂತೆ ವೆಚ್ಚ ಮಾಡಲಾಗಿದೆ.

ವಲಯ	ನಿಗದಿಯಾದ ಅನುದಾನ	ಬಿಡುಗಡೆಯಾದ ಅನುದಾನ	ವೆಚ್ಚ	ಭೌತಿಕ ಸಾಧನೆ
ಯೋಜನೇತರ	2.55	2.55	2.55	10 ಅಭ್ಯರ್ಥಿಗಳು

(3) ಕಾರ್ಯಕಾರಿ ಸಿಬ್ಬಂದಿ:

ಸದರಿ ಕಾರ್ಯಕ್ರಮಕ್ಕೆ ರೂ.52.58 ಲಕ್ಷಗಳನ್ನು ನಿಗದಿಪಡಿಸಿದ್ದು, 6 ಸಿಬ್ಬಂದಿಗಳ ವೇತನ ಹಾಗೂ ಕಛೇರಿ ನಿರ್ವಹಣೆಗಾಗಿ ವೆಚ್ಚ ಮಾಡಲಾಗಿದೆ.

ವಲಯ	ನಿಗದಿಯಾದ ಅನುದಾನ	ಬಿಡುಗಡೆಯಾದ ಅನುದಾನ	ವೆಚ್ಚ	ಭೌತಿಕ ಸಾಧನೆ
ಯೋಜನೇತರ	52.58	52.58	51.17	6 ಸಿಬ್ಬಂದಿಗಳು & ಕಛೇರಿ ನಿರ್ವಹಣೆ

Date 01-04-2020 to 31-03-2021

Section 169 & 197 Details

1	President	Smt. Latha M. Ravikumar	D: 11-05-2016 to 10-05-2021
2	Vice President	Smt. Sharada N. Narasimhamurthy	D: 11-05-2016 to 10-05-2021
3	Chief Executive Officers	Smt. Shubha Kalyan, IAS	D: 01-02-2019 to 03-02-2021
		Dr. K. Rakesh Kumar, IAS	D: 04-02-2021 to 15-02-2021
		Patil Yalagowda Shivanagowda, IAS	D: 15-02-2021 to 17-02-2021
		Gangadaraswamy G.M, IAS	D: 17-02-2021 to 01-04-2021
		Smt. Vidhyakumari K., IAS	D: 01-04-2021 Till date
4	Deputy Secretary (Admin)	K.H. Krishna Murthy	D: 13-07-2019 Till date
5	Deputy Secretary (Dev)	T.K. Ramesh	D: 13-07-2019 to 26-04-2021
6	Project Director (D.R.D.A)	M. V Manjunath (P)	D: 22-09-2019 to 30-05-2020
		Mahesh Kumar (P)	D: 01-06-2020 to 10-06-2020
		Smt. Gayathri (P)	D: 11-06-2020 to 16-06-2020
		Mohammed Mubin	D: 17-06-2020 to 25-08-2020
		Basanagowda (P)	D: 26-08-2020 to 03-09-2020
		Balaraju (P)	D: 04-09-2020 to 23-09-2020
		Mohan Kumar L (P)	D: 24-09-2020 to 26-02-2021
		Narasihma Murthy J. N (P)	D: 27-02-2021 Till Date
7	Chief Account Officer	D. Kanakaraju	D: 25-02-2019 to 10-08-2020
		Dr. Jayalakshmi H. Y	D: 10-08-2020 to 07-09-2020
		Manjula H. P	D: 07-09-2020 to 19-11-2020
		Muniveerappa	D: 19-11-2020 Till Date

8	Chief Planning Officer	Basavana Gowda	D: 03-07-2019 to 03-09-2020
		Balaraju	D: 04-09-2020 to 31-07-2021
9	Assistant Secretary (Admi)	B.S. Upadhye	D: 11-12-2018 to 31-03-2021
10	Assistant Secretary (Dev)	Mahesh Kumar V.	D: 18-05-2020 Till Date
11	Account Officer	Chandrashekar	D: 03-10-2019 to 02-11-2019
		Dr. Y.H. Jayalakshmi	D: 02-11-2019 09-06-2021

Zilla Panchayat Tumakuru

Circular No.:ಗ್ರಾಅಪ 73 ಗ್ರಾಪಸ 2009 Dated 28-01-2009 ರ

Annexurel, 2020-21
Tumakuru Zilla Panchayath 2020-21 Annual Administrative Report

I.	Zilla panchayat Coverage (Section 151)		
	1.	Width	10597 SQ KMS
	2.	a) District Total Population	2678980
		b) District Total Rural Population (as per 2011 census)	2678980
	3.	Total number of members	57
	4.	Elected Members	57
	5.	Number of Loksabha Members	03
	6.	Number of Vidhana Sabha Members	11
	7.	Number of Vidhana Parisht Members	04
	8.	Number of Taluk Panchayat President	10
	9.	Monthly honorarium of members	in accordance with rules
	10.	Travelling allowance of members	in accordance with rules
	11.	Daily allowance of members	in accordance with rules
	12.	Meeting allowance	in accordance with rules
II.	Details that can be provided as per section of 177,178 and 186		
	1.	Name of the President	Smt. Latha M. Ravikumar
	2.	Name of the Vice President	Smt. Sharadha N. Narasimha Murthy
	3.	Honorary Allowance	Rs. 6,70,000-00
	4.	Guest Allowance	Rs. 2,33,338–00
	5.	Rent Allowance	Rs. 3,50,000–00
	6.	Members honorarium	Rs. 33,00,000–00
	7.	Traveling Allowance	Rs. 68,574-00
	8.	Total Sanctioned Posts of Zilla Panchayath	112 Posts
	9.	Vacant Posts	52 Posts
	10.	Cost of staff	Rs. 3,26,28,764–00
	11.	For Officers training	In accordance with rules
	12.	For non official training	In accordance with rules
	13.	Cost of training of grama panchayath members	In accordance with rules
	14.	Cost of taluk Panchayath members training	In accordance with rules
III.		Any authority given to the Vice President	K.P.R. Act 1993 according to the section 186 President for general standing Committee

IV.	Total no. of NO confidence resolution (if any)	
	a) Against President	: No
	b) Against Vice President	: No
V.	Whether President / Vice President are appointed through Election or by dissident?	: President and Vice President have been appointed through election.
	1. Election date of President and Vice President	Dated : 11-05-2016
	2. Reasons and results of election of the case if conducted	No
	3. The Zilla Panchayath period has been extended	No
	4. If any election disputes	No
VI	Zilla panchayath meetings and attendance.	
	1. Total General body meetings	03
	2. Total special Meetings	00
	3. Total Postponed Meetings	00
	4. About meetings conducted as per regularity	Yes Conducted
	5. Attendance of Members to the meetings	As per attendance book
	6. Meetings Postponed without Korum	02
	7. About meetings conducted as per schedule	Yes
VII.	Total Meeting proceedings	
	1. Number of subjects processed	as per the proceedings
	2. Number of conducted topics recorded in the book	as per the Attendance Book
	3. Number of discussion subjects	as per the proceedings
	4. Number of subjects taken	No
	5. Number of abandoned subjects	No
VIII.	Current committee and other issues (Under section 186 to 188)	Five standing committees are formed.
	1. Total current committee constituted Other committes	1. General standing committee 2. Financial audit and Planning standing committee. 3. Social justice Standing committee 4. Education and health Standing committee 5. Agriculture and industrial standing committee
	2. Election dates for committees	: 02-06-2020
	3. Total members in the current committees	: There are a total of 7 members including the chairman in each of the 5

		standing committee totaling to 35 members.
	4. Duties assigned to each Committee	: The details of the duties assigned to each standing Committees are explained in Annexure 4
	5. Other committees and the duties they are performing	: No
	6. Total number of suspended Zilla Panchayath against Grama Panchayath decision	: No
	7. Total section seceded the Grama panchayath	: No
	8. Appeals to the Zilla Panchayath and the conclusion taken against the decisions of Grama panchayath	: No
	9. The number of order that have been reviewed by the Zilla Panchayath	: No
	10. Total Cases received by the Zilla panchayath for re-verification on the conclusions of the committees	: No
	11. Cases filed to the Zilla panchayath for correction against the decision of the committees	: No
	12. Total cases without prior approval by the Zilla panchayath priority to make grama panchayath by laws	: No
X.	1. Total grant allocated to SC, ST and BCM welfare. (plane / non plane)	Plane 10386.49 lakhs
	2. Expenditure incurred	Plane 9858.88 lakhs
XI.	Loans taken from the Zilla Panchayath	: No
XII.	Seeking fund is forms	: No
XIII.	Whether The budgets are timely presented	: Presented
	1. Date of budget presented by the Zilla Panchayath	: 20-11-2020
	2. Date of approval of budget by ZP and sent to Govt.	: 20-11-2020
	3. Total budget (Plane and Non Plane)	: 52979.05 lakhs
XIV.	Whether Account details are transferred within stipulated Period	: Yes
XV.	Amount deducted without getting accrueal	
	1. By Zilla Panchayath	: Nothing
	2. With the Govt. consent	: Nothing
XVI.	Date of auditing and the factors that are not allowed Are not allowed by Auditors and the ZP order on it	: 01-04-2020-31-03-2021
XVII.	Total details of the accrued amount without Approval of the auditors and collected interest On the sum	: 26,20,528.00
XVIII.	Number of suspended cases by Zilla Panchayath under Section 237 on the orders of GP‘s	: Nil
XIX.	The number of decisions cancelled by Zilla Panchayath On T.P. decisions under section 268	: Nil

XX.	The number of appeals submitted to the Zilla Panchayath Against the orders of the taluk panchayath and decision taken on them	: Nil
XXI.	Number of the orders revised and issued forth by Zilla Panchayath	: Nil
XXII.	Number of revisions made by Zilla Panchayath on Any committee decision	: Nil
XXIII.	Number of modification made by Zilla Panchayath on any committee decision	: Nil
XXIV.	Number of rules set out by Zilla Panchayath with the pre approval of the Government	: Nil
XXV.	Number of pre requisite permission by the Zilla Panchayath to create the rules of taluk panchayats	: Nil
XXVI.	The total tariff payment is to the Zilla Panchayath and collected rent tax under section 287 and 288	: Nil
XXVII.	Sum collected pertaining to the expenditure under the section 293	: Nil

FORM- 1
Member Reservation Details

Year	Population as of 2011----	Number of c--	Number of sanctioned Reservations		No Reservation	Total	Year	Number of members on 31st march 2020			Total	The CEO is the zilla panchayat
			SC/ST	Women				SC/ST	Women	Other		
1	2	3	4	5	6	7	8	9	10	11	12	13
2020-21	2678980	57	17	9	40	57	2020-21	17	9	40	57	yes

FORM- 2
Elections

Year	Total Number of Electons		Number of Non Contested Election		Number of Posts		Numberf of Condidates	Number of Votes	The Number of Elections	On 9th 10th Percentage of the Percentage	Remarks
2020-21	-	-	-	-	-	-	-	-	-	-	-

FORM- 3
Information on General body Meetiongs of Zilla Panchayath

Year	Total meetings				Attendance of percentage members in accordance with the Santioned numbers		Remarks
	Genaral body meeting	Special meeting	The postponed meeting without Kourm	For time	Officers	Non officials	
1	2	3	4	5	6	7	8
2020-21	2	-	-	-	-	-	-

FORAM -4
ZILLA PANCHAYATH STANDING COMMITTEE

Numbers	Committes name	The purpose of appointing a committee	Total number of members and officers			Total number of meeting held	Percentage of attandance		Remarks
			Members	Officers	Total		Members	Officers	
1	2	3	4	5	6	7	8	9	10
1	**Genatal standing committee**	Staff matters, contact, buildings, rural housing, village, extension, solutions to Nature, Disasters Etc	21	112	120	03	99	99	-
2	Standing committee on Financial audit and planning	Generating a general monitoring Financial budget of Zilla panchayath revenue and expenditure, setting costs for development of project priorities.	-	-	-	-	-	-	-
3	Social Justice Committee	SC / ST / OBC academic economic encouragment protecting Social justice and exploitation of all types	18	94	112	03	99	99	-
4	Standing committee on education and helt	The responsibility of all educational activities health services hospital, water supply, family welfare, functions	-	-	-	-	-	-	-
5	Agricultral and industrial Standing committee	Agricultral productions horticulture, Fisheres, forestry, co-operative, martial, conservation, and agriculture development village and horticulture.	-	-	-	-	-	-	-

Formate-5
Roads

P.R.E.Division Tumkur	Length in Year End (K.M)							Length in k.m.(2020-21)				Expenditure encuredure for 2020-21 Years (Rs.Lakhs)					
	Year	New Started Works (K.M.)	Mixture of Jelly, Stone and Cement	Asphalting	Mixture of Jelly, Stone and Bricks Path	Other Types	Total of Colum 3 to 6	Mixture of Jelly, Stone and Cement	Asphalting	Mixture of Jelly, Stone and Bricks Path	Other Types	Mixture of Jelly, Stone and Cement	Asphalting	Mixture of Jelly, Stone and Bricks Path	Other Types	Total Expenditure	Expenditure for 1 K.M.
1	2	3	4	5	6	7	8	9	10	11	12	13	14	15	16	17	18
	2020-21			**1323.56**	**1036.46**	**3068.62**	**5428.64**	**4.19**	**3.73**	**10.99**	**47.42**	**118.97**	**42.67**	**62.25**	**113.22**	**337.11**	**27.77**

Formate - 6
Bridges, Foot Path and Lowlevel causway

(Rs.Lakhs)

Division	Year	Expenditure For Maintainance and Construction			Source of Expenditure		Credit
		Bridges and Foot Path	causway	Total expediture	Gift and Deed	Governament Grant	
1	2	3	4	5	6	7	8
Tumkur	**2020-21**	**17**	**0**	**8.00**	**0.00**	**8.30**	

FORM - 7

DETAILS OF PATIENTS TREATED & EXPENDITURE AT HEALTH INSTITUTIONS UNDER ZILLA PANCHAYATH TUMKUR-2020-2 1

DISTRICT HEALTH AND FAMILY WELFARE OFFICE TUMKUR

		BUDGET RELEASE & EXPENDITURE								Patients Details						ZILLA PANCHAYATHI					
										IN PATIENT			OUT PATIENT				ACCOUNTABLE EXPENDITURE		EXPENDITURE OF SINGLE PATIENT		
SL NO	MEDICAL INSTITUTION NAME	OFFICER & STAFF EXPEDITURE (SALARY)	RENT	FUNITURE	SUPPLY OF PATIENT FOOD	BEDS & BLANKET	O E	BUILDING REPAIR & CONSTUCTION	DRUGS	TOTAL	PREVIOUS YEAR	REPORTING YEAR	PREVIOUS YEAR	REPORTING YEAR	TOTAL	PREVIOUS YEAR	AVERAGE PATEINT TREATED PER DAY	REPORTING YEAR	PREVIOUS YEAR	REPORTING YEAR	PREVIOUS YEAR
1	2	3	4	5	6	7	8	9	10	11	12	13	14	15	16	17	18	19	20	21	22
1	**DIST HEALTH & F W OFFICE TUMKUR**	**830091282**	**-**	**-**	**-**	**-**	**35199862**	**15760000**	**-**	**436857**	**279514**	**157343**	**5401701**	**3620684**	**9022385**	**-**	**-**	**-**	**-**	**-**	**-**

Form-8
LOANS

Sl.No.	Loan term purpose & Year of Loan received	Total expendited under loan work	Subsidy received	Total loan amount and interest amount		Loan sanctioned Govt. order		Paid Amount						Balance		
								Reported Year		Up to Last Year		Total				
				Amount	Interest Amount	No.	Date	Interest	Principal Amount	Interest	Principal Amount	Interest	Principal Amount	Interest	Principal Amount	Remarks
1	2	3	4	5	6	7	8	9	10	11	12	13	14	15	16	17
	Nil															

Form-9
INVESTMENT

Number of Investment	Invested Amount	Received Bank	Opening Balance	Completed Amount
Nil				

Form-10
2020-21 Annual receipts & Expendirute Details

Opening Balance	General(Revenue)	Grant received form Govt.	HOA	Total
OB	232.23	38281.87	0	38514.10
Received	1.60	52301.23		52302.83
Total	233.83	90583.10		90816.93
Expendirute	3.55	50190.76		50194.31
CB	230.28	40392.34		40622.62

Zilla Panchayath, Tumakuru

(Development section)

BIRD`S EYE VIEW OF TUMAKURU DISTRICT, MGNREGA

In the year 2020-21, 41376 works have been started, 14972 works have been completed. Rs.30509.32 grants have been utilized and a total of 76 Lakhs man days have been generated in 10 taluks.

Labour budget:

As per the Government order the labour budget fixed to Tumkur district for the year 2020-21 is Rs. 42024.29LakhsTo achieve this the works were selected from the shelf of projects prepared by all gram panchayaths and included in action plan in turn got approved by D.P.C for implimentation. In FY 2020-21 ,4842 families were given 100 days employment for its full extent.

Steps taken for Execution of works:

To execute the woks which were approved in the action plan of the labour budget of 2020-21 following steps were taken and implimented as per the guidelines of the scheme.

Demand for wage employment and allocation:

At the Gram panchayath level, the registered wage seeker comes to G.P and submit the form no 06 filled and signed to demand for wage employment the same will be entered into employment register and work will be allocated. Notice will be served to the respected labourers to report at the work site. NMR will be generated and filled depending upon the number of NMR attendence the wage amount will be calculated and paid in to the benificiary bank account.

The guidelines of the scheme were followed and appropriate steps were taken to include 21 points of Chief Minister programme to impliment along with works like CC Roads, storm water drain, NRLM work shed, Multi arch check dam, Anganawadi Buildings, Form pond in formers land and also includes water conservation and water harvesting structures, draught prone area, afforestation, irrigation and land development works for SC & ST benificiaries.

Aport from the above rejuvenation of traditional water bodies like Thalaparige, desiltation of lakes, Block plantation, drainages at water logged areas, Flood control and protection works, rural roads development, Bharathnirman Rajiv Gandhi Seva Kendra were included in the action plan to prepare integrated plan and implimentedduring 2020-21

